

ಎರಡು ಹರಿಶ್ಚಂದ್ರ ಸಾಂಗತ್ಯಗಳು

ಸಂ: ಡಾ.ಸಿ.ಪಿ.ಕೆ.

ಎರಡು ಹರಿಶ್ಚಂದ್ರ ಸಾಂಗತ್ಯಗಳು

ಸಿ.ಪಿ.ಕೆ.

ಪ್ರಕಾಶಕರು

ಚೇತನ ಬುಕ್ ಹೌಸ್

ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮೀ ಟಾಕೀಸ್ ಹಿಂಭಾಗ,
ಮೈಸೂರು 570 024. ದೂರವಾಣಿ: 2445494, 2445013

ERADU HARISHCHANDRA SANGATHYAGALU, Edited by C.P.K., and Published by Chethana Book House, Mysore.

ಪ್ರಥಮ ಮುದ್ರಣ: 2014

ಪುಟಗಳು: vi + 250

ಪ್ರತಿಗಳಿಗಾಗಿ ಸಂಪರ್ಕಿಸಿ

ಚೇತನ ಬುಕ್ ಹೌಸ್

'ಅಂಜನಾದ್ರಿ', ರೇಣುಕಾಚಾರ್ಯ ದೇವಸ್ಥಾನದ ರಸ್ತೆ, (ಲಕ್ಷ್ಮೀ ಟಾಕೀಸ್ ಹಿಂಭಾಗ)

ಮೈಸೂರು-24. ದೂರವಾಣಿ: 645123, 4250105

ಶಾಖೆಗಳು

ನಾರಾಯಣಶಾಸ್ತ್ರಿ ರಸ್ತೆ, ಮೈಸೂರು. ದೂರವಾಣಿ: 2426631

ಅಕ್ಕಮಹಾದೇವಿ ರಸ್ತೆ, ದಾವಣಗೆರೆ. ದೂರವಾಣಿ: 256142

ನಂ. 58, ಅವೆನ್ಯೂ ರಸ್ತೆ, ಬೆಂಗಳೂರು. ದೂರವಾಣಿ: 22126031

ಬಸವ ಸದನ, ನೆಹರೂ ರಸ್ತೆ, ಶಿವಮೊಗ್ಗ. ದೂರವಾಣಿ: 226470

ಬಿ.ಎಂ. ರಸ್ತೆ, ಹಾಸನ. ದೂರವಾಣಿ: 251009

E-mail: chethanabookhouse@yahoo.in

ಬೆಲೆ: ರೂ. **180-00**

ಮುದ್ರಕರು:

ಲಕ್ಷ್ಮಿ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್

ನಂ. 34-C, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಮೈಸೂರು

ಮುನ್ನುಡಿ

ಇಲ್ಲಿ ನಾನು ಸಂಪಾದಿಸಿದ ಎರಡು 'ಹರಿಶ್ಚಂದ್ರ ಸಾಂಗತ್ಯ'ಗಳಿವೆ: ಒಂದು ರಾಮರಸ ವಿರೂಪಾಕ್ಷನದು; ಮತ್ತೊಂದು ಹಲಗನದು. ಇವುಗಳಲ್ಲಿ ಮೊದಲನೆಯದು ೧೯೬೭ರಲ್ಲಿ, ಎರಡನೆಯದು ೧೯೮೮ರಲ್ಲಿ ಮೊದಲ ಬಾರಿಗೆ ಪ್ರಕಟವಾದುವು. ಅವೆರಡನ್ನೂ ಕೂಡಿಸಿ ಪ್ರಕೃತ ಸಂಯುಕ್ತ ಸಂಪುಟವನ್ನು ಹೊರತರಲಾಗಿದೆ. ಇವುಗಳಲ್ಲಿ ವಿರೂಪಾಕ್ಷನ ಕೃತಿ ಪೂರ್ಣವಾಗಿದ್ದರೆ, ಹಲಗನದು ಮಧ್ಯೆ ಅಪೂರ್ಣವಾಗಿದೆ. (ಹಸ್ತಪ್ರತಿ ಈ ಅಪೂರ್ಣತೆಗೆ ಕಾರಣ.)

ರಾಮರಸ ವಿರೂಪಾಕ್ಷನ ಸಾಂಗತ್ಯವನ್ನು 'ಅ', 'ಕೆ.ಎ.೫೪' ಮತ್ತು 'ಗ' ಎಂಬ ಸಂಕೇತಾಕ್ಷರಗಳ ಮೂರು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಲಾಗಿದೆ. (ಅವುಗಳ ವಿವರಗಳನ್ನು ವಿರೂಪಾಕ್ಷನ ಸಾಂಗತ್ಯದ ಪ್ರಥಮ ಮುದ್ರಣದ 'ಪೀಠಿಕೆ'ಯ ಕಡೆಯಲ್ಲಿರುವ 'ಹಸ್ತಪ್ರತಿ ವಿಚಾರ' ಎಂಬ ಭಾಗದಲ್ಲಿ ಕೊಡಲಾಗಿದೆ; ಆಸಕ್ತರು ನೋಡಬಹುದು.)

ವಿರೂಪಾಕ್ಷ ಕೃತಿಯ ಸಂಪಾದನಕಾರ್ಯ ಸಾಕಷ್ಟು ತೃಪ್ತಿಕರವಾಗಿ ನಡೆದಿದೆ. (ಈ ಆವೃತ್ತಿಯಲ್ಲಿ ಪಾಠಾಂತರಗಳನ್ನು ಕೊಟ್ಟಿಲ್ಲ. ಇದೊಂದು ಬಗೆಯ 'ಜನಪ್ರಿಯ' ಆವೃತ್ತಿ.) ಆದರೆ ಈ ಮಾತನ್ನು ಹಲಗನ ಕೃತಿಯ ಬಗೆಗೆ ಹೇಳುವಂತಿಲ್ಲ. ಏಕೆಂದರೆ ಅದಕ್ಕೆ ಏಕೈಕ ಹಸ್ತಪ್ರತಿ (ಈಗಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ 'ಕೆ.ಬಿ.೨೬೮') ಆಕರ. ಅದು ತುಂಬ ಅಶುದ್ಧವಾದ ಹಸ್ತಪ್ರತಿ; ಸಾಲದ್ದಕ್ಕೆ ನಡು ನಡುವೆ ತ್ರುಟಿತ ಕೂಡ. ಆದ್ದರಿಂದ ಅದರ ಸಂಪಾದನ ಕಾರ್ಯದಲ್ಲಿ ಸಹಜವಾಗಿಯೇ ಬಹಳಷ್ಟು ಅರೆಕೊರೆಗಳಿವೆ. ಸಣ್ಣಪುಟ್ಟ ಲಿಪಿಕಾರ ಸ್ಖಾಲಿತ್ಯಗಳನ್ನು ಉದ್ದಕ್ಕೂ ತಿದ್ದಿದ್ದೇನೆ; ಅರ್ಥವಾಗದ ಕಡೆ ದುಂಡುಕಂಸದಲ್ಲಿ ಪ್ರಶ್ನಚಿಹ್ನೆ ಹಾಕಿದ್ದೇನೆ; ಊಹಾತ್ಮಕ ಪರಿಷ್ಕರಣವನ್ನು ಚೌಕಕಂಸದಲ್ಲಿ ಕೊಟ್ಟಿದ್ದೇನೆ. ಛಂದಸ್ಸು ಹಲವು ಕಡೆ ಕೆಟ್ಟಿದೆ; ಅದನ್ನು ಸರಿಪಡಿಸುವ ಗೋಜಿಗೆ ಹೋಗಿಲ್ಲ. (ಹಲಗನ ಸಾಂಗತ್ಯದ ಇತರ ಹಸ್ತಪ್ರತಿಗಳು ಬೇರೆ ಕಡೆ ಇದ್ದರೂ, ಅವುಗಳನ್ನು ದೊರಕಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಆದ್ದರಿಂದ ಅಸಹಾಯನಾಗಿ ಅಪಪಾಠಗಳನ್ನೂ ಅಪೂರ್ಣತೆಯನ್ನೂ ಉಳಿಸಬೇಕಾಯಿತು! ಅದಕ್ಕಾಗಿ ವಿಷಾದಿಸುತ್ತೇನೆ.)

ವಿರೂಪಾಕ್ಷನ ಸಾಂಗತ್ಯದ ಸಂಪಾದನೆಗೆ ಸಂಬಂಧಿಸಿದಂತೆ, ಹಸ್ತಪ್ರತಿಗಳನ್ನಿತ್ತ ವಿದ್ವಾನ್ ಎಂ.ಎನ್. ಬಸವರಾಜಯ್ಯನವರಿಗೂ ಪಂಡಿತ ಎಚ್. ಶೇಷಯ್ಯಂಗಾರ್ಯರಿಗೂ ನಾನು ಕೃತಜ್ಞ. ನನ್ನ ಗ್ರಂಥಸಂಪಾದನೆಯನ್ನು ಕುರಿತು ಬರೆದ ತಮ್ಮ ಈಚಿನ ಲೇಖನವೊಂದರಲ್ಲಿ ಮಿತ್ರ ಜಿ.ಜಿ. ಮಂಜುನಾಥನ್ ಅವರು ಹಲಗನ 'ಹರಿಶ್ಚಂದ್ರ ಸಾಂಗತ್ಯ'ದ ಕೆಲವು ಪಾಠಗಳಿಗೆ ತಿದ್ದುಪಡಿ ಸೂಚಿಸಿದ್ದಾರೆ. ಅವರಿಗೆ ನಾನು ಆಭಾರಿ.

ಹಲಗನ ಕಾವ್ಯದ ಪ್ರಸ್ತಾವನೆಯ ಅಂತ್ಯದಲ್ಲಿ ನಾನು ಬರೆದಿರುವ ಈ ಮಾತುಗಳು ತಕ್ಕಮಟ್ಟಿಗೆ ವಿರೂಪಾಕ್ಷನ ಕಾವ್ಯಕ್ಕೂ ಅನ್ವಯಿಸುತ್ತವೆ:

"ಹಲಗನ ಈ ಕೃತಿ ಸಾಹಿತ್ಯಕವಾಗಿ ಮಹತ್ತ್ವದ್ದೇನಲ್ಲ; ಆದರೆ ಕಡೆಗಣಿಸಬಹುದಾದ ಕೃತಿಯೂ ಅಲ್ಲ. ಎಲ್ಲ ಬಗೆಯ ಗ್ರಂಥಗಳೂ ಸೇರಿಯೆ ಕನ್ನಡ ಸಾಹಿತ್ಯ ಚರಿತ್ರೆ ರೂಪಗೊಂಡಿದೆ ಎಂಬುದನ್ನು ಮರೆಯಬಾರದು. ಈ ಸಾಂಗತ್ಯದ ಮೌಲ್ಯ ಮುಖ್ಯವಾಗಿ ಚಾರಿತ್ರಿಕ ಮತ್ತು ಸಾಂಸ್ಕೃತಿಕವಾದದ್ದು. ಕವಿಯ ಕಾಲದ ಮುದ್ರೆ ಇದರ ಮೇಲಿದೆ; ಕಾಲಾತೀತದತ್ತಲೂ ಇದು ಕೈ ಚಾಚಿದೆ. ಆನೆಯ ಬೆಲೆ ಆನೆಗೆ; ಆಡಿನ ಬೆಲೆ ಆಡಿಗೆ!"

ಹಲಗನ 'ಹರಿಶ್ಚಂದ್ರ ಸಾಂಗತ್ಯ' ಮೊದಲು 'ಪ್ರಬುದ್ಧ ಕರ್ಣಾಟಕ'ದ ಕೆಲವು ಸಂಚಿಕೆಗಳಲ್ಲಿ ಪ್ರಕಟವಾಯಿತು. ಅದನ್ನೋದಿ ಹಿರಿಯರಾದ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ನನಗೆ ಬರೆದ ಪತ್ರದಿಂದ ಕೆಲವು ಮಾತುಗಳನ್ನು ಎತ್ತಿಕೊಡಬಯಸುತ್ತೇನೆ (ಇವು ವಿರೂಪಾಕ್ಷನ ಕೃತಿಗೂ ಒಪ್ಪುತ್ತವೆ) :

"ನೀವು ಪ್ರ.ಕ.ದಲ್ಲಿ ಪ್ರಕಟಿಸುತ್ತಿರುವ ಹರಿಶ್ಚಂದ್ರ ಸಾಂಗತ್ಯ ನಿಜವಾಗಿ ಚೆನ್ನಾಗಿದೆ. ಇಂಥ ಒಂದು ಕಾವ್ಯವಿದೆಯೆಂದು ನಾನು ತಿಳಿದಿರಲಿಲ್ಲ. ಇದು, ನೀವು ಮಾಡುತ್ತಿರುವ ಉತ್ತಮ ಕಾರ್ಯ... ಈತ ರಾಘವಾಂಕನಿಂದ ಪ್ರೇರಿತನಾಗಿರುವುದು ನಿಶ್ಚಯ. ಆದರೂ ತನ್ನ ಸ್ವಂತಿಕೆ ಮೆರೆದಿದ್ದಾನೆ... ಎಂಬುವೆಲ್ಲ ಹೊಸ ಹೊಸ ತಿರುವುಗಳು."

ಒಂದು ಸೂಚನೆ: ಎರಡೂ ಸಾಂಗತ್ಯಗಳಲ್ಲಿ ಮೂಲದಲ್ಲಿಲ್ಲದ ಶಕಟರೇಫವನ್ನು ಹೊಸದಾಗಿ ಅಳವಡಿಸಲಾಗಿದೆ.

ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಮಿತ್ರ ಶ್ರೀ ನಟರಾಜ ಚೌಧುರಿಯವರಿಗೂ ಮುದ್ರಿಸಿರುವ ಮಿತ್ರರಿಗೂ ನನ್ನ ವಂದನೆಗಳು.

ಸಿಪಿಕೆ

ಪರಿವಿಡಿ

ಹರಿಶ್ಚಂದ್ರ ಕಥಾಪರಂಪರೆ ಮತ್ತು ಕನ್ನಡ ಹರಿಶ್ಚಂದ್ರ ಸಾಂಗತ್ಯಗಳು

೧. ಭಾರತೀಯ ವಾಙ್ಮಯದಲ್ಲಿ ಹರಿಶ್ಚಂದ್ರಾಖ್ಯಾನ

ಭರತವರ್ಷದ ಜನಜೀವನದಲ್ಲಿ ಹಾಸುಹೊಕ್ಕಾಗಿ ಕಾಲಾಬಾಧಿತವಾಗಿ ಭಾವಕೋಶಗತವಾಗಿ ನಿತ್ಯೋಪಯೋಗಿಯಾಗಿ ಸರ್ವಸಂಪೂಜ್ಯವಾಗಿ ನೆಲೆಗೊಂಡಿರುವ ಹೆಸರುಗಳಲ್ಲಿ ಪ್ರಾಯೇಣ ಅಗ್ರಗಣ್ಯವಾದುದು ಹರಿಶ್ಚಂದ್ರನ ಹೆಸರು. ಧರ್ಮರಾಯ ಕರ್ಣ ನಳ ಆಂಜನೇಯ ರಾಮ ಸೀತೆ ಸಾವಿತ್ರಿಯರಂತಹ ಲೋಕೋತ್ತರ ಮಹಿಮಾನ್ವಿತ ವ್ಯಕ್ತಿಗಳಂತೆ ಹರಿಶ್ಚಂದ್ರನೂ ಭಾರತೀಯ ಮನೋರಂಗದಲ್ಲಿ ಅಚ್ಯುತಸ್ಥಾನಭಾಜನನಾಗಿದ್ದಾನೆ. ಸತ್ಯಕ್ಕೆ ಮತ್ತೊಂದು ಹೆಸರು ಹರಿಶ್ಚಂದ್ರ; ಆ ಮೌಲ್ಯಕ್ಕೂ ಈ ಮಹಾಪುರುಷನಿಗೂ ಅಷ್ಟರಮಟ್ಟಿಗೆ ಅಭೇದವಿದೆ. ಬಹು ಸಾಮಾನ್ಯವಾಗಿ, ಮನೆಮಾತಾಗಿ ಪ್ರಚುರವಾಗಿರುವ 'ಸತ್ಯ ಹರಿಶ್ಚಂದ್ರ' ಎಂಬ ವಿಶೇಷಣಸಹಿತವಾದ ಕೂಡುನುಡಿ ಈ ಅಭೇದ ಸಂಬಂಧವನ್ನು ವಾಚ್ಯವಾಗಿಯೆ ಹೇಳುತ್ತಿದೆ. ಈ ಮಹನೀಯನ ಆದರ್ಶ ಪ್ರಾಚೀನ ಕಾಲದಲ್ಲಿ ಮಾತ್ರವಲ್ಲದೆ ಅರ್ವಾಚೀನ ಯುಗಕ್ಕೂ ತನ್ನ ಪ್ರಭಾವಮುಷ್ಟಿಯನ್ನು ವಿಸ್ತರಿಸಿ ಸ್ಫೂರ್ತಿಪ್ರದ ಶಕ್ತಿಯಾಗಿ ತಾರಕಮಂತ್ರವಾಗಿ ಕೆಲಸ ಮಾಡಿರುವುದನ್ನು ಗಮನಿಸಬಹುದು: ವಿಜ್ಞಾನ ಪ್ರಧಾನವಾದ ಈ ಇಪ್ಪತ್ತನೆಯ ಶತಮಾನದಲ್ಲಿ ಮತ್ತೆ ಸತ್ಯದ ಜಯಡಿಂಡಿಮವನ್ನು ಲೋಕಕರ್ಣಂಕಷವಾಗಿ ರೋದೋಂತವ್ಯಾಪಿಯಾಗಿ ಮೊಳಗಿಸಿ ಅದರ ಅವಾರ್ಯ ದುರ್ದಮ್ಯ ಸತ್ತ್ವದಿಂದಲೆ ಭರತ ಖಂಡಕ್ಕೆ ಸ್ವಾತಂತ್ರ್ಯಾವಿರ್ಭಾವವಾಗುವಂತೆ ಮಾಡಿದ ಮಹಾತ್ಮಗಾಂಧೀಜಿಯವರ ಬದುಕು ಶೈಶವದಲ್ಲೆ ಸತ್ಯದ ನಿಧಿಯೂ ಪ್ರತಿನಿಧಿಯೂ ಆದ ಹರಿಶ್ಚಂದ್ರನ ಕಥೆಯಿಂದ ಸುಪ್ರಭಾವಿತವಾಯಿತೆಂಬ ಸಂಗತಿ ಅವರ ಆತ್ಮಚರಿತ್ರೆಯಲ್ಲಿ ಪ್ರಕಟವಾಗಿದೆ.[1]

ಭಾರತೀಯ ವಾಙ್ಮಯದಲ್ಲಿ ಹರಿಶ್ಚಂದ್ರನ ಕಥೆ ಬಹಳ ವ್ಯಾಪಕವಾದ ರೀತಿಯಲ್ಲಿ ತನ್ನ ಆಧಿಪತ್ಯವನ್ನು ಸ್ಥಾಪಿಸಿಕೊಂಡಿದೆ; ಅದರ ಪರಂಪರೆಯ ಬೇರುಗಳು ಅನಾದಿ ಎನಿಸುವಷ್ಟರಮಟ್ಟಿಗೆ ಪ್ರಾಕ್ಕಾಲಗರ್ಭದಲ್ಲಿ ನಿಕ್ಷಿಪ್ತವಾಗಿವೆ. ವೇದ ಪುರಾಣ ಇತಿಹಾಸ

---

1. "This play-*Harischandra*-captured my heart. I could never be tired of seeing it.... It haunted me and I must have acted Harischandra to myself times without number. 'Why should not all be truthful like Harischandra?' was the question I asked myself day and night. To follow truth and to go through all the ordeals Harischandra went through was the one ideal it inspired in me. I literally believed in

ಕಾವ್ಯಾದಿ ಸಮಸ್ತ ವಾಙ್ಮಯ ಶಾಖೆಗಳಲ್ಲಿ ಮತ್ತು ಪ್ರಸ್ಥಾನಗಳಲ್ಲಿ ಅದು ಹಸರಗೊಂಡಿದೆ; ಮೆಟ್ಟಿಲು ಮೆಟ್ಟಿಲಾಗಿ ಘಟ್ಟಿಘಟ್ಟಿವಾಗಿ ವಿಕಾಸಶೀಲವಾಗಿ ದಾಂಗುಡಿಯಿಡುತ್ತ ಬಂದಿದೆ. ವೈದಿಕ ಸಾಹಿತ್ಯದಿಂದ ಕಾವ್ಯಸಾಹಿತ್ಯದವರೆಗೆ ಬೆಳೆದು ನಿಂತಿರುವ ಹರಿಶ್ಚಂದ್ರನ ಚರಿತದಲ್ಲಿ ಮೂರು ನಾಲ್ಕು ಅವಸ್ಥೆಗಳನ್ನು ನೋಡುತ್ತೇವೆ. ವಾಸ್ತವವಾಗಿ ಇವುಗಳನ್ನು ಎರಡೇ ಎರಡು ಪ್ರಮುಖ ಹಂತಗಳನ್ನಾಗಿ ವಿಭಾಗಿಸಬಹುದು: ಒಂದು ಹರಿಶ್ಚಂದ್ರನ ಪೂರ್ವ ಜೀವನ, ಮತ್ತೊಂದು ಅವನ ಉತ್ತರ ಜೀವನ. ವೈದಿಕ ಸಾಹಿತ್ಯದಲ್ಲಿ ಮತ್ತು ಕೆಲವು ಪ್ರಾಚೀನ ಪುರಾಣಗಳಲ್ಲಿ ಹರಿಶ್ಚಂದ್ರನ ಪೂರ್ವವೃತ್ತಾಂತ ನಿರೂಪಿತವಾಗಿದ್ದರೆ, ಕೆಲವು ಅರ್ವಾಚೀನ ಪುರಾಣಗಳಲ್ಲಿ ಮತ್ತು ಕಾವ್ಯಗಳಲ್ಲಿ ಅವನ ಉತ್ತರ ವೃತ್ತಾಂತ ಪ್ರತಿಪಾದಿತವಾಗಿದೆ. ಹರಿಶ್ಚಂದ್ರನ ಸತ್ಯಸಾಧನೆ ಶೋಧನೆಗಳು ಸುವ್ಯಕ್ತವಾಗಿರುವುದು ಈ ಉತ್ತರ ವೃತ್ತಾಂತದಲ್ಲೇ; ಅವನು ಹಲವು 'ದಿವ್ಯ'ಗಳನ್ನು ಉತ್ತರಿಸುವುದು ಇಲ್ಲಿಯೆ. ಆದ್ದರಿಂದ, ನಮಗೆ ಬಹಳ ಮುಖ್ಯವಾದುದು ಮತ್ತು ಆಸ್ವಾದ್ಯವಾದುದು ಈ 'ಉತ್ತರ ಕಥೆ'.

"ಹರಿಶ್ಚಂದ್ರೋಪಾಖ್ಯಾನವು ವೇದ ಪುರಾಣ ಸಾಹಿತ್ಯಗಳಲ್ಲಿ ಪ್ರಸಿದ್ಧವಾದ ಪುರಾತನ ಕಥೆಯಾಗಿದೆ. ಆದರೆ ವೈದಿಕ ಗ್ರಂಥಗಳಲ್ಲಿ ಮುಖ್ಯವಾಗಿ ಈ ಕಥೆಯ ಯಾಜ್ಞಿಕಾಂಶವೂ ಪೌರಾಣಿಕ ಗ್ರಂಥದಲ್ಲಿ ಐತಿಹಾಸಿಕಾಂಶವೂ ಸಾಹಿತ್ಯಗ್ರಂಥಗಳಲ್ಲಿ ಧಾರ್ಮಿಕಾಂಶವೂ ಪ್ರತಿಪಾದಿತವಾಗಿದೆಯೆಂದು ಹೇಳಬಹುದು. ಇವೆಲ್ಲವೂ ಆಮೂಲಾಗ್ರವಾಗಿ ಅಖಂಡವಾಗಿ ವಿಸ್ತಾರವಾಗಿ ಯಾವ ಒಂದು ಕಡೆಯಲ್ಲಿಯೂ ದೊರೆಯುವುದಿಲ್ಲ."[2]

ಹರಿಶ್ಚಂದ್ರೋಪಾಖ್ಯಾನದ ಪ್ರಾರಂಭಾವಸ್ಥೆ ಗೋಚರಿಸುವುದು ವೈದಿಕ ಕೃತಿಗಳಲ್ಲಿ. ಇವು ಮುಖ್ಯವಾಗಿ ಮೂರು: ಐತರೇಯ ಬ್ರಾಹ್ಮಣ, ಸಾಂಖ್ಯಾಯನ ಶ್ರೌತಸೂತ್ರ ಮತ್ತು ವೇದಾರ್ಥದೀಪಿಕೆ. ಇವುಗಳಲ್ಲಿ ನಿರೂಪಣಗೊಂಡಿರುವ ಹರಿಶ್ಚಂದ್ರ ಜೀವನದ ಪೂರ್ವಭಾಗವನ್ನು ಹೀಗೆ ಸಂಗ್ರಹಿಸಬಹುದು:

ಸಂತಾನಹೀನನಾದ ಹರಿಶ್ಚಂದ್ರ, ನಾರದನ ಸಲಹೆಯಂತೆ, ತನಗೆ ಗಂಡುಮಗುವಾದರೆ ಅದನ್ನು ವರುಣನಿಗೆ ಬಲಿ ಕೊಡುವುದಾಗಿ ಹರಕೆ ಮಾಡಿಕೊಳ್ಳುತ್ತಾನೆ. ಮಗುವಾಗುತ್ತದೆ; ರೋಹಿತ ಎಂದು ಹೆಸರಿಡುತ್ತಾರೆ. ಆದರೆ ಅವನನ್ನು ಬಲಿಗೊಡದೆ ಹರಿಶ್ಚಂದ್ರ ಅನೇಕ ನೆಪಗಳನ್ನೊಡ್ಡುತ್ತಾನೆ. ರೋಹಿತ ದೊಡ್ಡವನಾದಾಗ ವಿಷಯವನ್ನು ತಿಳಿದು ಕಾಡಿಗೆ ಓಡಿಹೋಗುತ್ತಾನೆ. ವರುಣನ ಕೋಪದಿಂದ ಹರಿಶ್ಚಂದ್ರನಿಗೆ ಜಲೋದರ ರೋಗ ತಟ್ಟುತ್ತದೆ. ಕಾಡಿನಲ್ಲಿದ್ದ ರೋಹಿತ, ಇಂದ್ರನ ಮಾತಿನಂತೆ, ಅಜೀಗರ್ತನ (ರಾಮಾಯಣದಲ್ಲಿ ಇವನು

---

the story of Harischandra. The thought of it all often made me weep. My common sense tells today that Harischandra could not have been a historical character. Still both Harischandra and Sravana are living realities to me"-Gandhi, *The Story of My Experiments with Truth*, p.4

2. ಎ. ಆರ್. ಕೃ, ಹರಿಶ್ಚಂದ್ರ ಕಾವ್ಯ ಸಂಗ್ರಹದ ಪೀಠಿಕೆ, ಪು. XXX iii

'ಋಚೀಕ') ನಡುಕಲುಮಗನಾದ ಶುನಶ್ಶೇಪನನ್ನು ಕೊಂಡು ಅವನನ್ನು ತನ್ನ ಬದಲು ಯಜ್ಞಪಶುವನ್ನಾಗಿ ತಂದೆಗೆ ಒಪ್ಪಿಸುತ್ತಾನೆ. ಯೂಪಸ್ತಂಭಕ್ಕೆ ಬಂಧಿತನಾದ ಶುನಶ್ಶೇಪ ದೇವತೆಗಳನ್ನು ಪ್ರಾರ್ಥಿಸಿ ಬಿಡುಗಡೆ ಪಡೆಯುತ್ತಾನೆ. ಹರಿಶ್ಚಂದ್ರನ ರೋಗ ಪರಿಹೃತವಾಗುತ್ತದೆ, ಅನಂತರ ವಿಶ್ವಾಮಿತ್ರ ಶುನಶ್ಶೇಪನನ್ನು ತನ್ನ ಜ್ಯೇಷ್ಠಪುತ್ರನನ್ನಾಗಿ ಪರಿಗ್ರಹಿಸುತ್ತಾನೆ. ಹರಿಶ್ಚಂದ್ರ ಮುಂದೆ ರಾಜಸೂಯಯಾಗ ಮಾಡಿ ಪ್ರಸಿದ್ಧಿಗೊಳ್ಳುತ್ತಾನೆ.

ಕೆಲವು ಪ್ರಾಚೀನ ಪುರಾಣಗಳಲ್ಲಿ-ವಾಯು ಬ್ರಹ್ಮಾಂಡ ಬ್ರಹ್ಮ ಪುರಾಣಗಳಲ್ಲಿ ಮತ್ತು ಹರಿವಂಶದಲ್ಲಿ-ಹರಿಶ್ಚಂದ್ರೋಪಾಖ್ಯಾನದ ಮುಂದಿನ ಮಜಲು ಕಾಣಸಿಗುತ್ತದೆ. ಇದು ಕಾಲದ ದೃಷ್ಟಿಯಿಂದ ವೈದಿಕ ಗ್ರಂಥಗಳಿಗಿಂತ ಈಚಿನದಾದರೂ ವಸ್ತುತಃ ಆ ಗ್ರಂಥಗಳಲ್ಲಿ ಉಕ್ತವಾಗಿರುವುದಕ್ಕಿಂತ ಹಿಂದಿನ ಕತೆಯನ್ನು ನಿರೂಪಿಸುತ್ತದೆ. ಹರಿಶ್ಚಂದ್ರನ ವಂಶವೃತ್ತಾಂತವನ್ನೂ ವಸಿಷ್ಠ ವಿಶ್ವಾಮಿತ್ರರ ವೈಮನಸ್ಯ ಪ್ರಕರಣವನ್ನೂ ಈ ಪುರಾಣಗಳಲ್ಲಿ ನೋಡುತ್ತೇವೆ. ಅಲ್ಲಿ ಬರುವ ಕತೆ ಸ್ಥೂಲವಾಗಿ ಹೀಗಿದೆ:

ಅಯೋಧ್ಯೆಯ ದೊರೆಯಾದ ತ್ರಯ್ಯಾರುಣನ ಮಗ ಸತ್ಯವ್ರತ. ಅವನೊಮ್ಮೆ ಕಾಮಾವಿಷ್ಟನಾಗಿ ಮದುವಣಗಿತ್ತಿಯೊಬ್ಬಳನ್ನು ಕದ್ದೊಯ್ಯುತ್ತಾನೆ. ಇದರಿಂದ ಕ್ರುದ್ಧನಾದ ಸತ್ಯವ್ರತ ಮಗನನ್ನು ಬಹಿಷ್ಕರಿಸಿ ಚಂಡಾಲರ ಕೇರಿಯಲ್ಲಿರಿಸುತ್ತಾನೆ. ಕುಲಗುರು ವಸಿಷ್ಠರೂ ಇದನ್ನು ಸಮ್ಮತಿಸುತ್ತಾರೆ. ಕೆಲಕಾಲದ ಮೇಲೆ ತ್ರಯ್ಯಾರುಣ ಕಾಡಿಗೆ ಹೋಗುತ್ತಾನೆ. ಅಧರ್ಮದ ಫಲವಾಗಿ ನಾಡಿಗೆ ಕ್ಷಾಮ ಬರುತ್ತದೆ. ಅಯೋಧ್ಯೆಯ ಪ್ರಾಂತದಲ್ಲಿ ತಪಶ್ಚರ್ಯೆಗಾಗಿ ಬೀಡುಬಿಟ್ಟಿದ್ದ ವಿಶ್ವಾಮಿತ್ರನ ಕುಟುಂಬವನ್ನು ಆ ಕ್ಷಾಮಕಾಲದಲ್ಲಿ ಸತ್ಯವ್ರತನೆ ಅನುಕಂಪದಿಂದ ಕಾಪಾಡುತ್ತಾನೆ. ತಂದೆಯ ಆದೇಶದಂತೆ ಅವನು ಹನ್ನೆರಡು ವರ್ಷ ದೀಕ್ಷಾಬದ್ಧನಾಗಿರುತ್ತಾನೆ. ಅತ್ತ ಅಯೋಧ್ಯೆಯನ್ನು ವಸಿಷ್ಠನೆ ಆಳುತ್ತಿರುತ್ತಾನೆ. ಅವನ ಮೇಲೆ ಸತ್ಯವ್ರತನಿಗೆ ಅಸಮಾಧಾನ ಹುಟ್ಟುತ್ತದೆ. ದೀಕ್ಷೆಯ ಅವಧಿ ಮುಗಿದ ಮೇಲೆ ಪಟ್ಟಾಭಿಷೇಕ ಮಾಡೋಣ ಎಂಬ ವಸಿಷ್ಠನ ಯೋಚನೆ ಅವನಿಗೆ ಗೊತ್ತಿಲ್ಲ. ಒಂದು ದಿನ ಆಹಾರ ಸಿಕ್ಕದೆ ಅವನು ಕಂಗೆಟ್ಟು, ವಸಿಷ್ಠನ ಹಸುವನ್ನು ಕೊಂದು ತನಗೂ ವಿಶ್ವಾಮಿತ್ರನ ಕುಟುಂಬಕ್ಕೂ ಆಹಾರ ಮಾಡಿಕೊಳ್ಳುತ್ತಾನೆ. ಇದನ್ನು ತಿಳಿದ ವಸಿಷ್ಠ ರೋಷಗೊಂಡು ಸತ್ಯವ್ರತನನ್ನು 'ತ್ರಿಶಂಕು' (=ಮೂರು ಪಾಪ ಮಾಡಿದವನು) ಎಂದು ಕರೆಯುತ್ತಾನೆ. ವಿಶ್ವಾಮಿತ್ರ ಸಂತುಷ್ಟನಾಗಿ ತ್ರಿಶಂಕುವನ್ನು ಅವನ ರಾಜ್ಯದಲ್ಲಿ ಪ್ರತಿಷ್ಠಿಸಿ, ಅವನಿಂದ ಯಾಗ ಮಾಡಿಸಿ, ಸ್ವರ್ಗಕ್ಕೇರಿಸುತ್ತಾನೆ. ಈ ತ್ರಿಶಂಕುವಿನ ಮಗನೆ ಹರಿಶ್ಚಂದ್ರ; ಅವನ ಮಗ ರೋಹಿತ.

ಈ ಕತೆಯಲ್ಲಿ ವ್ಯಕ್ತವಾಗುವಂತೆ 'ಸತ್ಯವ್ರತ' ಹರಿಶ್ಚಂದ್ರನಲ್ಲ, ಅವನ ತಂದೆ. ಅವನು ಕೂಡ ಹೆಸರಿನಲ್ಲಷ್ಟೆ ಸತ್ಯವ್ರತ. ಇನ್ನು ವೈದಿಕ ಕಥೆಗಳಲ್ಲಿ ಕಂಡುಬರುವ ಹರಿಶ್ಚಂದ್ರನಂತೂ ಸತ್ಯಸಂಧನೇನಲ್ಲ. ಆದರೆ ಯಾವಾಗಲೊ ಒಮ್ಮೆ ಅವನ ಅನೃತದ ನಡೆವಳಿಕೆ ಮರೆಯಾಗಿ ಅಥವಾ ಅಲಕ್ಷಿತವಾಗಿ, ಅವನ ಕಳಂಕ ಹಿಂದೆಬಿದ್ದು, ಜನಮನದಲ್ಲಿ ಅವನೊಬ್ಬ ಅಸಾಧಾರಣ ಪುರುಷನಾಗಿ, ಉಪಾಸ್ಯವ್ಯಕ್ತಿಯಾಗಿ ಪರಿಣಮಿಸಿದಂತೆ ತೋರುತ್ತದೆ. "ಹರಿಶ್ಚಂದ್ರ

ವಿಷಯಿಕವಾದ ಆದರ್ಶೀಕರಣ ಇಂಥ ಸಮಯ ವಿಭಾಗದಲ್ಲಿ ಹೀಗೆಯೇ ನಡೆಯಿತೆಂದು ಯಾರೂ ಹೇಳಲಾರರು"[3] ಅಂತೂ ಅರ್ವಾಚೀನ ಪುರಾಣಗಳ ಕಾಲಕ್ಕಾಗಲೆ ಹರಿಶ್ಚಂದ್ರನ ಪೂರ್ವಕಥೆ ಅಪ್ರಧಾನವಾಗಿ, ಅವನ ಸತ್ಯೈಕನಿಷ್ಠೆಗೆ ವಿಶೇಷವಾದ ಅವಧಾರಣೆ ಬಂದು ಅದನ್ನು ಕೀರ್ತಿಸುವ ಮುಂದಿನ ಕಥೆ ಪ್ರಚಲಿತವಾಗಿತ್ತೇನೊ. ಪ್ರಾಚೀನ ಪುರಾಣಗಳಲ್ಲಿ ಹರಿಶ್ಚಂದ್ರನ ಪ್ರಖ್ಯಾತಿ ಅವನು ಎಸಗಿದ ರಾಜಸೂಯಯಾಗವನ್ನಷ್ಟೆ ಅವಲಂಬಿಸಿದೆ; ಯಾಗ ಮಾಡಿದನಂತರ ಅವನು ವಿಶ್ವಾಮಿತ್ರನ ಅಪಕೃಪೆಗೆ ತುತ್ತಾಗಿ, ಸತ್ಯಪಾಲನೆಗಾಗಿ ರಾಜ್ಯಕೋಶಾದಿಗಳನ್ನು ಕಳೆದುಕೊಂಡು ಬವಣೆಪಟ್ಟು ತನ್ನ ಸತ್ಯವಿಕ್ರಮವನ್ನು ಮೆರೆದ ವಿಷಯ ವೈದಿಕವಾಙ್ಮಯದಲ್ಲಾಗಲಿ ಪ್ರಾಚೀನ ಪುರಾಣಗಳಲ್ಲಾಗಲಿ ಬರುವುದಿಲ್ಲ. ಅದೇನಿದ್ದರೂ ಅರ್ವಾಚೀನ ಪುರಾಣಗಳಿಗೆ ಉತ್ಕೃಷ್ಟವಾದ ವಸ್ತುವಾಗಿದೆ. ಇದು ಹರಿಶ್ಚಂದ್ರೋಪಾಖ್ಯಾನದ ಬೆಳವಣಿಗೆಯಲ್ಲಿ ಬಹಳ ಪ್ರಮುಖವಾದ ಘಟ್ಟ. ಇದನ್ನು ಪ್ರತಿನಿಧಿಸುವ ಪುರಾಣಗಳಲ್ಲಿ ಮುಖ್ಯವಾದವು ಮಾರ್ಕಂಡೇಯ ಪುರಾಣ ಮತ್ತು ದೇವೀ ಭಾಗವತ ಪುರಾಣ. ಇವೆರಡೂ ಹೇಳುವ ಕತೆಯಲ್ಲಿ ಬಹಳ ಸಾಮ್ಯವಿದೆ. ಇವುಗಳಲ್ಲಿ ಹರಿಶ್ಚಂದ್ರನ ಪೂರ್ವಾಖ್ಯಾನ ಬರುವುದಿಲ್ಲವೆಂದಲ್ಲ, ಬರುತ್ತದೆ; ಆದರೆ ಅದರ ಬೆಳವಣಿಗೆಗೆ ಇಲ್ಲಿ ಅತೀವ ಪ್ರಾಶಸ್ತ್ಯ. ಮಹಾಭಾರತ (ವನಪರ್ವ)ದಲ್ಲಿ ಕೂಡ ಇದು ಕಂಡುಬಂದರೂ ಪ್ರಕ್ಷಿಪ್ತವೆಂದು ವಿದ್ವಾಂಸರ ಅಭಿಪ್ರಾಯ. ದೇವೀಭಾಗವತದಲ್ಲಿ (ಸಪ್ತಮಸ್ಕಂಧ, ಅಧ್ಯಾಯ ೧೦-೨೭) ಸುದೀರ್ಘವಾಗಿ ಉಲ್ಲೇಖಗೊಂಡಿರುವ ಹರಿಶ್ಚಂದ್ರ ಕಥೆಯ ಉತ್ತರಭಾಗದ ಸಾರಸಂಗ್ರಹವಿದು:

ಹರಿಶ್ಚಂದ್ರ ರಾಜಸೂಯಯಾಗ ಮಾಡಿದ ಬಳಿಕ ಸ್ವರ್ಗದಲ್ಲಿ ವಸಿಷ್ಠ ವಿಶ್ವಾಮಿತ್ರರು ಸಂಧಿಸಿ, ಹರಿಶ್ಚಂದ್ರನ ಯಾಗದ ವೈಭವವನ್ನು ವಿಶ್ವಾಮಿತ್ರ ಕೇಳಿ, ಅವನನ್ನು ಅಸತ್ಯವಾದಿಯನ್ನಾಗಿ ಮಾಡಲು ಪ್ರತಿಜ್ಞೆಗೈಯುತ್ತಾನೆ.[4] ಹರಿಶ್ಚಂದ್ರ ಬೇಟೆಗಾಗಿ ಕಾಡಿಗೆ ಹೋದಾಗ, ಅಲ್ಲಿ ಅಳುತ್ತಿದ್ದ ಸ್ತ್ರೀಯನ್ನು ಕಾಪಾಡಲು ವಿಶ್ವಾಮಿತ್ರನನ್ನು ತಪೋವಿಮುಖನಾಗೆಂದು ಪ್ರಾರ್ಥಿಸುತ್ತಾನೆ. ಅವಳು ವಿಶ್ವಾಮಿತ್ರ ಕಾಮಿಸಿದ್ದ ಒಬ್ಬಳು ಸುಂದರಿ.[5] ವಿಶ್ವಾಮಿತ್ರ ಸೃಷ್ಟಿಸಿ ಕಳುಹಿಸಿದ ಹಂದಿಯನ್ನು ಕೊಲ್ಲಲು ರಾಜ ಬೆನ್ನಟ್ಟಿ ಹೋಗಿ ಬಳಲಿದಾಗ, ಕೌಶಿಕ ವೃದ್ಧ ಬ್ರಾಹ್ಮಣನಂತೆ ಕಾಣಿಸಿಕೊಳ್ಳುತ್ತಾನೆ. ಅವನ ಧರ್ಮ ಶ್ರವಣಕ್ಕೆ ಮರುಳಾಗಿ ದೊರೆ ಅವನು ಕೇಳಿದ್ದನ್ನು ದಾನಮಾಡಲೊಪ್ಪಿ ಆಮೇಲೆ ದಕ್ಷಿಣೆಯನ್ನು ಹೇಗೆ, ಎಲ್ಲಿಂದ ತಂದುಕೊಡುವುದೆಂದು ಚಿಂತಿಸುತ್ತಾನೆ.[6] "ಆಗ ರಾಣಿ ಎಂತಹ ವಿಪತ್ತಿನಲ್ಲೂ

3. ಎಸ್. ವಿ. ರಂಗಣ್ಣ,: 'ಹರಿಶ್ಚಂದ್ರ' ನಾಟಕದ ಮುನ್ನುಡಿ, ಪು. i

4. ಈ ಪ್ರಸಂಗ ಮಾರ್ಕಂಡೇಯ ಪುರಾಣದಲ್ಲಾಗಲಿ 'ಚಂಡಕೌಶಿಕ' ನಾಟಕದಲ್ಲಾಗಲಿ ಇಲ್ಲ.

5. ಮಾರ್ಕಂಡೇಯ ಪುರಾಣದಲ್ಲೂ ಮೂವರು ವಿದ್ಯಾಧಿದೇವತೆಗಳ ಪ್ರಸ್ತಾಪವಿದ್ದು, ಅವರನ್ನು ಹರಿಶ್ಚಂದ್ರ ಬಿಡಿಸುತ್ತಾನೆ. ಇವರೇ ಮುಂದೆ ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ವಿಶ್ವಾಮಿತ್ರಜನಿತ ಚಂಡಾಲಕನ್ಯೆಯರಾಗಿ ಪರಿವರ್ತಿತರಾಗಿರಬಹುದು.

6. ಇಲ್ಲಿ ದಕ್ಷಿಣೆ 'ಎರಡೂವರೆ ಭಾರ ಸುವರ್ಣ' ಎಂದಿದೆ. ಮಾರ್ಕಂಡೇಯ ಪುರಾಣದಲ್ಲಿ ಇದು ಯಾಗದ ಭೂರಿ ದಕ್ಷಿಣೆಯಾಗಿದೆ; 'ಚಂಡಕೌಶಿಕ'ದಲ್ಲಿ ಲಕ್ಷ ವರಹಕ್ಕೇರಿದೆ; ಹರಿಶ್ಚಂದ್ರಕಾವ್ಯದಲ್ಲಿ ಆನೆಯ ಮೇಲಿನಿಂದ ಕವಡೆ ಚಿಮ್ಮಿದಷ್ಟು ಎತ್ತರದ ಧನರಾಶಿಯಾಗಿ ವೃದ್ಧಿಸಿದೆ.

ಧರ್ಮಾದರವೇ ಶ್ರೇಯಸ್ಕರವೆಂದು ಬೆಂಬಲಿಸುತ್ತಾಳೆ. ರಾಜ್ಯವನ್ನು ಬಿಟ್ಟುಕೊಟ್ಟು, ಹೆಂಡತಿ ಮಗನೊಡನೆ ಹೊರಟ ರಾಜನನ್ನು ವಿಶ್ವಾಮಿತ್ರ ದಕ್ಷಿಣೆಗಾಗಿ ಪೀಡಿಸಲು, ಕಾಶಿಯಲ್ಲಿ ಸಂಪಾದಿಸಿ ಕೊಡುವುದಾಗಿ ಹೇಳಿ ಹರಿಶ್ಚಂದ್ರ ಅಲ್ಲಿಗೆ ಹೋಗುತ್ತಾನೆ. ರಾಣಿ ತನ್ನನ್ನು ಮಾರಿ ದಕ್ಷಿಣೆ ಕೊಡುವಂತೆ ಹೇಳಿದಾಗ ಅವನು ಮೂರ್ಛಿತನಾಗುತ್ತಾನೆ. ವಿಶ್ವಾಮಿತ್ರನ ಕಾಟ ಹೆಚ್ಚಾಗಲು, ರಾಜ ಯಾಚನೆಯಿಂದ ಧನಾರ್ಜನೆ ಮಾಡಲೊಪ್ಪದೆ ರಾಣಿಯನ್ನು ಮಾರಿಯಾದರೂ ಋಣ ಮುಕ್ತನಾಗಲು ನಿಶ್ಚಯಿಸುತ್ತಾನೆ. ಅನಂತರ ಪತ್ನೀಪುತ್ರರ ವಿಕ್ರಯದಿಂದ ದಕ್ಷಿಣೆಯ ಒಂದು ಭಾಗವನ್ನು ಸಲ್ಲಿಸುತ್ತಾನೆ; ಅವರು ತಮ್ಮನ್ನು ಕೊಂಡ ಕಾಲಕೌಶಿಕನೊಡನೆ ಹೋಗುತ್ತಾರೆ. ಬ್ರಾಹ್ಮಣ ವೇಷದ ವಿಶ್ವಾಮಿತ್ರನೇ ಆತ.[7] ರಾಜ ತನ್ನನ್ನೆ ಮಾರಿಕೊಳ್ಳಲು ಸಾರುತ್ತಾನೆ. ಯಮಧರ್ಮ ಚಂಡಾಲ ರೂಪದಲ್ಲಿ ಕೊಳ್ಳಲು ಬರುತ್ತಾನೆ. ತನಗೆ ಆಳಾಗಿದ್ದ ಹರಿಶ್ಚಂದ್ರನನ್ನು ವಿಶ್ವಾಮಿತ್ರ ಅವನಿಗೆ ಮಾರಿಬಿಡುತ್ತಾನೆ. ರಾಣಿ ಇದನ್ನು ಕೇಳಿ, ಬಂದು ನೋಡಿ ಗೋಳಿಡುತ್ತಾಳೆ. ನಗರ ರಕ್ಷಕರು ಅವಳನ್ನು ನೋಡಿ ಶಂಕಿಸಿ ಶ್ಮಶಾನರಕ್ಷಕನಿಗೆ ಒಪ್ಪಿಸಿ ಕೊಲ್ಲ ಹೇಳುತ್ತಾರೆ. ಹರಿಶ್ಚಂದ್ರ ಸ್ತ್ರೀವಧೆಯನ್ನು ಮಾಡಲಾರೆನೆಂದರೂ ಅವನ ಒಡೆಯ ನಿರ್ಬಂಧಿಸುತ್ತಾನೆ. ರಾಣಿಯೂ ಹರಿಶ್ಚಂದ್ರನೂ ಪರಸ್ಪರ ಗುರುತಿಸುತ್ತಾನೆ. ಹರಿಶ್ಚಂದ್ರ ಮಗನ ಮರಣಕ್ಕಾಗಿ ಪ್ರಲಾಪಿಸುತ್ತಾನೆ. ಧರ್ಮಸಂಕಟದಿಂದ ಅಗ್ನಿಪ್ರವೇಶಕ್ಕೆ ನಿರ್ಧರಿಸುತ್ತಾನೆ; ರಾಣಿಯೂ ಅವನನ್ನು ಹಿಂಬಾಲಿಸುವೆನೆನ್ನುತ್ತಾಳೆ. ಆಗ ಇಂದ್ರಾದಿ ದೇವತೆಗಳು ಪ್ರತ್ಯಕ್ಷರಾಗಿ ತಡೆಯುತ್ತಾರೆ. ರಾಜನನ್ನು ಇಂದ್ರ ಸ್ವರ್ಗಕ್ಕೆ ಕರೆಯುತ್ತಾನೆ. ಹರಿಶ್ಚಂದ್ರ ತಾನೊಬ್ಬನೆ ಸ್ವರ್ಗಕ್ಕೆ ಹೋಗಲೊಪ್ಪದೆ ಪ್ರಜೆಗಳೊಡನೆ ಸ್ವರ್ಗ ಪಡೆಯುತ್ತಾನೆ.

ಈ ಪುರಾಣಗಳಿಂದ ಇನ್ನೂ ಸ್ವಲ್ಪ ಮುಂದೆ ಹೋಗುತ್ತದೆ, ಕ್ಷೇಮೀಶ್ವರನ 'ಚಂಡಕೌಶಿಕ' ನಾಟಕ.[8] ಇದರ ಕತೆಯನ್ನು ಅತಿಸಂಕ್ಷಿಪ್ತವಾಗಿ ಹೀಗೆ ಹೇಳಬಹುದು:

ವಿದ್ಯಾತ್ರಯಗಳನ್ನು ಸಾಧಿಸಲೆಂದು ತಪೋಮಗ್ನನಾಗಿದ್ದ ವಿಶ್ವಾಮಿತ್ರನಿಗೆ ವಿಘ್ನವನ್ನುಂಟುಮಾಡಲು ವಿಘ್ನೇಶ್ವರ ಹಂದಿಯ ರೂಪ ತಾಳಿ ಹರಿಶ್ಚಂದ್ರನನ್ನು ವಿಶ್ವಾಮಿತ್ರಾಶ್ರಮಕ್ಕೆ ಎಳೆದು ತರುತ್ತಾನೆ. ವಿದ್ಯೆಗಳ ಆರ್ತನಾದವನ್ನು ಕೇಳಿ ರಾಜ ಓಡಿಬಂದುದರಿಂದ, ವಿಶ್ವಾಮಿತ್ರನ ತಪೋಭಂಗವಾಗಿ ವಿದ್ಯೆಗಳು ಅವನಿಂದ

---

7. 'ಚಂಡಕೌಶಿಕ'ದಲ್ಲಿ ಕೊಳ್ಳುವವನು ಒಬ್ಬ ದಯಾಶಾಲಿ ಬ್ರಾಹ್ಮಣ. ಹರಿಶ್ಚಂದ್ರಕಾವ್ಯದಲ್ಲಿ ಅಗ್ನಿವಿಪ್ರ.

8. ಈ ನಾಟಕದ ಕಾಲ ಹತ್ತನೆಯ ಶತಮಾನದ ಆದಿ. ವಿಶ್ವಾಮಿತ್ರನ ಕಥೆಯನ್ನು ಚಿತ್ರಿಸುವ ಯಾವುದೇ ಕಾವ್ಯ ಅಥವಾ ನಾಟಕ ಸಂಸ್ಕೃತ ಸಾಹಿತ್ಯದಲ್ಲಿಲ್ಲ, 'ಚಂಡಕೌಶಿಕ'ದ ವಿನಾ; ಈ ನಾಟಕವಾದರೂ ವಿಶ್ವಾಮಿತ್ರನನ್ನು ನಾಯಕನನ್ನಾಗಿ ಮಾಡಿಕೊಂಡಿದೆಯೇ ಹೊರತು ಹರಿಶ್ಚಂದ್ರನನ್ನಲ್ಲ. ಇದು ಆಶ್ಚರ್ಯಕರ ಸಂಗತಿ. ಹರಿಶ್ಚಂದ್ರನ ಚರಿತ್ರೆಗಿಂತ ಉತ್ತಮವಾದ, ಘನವಾದ ಕಾವ್ಯವಸ್ತು ಬೇಕಾದೀತೆ? ಸಂಸ್ಕೃತಕವಿಗಳು ಏತಕ್ಕೆ ಇತ್ತ ಕಡೆ ಗಮನ ಹರಿಸಲಿಲ್ಲವೊ. ಕನ್ನಡ ಈ ವಿಷಯದಲ್ಲಿ ಭಾಗ್ಯಶಾಲಿ.

ತಪ್ಪಿಸಿಕೊಳ್ಳುತ್ತವೆ. ರಾಜ ಕೌಶಿಕನನ್ನು ಸಾಂತ್ವನಗೊಳಿಸುತ್ತಾನೆ. ತನಗೆ ದಾನವೇನು ಎಂದು ವಿಶ್ವಾಮಿತ್ರ ಕೇಳಿದಾಗ 'ಈ ಭೂಮಿಯೆಲ್ಲ ನಿನ್ನದು' ಎನ್ನುತ್ತಾನೆ. ಕೌಶಿಕನು ದಾನಕ್ಕೆ ಒಂದು ಲಕ್ಷ ವರಹ ಕೇಳುತ್ತಾನೆ. ರಾಜ ಒಂದು ತಿಂಗಳ ಅವಧಿ ತೆಗೆದುಕೊಂಡು, ದಕ್ಷಿಣೆಯನ್ನು ಕಾಶಿಯಲ್ಲಿ ಗಳಿಸಿಕೊಡುವುದಾಗಿ ಹೇಳುತ್ತಾನೆ. ಕೌಶಿಕ ಕೋಪಗೊಂಡು ಹರಿಶ್ಚಂದ್ರನ ರಾಜ್ಯ, ಸತ್ಯಗಳನ್ನು ಚ್ಯುತಿಗೊಳಿಸುವುದಾಗಿ ಪ್ರತಿಜ್ಞಿಸುತ್ತಾನೆ. ಹರಿಶ್ಚಂದ್ರ ಕಾಶಿಯನ್ನು ಸೇರಿ ತನ್ನನ್ನು ಮಾರಿಕೊಳ್ಳಲಿರುವಾಗ ಅವನ ಹೆಂಡತಿ ಶೈಬ್ಯೆ ತನ್ನನ್ನು ಮಾರಿಕೊಳ್ಳಲು ಸಿದ್ಧಳಾಗುತ್ತಾಳೆ. ಹರಿಶ್ಚಂದ್ರನೂ ತನ್ನನ್ನು ಚಂಡಾಲನಿಗೆ ವಿಕ್ರಯಿಸಿ ದಕ್ಷಿಣೆಯ ಹಣವನ್ನು ವಿಶ್ವಾಮಿತ್ರನಿಗೆ ಪೂರ್ತಿ ಸಂದಾಯ ಮಾಡುತ್ತಾನೆ. ಹರಿಶ್ಚಂದ್ರ ಶ್ಮಶಾನವನ್ನು ಕಾಯುತ್ತಿರುವಾಗ ಅವನಿಗೆ ವಿದ್ಯೆಗಳು ಒಲಿದು ಬರುತ್ತಾರೆ; ಅವರನ್ನು ಕೌಶಿಕನ ಬಳಿಗೇ ಕಳುಹಿಸುತ್ತಾನೆ; ಕಾಪಾಲಿಕ ದೊರಕಿಸಿದ ನಿಧಿಯನ್ನು ತನ್ನೊಡೆಯನಿಗೆ ಅರ್ಪಿಸುತ್ತಾನೆ. ಇತ್ತ ರೋಹಿತಾಶ್ವ ಸರ್ಪದಷ್ಟನಾಗಿ ಮರಣಿಸುತ್ತಾನೆ. ಅವನನ್ನು ಶೈಬ್ಯೆ ಶ್ಮಶಾನಕ್ಕೊಯ್ದು ಶೋಕಿಸುವಾಗ ಹರಿಶ್ಚಂದ್ರ ಅವಳಿಂದ ಮೃತಕಂಬಳವನ್ನು ತೆಗೆದುಕೊಳ್ಳುತ್ತಾನೆ. ಇಬ್ಬರೂ ದುಃಖಾರ್ತರಾಗಿ ಧರ್ಮಸಂಕಟದಲ್ಲಿ ಸಿಕ್ಕಿ ತೊಳಲಾಡುತ್ತಿರುವಾಗ ಧರ್ಮಪುರುಷ ಬಂದು ಅವರನ್ನು ಸಂತೈಸಿ ರೋಹಿತಾಶ್ವನನ್ನು ಬದುಕಿಸುತ್ತಾನೆ. ತಾನು ಬಾಧಿಸಿದ್ದು ಸತ್ಯಪರೀಕ್ಷೆಗಾಗಿ ಎಂದು ಹೇಳುತ್ತಾನೆ, ವಿಶ್ವಾಮಿತ್ರ. ಹರಿಶ್ಚಂದ್ರನಿಗೆ ಪ್ರಜೆಗಳೆಲ್ಲರೊಡನೆ ಸತ್ಯಲೋಕ ಪ್ರಾಪ್ತವಾಗುತ್ತದೆ.

೨. ರಾಘವಾಂಕನ 'ಹರಿಶ್ಚಂದ್ರಚಾರಿತ್ರ್ಯ'

ಹೀಗೆ ಸಂಸ್ಕೃತವಾಙ್ಮಯದಲ್ಲಿ ವೈವಿಧ್ಯಪೂರ್ಣವಾಗಿ ಹಬ್ಬಿರುವ ಹರಿಶ್ಚಂದ್ರನ ಕತೆ ಪರಿಪೂರ್ಣತೆಯನ್ನು ಕಂಡುಕೊಂಡುದು ಕನ್ನಡದಲ್ಲಿ, ರಾಘವಾಂಕನ 'ಹರಿಶ್ಚಂದ್ರಚಾರಿತ್ರ್ಯ'ದಲ್ಲಿ. ಕವಿವರ್ಯ ರಾಘವಾಂಕನ ನಿರೂಪಣೆ ಹರಿಶ್ಚಂದ್ರಕಥಾಪರಂಪರೆಗೆ ಕಳಸವಿಟ್ಟಂತಿದೆ, ಕಣ್ಣು ಮೂಡಿಸಿದಂತಿದೆ. ಅದು ಸದ್ಯಕ್ಕೆ ಪರಿಶ್ಚಂದ್ರೋಪಾಖ್ಯಾನದ ಚರಮಾವಸ್ಥೆಯಾಗಿ ಸಿದ್ಧಿಶಿಖರವಾಗಿ ರಮಣೀಯೋಜ್ವಲ ಕಲಾಸೃಷ್ಟಿಯಾಗಿದೆ.[9] ಅವನ ಕೃತಿಯ ನಿಲುವು ಅಪೂರ್ವ ವಿಶಿಷ್ಟವಾದುದು. "ಭಾರತೀಯ ಸಾಹಿತ್ಯದಲ್ಲಿಯೇ ಕಾಣದೊರೆಯದ ನೂತನ ಸನ್ನಿವೇಶ ಸೃಷ್ಟಿ, ಕೃತಿಬಂಧ ಇಲ್ಲಿದೆ."[10] ಸಂಸ್ಕೃತದ ಪುರಾಣನಾಟಕಗಳಿಗೆ ರಾಘವಾಂಕ ಋಣಿಯಾಗಿದ್ದರೂ ಅವುಗಳಲ್ಲಿಲ್ಲದ ದರ್ಶನವನ್ನು ತನ್ನ ಕಾವ್ಯದಲ್ಲಿನ ಧ್ವನಿಗೈದು ಹರಿಶ್ಚಂದ್ರನ ಕತೆಗೆ ತನ್ನದೇ ಆದ ತಿರುವನ್ನು ಕೊಟ್ಟಿದ್ದಾನೆ.

---

9. ರಾಘವಾಂಕನ ಕಾವ್ಯವನ್ನೆ ಆಧರಿಸಿ, ಅಲ್ಲಿ ಇಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಎಸ್.ವಿ. ರಂಗಣ್ಣನವರು 'ಹರಿಶ್ಚಂದ್ರ' ಎಂಬ 'ಕಥಾನಾಟಕ'ವನ್ನು ರಚಿಸಿರುವುದನ್ನು ನೆನೆಯಬಹುದು. ವರಕವಿ ಪು.ತಿ.ನ. ಅವರು 'ಸತ್ಯಾಯನ ಹರಿಶ್ಚಂದ್ರ' ಎಂಬ ನವೀನದರ್ಶನ ಸಮನ್ವಿತವಾದ ನಾಟಕವೊಂದನ್ನು ಬರೆದಿದ್ದಾರೆ.

ಸಂಸ್ಕೃತವಾಙ್ಮಯದಲ್ಲಿ ಮೈದೋರಿರುವ ಹರಿಶ್ಚಂದ್ರೋಪಾಖ್ಯಾನಗಳಿಗೂ ರಾಘವಾಂಕನ 'ಹರಿಶ್ಚಂದ್ರಚಾರಿತ್ರ್ಯ'ಕ್ಕೂ ಇರುವ ವ್ಯತ್ಯಾಸಗಳನ್ನು ಸುಸೂಕ್ಷ್ಮವಾಗಿ ಪರಿಶೀಲಿಸಿದಾಗ ರಾಘವಾಂಕಸೃಷ್ಟಿಯ ಗುರುತ್ವ, ಸಿದ್ಧಿಗಳು ವೇದ್ಯವಾಗುತ್ತವೆ. ಹರಿಶ್ಚಂದ್ರ ಸಂಬಂಧವಾದ ಯಾವುದೇ ಕಾವ್ಯ ಸಂಸ್ಕೃತಸಾಹಿತ್ಯದಲ್ಲಿ ಇಲ್ಲದಿರುವಾಗ, ನಮ್ಮ ಕವಿಯ ಹಿರಿಮೆಗೆ ಮತ್ತೂ ಕೋಡು ಮೂಡಿದಂತಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಕನ್ನಡದ ವಚನಕಾರರು ನೀಡಿದ ಮಹೋದಾತ್ತಮೌಲ್ಯಗಳ ಭೂಮಿಕೆಯ ಮೇಲೆ ನಿಂತ ರಾಘವಾಂಕ ಅವುಗಳ ಬೆಳಕಿನಲ್ಲಿ ಹರಿಶ್ಚಂದ್ರನ ಮೂರ್ತಿಯನ್ನು ಅನನ್ಯವಾಗಿ ಸಮೆದು ನಿಲ್ಲಿಸಿದ್ದಾನೆ. "ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎಂಬ ದರ್ಶನ ಅವನು ನಿರೂಪಿಸಿರುವ ಕಥೆಯಲ್ಲಿ ಸೂತ್ರಪ್ರಾಯವಾಗಿ ಉದ್ಘೋಷಿತವಾಗುತ್ತದೆ.[11] ಸತ್ಯದ ಖಡ್ಗಧಾರಾಪಥದಲ್ಲಿ ಯಾತ್ರಾರ್ಥಿಯಾಗಿ, ಕೋಡದ ಕೊಂಕದ ದೃಢಾಂತರಂಗದಿಂದ 'ದಿವ್ಯ' ಪರಂಪರೆಯಲ್ಲಿ ಉತ್ತೀರ್ಣವಾಗಿ, ಕಡೆಗೊಮ್ಮೆ ಸತ್ಯಸಾಕ್ಷಾತ್ಕಾರಧನ್ಯವಾದ ತ್ರಿಲೋಕಭವ್ಯಚೇತನವೊಂದರ ತುಂಗ ಪ್ರೋಜ್ಜ್ವಲಚಿತ್ರವನ್ನು ಹರಿಶ್ಚಂದ್ರನ ಪಾತ್ರದಲ್ಲಿ ಸಂದರ್ಶಿಸುತ್ತೇವೆ. "ಹರ ತನ್ನ ಭಕ್ತರ ತಿರಿವಂತೆ ಮಾಡುವ; ಒರೆದು ನೋಡುವ ಸುವರ್ಣದ ಚಿನ್ನದಂತೆ; ಅರೆದು ನೋಡುವ ಚಂದನದಂತೆ;ಅರಿದು ನೋಡುವ ಕಬ್ಬಿನ ಕೋಲಿನಂತೆ: ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದೆತ್ತಿಕೊಂಬ" ಎಂಬ ವಚನಸೂತ್ರಕ್ಕೆ ಸುಂದರತಮ ಭಾಷ್ಯವಾಗಿದೆ ಹರಿಶ್ಚಂದ್ರನ ಬಾಳು. ಅದೊಂದು ಸತ್ಯದ ಮಹಾಪ್ರಯೋಗಶಾಲೆ.[12] ತನ್ನ ಸರ್ವಸ್ವವನ್ನೂ ಸತ್ಯದ ಬಲಿಪೀಠದ ಮೇಲೆ ಸಮರ್ಪಿಸಿ, ಮಾಯಾ ಮೋಹ ಉಪಾಧಿ ಆವರಣಗಳನ್ನೆಲ್ಲ ಒಂದೊಂದಾಗಿ ಕಳಚಿಕೊಂಡು ಸಾಧನಾಮಾರ್ಗದಲ್ಲಿ ಮುಂಬರಿಯುವ ಶ್ರದ್ಧಾಲುವಿಗೆ ಅನಿವಾರ್ಯವಾಗಿ ಶಿವಕರುಣೋದಯವಾಗುವ ಪರಿ ಅಲ್ಲಿ ಅನುಪಮವಾಗಿ ನಿದರ್ಶನಗೊಂಡಿದೆ. ಅಸಂಖ್ಯ ಪರೀಕ್ಷಾವ್ಯೂಹಗಳನ್ನೊಡ್ಡುವ ವಿಶ್ವಾಮಿತ್ರ ವಿಧಿಯ ಪ್ರತೀಕವಾಗಿ ಪ್ರತಿನಿಧಿಯಾಗಿ ನಿಲ್ಲುತ್ತಾನೆ; ಅವನು ಸಮಕಟ್ಟಿದ ಅಸಾಧಾರಣ ವಿಘ್ನಪ್ರಲೋಭನ ಆಮಿಷಗಳನ್ನೆಲ್ಲ ಹರಿಶ್ಚಂದ್ರ ಮೇರುಸ್ಥಿರತೆಯಿಂದ ಗೆದ್ದು ತುದಿಗೆ ಸತ್ಯಸಿದ್ಧನಾಗಿ ಪರಿಶುದ್ಧನಾಗಿ ಅಗ್ನಿಪರೀಕ್ಷಿತಕಾಂಚನದಂತೆ ತೇಜೋನ್ವಿತನಾಗಿ ಜಗದ್ವಂದ್ಯನಾಗಿ ಕಂಗೊಳಿಸುತ್ತಾನೆ. ಸ್ವಯಂ ಕಾಲನೇ ಹರಿಶ್ಚಂದ್ರನನ್ನು ಪರೀಕ್ಷೆಗೀಡು ಮಾಡುತ್ತಾನೆ; ಹೌದು, ಕಾಲದ ಉಗ್ರಪರೀಕ್ಷೆಯಲ್ಲಿ ಜಯಶಾಲಿಯಾದಾಗಲೆ ವ್ಯಕ್ತಿಯ ಸತ್ವ

---

10. ರಂ. ಶ್ರೀ. ಮುಗಳಿ,: 'ಕನ್ನಡ ಸಾಹಿತ್ಯ ಚರಿತ್ರೆ', ೧೯೫೩. ಪು. ೧೮೩

11. ಗಾಂಧೀಜಿಯವರು 'Truth is God' ಎಂದು ಈ ಕಾಲದಲ್ಲಿ ಸಾರಿದರು; ಆದರೆ ರಾಘವಾಂಕ ಸುಮಾರು ಎಂಟು ನೂರು ವರ್ಷಗಳ ಹಿಂದೆಯೇ ಆ ಸಂದೇಶವನ್ನು ಕಲಾತ್ಮಕವಾಗಿ ಪ್ರಸಾರ ಮಾಡಿದ್ದಾನೆಂಬುದನ್ನು ಗಮನಿಸಬೇಕು.

12. ತಮ್ಮ ಜೀವನಕಥೆಯನ್ನು *Experiments with Truth* ಎಂದು ಕರೆದರು ಗಾಂಧೀಜಿ; ಹರಿಶ್ಚಂದ್ರನ ಕಥೆಯಾದರೂ ಅಷ್ಟೆ. ಇಬ್ಬರ ಪಾಲಿಗೂ ಸತ್ಯಾನುಷ್ಠಾನ ಬರಿಯ ಪ್ರಯೋಗವಾಗಲಿಲ್ಲ; ಯೋಗವೇ ಆಯಿತು.

ಗೊತ್ತಾಗುವುದು. ಕ್ಷಣಿಕವಾಗಿ ಯಾರು ಬೇಕಾದರೂ ಸತ್ಯವನ್ನಾಚರಿಸಬಹುದು; ಆದರೆ ಸುದೀರ್ಘಕಾಲದ ಕಠೋರ ಶೋಧನೆಗೆ ಎದೆಗೊಟ್ಟು ತಗ್ಗದೆ ಕುಗ್ಗದೆ ತೇರ್ಗಡೆಯಾಗುವ ಚೇತನಗಳು ಅತಿವಿರಳ. ರಾಘವಾಂಕ ಸೃಜಿಸಿರುವುದು ಅಂಥ ವಿರಳವರ್ಗದ ಸತ್ಯವೀರ ಹರಿಶ್ಚಂದ್ರನನ್ನು.

ರಾಘವಾಂಕನ ಇಡೀ ಕಾವ್ಯ ಪ್ರತಿಮಾವಿಧಾನದ ಸಂಯೋಜನೆಯಾಗಿರುವುದು ಅದರ ಗುಣವಿಶೇಷವಾಗಿದೆ. "ದೃಶ್ಯ ನಿರೂಪಣೆಯ ಮತ್ತು ಸಂವಾದಚಾತುರ್ಯದ ನಾಟಕೀಯತೆಯಲ್ಲಿ ನಿಪುಣನಾದ ವರಕವಿ ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಸಮಗ್ರವೂ 'ಅಪೃಥಗ್‌ಯತ್ನ ನಿರ್ವರ್ತಿತ'ವಾಗಿಯೆ ಪ್ರತಿಮಾವಿಧಾನಕ್ಕೂ ದರ್ಶನಧ್ವನಿಗೂ ಉತ್ತಮ ನಿದರ್ಶನವಾಗಿದೆ. ಮರ್ತ್ಯಭೂಮಿಕೆಯಲ್ಲಿ ಪರಿಣಾಮಗೊಂಡು ಪರಮಸಿದ್ಧಿಯ ಕಡೆಗೆ ಚಲಿಸುವ ಹರಿಶ್ಚಂದ್ರನ ಸತ್ಯಜೀವನದ ವಿಕಾಸದ ಸಲುವಾಗಿ ಊರ್ಧ್ವ ಲೋಕದ ಅಮರ್ತ್ಯಶಕ್ತಿಗಳ ಸಂಕಲ್ಪಕ್ಕೂ ವ್ಯೂಹಕ್ಕೂ ಪ್ರತೀಕ ಸ್ವರೂಪವಾಗಿರುವ ಇಂದ್ರನ ಆಸ್ಥಾನದಲ್ಲಿ ಸಂಭವಿಸುವ ವಸಿಷ್ಠ ವಿಶ್ವಾಮಿತ್ರರ ವಾಗ್ಯುದ್ಧದಿಂದ ಹಿಡಿದು ಸರ್ವಾಹಂಕಾರದ ಸಮೂಲ ವಿನಾಶಕ್ಕೆ ಪ್ರತೀಕದಂತಿರುವ ಶ್ಮಶಾನದಲ್ಲಿ ಸಂಭವಿಸುವ ಈಶ್ವರಸಾಕ್ಷಾತ್ಕಾರದ ಘಟನೆಯವರೆಗೂ ಆ ಕಥಾಕ್ರಿಯೆ ಹೆಜ್ಜೆಹೆಜ್ಜೆಗೂ ವಿವರವಿವರದಲ್ಲಿಯೂ ಆಲೋಚಿಸಿ ಕಟ್ಟಿದ ಕೃತ ರಚನೆಯೊ ಎನ್ನುವಷ್ಟರಮಟ್ಟಿಗೆ ಆಶ್ಚರ್ಯಕರವಾಗಿ ದರ್ಶನ ಧ್ವನಿಯನ್ನು ಮಿಡಿಯುತ್ತ ಮುಂಬರಿಯುತ್ತದೆ."[13] ಹರಿಶ್ಚಂದ್ರನಿಗೆ ಬಿದ್ದ ಸ್ವಪ್ನ; ವಿಶ್ವಾಮಿತ್ರನ ಕ್ರೋಧದಿಂದ ಹೊಲತಿಯರ ಜನನ, ಅವರ ಪರಾಜಯ; ಕೌಶಿಕಕೃತ ಅಗ್ನಿಯನ್ನು ಹರಿಶ್ಚಂದ್ರ ಚಂದ್ರಮತಿಯರು ದಾಟುವುದು; ಅನಾಮಿಕಸೇವೆಯನ್ನು ಹರಿಶ್ಚಂದ್ರ ಇನಿತೂ ಹೇಸದೆ ಕೈಗೊಳ್ಳುವುದು; ತನ್ನ ಮೋಹದ ಮಡದಿಯ ಕೊರಳನ್ನು ತುಂಡರಿಸಲು ತಿಲಮಾತ್ರವೂ ವಿಚಲಿತನಾಗದೆ ಖಡ್ಗವನ್ನು ನೆಗಹುವುದು, ಹೊಡೆಯುವುದು; 'ಹೊಡೆವ ಕಡುಗದ ಬಾಯ ಕಡೆಯ ಹೊಡೆಗುಳನಾಂತು ಮಡದಿಯೆಡೆಗೊರಳ ನಡುವಡಸಿ' ವಿಶ್ವನಾಥ ವ್ಯೈದೋರುವುದು—ಮುಂತಾದುವೆಲ್ಲ ಮಹೋನ್ನತ ಪ್ರತಿಮಾವಯವಗಳಾಗಿವೆ. ರಾಘವಾಂಕನ ಕೃತಿ ಮಾನ್ಯವಾಗುವುದು ಮುಖ್ಯವಾಗಿ ಈ ಪ್ರತಿಮಾಪ್ರತಿಭೆಯಿಂದ; ನಾಟ್ಯ ನೈಪುಣ್ಯವೊಂದರಿಂದಲೆ ಅಲ್ಲ, ನಾಣ್ಣುಡಿಗಳ ದೇಸಿವಾತುಗಳ ಬಳಕೆಯಷ್ಟರಿಂದಲೆ ಅಲ್ಲ.

ರಾಘವಾಂಕ ಪ್ರೋಕ್ತ ಹರಿಶ್ಚಂದ್ರ ಕಥೆ ಸರ್ವಸುಪರಿಚಿತವೆ ಆಗಿರುವುದರಿಂದ ಸಂಕ್ಷೇಪವಾಗಿಯಾದರೂ ಅದನ್ನು ತಿಳಿಸುವುದು ಅನಗತ್ಯವಾಗಿದೆ.

---

13. ಕುವೆಂಪು, 'ರಸೋ ವೈ ಸಃ', ಪು. ೫೪

೩. ಹರಿಶ್ಚಂದ್ರ ಸಾಂಗತ್ಯಕಾರರು

ಹರಿಶ್ಚಂದ್ರಾಖ್ಯಾನವನ್ನು ರಾಘವಾಂಕ ಬಂಧುರವಾಗಿ ಕನ್ನಡದಲ್ಲಿ ನಿರೂಪಿಸಿದ ಮೇಲೆ, ಅದು ಕನ್ನಡಿಗರಿಗೆ ಬಹಳ ಪ್ರಿಯವಾಗಿ ಪರಿಣಮಿಸಿ ಮುಂದಿನ ಕವಿಗಳ ಮನಸ್ಸನ್ನು ವಿಶೇಷವಾಗಿ ಸೆಳೆದುದರಲ್ಲಿ ಸಂದೇಹವಿಲ್ಲ. ಹನ್ನೆರಡು ಅಥವಾ ಹದಿಮೂರನೆಯ ಶತಮಾನದಲ್ಲಿ ವಾರ್ಧಕಷಟ್ಪದಿಯಲ್ಲಿ ವಿರಚಿತವಾದ ರಾಘವಾಂಕನ ಕೃತಿ ಮುಂದಿನ ತಲೆಮಾರುಗಳ ಸಾಮಾನ್ಯ ಜನತೆಗೆ ತಕ್ಕಮಟ್ಟಿಗೆ ದುರ್ಗ್ರಾಹ್ಯವಾಗಿಯೇ ತೋರಿರಬೇಕು. ಷಟ್ಪದಿಯ ಯುಗ ಮುಗಿದು ಸಾಂಗತ್ಯದ ಯುಗ ಪ್ರಾರಂಭವಾದ ಮೇಲೆ ಬಹುಜನಾದರಣೀಯವಾದ ಹರಿಶ್ಚಂದ್ರನ ಕಥೆಯನ್ನು ಸಾಂಗತ್ಯದಲ್ಲಿ ಸರಳವಾಗಿ ಪಾಮರಸ್ಪೃಹಣೀಯವಾಗಿ ಮತ್ತೆ ನಿರೂಪಿಸುವುದರ ಆವಶ್ಯಕತೆ ತಲೆದೋರಿರಬೇಕು. ಈ ಅಗತ್ಯದಿಂದ ಪ್ರೇರಿತರಾಗಿ ಹದಿನಾರನೆಯ ಶತಮಾನದಲ್ಲಿ ಕೆಲವರು ಕವಿಗಳು ಹರಿಶ್ಚಂದ್ರಸಾಂಗತ್ಯಗಳನ್ನು ವಿರಚಿಸಿದ್ದಾರೆ. ರಾಘವಾಂಕನ ಕೃತಿಯೆ ಇವರ 'ಕಾವ್ಯಕೆ ಗುರು'; ಆದರೆ ಓದುವ ಗಿರಿಯನ ಹೊರತು ಮಿಕ್ಕವರು ರಾಘವಾಂಕನನ್ನು ಸ್ಮರಿಸುವ ತೊಂದರೆ ತೆಗೆದುಕೊಂಡಿಲ್ಲ.

ಸದ್ಯಕ್ಕೆ ತಿಳಿದಿರುವಮಟ್ಟಿಗೆ ನಾಲ್ವರು ಕವಿಗಳು ಹರಿಶ್ಚಂದ್ರಸಾಂಗತ್ಯಗಳನ್ನು ಬರೆದಿದ್ದಾರೆ: ರಾಮರಸ ವಿರೂಪಾಕ್ಷ, ಬೊಂಬೆಯ ಲಕ್ಕ, ಓದುವ ಗಿರಿಯ ಮತ್ತು ಹಲಗ. ಇವರೆಲ್ಲ ರಾಘವಾಂಕನನ್ನು ಬಹಳ ನಿಕಟವಾಗಿ ಅನುವರ್ತಿಸಿದ್ದಾರೆ, ಯಾವ ರೀತಿಯಲ್ಲೂ ಪರಿವರ್ತಿಸಿಲ್ಲ; ಅವನು ಹೇಳಿದ ಕತೆಯನ್ನೆ ಸಾಂಗತ್ಯ ರೂಪದಲ್ಲಿ ಬಳಸಿದ್ದಾರೆ, ಬೆಳೆಸಿಲ್ಲ ಎಂದು ಒಟ್ಟಿನ ಮೇಲೆ ಹೇಳಬಹುದು. ಈ ಅವಲಂಬನ ಎಷ್ಟರಮಟ್ಟಿಗೆಂದರೆ, ಇವರ ಸಾಂಗತ್ಯಗಳ ಪಾಠನಿರ್ಣಯಕ್ಕೆ ಹರಿಶ್ಚಂದ್ರಕಾವ್ಯದಿಂದ ನೆರವು ಪಡೆಯಬಹುದು; ಒಂದು ವೇಳೆ ಹರಿಶ್ಚಂದ್ರ ಕಾವ್ಯವೇನಾದರೂ ಅನುಪಲಬ್ಧವಾಗಿದ್ದಲ್ಲಿ ಈ ಸಾಂಗತ್ಯಗಳಿಂದ ಅದರ ಸ್ವರೂಪವನ್ನು ಅರಿಯಬಹುದಿತ್ತು! ಆದ್ದರಿಂದ, ರಾಘವಾಂಕಕಾವ್ಯದ ವಟವೃಕ್ಷದ ಛಾಯೆಯಲ್ಲಿ ನಿಂತಿರುವ ಈ ಕವಿಗಳ ಸ್ವಂತ ನೆರಳುಗಳನ್ನರಸುವುದು ಸಲ್ಲದು. ಆದರೂ ತಮ್ಮ ನಿರ್ಬಂಧ ಪರಿಮಿತಿಗಳಲ್ಲಿ ಈ ಸಾಂಗತ್ಯ ಕವಿಗಳು ತೋರಿರುವ ಪ್ರತಿಭೆಯೇನು ಚಾತುರ್ಯವೇನು ಚಮತ್ಕಾರವೇನು ಎನ್ನುವುದನ್ನು ಎಚ್ಚರಿಕೆಯಿಂದ ಸಹಾನುಭೂತಿಯಿಂದ ಸಮೀಕ್ಷಿಸಬೇಕಾಗುತ್ತದೆ.

ಈ ನಾಲ್ವರು ಕವಿಗಳು ಬಹುಶಃ ಸಮಕಾಲೀನರೆಂದೆ ತೋರುತ್ತದೆ. ಆದರೂ ಇವರ ನೆಲೆಬೆಲೆಗಳನ್ನು ತೌಲನಿಕವಾಗಿ ನಿಷ್ಕರ್ಷಿಸಬೇಕಾದರೆ ಯಾರ ಕೃತಿ ಮೊದಲು, ಯಾರ ಕೃತಿ ಆಮೇಲೆ ಎಂಬುದನ್ನು ನಿರ್ಧರಿಸುವುದು ಅಗತ್ಯ. ಇವರಲ್ಲಿ ಒಬ್ಬನ ವಿನಾ ಉಳಿದವರು ತಮ್ಮ ಕಾಲವನ್ನು ಹೇಳಿಕೊಳ್ಳದಿರುವುದು ಸ್ವಲ್ಪ ತೊಡಕಿಗೆ ಕಾರಣವಾಗಿದೆ.

ಈ ನಾಲ್ವರು ಸಾಂಗತ್ಯಕಾರರೂ 'ಕವಿಚರಿತೆ'ಯಲ್ಲಿ ಉಕ್ತರಾಗಿದ್ದಾರೆ. ಆದರೂ ಬೊಂಬೆಯ ಲಕ್ಕನ ಕೃತಿಯೆ ಹೆಚ್ಚು ಪ್ರಸಿದ್ಧಿ ಪ್ರಚಾರಗಳನ್ನು ಪಡೆದುಕೊಂಡಿದೆ; ಅದರ ಸಂಗ್ರಹವೂ

ಪ್ರಕಟವಾಗಿದೆ. ಉಳಿದ ಕವಿಗಳಿಗೆ ಈ ಪುಣ್ಯವಿಲ್ಲ. ಈ ಬೊಂಬೆಯ ಲಕ್ಕ ತನ್ನ "ಕಾಲವನ್ನು ಕ್ರಿ. ಶ. ೧೫೩೮ ಎಂದು ಹೇಳಿಕೊಂಡಿದ್ದಾನೆ" ಎಂದು ಕವಿಚರಿತೆಕಾರರು ತಿಳಿಸುತ್ತಾರೆ. ಇವನ ಸಾಂಗತ್ಯದ ಸಂಪಾದಕರೂ ಕೂಡ "ಇವನ ಕಾಲ ಕ್ರಿ. ಶ. ೧೫೩೮ ಎಂದು ಇವನ ಕಾವ್ಯದಿಂದಲೇ ತಿಳಿದುಬರುತ್ತದೆ" ಎಂದಿದ್ದಾರೆ. ಪರಿಶೀಲಿಸಿದರೆ ಎರಡು ಹೇಳಿಕೆಗಳೂ ಸರಿಯಲ್ಲವೆಂದು ಗೊತ್ತಾಗುತ್ತದೆ.

ಬೊಂಬೆಯ ಲಕ್ಕನ ಕಾಲ ೧೫೩೮ ಎಂಬ ಈ ತೀರ್ಮಾನಕ್ಕೆ ಕಾರಣವೇನೆಂದರೆ, ಈತನ ಕಾವ್ಯದ ಕೆಲವು ಹಸ್ತಪ್ರತಿಗಳಲ್ಲಿ ಈ ಕಾಲನಿರ್ದೇಶಕ ಪದ್ಯಗಳಿರುವುದು:

ಶಾಲಿವಾಹನ ಬಂದು ಬಾಳಿದ ಕಲಿಯೊಳು| ಗಾಳಿದ ಶಕವರುಷಗಳು
ಏಳರ ಇಮ್ಮಡಿ ತಾಳಿದ ಶತಕದ| ಮೇಲಾದ ಅರವತ್ತು ವರುಷ
ಶರಧಿಯ ಕಂದಗೆ ಶರಣೆಂಬ ದಿನದೊಳು | ಬೆರಸಿದ ಚೈತ್ರಮಾಸದಲಿ
ಸೆರೆದ ವಿಳಂಬಿಯ ವರ ಸಂವತ್ಸರದೊಳು| ಪರಿಪೂರ್ಣವಾಯಿತು ಕೃತಿಯು[14]

ಆದರೆ ಈ ಪದ್ಯಗಳು ಮತ್ತೆ ಕೆಲವು ಹಸ್ತಪ್ರತಿಗಳಲ್ಲಿಲ್ಲ.[15] ಏತಕ್ಕೆ ಹೀಗಾಯಿತು? ವಿಷಯವಿಷ್ಟೆ: ಈ ಪದ್ಯಗಳು ವಾಸ್ತವವಾಗಿ ಬೊಂಬೆಯ ಲಕ್ಕನವಲ್ಲ, ರಾಮರಸ ವಿರೂಪಾಕ್ಷನವು. ವಿರೂಪಾಕ್ಷನ ಕೃತಿಯ ಎಲ್ಲ ಹಸ್ತಪ್ರತಿಗಳ ಅಂತ್ಯದಲ್ಲಿ ಈ ಪದ್ಯಗಳು ಬರುತ್ತವೆ. ಇವು ಅವನವೇ ಹೌದು ಎಂಬುದನ್ನು ಅವನ ಸಾಂಗತ್ಯಪದ್ಯಗಳಲ್ಲಿ ನಿಯತವಾಗಿ ಬರುವ ಒಳಪ್ರಾಸದ ಒರೆಗಲ್ಲಿನಿಂದ ಕೂಡ ಸಮರ್ಥಿಸಬಹುದು. ಬೊಂಬೆಯ ಲಕ್ಕ ತನ್ನ ಕಾಲವನ್ನು ಹೇಳಿಕೊಳ್ಳದಿದ್ದರೂ, ಪ್ರತಿಕಾರರ ಕೈವಾಡದಿಂದ ವಿರೂಪಾಕ್ಷನ ಪದ್ಯಗಳು ಅವನ ಕಾವ್ಯಕ್ಕೆ ಲಗತ್ತಾಗಿ, ಒಬ್ಬನ ಕೃತಿಯ ಕಾಲ ಮತ್ತೊಬ್ಬನ ಕೃತಿಯ ಕಾಲವಾಗಿ ನಿಂತುಕೊಂಡಿದೆ.

ಹಿಂದಿನ ಕಾಲದಲ್ಲಿ ಒಂದು ಹಸ್ತಪ್ರತಿ ಅಪೂರ್ಣವಾಗಿದ್ದಾಗ ಅದನ್ನು ನಕಲು ಮಾಡಿಕೊಳ್ಳುವ ಪ್ರತಿಕಾರ ಮತ್ತೊಂದು ಹಸ್ತಪ್ರತಿಯಿಂದ ಉಳಿದ ಭಾಗವನ್ನು ನಕಲು ಮಾಡಿಕೊಳ್ಳುತ್ತಿದ್ದುದು ಸಹಜ. ಹೀಗಾಗಿ, ಅವನು ತಯಾರಿಸಿದ ಒಂದು ಹಸ್ತಪ್ರತಿಯಲ್ಲಿ ಹಿಂದಿನ ಎರಡು ಹಸ್ತಪ್ರತಿಗಳು ಮಿಶ್ರಣಗೊಳ್ಳುವ ಸಂಭವವಿತ್ತು. ಹರಿಶ್ಚಂದ್ರ ಸಾಂಗತ್ಯಗಳನ್ನು ಪ್ರತಿಮಾಡಿಕೊಳ್ಳುವಾಗ ಏನಾಯಿತೆಂದರೆ, ಒಬ್ಬನೇ ಕವಿಯ ಕಾವ್ಯದ ಎರಡು ಹಸ್ತಪ್ರತಿಗಳು ಮಿಶ್ರಿತವಾಗುವುದಿರಲಿ, ಇಬ್ಬರು ವಿಭಿನ್ನ ಕವಿಗಳ ವಿಭಿನ್ನ ಹಸ್ತ ಪ್ರತಿಗಳು ಒಂದೆಡೆ ಮಿಳಿತವಾಗುವುದಕ್ಕೂ ಅವಕಾಶವಾಯಿತು-ಛಂದಸ್ಸು ಮತ್ತು ಕಥೆ ಒಂದೇ ಆಗಿದ್ದು, ಪರಸ್ಪರ ವ್ಯತ್ಯಾಸ ಸುಲಭವಾಗಿ ಗೊತ್ತಾಗದುದರಿಂದ. ಅಲ್ಲದೆ, ಪ್ರತಿಕಾರರಿಗೆ ಕಥೆ ಮುಖ್ಯವಾಗಿತ್ತು, ಯಾವ ಕವಿಯಾದರೇನಂತೆ. ಈ ಕಾರಣದಿಂದ ಬೊಂಬೆಯ ಲಕ್ಕ, ರಾಮರಸ ವಿರೂಪಾಕ್ಷರ

14. ವಿರೂಪಾಕ್ಷನ ಕೃತಿಯಲ್ಲಿ 'ಸೆರೆದ ವಿಳಂಬಿ ಸಂವತ್ಸರದೊಳು ಮತ್ತೆ....' ಎಂದಿದೆ; ಮೇಲಿನದೆ ಸರಿಯಾದ ಪಾಠವಿರಬೇಕು.

15. ಉದಾಹರಣೆಗೆ, ಮೈಸೂರಿನ ಪ್ರಾಚ್ಯಸಂಶೋಧನಾಲಯದ ಕೆ. ೯೬ನೆಯ ಓಲೆಗರಿ ಪ್ರತಿಯಲ್ಲಿ ಈ ಪದ್ಯಗಳಿಲ್ಲ; ಆದರೆ ಕೆ. ಎ. ೧೯೩ನೆಯ ಕಾಗದದ ಪ್ರತಿಯಲ್ಲಿ ಇವೆ.

ಸಾಂಗತ್ಯಗಳು ಪ್ರತಿಕಾರದಿಂದ ಒಂದುಗೂಡಿ ಗೊಂದಲಕ್ಕೆ ಆಸ್ಪದವಾಗಿದೆ.[16] ವಿರೂಪಾಕ್ಷನ ಸಾಂಗತ್ಯದ ಉತ್ತರಭಾಗ ಬೊಂಬೆಯಲಕ್ಕನ ಸಾಂಗತ್ಯದ ಪೂರ್ವಭಾಗಕ್ಕೆ ಸೇರಿಯೊ ಅಥವಾ ವಿರೂಪಾಕ್ಷನ ಕೆಲವು ಸಮಾಪ್ತಿಪದ್ಯಗಳಷ್ಟೆ ಇವನ ಕೃತಿಗೆ ಸೇರಿಕೊಂಡೊ ಬೊಂಬೆಯ ಲಕ್ಕನ ಕಾಲ ೧೫೩೮ ಎನ್ನುವಂತಾಯಿತು. ದಿಟವಾಗಿ ಇದು ರಾಮರಸ ವಿರೂಪಾಕ್ಷನ ಕಾಲ.

ಮದ್ರಾಸಿನ ಹಸ್ತಪ್ರತಿಗಳ ಪ್ರಾಚ್ಯಕೋಶಾಗಾರದಲ್ಲಿರುವ ಒಂದು ಹಸ್ತಪ್ರತಿಯಲ್ಲಿ ಬೊಂಬೆಯಲಕ್ಕನ ಕೃತಿಯ ನಾಲ್ಕು ಸಂಧಿಗಳಾದಮೇಲೆ, ರಾಮರಸ ವಿರೂಪಾಕ್ಷನ ಗ್ರಂಥದ ಹನ್ನೆರಡು ಹದಿಮೂರನೆಯ ಸಂಧಿಗಳನ್ನು ಒಂದಾಗಿಸಿ ಐದನೆಯ ಸಂಧಿಯನ್ನಾಗಿ ಮಾಡಿ ಕಥೆಯನ್ನು ಪೂರ್ಣಗೊಳಿಸಲಾಗಿದೆಯಂತೆ.[17] ಇದು ಪ್ರತಿಕಾರನ ಜೋಡಣೆ. ಈ ಹಸ್ತಪ್ರತಿಯ ಬಗೆಗೆ ಹೇಳುತ್ತ ಆ ಸಂಸ್ಥೆಯ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿ ಹೀಗೆ ಬರೆದಿರುವುದು ಸಮಂಜಸವಾಗಿದೆ: "The Karnataka Kavi charite states that.... the author Bombeya Lakka wrote this work in the year Vilambi, Saka year 1460 (1538 A. D). It further states that another poet by name Ramarasa Virupaksha has written a similar work on the same date. From the examination of the manuscripts here, it is seen that the date referred to above applies only to the later and not former."[18]

ಇದರಿಂದ, ಬೊಂಬೆಯ ಲಕ್ಕನ ಕಾಲ ಅನಿಶ್ಚಿತ ಎಂದು ಸಿದ್ಧವಾಗುತ್ತದೆ. ವಿರೂಪಾಕ್ಷನ ಎಷ್ಟೋ ಪದ್ಯಗಳು ಬೊಂಬೆಯ ಲಕ್ಕನ ಕೃತಿಯಲ್ಲಿ ಯಥಾವತ್ತಾಗಿ ಕಾಣಸಿಗುತ್ತವೆ. ನಿದರ್ಶನಕ್ಕೆ, ಲಕ್ಕನ ಸಾಂಗತ್ಯದ ೨-೩೩ನೆಯ ಪದ್ಯ ವಿರೂಪಾಕ್ಷನ ೩-೪ನೆಯ ಪದ್ಯವಾಗಿದೆ. ವಿರೂಪಾಕ್ಷನ ಕೃತಿಯ ೩-೪೩, ೪ನೆಯ ಪದ್ಯಗಳು ಹಾಗೆಯೆ ಲಕ್ಕನಲ್ಲಿ ಬರುತ್ತವೆ. ಬೊಂಬೆಯ ಲಕ್ಕ ರಾಮರಸ ವಿರೂಪಾಕ್ಷನಾದ ಮೇಲೆ ಕೃತಿರಚನೆ ಮಾಡಿದವನು, ಅವನ ಪ್ರಭಾವಮುದ್ರೆಗೊಳಗಾದವನು ಎಂಬುದು ಇದರಿಂದ ನಿರ್ಣೀತವಾಗುತ್ತದೆ.

ಒದುವ ಗಿರಿಯ ತನ್ನ ಕಾಲವನ್ನು ಹರಿಶ್ಚಂದ್ರ ಸಾಂಗತ್ಯದಲ್ಲಾಗಲಿ ತನ್ನ ಇನ್ನೊಂದು ಕೃತಿಯಾದ 'ಸಾನಂದಗಣೇಶಸಾಂಗತ್ಯ'ದಲ್ಲಾಗಲಿ ಉಲ್ಲೇಖಿಸಿಲ್ಲ. ಅವನ ಹರಿಶ್ಚಂದ್ರ ಸಾಂಗತ್ಯದ ಒಂದು ಹಸ್ತಪ್ರತಿಯ ಕಾಲ ಕ್ರಿ. ಶ. ೧೫೭೬. ಆದ್ದರಿಂದ ಅವನ ಕಾಲ ೧೫೨೫ ಇರಬೇಕೆಂದು ಕವಿಚರಿತೆಕಾರರು ಊಹಿಸುತ್ತಾರೆ. ಗಿರಿಯ ೧೫೭೬ಕ್ಕಿಂತ ಹಿಂದಿನವನು ಎಂಬುದಷ್ಟೆ ದೃಢವಾದ ಸಂಗತಿ; ಎಷ್ಟು ಹಿಂದಿನವನೋ ತಿಳಿಯದು. ಆದ್ದರಿಂದ ಅವನ ಕಾಲ ೧೫೨೫ ಎಂದು ನಿರ್ಧರಿಸುವಂತಿಲ್ಲ; ಇನ್ನೂ ಈಚಿನವನಿರಬಹುದು.

---

16. ಮೈಸೂರು ಪ್ರಾಚ್ಯಸಂಶೋಧನಾಲಯದ ಕೆ. ಎ. ೨೬೮ನೆಯ ಕಾಗದದ ಪ್ರತಿಯಲ್ಲಿ ಹಲಗ, ವಿರೂಪಾಕ್ಷರ ಸಾಂಗತ್ಯಗಳು ಸಂಲಗ್ನವಾಗಿವೆ. (ವಿವರಗಳನ್ನು ಮುಂದೆ ಹೇಳಿದೆ).
17. *Descriptive catalogue of the Kannada Manuscripts*, Govt. Oriental Manuscripts Library, Madras; vol. VI. Sl. No. 1118
18. Ibid. pp. 1449-50.

ಹಲಗನೂ ತನ್ನ ಕಾಲವನ್ನು ಹೇಳಿಕೊಂಡಿಲ್ಲ. ಆದರೆ ಅವನ ಕಾಲ ಕ್ರಿ. ಶ. ೧೬೫೦ ಎಂದು ಕವಿಚರಿತೆಕಾರರ ಊಹೆ. ಪ್ರಾಯಃ ಅವನು ಇನ್ನೂ ಹಿಂದಿನ ಕವಿಯಾಗಿರುವುದು ಸಾಧ್ಯ; ಹದಿನಾರನೆಯ ಶತಮಾನದವನೆ ಇರಬಹುದು.

ಈ ವಿವೇಚನೆಯಿಂದ ಸಾಕಷ್ಟು ಖಚಿತವಾಗಿ ತಿಳಿದುಬರುವ ವಿಷಯವೇನೆಂದರೆ, ರಾಮರಸ ವಿರೂಪಾಕ್ಷನ ಕೃತಿಯೇ ಹರಿಶ್ಚಂದ್ರಸಾಂಗತ್ಯಪರಂಪರೆಯಲ್ಲಿ ಮೊದಲನೆಯದು. ಹರಿಶ್ಚಂದ್ರನ ಕತೆಯನ್ನು ಸಾಂಗತ್ಯದಲ್ಲಿ ಬರೆಯಲು ಇತರ ಕವಿಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟು ಪ್ರೇರಣೆ ನೀಡಿದವನು ವಿರೂಪಾಕ್ಷನೇ ಎಂದು ತೋರುತ್ತದೆ. ಈ ದೃಷ್ಟಿಯಿಂದ ಅವನೊಬ್ಬ ಸಂಪ್ರದಾಯ ನಿರ್ಮಾಪಕನೆಂದರೆ ತಪ್ಪಾಗದು. ಇತರ ಸಾಂಗತ್ಯಗಳಿಗಿಂತ ಅವನದು ಹೆಚ್ಚು ಜನಪ್ರಿಯವಾಗಿತ್ತೆಂದೂ ಹೇಳಬಹುದು. ಇತರ ಕವಿಗಳ ಸಾಂಗತ್ಯಗಳ ಹಸ್ತಪ್ರತಿಗಳು ಅಪೂರ್ಣವಾಗಿದ್ದಾಗ ಅವನ ಸಾಂಗತ್ಯಗಳ ಹಸ್ತಪ್ರತಿಗಳು ಪೂರಕವಾಗುತ್ತಿದ್ದುವು. ತೌಲನಿಕವಾಗಿ ಪರಿಭಾವಿಸಿದಾಗ ಅವನ ಸಾಂಗತ್ಯ ಉಳಿದ ಹರಿಶ್ಚಂದ್ರಸಾಂಗತ್ಯಗಳಿಗಿಂತ ನಿಸ್ಸಂದೇಹವಾಗಿ ಉತ್ತಮವಾಗಿದೆ.

ಇನ್ನೊಂದು ವಿಷಯ ಗಮನಾರ್ಹವಾಗಿದೆ. ಹರಿಶ್ಚಂದ್ರನ ಕಥೆಯನ್ನು ಕನ್ನಡದಲ್ಲಿ ಕೈಹಿಡಿದವರೆಲ್ಲ ಬಹುಮಟ್ಟಿಗೆ ವೀರಶೈವ ಕವಿಗಳೇ. ರಾಘವಾಂಕ, ಬೊಂಬೆಯ ಲಕ್ಕ, ಓದುವ ಗಿರಿಯ, ಹಲಗ-ಇವರೆಲ್ಲ ವೀರಶೈವರು. ಹರಿಶ್ಚಂದ್ರಕಾವ್ಯವನ್ನು ರಾಘವಾಂಕ ಬರೆದಾಗ ಹರಿಹರ ಅವನ ಹಲ್ಲುದುರಿಸಿದನೆಂದೂ ಆಮೇಲೆ ರಾಘವಾಂಕ 'ಶೈವಕೃತಿ ಪಂಚಕ'ವನ್ನು ಬರೆದು ಹಲ್ಲುಗಳನ್ನು ಮರಳಿ ಪಡೆದನೆಂದೂ ಚಿಕ್ಕನಂಜೇಶನ ಕತೆ. ಇದು ಕೇವಲ ದಂತಕಥೆಯಾಗಿರ ಬೇಕು-ಹರಿಹರನನ್ನು ರಗಳೆಯ ಕವಿ ಎಂದು ಗೇಲಿ ಮಾಡಿದ್ದರಿಂದ ಅವನು 'ಗಿರಿಜಾಕಲ್ಯಾಣ'ವನ್ನು ಬರೆದನೆಂಬ ಐತಿಹ್ಯ ಹೇಗೋ ಹಾಗೆ. ಹರಿಹರ ಹಲ್ಲುದುರಿಸಿದ್ದು ಹಾಗಿರಲಿ, ರಾಘವಾಂಕನ ಮೇಲೆ ಅಸಮಾಧಾನಗೊಂಡನೆಂಬುದೂ ನಂಬಲಾಗದ ಸಂಗತಿ. ಹರಿಶ್ಚಂದ್ರ ಕಾವ್ಯದ ಪರಿಣತಿಯನ್ನು ನೋಡಿದರೆ, ಅದು ರಾಘವಾಂಕ ಕಡೆಯಲ್ಲಿ ಬರೆದ ಕೃತಿಯೆಂದೇ ತೋರುತ್ತದೆ. ಹರಿಶ್ಚಂದ್ರ ಕಾವ್ಯದ ಬಗ್ಗೆ ಮುನಿಸುಗೊಂಡ ಒಂದು ಮತಾವೇಶನಿಷ್ಠವರ್ಗ ಈ ದಂತಕಥೆಯನ್ನು ಕಟ್ಟಿರಬೇಕು; ಚಿಕ್ಕನಂಜೇಶ ಅದನ್ನು ಪ್ರತಿನಿಧಿಸಿರಬೇಕು. ಈ ಅಸತ್ಯಕಥೆ ಬಹಳ ಕಾಲ ನಿಲ್ಲಲಿಲ್ಲವೆಂದು ತೋರುತ್ತದೆ. ಹರಿಹರ ರಾಘವಾಂಕನ ಹಲ್ಲು ಕಳಚಿದ್ದು, ಅದರ ಪರಿಣಾಮವಾಗಿ ರಾಘವಾಂಕ 'ಶೈವಕೃತಿ'ಗಳನ್ನು ಬರೆದುದು ನಿಜವಾಗಿದ್ದ ಪಕ್ಷದಲ್ಲಿ ಮುಂದೆ ವೀರಶೈವ ಕವಿಗಳೆ ಹರಿಶ್ಚಂದ್ರನ ಕಥೆಗೆ ಮಾರುಹೋಗಿ ರಾಘವಾಂಕನನ್ನು ಅನುಸರಿಸಿ ಹರಿಶ್ಚಂದ್ರ ಸಾಂಗತ್ಯಗಳನ್ನು ಬರೆಯುತ್ತಿರಲಿಲ್ಲ. ಒಂದು ವೇಳೆ ಆ ಕತೆ ಅವರ ಕಾಲದಲ್ಲಿ ಕೂಡ ಪ್ರಚಾರದಲ್ಲಿದ್ದರೂ, ಮತೀಯ ಭಾವನೆಗಳ ನೆರೆಯಂತೂ ಆಗ ಇಳಿದುಹೋಗಿತ್ತು.

ಹರಿಶ್ಚಂದ್ರ ಸಾಂಗತ್ಯಕಾರರಲ್ಲಿ ರಾಮರಸ ವಿರೂಪಾಕ್ಷನೊಬ್ಬನೆ ಬ್ರಾಹ್ಮಣ ಕವಿ; ಅವನು ಕೂಡ ಶೈವಬ್ರಾಹ್ಮಣ. ಕನ್ನಡದಲ್ಲಿ ಹರಿಶ್ಚಂದ್ರ ಕಥೆಯನ್ನು ಪ್ರತಿಪಾದಿಸಿದ ಬ್ರಾಹ್ಮಣ ಕವಿಗಳು ಮತ್ತಾರೂ ಇಲ್ಲವೆಂದು ತೋರುತ್ತವೆ.

೪. ರಾಮರಸ ವಿರೂಪಾಕ್ಷನ ಸಾಂಗತ್ಯ

೧

ಕವಿ: ರಾಮರಸವಿರೂಪಾಕ್ಷ ಋಕ್‌ಶಾಖೆಗೆ ಸೇರಿದ, ಶ್ರೀವತ್ಸಗೋತ್ರದ ಶೈವಬ್ರಾಹ್ಮಣಕವಿ. ತನ್ನನ್ನು 'ದ್ವಿಜ ರಾಮರಸಸುತವಿರೂಪಾಕ್ಷ' ಎಂದು ಕರೆದುಕೊಂಡಿರುವುದರಿಂದ ಇವನ ತಂದೆಯ ಹೆಸರು ರಾಮರಸ ಎಂದು ತಿಳಿಯುತ್ತದೆ. ತನ್ನ ಕಾವ್ಯವನ್ನು ಶಕ ೧೪೬೦ನೆಯ (ಕ್ರಿ. ಶ. ೧೫೩೮) ವಿಳಂಬಿ ಸಂವತ್ಸರದಲ್ಲಿ ಚೈತ್ರಮಾಸದ ಒಂದು ಸೋಮವಾರ ಪೂರೈಸಿದುದಾಗಿ ವಿರೂಪಾಕ್ಷ ಗ್ರಂಥಾಂತ್ಯದಲ್ಲಿ ಹೇಳಿದ್ದಾನೆ. ಸ್ವಕೀಯವಾದ ಮತ್ತಾವ ಸಂಗತಿಗಳನ್ನೂ ಇವನು ವ್ಯಕ್ತಪಡಿಸಿಲ್ಲ. ಕಾವ್ಯಾರಂಭದಲ್ಲಿ ಕ್ರಮವಾಗಿ ಶಿವ, ವಿಷ್ಣು, ದತ್ತಾತ್ರೇಯ, ಗಣಪತಿ, ಸರಸ್ವತಿ, ಯಾಜ್ಞವಲ್ಕ್ಯರನ್ನು ಸ್ತುತಿಸುತ್ತಾನೆ. ಅನಂತರ ತನ್ನ ಕೃತಿ ಅತ್ಯುತ್ತಮವಾದುದೇನಲ್ಲವೆಂಬುದನ್ನು ವಿನಯ ಪೂರ್ವಕವಾಗಿ ಸೊಗಸಾದ ರೀತಿಯಲ್ಲಿ ತಿಳಿಸುತ್ತಾನೆ:

> ಬಿರುದುಳ್ಳ ಸಿಂಹವು ಕರಿಬೇಂಟೆಯಾಡಲು| ಇರುವೆಯು ಸಕ್ಕರೆಗುಟುಕ
> ಹರುಷದಿ ಕೊಂಡೊಯ್ವ ತೆರನಂತೆ ಬಲ್ಲಷ್ಟು| ಪರಿಯಲಿ ಕೃತಿಯ ಪೇಳುವೆನು
> ಮರುಗದ ಗಿಡವೆನ್ನ ಚರಿತೆಯು ಬಾವನ್ನ| ತರುವೆಂಬ ಕಾವ್ಯದ ಮುಂದೆ
> ಬಿರುದನೆ ಕಟ್ಟುವೆ ಧರೆಯೊಳು ಹೊಗಳಿಸಿ| ಹರನೆಂಬ ನಾಮವ ಬಿಡದೆ

ತಾನು ಸಿಂಹವಲ್ಲ, ಇರುವೆ; ತನ್ನ ಕಾವ್ಯ ಶ್ರೀಗಂಧವೃಕ್ಷವಲ್ಲ, ಮರುಗದ ಗಿಡ— ಎಂದು ಹೇಳುವಲ್ಲಿ ಅಪೂರ್ವವಾದ ವಿನಯವನ್ನು ಪ್ರಕಟಿಸಿ ಮೊದಲೆ ನಮ್ಮ ಎದೆಯನ್ನು ಗೆದ್ದುಕೊಳ್ಳುತ್ತಾನೆ, ವಿರೂಪಾಕ್ಷ. ರಾಘವಾಂಕನ ಕಾವ್ಯವೆಂಬ ಚಂದನತರುವಿನ ಮುಂದೆ ವಿರೂಪಾಕ್ಷನ ಕೃತಿ ಮರುಗದ ಗಿಡವೆ ಹೌದು; ಆದರೆ ಅದರಲ್ಲೂ ಚೆಲುವಿದೆ, ಪರಿಮಳವಿದೆ, ಹೃದ್ಯವಾದ ಗುಣಗಳಿವೆ. ಚಂದನದಂತೆ ಮರುಗವೂ ಪೂಜೆಗೆ ಬೇಕಷ್ಟೆ.

ಕಾವ್ಯ: ಹಿಂದೆಯೆ ಒಟ್ಟಿನಲ್ಲಿ ಹೇಳಿದಂತೆ ವಿರೂಪಾಕ್ಷನ ಸಾಂಗತ್ಯಕ್ಕೆ 'ಹರಿಶ್ಚಂದ್ರ ಕಾವ್ಯ'ವೆ ಏಕೈಕ ಆಕರ, ಆಧಾರ. ಕಥೆ, ಸಂವಿಧಾನ, ಪಾತ್ರಸೃಷ್ಟಿ, ಸನ್ನಿವೇಶ ಕಲ್ಪನೆ, ದರ್ಶನ ಎಲ್ಲವೂ ರಾಘವಾಂಕ ಪ್ರಣೀತವೇ; ವಿರೂಪಾಕ್ಷನ ಕೆಲಸವೇನಿದ್ದರೂ ರಾಘವಾಂಕ ಹಾಕಿಕೊಟ್ಟ ಚೌಕಟ್ಟಿನಲ್ಲಿಯೇ. ಇಷ್ಟಾದರೂ ಇವನ ಸಾಂಗತ್ಯ ಹರಿಶ್ಚಂದ್ರಕಾವ್ಯದ ಮಕ್ಕಿಕಾಮಕ್ಕಿ ನಕಲಲ್ಲ. ಕಾರ್ಬನ್ ಕಾಪಿಯಲ್ಲ. ಕಥೆ ರಾಘವಾಂಕನದಾದರೂ ಉಕ್ತಿ, ಅಭಿವ್ಯಕ್ತಿ ಬಹಳಮಟ್ಟಿಗೆ ವಿರೂಪಾಕ್ಷನದು. ವರ್ಣನೆಗಳಲ್ಲಿ ಇವನು ಎಷ್ಟೋ ಕಡೆ ರಾಘವಾಂಕನಿಂದ ಬೇರೆಯಾಗಿ ಸ್ವೋಪಜ್ಞತೆಯನ್ನು ತೋರಿದ್ದಾನೆ; ಸ್ವತಂತ್ರ ಪ್ರತಿಭೆಯ ಕಿಡಿಗಳನ್ನು ತೂರಿದ್ದಾನೆ. ಮೂಲಕಥೆಯನ್ನು ವಿರೂಪಾಕ್ಷ ಕ್ವಚಿತ್ತಾಗಿ ಪುಷ್ಟಿಗೊಳಿಸಿರುವುದೂ ಉಂಟು; ರಾಘವಾಂಕ ನಿರ್ಮಿತ ಹರಿಶ್ಚಂದ್ರ ವಿಗ್ರಹಕ್ಕೆ ತನ್ನದೇ ಆದ ಕೆಲವು ಉಳಿಯ ಪೆಟ್ಟುಗಳನ್ನು ಹಾಕಿರುವುದೂ ಉಂಟು; ರಾಘವಾಂಕನ ಚಿತ್ರಕ್ಕೆ ತನ್ನ ಕೆಲವು ಬಣ್ಣದೆಳೆಗಳನ್ನು ಸೇರಿಸಿರುವುದುಂಟು. ಆದರೂ

ಈ ಕವಿಯ ಪ್ರತಿಭೆ ಚಿನ್ನದ ಗಣಿಯಲ್ಲ, ಜಲಗಿನ ರಾಶಿ; ಆದರದು ಸೂರ್ಯತೇಜವಲ್ಲ, ಸೊಡರಿನ ದೀಪ್ತಿ. ಅದಕ್ಕೆ ಸ್ವಯಂ ಮೌಲ್ಯ ಇದ್ದೇಇದೆ.

ವಿರೂಪಾಕ್ಷನ ಸಾಂಗತ್ಯದಲ್ಲಿ ಹದಿಮೂರು ಸಂಧಿಗಳಿವೆ, ೬೯೯ ಪದ್ಯಗಳಿವೆ. ಅವನ ಸಂಧಿಯೋಜನೆ ರಾಘವಾಂಕನ ಯೋಜನೆಗೆ ಸಂವಾದಿಯಾಗಿಯೆ ಇದೆ. ಹರಿಶ್ಚಂದ್ರಕಾವ್ಯದಲ್ಲಿ ಹದಿನಾಲ್ಕು ಸಂಧಿಗಳಿವೆ; ಅಲ್ಲಿನ ಮೊದಲನೆಯ ಎರಡು ಸಂಧಿಗಳ ವಿಷಯವನ್ನು ವಿರೂಪಾಕ್ಷ ಪ್ರಥಮಸಂಧಿಯೊಂದರಲ್ಲೆ ನಿರೂಪಿಸಿರುವುದರಿಂದ ಅವನ ಸಾಂಗತ್ಯದಲ್ಲಿ ಒಂದು ಸಂಧಿ ಕಡಮೆಯಾಯಿತು.

ಇನ್ನು ರಾಮರಸವಿರೂಪಾಕ್ಷ ತನ್ನ ಕೃತಿಯಲ್ಲಿ ಎಲ್ಲೆಲ್ಲಿ ರಾಘವಾಂಕನಿಂದ ವಿಭಿನ್ನನಾಗಿದ್ದಾನೆ, ತನ್ಮೂಲಕ ಸ್ವಕೌಶಲವನ್ನು ಹೇಗೆ ಪ್ರಕಾಶಪಡಿಸಿದ್ದಾನೆ ಎಂಬುದಕ್ಕೆ ನಿದರ್ಶನಗಳನ್ನು ಅನುಕ್ರಮವಾಗಿ ನೋಡುತ್ತಾ ಹೋಗಬಹುದು.

ಮಾರ್ಕಂಡೇಯ ಯುಧಿಷ್ಠಿರನಿಗೆ ಹೇಳಿದಂತೆ ವಿರೂಪಾಕ್ಷ ಕತೆಯನ್ನಾರಂಭಿಸುತ್ತಾನೆ. ಇಂತಹ ಹಿನ್ನೆಲೆ ರಾಘವಾಂಕನಲ್ಲಿಲ್ಲ.

ವಸಿಷ್ಠ ವಿಶ್ವಾಮಿತ್ರರ ವಾಗ್ವಾದ ಕಾಲದಲ್ಲಿ ನಾರದ 'ಉರಿವ ಕೈಯಲಿ ಹುಲ್ಲ ಹರಿದಡಕುವೆನೆಂದು' ಹರ್ಷದಿಂದ ಎದ್ದನೆಂದು ವಿರೂಪಾಕ್ಷನ ನಿರೂಪಣೆ. ಹರಿಶ್ಚಂದ್ರಕಾವ್ಯದಲ್ಲಿ ವಿಶ್ವಾಮಿತ್ರ ಒಂದು ದೀರ್ಘಾವಧಿಯನ್ನು ಹೇಳಿ ಅಲ್ಲಿಯತನಕ 'ದೇವಲೋಕಕ್ಕೆ ಬಾರೆಂ' ಎನ್ನುತ್ತಾನೆ. ಈ ಸಾಂಗತ್ಯದಲ್ಲಿ ಅದಿಲ್ಲ. ಹರಿಶ್ಚಂದ್ರನಿಗೆ ಹೋಗಿ ಹೇಳೆಂದು ವಿಶ್ವಾಮಿತ್ರ ಗರ್ಜಿಸಿದಾಗ ಹರಿಶ್ಚಂದ್ರಕಾವ್ಯದಲ್ಲಿ ವಸಿಷ್ಠ 'ತರಣಿ ತೇಜಂಗಿಡದಿರಗ್ನಿ ಬಿಸುಪಾರದಿರು.... ಎಂದು ಬೋಧಿಸಲದೇಕೆ' ಎನ್ನುತ್ತಾನೆ. ವಿರೂಪಾಕ್ಷ ಈ ಸಂದರ್ಭದಲ್ಲಿ ಪೂರ್ತಿ ಬೇರೆಯೆ ಆದ ದೃಷ್ಟಾಂತ ಸರಣಿಯನ್ನು ಕೊಡುತ್ತಾನೆ:

> ತರಣಿಗೆ ಕಮಲವನರಳೆಂದು ಚಂದ್ರಗೆ| ಕರೆದರೆ ಬಹುದೆ ಚಕೋರ
> ಶರಧಿಯ ಸಿಂಪ ಬಾಯ್ದೆರೆವರೆ ಸ್ವಾತಿಯ | ಬಿರುಮಳೆಗಳು ಬೀಳುವಾಗ
> ಗಿರಿಯ ಮಯೂರಗೆ ನೆರೆ ಪಯೋಧರ ತೋರಿ | ಧರೆಯೊಳು ಕುಣಿವಾಡಿಸುವರೆ
> ಅರುಹುವರೆ ಸತ್ಯವ ಹರಿಶ್ಚಂದ್ರರಾಯಗೆ | ಮರಳೊಮ್ಮೆ ಸತ್ಯನಾಗೆನುತ

ಸೂರ್ಯಸ್ಪರ್ಶದಿಂದ ಕಮಲವರಳುವುದು, ಚಂದ್ರೋದಯವಾದಾಗ ಚಕೋರ ನಲಿಯುವುದು, ಸ್ವಾತಿ ಮಳೆ ಬೀಳುವಾಗ ಚಿಪ್ಪು ಬಾಯ್ದೆರೆಯುವುದು, ಮೋಡವನ್ನು ನೋಡಿ ನವಿಲು ಕುಣಿಯುವುದು ಇವೆಲ್ಲ ನೈಸರ್ಗಿಕ ಸಹಜ ಕ್ರಿಯೆಗಳು; ಯಾರೂ ಅವುಗಳನ್ನು ಮಾಡಿಸಬೇಕಾಗಿಲ್ಲ. ಹರಿಶ್ಚಂದ್ರನೂ ಅದರಂತೆ ಸ್ವಾಭಾವಿಕವಾಗಿಯೆ ಸತ್ಯಶೀಲ ಎಂಬುದನ್ನು ವಿರೂಪಾಕ್ಷ ತನ್ನದೇ ಆದ ಬಗೆಯಲ್ಲಿ ಚಿತ್ರಿಸಿದ್ದಾನೆ.

ತಾನು ಕೇಳಿದ ಅಪಾರಧನವನ್ನು ಹರಿಶ್ಚಂದ್ರ ಕೊಡಬಂದಾಗ ವಿಶ್ವಾಮಿತ್ರ 'ನಿನ್ನ ಮೇಲಿರಲಿ ಬೇಹಾಗ ತರಿಸುವೆನು' ಎಂದಷ್ಟೆ ಹೇಳುತ್ತಾನೆ ಮೂಲಕಾವ್ಯದಲ್ಲಿ. ಸಾಂಗತ್ಯದಲ್ಲಿ 'ಲಂಡತನದ

ಹೊನ್ನು ಭಂಡಾರದೊಳಗಿರಲಿ.... ಅಂಡಲೆಯಲು ಬಿಜಗೊಂಡಲ್ಲದಿರೆನು' ಎಂದು ಕೌಶಿಕ ತನಗೆ ತಾನೆ ಹೇಳಿಕೊಳ್ಳುವುದು ಚೆನ್ನಾಗಿದೆ.

ಧರಣಿಯ ಮೇಲಣ ತರುಣಿಯರೆಲ್ಲರು| ಪುರುಷರ ಪ್ರಣಯದೋಲೆಗಳ
ಪರಬ್ರಹ್ಮಗಿದಿರಾಗಿ ಬರಸಲು ನಿಂದಂತೆ| ಮೆರೆದುವು ಬಲು ತಾಳಮರನು
ಭಾಳಾಕ್ಷಗೆಂದು ಪಾತಾಳದಿ ಅಮೃತದ| ಕೋಳನೆ ಕೊಂಡು ವೇಗದಲಿ
ಮೇಲಣ ಲೋಕಕ್ಕೆ ದಾಳಿಯನಿಡುವಂತೆ | ಸಾಲಿಟ್ಟು ತೆಂಗುಗಳೆಸೆಯೆ

ಇಲ್ಲೆಲ್ಲ ತಕ್ಕಮಟ್ಟಿಗೆ ಸುಂದರವಾದ ಕಲ್ಪನೆಯಿದೆ. ಹೂಗಿಡಗಳನ್ನು 'ಧರಣಿ ತೊಂಡಿಲ ಕಟ್ಟಿ ಮೆರೆದಳೊಯೆಂಬಂತೆ ಪರಿಮಳದೊರತೆ ಹೂಗಿಡವು' ಎಂದು ಬಣ್ಣಿಸುವಲ್ಲಿ ಚೇತೋಹಾರಿಯಾದ ಉಪಮೆರೂಪಕಗಳಿವೆ.

ಈ ವನದೊಳಗಿಂತು ಭಾವೆಯರಿಲ್ಲದೆ | ಜೀವಿಪ ನಿರ್ಮೋಹಿಯೆದೆಗೆ
ತಾವರೆ ಕೈರವ ಮಾವು ಮಲ್ಲಿಗೆ ಬಾಣ| ತೀವಿದಶೋಕೆಗಾಯಿಗಳು

ಎಂದೂ ಕವಿ ಸಾಂಪ್ರದಾಯಿಕವಾಗಿ, ಆದರೆ ಆಕರ್ಷಕ ರೀತಿಯಲ್ಲಿ ಹೇಳುತ್ತಾನೆ. ಕೆಳಗಿನ ವರ್ಣನೆ ಕೂಡ ಹರಿಶ್ಚಂದ್ರ ಕಾವ್ಯದಲ್ಲಿರುವುದಕ್ಕಿಂತ ತುಸು ಬೇರೆಯಾಗಿದೆ:

ನಸುನಗೆ ಬೆಳುದಿಂಗಳೆಸೆಯೆ ಚಕೋರವು| ಪಸರಿಸಿ ಬಾಯ್ಗಳ ತೆರೆಯೆ
ಎಸೆವ ಹೊಂದೊಡಿಗೆ ಹೊಂಬಿಸಿಲಂತೆ ಹೊಳೆಯಲು| ನಸುನಾಚಿ ಕಡೆಗೆ ಸಾರಿದುವು

ಮೃಗಬಾಧೆಯನ್ನು ತಡೆಯಲಾರದ ಜನ 'ಹುಲ್ಲು ಕಡ್ಡಿಯ ಕಚ್ಚಿ ಕಲ್ಲನೆ ಹೊತ್ತು' ಹರಿಶ್ಚಂದ್ರನಿಗೆ ಮೊರೆಯಿಡುತ್ತಾರೆ. ಸೂರ್ಯಾಸ್ತವನ್ನು ರಾಘವಾಂಕ 'ಲಜ್ಜೆಯಿಂದಿಳಿವಂತೆ ಬಿದ್ದನಿನನಂಬುಧಿಯೊಳು' ಎಂದು ವರ್ಣಿಸಿದರೆ, ವಿರೂಪಾಕ್ಷ 'ಪಡುವಲು ರವಿ ತಾಯ ಒಡಲೊಳಗಡಗಲು...' ಎಂದು ಅಪೂರ್ವ ರೀತಿಯಲ್ಲಿ ಚಿತ್ರಿಸುತ್ತಾನೆ (ಇದೇ ಕಲ್ಪನೆ ೧೧-೧೧ನೆಯ ಪದ್ಯದಲ್ಲೂ ಬರುತ್ತದೆ: 'ರವಿ ತಾಯ ಹೊಟ್ಟೆಯ ಹೊಗುವಂತೆ ನಡೆದ'). ಪೂರ್ವಾರ್ಣವದಲ್ಲಿ ಉದಿಸಿ ಪಶ್ಚಿಮಾರ್ಣವದಲ್ಲಿ ಮುಳುಗುವಂತೆ ತೋರುವ ಸೂರ್ಯ ಮತ್ತೆ ತಾಯ ಉದರ ಹೊಕ್ಕಂತೆ ಭಾಸವಾಗುವುದು ತೀರ ಸಹಜ. ತಾರೆಗಳು 'ಸುರರೆಲ್ಲ ಚಂದ್ರಗೆ ಹರುಷದಿ ಸೇಸೆಯ ಸುರಿದಕ್ಕಿಗಳೊ ಮದುವೆಯಲಿ' ಎಂಬಂತೆ ಕಾಣುತ್ತದೆ ವಿರೂಪಾಕ್ಷನಿಗೆ. ಚಂದ್ರನ ಪರಿವೇಷವನ್ನು ವರ್ಣಿಸುವ ಈ ಪದ್ಯ ವಿಲಕ್ಷಣವಾಗಿದ್ದರೂ ನವ್ಯವಾಗಿದೆ:

ಇಳೆಯೊಳು ಹರಿಶ್ಚಂದ್ರನಳವಿಯ ಸತ್ಯವ| ತಿಳಿವುದೆನುತಲಾಗ ಸುರರು
ಹುಳಗುಂಡ ಬರೆದಂತೆ ಕಳೆಯುಳ್ಳ ಚಂದ್ರನ| ಬಳಿಯಲಿ ಪರಿವೇಷ ಬಲಿಯೆ

ಹರಿಶ್ಚಂದ್ರನ ಸತ್ವಪರೀಕ್ಷೆಗೊಡ್ಡಿದ ಒಂದು ಕುಂಡದಂತೆ, 'ದಿವ್ಯ'ದಂತೆ ಚಂದ್ರಮಂಡಲವಿತ್ತಂತೆ. ಇದು ನಿಜಕ್ಕೂ ಸಂಪ್ರದಾಯದೂರವಾದ ಕಲ್ಪನೆಯಾಗಿದೆ.

ವೇಶ್ಯಾವಾಟಿಕೆಯ ವರ್ಣನೆಯಲ್ಲಿ ವಿರೂಪಾಕ್ಷ ತನ್ನ ಬುದ್ಧಿವಂತಿಕೆಯನ್ನು ಖರ್ಚು ಮಾಡಿದ್ದಾನೆ. ಮತ್ತಾವ ಕವಿಗೂ ಬೀಳಲ್ಲವೆಂಬಂತೆ ಅವನು ಅತ್ಯುತ್ಸಾಹದಿಂದ ತರತರವಾಗಿ

ಸೂಳೆಗೇರಿಯನ್ನು ವರ್ಣಿಸುತ್ತಾನೆ; ಅವನ ಚಿತ್ರಗಳಲ್ಲಿ ಸಾಕಷ್ಟು ನೂತನತೆಯೂ ಗೋಚರಿಸುತ್ತದೆ. ಸಂಗ್ರಹಪಿಪಕ್ಷೆಯುಳ್ಳ ಈ ಕವಿಯೂ ವೇಶ್ಯಾವಾಟಿಕೆಯನ್ನು ಬಿಡಲಾರದ್ದಕ್ಕೆ ಕಾರಣ, ಸಂಪ್ರದಾಯ ಶೃಂಖಲೆ. ರಾಘವಾಂಕನಿರಲಿ. ಹರಿಹರನಂಥ ಕ್ರಾಂತಿ ಸಮರ್ಥ ದಿವ್ಯ ಚೇತನವೂ ಈ ಅನಿಷ್ಟ ನಿರ್ಬಂಧದಿಂದ ಪೊದಲು ತಪ್ಪಿಸಿಕೊಳ್ಳಲಿಲ್ಲವೆಂದಾಗ, ವಿರೂಪಾಕ್ಷನಂಥ ಕವಿ ಈ ಗೀಳಿನಿಂದ ಹೇಗೆ ಪಾರಾದಾನು? ಗಣಿಕೆಯರ, ಅವರ ಮನೆಗಳ ಈ ಚಿತ್ರ ಚೊಕ್ಕವಾಗಿ ಚೆಲುವಾಗಿದೆ:

ಜಲದಂತೆ ಗಾಜಿನ ನೆಲೆಗಟ್ಟು ಬಯಲಂತೆ| ಸಲೆ ಚಂದ್ರಕಾಂತದುಪ್ಪರಿಗೆ
ಸುಳಿದರೆ ಮನೆಯೊಳು ಬಲೆಯೊಳಗಣ ಮೀನು| ಹೊಳೆವಂತೆ ನಾರಿಯರೆಸೆಯೆ

ಅಂಗಾಂಗ ವರ್ಣನೆಯನ್ನು ವಿರೂಪಾಕ್ಷ ಕವಿಸಮಯಾನುಸಾರವಾಗಿ ಕೊಡುತ್ತಾನಾದರೂ, ಸ್ವಂತದ ಚಮತ್ಕಾರವನ್ನು ಮೆರೆಯುತ್ತಾನೆ:

ಮಡುವಿಗೆ ಕೂರ್ಮನು ಕಡೆಯಿತೊ ಪಾದಕ್ಕೆ| ನಡೆಗಾಗಿ ಹಂಸೆಯು ಕೊಳನ
ಒಡನಾಡೆ ಜಂಘೆಗೆ ತಡೆಯದೆ ಹೊದೆ ಹೋಗಿ| ಅದಗಿತು ಕಾವನ ಬೆನ್ನ
ತೊಡೆಗಾಗಿ ಬಾಳೆಯು ಕಡಿವಡೆಯಿತು ಬಟ್ಟು| ವಿದಿರಾ ನಿತಂಬಕ್ಕೆ ಗಿರಿಯು
ನುಡಿಯದೆ ಕಲ್ಲಾಗಿ ನಡುವಿಗೆ ನಾಚುತ | ಅಡವಿಯ ಹೊಕ್ಕಿತು ಸಿಂಹ
ನಿಡುತೋಳಿಗಾ ಫಣಿ ಮಡುಹಿತು ಮಕ್ಕಳ| [illegible]ಪತಿ ಮೋಲಿಕಟ್ಟುಗಳಿಗೆ
ಕೊಡಹಿತು ಗಜಶಿರ ಬಿಡದೆ ವಾ[illegible] ಒಡೆಯಿತು ಸುಲಿಪಲ್ಲುಗಳಿಗೆ

ವಿರೂಪಾಕ್ಷನ ಈ ಉಪದೇಶ ಗ್ರಾಹ್ಯವಾಗಿಲ್ಲವೆ?—

ಹೊನ್ನಿಗೆ ಹೆಣಗುತ್ತ ಹೊಸ್ನಂಥ ಪ್ರಾಯವ| ಮಣ್ಣನೆ ಮಾಡುವುದಲ್ಲ
ಉನ್ನತ ಭೋಗವು ಕನ್ನೆಯರ ಕೂಟವು | ಚೆನ್ನಾಗುವುದು ಪ್ರಾಯದೊಳಗೆ

ಸೂಳೆಯೊಬ್ಬಳು ಮಗಳಿಗೆ ಹೀಗೆ ಪುರುಷವಶೀಕರಣ ಮಂತ್ರಗಳನ್ನು ಬೋಧಿಸುತ್ತಾಳೆ:

ಹೊನ್ನುಳ್ಳ ವಿಟರಿಗೆ ಬಣ್ಣಿಸಿ ತನುಮನ| ನಿನ್ನಾಣೆ ನಿನ್ನವೆಂದೆನುತ
ಕನ್ನಡಿಗಿದುರಾದ ರನ್ನದ ನೆರಳಂತೆ | ಬಿನ್ನಾಣದಯಲಿ ಬಳಸುವುದು
ಓರೆಗಂಗಳ ಸನ್ನೆದೋರಿ ಜೆಲ್ಲದ ಮಾತ| ಬೀರಿ ಸೋಲಿಸು ಹೊನ್ನಗಂಟ

ಬೆಳಗಿನ ಜಾವದ ಈ ವರ್ಣನೆ ಸಂಕ್ಷಿಪ್ತವಾಗಿ ಚಿತ್ರವತ್ತಾಗಿದೆ:

ಬೀರುವ ಕಿರಣಕೆ ಹಾರಿ ಚಕೋರನು| ಹೀರಿ ಓಂಡಿದ ತೆರನಂತೆ
ತೀರಲು ಶಶಿಕಾಂತಿ ತಾರೆಗಳಾರಿಯೆ | ವಾರಿಧಿ ಬಡವಾಯಿತಾಗ

ತಾರೆಗಳಾರಿದುವೆನ್ನುವ ರೂಪಕ ಸುಂದರವಾಗಿದೆ.

ಅರಣ್ಯವರ್ಣನೆಯಲ್ಲಿ ವಿರೂಪಾಕ್ಷ ಮರಗಳನ್ನು ಚಮತ್ಕಾರಪೂರ್ಣವಾಗಿ ಹೆಸರಿಸುತ್ತಾನೆ. ಕಾಡಿನಲ್ಲಿ 'ಹಿರಿಯರ ಕರೆವಂತೆ (=ಬನ್ನಿ), 'ಒಡಲಂತೆ' (=ಬಸಿರಿ), 'ತಾಯ ಹಿರಿಯಣ್ಣನಾದಂತೆ'

(=ಮಾವು) ಪರಿಪರಿಯ ಮರಗಳಿದ್ದುವೆಂದು ಹೇಳುವಲ್ಲಿ ಕವಿಯ ಕ್ವಚಿತ್ತಾದ ಪಂಡಿತಮತಿ ವ್ಯಕ್ತವಾಗುತ್ತದೆ.

ಮಾಯದ ಹಂದಿಯನ್ನು ವಿರೂಪಾಕ್ಷ ಚಿತ್ರಿಸುವ ರೀತಿಯಿದು:

ವರಹಾವತಾರವು ತಿರುಗಿತೊ ಗಜಾಸುರ | ತಿರುಗಿ ತಾ ಜನಿಸಿದ ಪರಿಯೊ

ಮರಳೊಮ್ಮೆ ಮಹಿಷಾಸುರ ಹುಟ್ಟಿದನೊ ಹೇಳಿ| ತೆರಹಿಲ್ಲ....

ತಾನು ಹೊಕ್ಕದ್ದು ವಿಶ್ವಾಮಿತ್ರನ ಆಶ್ರಮವೆಂದು ತಿಳಿದಾಗ, ಹರಿಶ್ಚಂದ್ರನಿಗೆ 'ಹಾವಗಿದು ಬಿಟ್ಟಂತೆ' ಆಯಿತೆಂದು ರಾಘವಾಂಕನ ನಿರೂಪಣೆ. ಸಾಂಗತ್ಯದಲ್ಲಿ 'ಹೊರೆಯಂಬ ಕೀಲಿಸಿ ಮರುಮೊನೆಗೊಂಡಂತೆ' ಎಂದು ಮತ್ತೂ ಪರಿಣಾಮಕಾರಿಯಾಗಿ ಬಂದಿದೆ. ಹರಿಶ್ಚಂದ್ರನಿಗೆ ಬಿದ್ದ ಕನಸಿನ ಅರ್ಥವನ್ನು ವಿರೂಪಾಕ್ಷ ವಾಚ್ಯವಾಗಿ, ಸ್ವಲ್ಪ ಭಿನ್ನವಾಗಿ ಚಂದ್ರಮತಿಯ ಬಾಯಲ್ಲಿ ಹೇಳಿಸುತ್ತಾನೆ:

ಇದಕಂಜದಿರಿ ನೀವುಯಿದು ವಿಶ್ವಾಮಿತ್ರನ | ಒದಗಿದ ಕೋಪಾಟೋಪಗಳು

ಬೆದರಿಸಿ ಸಾಮ್ರಾಜ್ಯಪದವಿಯನಳಿವನು | ತುದಿಯಲಿ ಗಿರಿಯಾರೆ ಲೇಸು

ಚಂಡಾಲಕನ್ಯೆಯರು ವಿಶ್ವಾಮಿತ್ರನಿಂದೊಗೆದಾಗ 'ಕುಲಜನಾಗಲಿ ಮುನಿತಿಲಕನಾಗಲಿಯಿಂತು ಹೊಲೆ ಹುಟ್ಟುವುದು ಕೋಪದಿಂದ' ಎಂದು ವಿರೂಪಾಕ್ಷ ಮೂಲದ ಅಭಿಪ್ರಾಯವನ್ನೆ ಒಂದು ಹೇಳಿಕೆಯ ರೂಪದಲ್ಲಿರಿಸುತ್ತಾನೆ. ಹರಿಶ್ಚಂದ್ರ ಕಾವ್ಯದಲ್ಲಿ 'ಕೆಂಡವನು ಮುಟ್ಟಿದರೆ ಬೇವಂತೆ ಕೇಳ್ದೊಡಂ ಕಂಡು ವಾಸಿಸಿದಡಂ ಬೆಂದವೇ" ಎಂದು ಉತ್ತರಿಸುತ್ತಾನಷ್ಟೆ, ಗಾಣನಾಯಕಿಯರಿಗೆ. ಅಲ್ಲಿ ದೃಷ್ಟಾಂತವಾಗಿ ಬಂದಿರುವ ಕೆಂಡ ವಿರೂಪಾಕ್ಷನಲ್ಲಿ ವಿಷವಾಗಿ ಇನ್ನೂ ಪ್ರಭಾವಶಾಲಿಯಾಗಿದೆ:

ವಿಷವೆಂದು ಕೇಳಲು ಒಸೆದು ಮಾತಾಡಲು | ಎಸೆವತಿ ವಾಸನೆಗೊಳಲು

ಹಸನಾಗಿ ನಯನ ನಿಟ್ಟಿಸಲಾಗಿ ಸಾವರೆ| ವಸುಧೆಯೊಳದ ಕುವಿಯೆನಲು

ಹರಿಶ್ಚಂದ್ರಕಾವ್ಯದಲ್ಲಿ ಹೊಲತಿಯರನ್ನು ಬಡಿದವನು ಸ್ವತಃ ಹರಿಶ್ಚಂದ್ರ: ಆದರೆ ಇದು ರೂಕ್ಷವರ್ತನೆಯೆನಿಸಿ, ಮಂತ್ರಿ ಅವರನ್ನು ಹೊಡೆದಂತೆ ಪರಿವರ್ತಿಸಿದ್ದಾನೆ ವಿರೂಪಾಕ್ಷ.[19] ಆ ಹೊಲತಿಯರು ಹೋಗಿ 'ನಿನ್ನವರೆಂದರೆ ಮನ್ನಿಸಿ ಉಡುಗೊರೆ ಬೆನ್ನೊಡೆಯಲು

---

19. ತಮ್ಮ 'ಹರಿಶ್ಚಂದ್ರ' ನಾಟಕದಲ್ಲಿ ಭೃತ್ಯರು ಅವರನ್ನು ಹೊಡೆದಂತೆ ಮಾರ್ಪಡಿಸಿದ್ದಾರೆ, ಎಸ್. ವಿ. ರಂಗಣ್ಣನವರು. ಹರಿಶ್ಚಂದ್ರ ಚಂಡಾಲಕನ್ಯೆಯರನ್ನು ಹಾಗೆ ಶಿಕ್ಷಿಸಿದ್ದು ಉಚಿತವಾಗಲಿಲ್ಲವೆಂದು ಹಿಂದಿನ ಕವಿಗಳಿಗೇ ಅನಿಸಿತ್ತು. 'ಅಂದು ಹರಿಶ್ಚಂದ್ರ ಚಬಕಿಲಿ ಕೊಲಿಸಿದ' ಎನ್ನುತ್ತಾನೆ ಹಲಗ; 'ಅಟ್ಟಿ ಬಾಯನು ಹೊಯ್ ಕಡೆಬಡಿ ಎನಲಾಗಿ ಧಟ್ಟಿಸಿ ಎಳೆದು ನೂಕಿದರು' ಎಂದು ಲಕ್ಕನ ಹೇಳಿಕೆ.

ಮಂತ್ರಿ ಹೊಡೆದಂತೆ ಮಾಡಿದವನು ವಿರೂಪಾಕ್ಷ; ಅದೂ ಸರಿಯಲ್ಲವೆಂದೆನಿಸಿ ಮುಂದಿನ ಕವಿಗಳು ಭಟರಿಗೆ ಆ ಕೆಲಸ ವಹಿಸಿದರು. ಆದರೆ ಹರಿಶ್ಚಂದ್ರನೆ ಹೊಲತಿಯರನ್ನು ಭಂಗಿಸಿದ್ದು ಸಮುಚಿತವಾಗಿಯೆ ತೋರುತ್ತದೆ, ಪ್ರತಿಮಾದೃಷ್ಟಿಯಿಂದ ಸಮಾಲೋಚಿಸಿದಾಗ.

ಹೊರಿಸಿದನು' ಎಂದು ಕೌಶಿಕನಲ್ಲಿ ದೂರುವುದು ಬಹಳ ಮಾರ್ಮಿಕವಾಗಿದೆ. ತನ್ನ ಮಕ್ಕಳನ್ನು ನಿಂದಿಸುವ ನೆಪದಲ್ಲಿ ತನ್ನನ್ನೆ ಹೊಲೆಯನೆಂದಂತಾಯಿತು ಎಂದು ಕೌಶಿಕ ಆರ್ಭಟಿಸಿದಾಗ, ಹರಿಶ್ಚಂದ್ರ 'ಹೊಲೆಗೆರೆಯ ಜಲವ ನಡುವೆ ಬಂಬಿಸುವ ರವಿ ಹೊಲೆಯನೇ' ಎನ್ನುತ್ತಾನೆ, ರಾಘವಾಂಕನಲ್ಲಿ. ವಿರೂಪಾಕ್ಷನಾದರೆ 'ಜಲದೊಳು ಜನಿಸಿದ ಹುಳುವನು ಗಂಗಾಜಲ ಹೋಲುವುದೆ ಮುನಿಪಾಲ?' ಎಂದು ಇನ್ನೂ ಸೊಗಸಾಗಿ ಹೇಳಿಸುತ್ತಾನೆ. ವಿಶ್ವಾಮಿತ್ರನಿಂದ ಪಾರಾದೆನೆಂದುಕೊಂಡ ಹರಿಶ್ಚಂದ್ರ ರಾಘವಾಂಕನಲ್ಲಿ 'ತಲೆದಡವಿಕೊಳುತ' ಹೋದರೆ, ವಿರೂಪಾಕ್ಷನ ಹರಿಶ್ಚಂದ್ರ 'ಹರಣವುಳ್ಳರೆ ಹಾಡಿ ಹರಿದುಂಬೆ ಶಿವಶಿವ ನೆರೆ ಜೀವದಲಿ ಬಿಟ್ಟನೆನುತ' ಕಾಲು ಕೀಳುತ್ತಾನೆ.

ಹರಿಶ್ಚಂದ್ರ ನಗರದಿಂದ ನಿರ್ಗಮಿಸುವಾಗ ಪುರಜನ 'ಹರಣವಿಲ್ಲದ ಕಾಯ ಒರತೆಯಿಲ್ಲದ ಜೋತಿ ನೆರಳಿಲ್ಲದ ವೃಕ್ಷದಂತೆ' ಶೋಕಿಸಿದರೆಂದು ವಿರೂಪಾಕ್ಷನ ವರ್ಣನೆ.

ವಿಶ್ವಾಮಿತ್ರ ಹೇಳಿದಂತೆ ಕೇಳಿ ರಾಜ್ಯಸುಖವನ್ನನುಭವಿಸುವಂತೆ ನಕ್ಷತ್ರಿಕ ಹರಿಶ್ಚಂದ್ರನಿಗೆ ಉಪದೇಶಿಸುತ್ತಾನೆ; ಆಗ ಹರಿಶ್ಚಂದ್ರ ಕೊಡುವ ಉತ್ತರದಲ್ಲಿ ದೇಸಿಯ ಸತ್ತ್ವ ಕಾಣುತ್ತದೆ; ಜನಪದದ ನಾಣ್ಣುಡಿಯೊಂದನ್ನು ಕವಿ ಬಳಸಿರುವಂತಿದೆ: 'ಗುರುವಿನಿಂದಲಿ ಗುಡ್ಡ ಹಿರಿದಾಯಿತೆಂಬುದ ಮರೆಯಲಿಬೇಡ ನಮ್ಮೊಳಗೆ!'

ವಿಪ್ರವೇಷದ ಅಗ್ನಿ ಧನ ಸಂಪಾದನೆಗಾಗಿ ನಾನಾ ವಾಮಮಾರ್ಗಗಳನ್ನು ಅನುಸರಿಸುವಂತೆ ಹರಿಶ್ಚಂದ್ರನಿಗೆ ಬೋಧಿಸುತ್ತಾನೆ. (೧೦. ೨೦-೨೮). 'ಬಲುಬುದ್ಧಿಯನು ಬಂದು ಕಲಿಸಿದೆ ಭೂಸುರ' ಎಂದು ಹರಿಶ್ಚಂದ್ರ ಟೀಕಿಸುತ್ತಾನೆ. ಹರಿಶ್ಚಂದ್ರನ ಸತ್ಯನಿಷ್ಠುರತೆಗೆ ಅದು ಪೋಷಕವಾಗಿದೆ. ಇದೆಲ್ಲ 'ಹರಿಶ್ಚಂದ್ರ ಕಾವ್ಯ'ದಲ್ಲಿಲ್ಲ. ಕಾಲಕೌಶಿಕ ಚಂದ್ರಮತಿಯ ಮೇಲೆ 'ಪರಿ ಪರಿ ಹಾರುವ ಗಂಟಿನ ಭಾರವ ಹೊರಿಸಿದ'ನೆಂದು ವಿರೂಪಾಕ್ಷ ನೈಜಚಿತ್ರವೊಂದನ್ನು ಕೊಡುತ್ತಾನೆ.

ವೀರಬಾಹುಕ ಹರಿಶ್ಚಂದ್ರನ ಮೇಲೆ ತನ್ನ ಕಾಲನ್ನು ಹೇರಿದಾಗ, ಅದನ್ನು ಹರಿಶ್ಚಂದ್ರ 'ಲೆಕ್ಕಿಸದಿರ್ದನು' ಎಂದು ರಾಘವಾಂಕನ ಹೇಳಿಕೆ. ವಿರೂಪಾಕ್ಷ ಈ ಸಂದರ್ಭದಲ್ಲಿ ಹರಿಶ್ಚಂದ್ರನ ಉದಾತ್ತತೆಯನ್ನು ಪ್ರಕಟಿಸುತ್ತಾನೆ, 'ಹೆಗಲ ಮೇಲಕೆ ಕಾಲ ತೆಗೆದುಕೊಂಡನು ಭೂಪ ಬಗೆಬಗೆಯಲಿ ಒತ್ತುತಾಗ' ಎಂದು ನಿರೂಪಿಸುವುದರ ಮೂಲಕ. ತಾನು ಏನು ಕೆಲಸವನ್ನು ಬೇಕಾದರೂ ಮಾಡುತ್ತೇನೆಂದು ಹರಿಶ್ಚಂದ್ರ ಹೇಳುವಾಗ 'ಮಾತೆ ಪಿತರನಾರ್ದಿಸು' ಎಂಬ ಮಾತು ರಾಘವಾಂಕನಲ್ಲಿ ಬರುತ್ತದೆ; ಅದನ್ನು 'ತಾಯ ಮೊಲೆಯನು ಕೊಯ್' ಎಂದು ವಿರೂಪಾಕ್ಷ ಮತ್ತಷ್ಟು ತೀವ್ರಗೊಳಿಸಿದ್ದಾನೆ. ತನಗೆ ಹಾಲೂಡಿದ ತಾಯ ಮೊಲೆಯನ್ನು ಯಾರು ತಾನೆ ಕೊಯ್ಯಾರು? ಒಂದು ವೇಳೆ ತಾಯನ್ನು ಕಾಡಬಹುದು, ಕೊಲ್ಲಲೂ ಬಹುದು; ಆದರೆ ಅವಳ ಮೊಲೆಯನ್ನು ಕೊಯ್ಯುವ ಕಠಿಣ ಚಿತ್ತ ಎಲ್ಲಿದ್ದೀತು? ಆದರೆ ಹರಿಶ್ಚಂದ್ರ ಕರ್ತವ್ಯಪಾಲನೆಗಾಗಿ ಅದನ್ನು ಬೇಕಾದರೂ ಮಾಡುತ್ತೇನೆ ಎನ್ನುತ್ತಾನೆ. ಎಂತಹ ವಜ್ರಕರ್ಕಶವಾದ ಸತ್ಯಸಂಧತೆ!

ವಿಪ್ರನ ಮನೆಯಲ್ಲಿದ್ದ ಚಂದ್ರಮತಿ ಲೋಹಿತಾಶ್ವರು ಮನಸ್ಸು ಮಾಡಿದ್ದರೆ ಅಲ್ಲಿಂದ ತಪ್ಪಿಸಿಕೊಳ್ಳಬಹುದಿತ್ತು, ಅಥವಾ ಆತ್ಮಹತ್ಯೆ ಮಾಡಿಕೊಳ್ಳಬಹುದಿತ್ತು. ಆದರೆ ಅದು ಅಧರ್ಮವೆಂದು ಬಗೆದು ಕಷ್ಟಪರಂಪರೆಯನ್ನೆದುರಿಸುತ್ತಾರೆ:

ಓಡಿಹೋದರೆ ತಮ್ಮ ಕೂಡಿದ ಸತ್ಯಕೆ | ಕೇಡುಂಟು ಜೀವದಾಸೆಯನು
ಈಡಾಡುವರೆ ಮತ್ತೆ ರೂಢೀಶನೇನಾದ | ನೋಡುವ ಹಾದಿಯನೆನುತ

ಎಂದು ಯೋಚಿಸಿ ಅವರು ತಾಳಿಕೊಳ್ಳುತ್ತಾರೆ. ಇದು ಸ್ವಾಭಾವಿಕವಾಗಿದೆ; ಮಾನಸಿಕ ಹೋರಾಟಕ್ಕೆ ದ್ಯೋತಕವಾಗಿದೆ. ಹರಿಶ್ಚಂದ್ರಕಾವ್ಯದಲ್ಲಿ ಇದು ವಾಚ್ಯವಾಗಿ ಬರುವುದಿಲ್ಲ.

ಮಡಿದ ಲೋಹಿತಾಶ್ವನನ್ನು ಕುರಿತು ಚಂದ್ರಮತಿ 'ಕಾಡಿ ಬೇಡಿ ಉಂಡಾಡುವ ದಿನದಲಿ' ಮಗುವಿಗೆ ಇಂತಹ ಗತಿ ಬಂತೆಂದೂ, 'ನಿನ್ನನು ಕಚ್ಚಿದ ಉರಗನು ಬಂದುಯೆನ್ನನು ಏತಕೆ ಹಿಡಿಯದು' ಎಂದೂ ಗೋಳಾಡುವುದು ಸಕರುಣವಾಗಿದೆ. ಬಾಲಕ ಅಳುವ ಸದ್ದು ಕೇಳಿ ಅವಳು ಅತ್ತ ಓಡಿದಾಗ, ರಾಘವಾಂಕ 'ಅತಿದುಃಖಿಗುಂಟೇ ಬುದ್ಧಿ ಜಗವರಿಯಲು' ಎಂದು ಸರ್ವಸಾಧಾರಣವಾದ ಸತ್ಯವನ್ನು ಹೇಳುತ್ತಾನೆ. ಮಕ್ಕಳನ್ನು ಕಳೆದುಕೊಂಡವರಿಗೆ ಬುದ್ಧಿ ಸ್ವಾಸ್ಥ್ಯವಿರುವುದಿಲ್ಲ ಎಂದು ವಿರೂಪಾಕ್ಷ ನಿರ್ದಿಷ್ಟವಾಗಿ ಹೇಳುತ್ತಾನೆ:

ಧರೆಯೊಳು ಹಡೆದೊಡಲಿನ ದುಃಖಿದವರಿಗೆ | ಸ್ಥಿರಬುದ್ಧಿ ಕೂಡದೆಂಬುದಕೆ
ತರುಣಿಯೆ ಸಾಕ್ಷಿ ನೋಡೆಂಬಂತೆ ಹರಿದಳು| ತರಳನಳುವ ದನಿಯೆಡೆಗೆ

ತಾನು ರಾಜಕುಮಾರನನ್ನು ಕೊಂದುದುಂಟೆಂದು ಮಾತ್ರ ಹರಿಶ್ಚಂದ್ರಕಾವ್ಯದಲ್ಲಿ ಚಂದ್ರಮತಿ ಒಪ್ಪಿಕೊಳ್ಳುತ್ತಾಳೆ; ಅದಕ್ಕೆ ಕಾರಣವೇನೆಂದು ಅಲ್ಲಿ ಗೊತ್ತಾಗುವುದಿಲ್ಲ. ಸಾಂಗತ್ಯದಲ್ಲಿ ಚಂದ್ರಮತಿ ನಡೆಯದ ಕೊಲೆಗೆ ಕಲ್ಪಿತ ಕಾರಣಗಳನ್ನು ಹೇಳುವುದು ಸ್ವಾರಸ್ಯವಾಗಿದೆ:

ಗಂಡನು ತನ್ನನುದ್ದಂಡತನಕೆ ಮಾರಿ | ಕೊಂದರೆ ತಾ ಕಳ್ಳಿಯಾಗಿ
ಕಂಡು ಕುಮಾರನ ಕೊಂಡೊಯ್ದು ಪ್ರಾಣವ | ಕೊಂಡೆನಾಭರಣದಾಸೆಯಲಿ

ಅಂತಿಮವಾಗಿ, ಹರಿಶ್ಚಂದ್ರನ ಮನಃಪರೀಕ್ಷಣಕ್ಕಾಗಿ ತಾನು ಇಷ್ಟೆಲ್ಲವನ್ನೂ ಮಾಡಿದೆನೆಂದು ವಿಶ್ವಾಮಿತ್ರ ಹೇಳುತ್ತಾನೆ:

ಧರಣೀಶ ಕೇಳಿನ್ನು ಸರಿಮಾಡಿ ಚಿನ್ನಕೆ| ಒರೆದು ನೋಡಿದೆ ನಿನ್ನ ಮನಸ
ಕರಗಿಸಿದರೆ ನೋಯಲರಿಯದು ಕಡಿದರೆ | ಪರಿಪರಿ ಬಣ್ಣದೋರುವುದು

ಅದರಿಂದ ಮಹೋಪಕಾರವೆ ಆಯಿತೆಂದು ಹರಿಶ್ಚಂದ್ರ ಉತ್ತರಿಸುತ್ತಾನೆ:

ಪೊಡವೀಶ ನುಡಿದನು ಬಡಿದು ಹಾಲೆರೆಯುತ| ಪಡೆದ ಮಕ್ಕಳ ಸಾಕುವಂತೆ
ಜಡಮತಿಯನು ಸುಟ್ಟು ಹುಡಿಬಡಿಸಿದೆ ನಿನ್ನ | ಕಡೆಯಿಂದ ಕಂಡೆ ಶಂಕರನ

ಇಲ್ಲಿ ಬರುವ ರೂಪಕಗಳು ಸುಂದರವಾಗಿವೆ, ಸಮುಚಿತವಾಗಿವೆ.[20]

---

20. ಇಲ್ಲಿ ಬಸವಣ್ಣನವರ ವಚನಗಳಿಂದ ವಿರೂಪಾಕ್ಷ ಪ್ರಭಾವಿತನಾಗಿದ್ದಾನೆ ಎನಿಸುತ್ತದೆ.

ಒಟ್ಟಿನಲ್ಲಿ, ವಿರೂಪಾಕ್ಷ ಬಹುಮಟ್ಟಿಗೆ ರಾಘವಾಂಕನ ಸುತ್ತ ಪರಿಭ್ರಮಿಸುವ ಉಪಗ್ರಹವೆ ಆಗಿದ್ದರೂ, ತನ್ನತನವನ್ನು ಕಳೆದುಕೊಂಡಿಲ್ಲ; ಅದಕ್ಕೆ ಸಾಕಷ್ಟು ಅವಕಾಶ ಕಲ್ಪಿಸಿಕೊಂಡಿದ್ದಾನೆ ಎನ್ನುವುದು ಇದುವರೆಗಿನ ಸಮಾಲೋಕನದಿಂದ ವ್ಯಕ್ತವಾಗುತ್ತದೆ.

೩

ವೈಶಿಷ್ಟ್ಯ : ಹರಿಶ್ಚಂದ್ರಸಾಂಗತ್ಯದಲ್ಲಿ ವಿರೂಪಾಕ್ಷನ ಮುಖ್ಯೋದ್ದೇಶ ರಾಘವಾಂಕನ ಕಾವ್ಯವನ್ನು ಸಾಮಾನ್ಯರಿಗೆ ಅನುಕೂಲಿಸುವಂತೆ ಸಂಗ್ರಹಿಸುವುದು. ಈ ಸಂಗ್ರಹಗುಣವೆ ಅವನ ಕೃತಿಯ ಪ್ರಥಮ ವೈಶಿಷ್ಟ್ಯ. ಹರಿಶ್ಚಂದ್ರ ಕಾವ್ಯದ ವರ್ಣನೆಗಳ ಮೆಳೆಯನ್ನು ಅವನು ಬಹುಮಟ್ಟಿಗೆ ಕತ್ತರಿಸಿ ಹಾಕಿದ್ದಾನೆ; ಕೆಲವು ಕಡೆ ಸವರಿ ಪರಿಷ್ಕರಿಸಿದ್ದಾನೆ; ಕತೆಯ ಓಟ ನಿರರ್ಗಳವಾಗುವಂತೆ ಸುಗಮವಾಗುವಂತೆ ಮಾಡಿದ್ದಾನೆ. ಹರಿಶ್ಚಂದ್ರ ಕಾವ್ಯದಲ್ಲಿ ಸುಮಾರು ೭೩೦ ವಾರ್ಧಕಷಟ್ಪದೀ ಪದ್ಯಗಳಲ್ಲಿ ಸುವಿಸ್ತಾರವಾಗಿ ವ್ಯಾಪಿಸಿರುವ ಕತೆಯನ್ನು ೬೮೯ ಸಾಂಗತ್ಯ ಪದ್ಯಗಳಲ್ಲಿ ಹಿಡಿದಿಟ್ಟಿರುವ ಕಾರ್ಯ ಪ್ರಶಂಸನೀಯವಾದುದು. ಮೂಲಕಥೆಯ ಸ್ವಾರಸ್ಯಕ್ಕೆ, ಸೌಂದರ್ಯಕ್ಕೆ, ದರ್ಶನಕ್ಕೆ ಒಂದಿನಿತೂ ಲೋಪ ಬಾರದಂತೆ ಸಾರಗ್ರಾಹಿಯಾದ ರೀತಿಯಲ್ಲಿ ಅದನ್ನು ಸಂಕ್ಷೇಪಿಸಿದ್ದೆ ವಿರೂಪಾಕ್ಷನ ದೊಡ್ಡ ಸಾಧನೆ. ಅದರಲ್ಲಿ ಅವನು ತನ್ನತನವನ್ನೂ ಮೇಳವಿಸದಿಲ್ಲ.

ವಿರೂಪಾಕ್ಷ ಸಾಮಾನ್ಯ ಜನಕ್ಕಾಗಿ-ರಾಘವಾಂಕನ ಕಾವ್ಯವನ್ನು ಕೂಡ ಅರ್ಥ ಮಾಡಿಕೊಳ್ಳಲಾರದ ಸರಳಮತಿಗಳಿಗಾಗಿ-ಹರಿಶ್ಚಂದ್ರ ಸಾಂಗತ್ಯವನ್ನು ಬರೆದವನು. ಆದ್ದರಿಂದ ಅವನ ಪದ್ಯಗಳಲ್ಲಿ ಸರಳತೆಯಿದೆ, ಲಾಲಿತ್ಯವಿದೆ, ಪ್ರಸನ್ನತೆಯಿದೆ, ಸೌಕರ್ಯವಿದೆ; ಪಾಂಡಿತ್ಯದ ವಿಜೃಂಭಣೆಯಿಲ್ಲ, ಕ್ಲಿಷ್ಟತೆಯಿಲ್ಲ. ಅವನು ಬಹುಜ್ಞನಾದ ವಿದ್ವಾಂಸನಾಗಿದ್ದಂತೆ ತೋರುವುದಿಲ್ಲ; ಸರಳಸಹಜವಾದ ಕವಿತೆಯೇ ಅವನ ಆಸ್ತಿ. ಜನಸಾಮಾನ್ಯರಿಗಾಗಿ ಜನಪ್ರಿಯವಾದ ಛಂದೋರೂಪದಲ್ಲಿ ಜನಭಾಷೆಯಲ್ಲಿ ಕತೆ ಹೇಳಿದ ಜನತಾ ಕವಿ ವಿರೂಪಾಕ್ಷ. ('ಕಾವ್ಯಮಂ ಕೇಳ್ದು ಜನ ಬದುಕಬೇಕೆಂಬ') ರಾಘವಾಂಕನ ಉದ್ದೇಶ ಸಫಲವಾಗಲೆಂದು ಹರಿಶ್ಚಂದ್ರಕಾವ್ಯವನ್ನು ಸಾಂಗತ್ಯರೂಪಕ್ಕೆ ತಿರುಗಿಸಿದ ಮೊಟ್ಟಮೊದಲ ಕವಿ ಎಂಬ ಕೀರ್ತಿ ಅವನ ಪಾಲಿಗಿದೆ.

ಛಂದಸ್ಸಿನ ದೃಷ್ಟಿಯಿಂದ ವಿರೂಪಾಕ್ಷನ ಸಾಂಗತ್ಯಪದ್ಯಗಳು ಬಹಳ ಗಮನಾರ್ಹವಾಗಿವೆ. ಇವನ ಎಲ್ಲ ಪದ್ಯಗಳಲ್ಲೂ ಒಂದು, ಮೂರನೆಯ ಪಾದಗಳಲ್ಲಿ ಒಳಪ್ರಾಸ ನಿಯತವಾಗಿ ಬರುತ್ತದೆ. ಕನ್ನಡ ಸಾಹಿತ್ಯದ ಮತ್ತಾವ ಸಾಂಗತ್ಯಕಾವ್ಯವೂ ಈ ನಿಯಮವನ್ನು ಆದ್ಯಂತವಾಗಿ ಪಾಲಿಸಿಲ್ಲವೆಂದೆ ಹೇಳಬಹುದು. ವಾಸ್ತವವಾಗಿ ಒಳಪ್ರಾಸ ಕನ್ನಡ ಛಂದಸ್ಸಿನ ಪ್ರಮುಖ ಗುಣಗಳಲ್ಲೊಂದು; ತ್ರಿಪದಿಯಲ್ಲಿ ಅದು ಬಹುಮಟ್ಟಿಗೆ ನಿಯತವಾಗಿ ಮೊಗದೋರುತ್ತದೆ. ಆದರೆ ಸಾಂಗತ್ಯಗಳಲ್ಲಿ ಮಾತ್ರ ಅದು ಅನಿಯತ; ಆದಿ ಸಾಂಗತ್ಯಕಾರರೂ ಕೂಡ ಅದನ್ನು ವಿಶೇಷವಾಗಿ ಇಟ್ಟುಕೊಂಡಂತಿಲ್ಲ. ರಾಮರಸ ವಿರೂಪಾಕ್ಷ ಕನ್ನಡ ಛಂದಸ್ಸಿನ ಈ ಜೀವನಾಡಿಯನ್ನು ಹಿಡಿದು ಅದನ್ನು ತನ್ನ ಕೃತಿಯಲ್ಲಿ ಉದ್ದಕ್ಕೂ ಮಿಡಿದಿರುವುದು

ಶ್ಲಾಘ್ಯವಾದ ವಿಚಾರ. ಈ ಒಳಪ್ರಾಸಾನುಪ್ರಾಸದಿಂದ ಅವನ ಪದ್ಯಗಳಿಗೆ ಹೆಚ್ಚಿನ ಗೇಯತೆ, ಸೊಬಗು ಬಂದಿವೆ. ಲಯದ ದೃಷ್ಟಿಯಿಂದ ಕೂಡ ವಿರೂಪಾಕ್ಷನ ಪದ್ಯಗಳು ಬಹುಮಟ್ಟಿಗೆ ಮನೋಜ್ಞವಾಗಿವೆ; ಸಾಂಗತ್ಯ ಅವನಿಗೆ ಚೆನ್ನಾಗಿ ಹಸ್ತಗತವಾಗಿದೆ. ಸಾಂಗತ್ಯಕವಿಗಳಲ್ಲಿ ಅವನಿಗೊಂದು ಗಣ್ಯವಾದ ಸ್ಥಾನವುಂಟೆಂದು ಧಾರಾಳವಾಗಿ ಹೇಳಬಹುದು.

ವಿರೂಪಾಕ್ಷ ರಾಘವಾಂಕನನ್ನು ಬೆಂಬಳಿವಿಡಿದೇ ನಡೆದಿದ್ದಾನೆ, ನಿಜ. ಯಾರಿಗೂ ಬಾರದ ಕುಂದು ಇದರಿಂದ ಅವನಿಗೆ ಬರುವಂತಿಲ್ಲ. ಪೂರ್ವಕವಿಗಳನ್ನು ಅನುಸರಿಸುವುದು ಹಿಂದಿನ ಕವಿಗಳ ಪರಂಪರಾಯಾತ ಧರ್ಮವೇ ಆಗಿದೆ. ನಮ್ಮ ಚಂಪೂಕವಿಗಳಲ್ಲಿ ಎಷ್ಟು ಮಂದಿ ದಿಟವಾಗಿಯೂ ಸ್ವತಂತ್ರ ಪ್ರತಿಭಾಸಂಪನ್ನರು? ಎಲ್ಲೋ ಕೆಲವರನ್ನು ಬಿಟ್ಟರೆ ಉಳಿದವರೆಲ್ಲ ಬೇರೆ ಬೇರೆ ಆಕರಗಳಿಂದ ಸರಕುಗಳನ್ನು ಸಂಗ್ರಹಿಸಿ ತಮ್ಮ ಕೃತಿಗಳನ್ನು ತುಂಬಿಕೊಂಡವರೇ; ಸಂಸ್ಕೃತ ಕಾವ್ಯಭಾಗಗಳನ್ನು ಯಥಾವತ್ತಾಗಿ ಅನುವಾದಿಸಿದವರೇ. ಪಾಂಡಿತ್ಯದ ಮರೆಯಲ್ಲಿ ಅವರ ದೌರ್ಬಲ್ಯಗಳೆಲ್ಲ ಅಗೋಚರವಾಗಿವೆ; ಆ ಕವಿಗಳೂ ಸುರಕ್ಷಿತರಾಗಿದ್ದಾರೆ. ವಿರೂಪಾಕ್ಷನಂತಹ ಕವಿಗಳು ಒಂದೇ ಆಕರವನ್ನು ಅವಲಂಬಿಸಿರುವುದರಿಂದ, ಸರಳವಾಗಿ ಕವಿತೆ ಬರೆಯುವುದರಿಂದ ಅವರ ಅನುಕರಣಪ್ರವೃತ್ತಿ ಎದ್ದು ಕಾಣುತ್ತದಷ್ಟೆ. ಸಾಹಿತ್ಯ ಜಗತ್ತಿನಲ್ಲಿ 'ಪರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ'ಯೆನ್ನುವುದು ಬಯಲ ಭ್ರಮೆ. ರಾಘವಾಂಕ ತಾನೆ ಆ 'ಭಾಷೆ'ಯನ್ನು ಎಷ್ಟರಮಟ್ಟಿಗೆ ಕಟ್ಟುನಿಟ್ಟಾಗಿ ನೆರವೇರಿಸಿದ್ದಾನೆ? ಒಂದಲ್ಲ ಒಂದು ರೀತಿಯಲ್ಲಿ ಪರಾವಲಂಬಿಯಾಗದ ಕವಿ ಲೋಕದಲ್ಲಿ ಯಾರೂ ಇಲ್ಲ. ಒಂದು ವೇಳೆ ಭಾವಗೀತೆಯ ಕವಿಗೆ ಅನ್ಯರ ಋಣ ಇಲ್ಲದಿರಬಹುದು; ಕಥನಕಾವ್ಯದ ಕವಿ ಯಾರ ಹಂಗೂ ಇಲ್ಲದೆ ಏಕಾಂಗಿಯಾಗಿ ಅಸಹಾಯಶೂರನಾಗಿ ಸಂಪ್ರದಾಯ ಪರಂಪರೆಗಳಿಗೆ ಅತೀತವಾಗಿ ನಿಲ್ಲಲಾರ. ಹಾಗೆ ಋಣವಂತನಾಗಿಯೂ ಅವನು ಯಾವ ಪ್ರಮಾಣದಲ್ಲಿ ಸ್ವವೈಶಿಷ್ಟ್ಯವನ್ನು ಪ್ರಕಟಿಸಿದ್ದಾನೆಂಬುದನ್ನು ವಿಮರ್ಶಿಸಬೇಕಾಗುತ್ತದೆ.

ವಿರೂಪಾಕ್ಷನ ಹರಿಶ್ಚಂದ್ರ ಸಾಂಗತ್ಯ ಹಿಮಾಚಲವಲ್ಲ, ಮೇರುಮಂದರವಲ್ಲ, ಕಡೆಗೊಂದು ಬೆಟ್ಟವೂ ಅಲ್ಲ; ಅದೊಂದು ಚೆಲುವಾದ ಗುಡ್ಡ. ರಾಘವಾಂಕ ಗುರು; ವಿರೂಪಾಕ್ಷ ಅವನ ಗುಡ್ಡ. ಇಷ್ಟು ಹೇಳಿದರೆ ಸಾಕು.

೫. ಇತರ ಹರಿಶ್ಚಂದ್ರ ಸಾಂಗತ್ಯಗಳು

೧

ಬೊಂಬೆಯ ಲಕ್ಕ : ಈ ಕವಿ ತನ್ನ ವಿಷಯವಾಗಿ ಏನನ್ನೂ ಕೃತಿಯಲ್ಲಿ ಹೇಳಿಕೊಂಡಿಲ್ಲ. ಬೊಂಬೆಯಾಡಿಸುವುದು ಇವನ ಕಸುಬಾಗಿತ್ತೆಂದು ಹೆಸರಿನಿಂದ ಊಹಿಸಬಹುದು. ಇವನ ಹರಿಶ್ಚಂದ್ರ ಸಾಂಗತ್ಯದಲ್ಲಿ ಐದು ಸಂಧಿಗಳೂ ೫೭೦ ಪದ್ಯಗಳೂ ಇವೆ. ಉಳಿದ ಹರಿಶ್ಚಂದ್ರ ಸಾಂಗತ್ಯಗಳಿಗೆ ಹೋಲಿಸಿದಾಗ ಬೊಂಬೆಯ ಲಕ್ಕನದೆ ಪ್ರಮಾಣದಲ್ಲಿ ಕಿರಿಯದು. ಇದು ಹರಿಶ್ಚಂದ್ರ ಸಾಂಗತ್ಯದ ಪ್ರತಿಕೃತಿಯಾಗಿದೆ; ಕವಿ ಇದರಲ್ಲಿ ಸ್ವಂತಿಕೆಯನ್ನು ಅಷ್ಟಾಗಿ ತೋರ್ಪಡಿಸಿಲ್ಲ. ರಾಘವಾಂಕನ ಕತೆಯನ್ನು ಸಾಂಗತ್ಯರೂಪದಲ್ಲಿ ಬಹುಮಟ್ಟಿಗೆ ತಪ್ಪತ್ತಾಗಿ

ಚೊಕ್ಕವಾಗಿ ಅನುವಾದಿಸಿ ತೃಪ್ತನಾಗಿದ್ದಾನೆ. "ಹರಿಶ್ಚಂದ್ರಕಾವ್ಯದಲ್ಲಿ ಬರುವ ಪದಗಳನ್ನೆ ಪಾದಗಳನ್ನೆ ಪದ್ಯಗಳನ್ನೆ ತನ್ನ ಸಾಂಗತ್ಯಕ್ಕೆ ಅಳವಡಿಸಿಕೊಂಡಿದ್ದಾನೆ"[21] ಎಂಬ ವಿಮರ್ಶೆ ಉಳಿದ ಸಾಂಗತ್ಯಕಾರರಿಗಿಂತ ಹೆಚ್ಚಾಗಿ ಬೊಂಬೆಯ ಲಕ್ಕನಿಗೆ ಅನ್ವಯಿಸುತ್ತದೆ. ಅಪುರೂಪವಾಗಿ ಅವನು ರಾಘವಾಂಕನಿಂದ ಸ್ವಲ್ಪ ಬೇರೆಯಾಗುವುದುಂಟು; ಅಂಥ ಕಡೆ ವಿರೂಪಾಕ್ಷನನ್ನು ಅನುಸರಿಸುವಂತೆ ತೋರುತ್ತದೆ. ಈ ಕವಿಯ ಪದ್ಯಗಳಲ್ಲಿ ಲಾಲಿತ್ಯ, ಲಯಸುಕರತೆ ಅಷ್ಟಾಗಿ ಸಿಕ್ಕುವುದಿಲ್ಲ.

ಬೊಂಬೆಯ ಲಕ್ಕ ಆರಂಭದಲ್ಲಿ ಶಿವ, ಗಣಪತಿ, ಶಾರದೆಯರನ್ನು ಸ್ತೋತ್ರಿಸಿ ಕಾವ್ಯವನ್ನು ಮೊದಲು ಮಾಡುತ್ತಾನೆ:

> ಶ್ರೀಮದ್ಗಂಗಾತುಂಗ ಮಕುಟಮಣಿ| ಸೋಮಾಗ್ನಿ ದಿನಮಣಿ ನೇತ್ರ
> ಶ್ಯಾಮಕಂಧರ ನಾಗ ಸುರ ಚರ್ಮಾಂಬರ | ಪ್ರೇಮದಿಂದೊಲಿದು ರಕ್ಷಿಪುದು
> ಮುರಿಗೊಂಬು ಮೊರಗಿವಿ ಮೆರೆವ ಚೆಲ್ವಧರ | ತುರುಗಿದ ಮತಿ ಮುದ್ದು ಮೊಗದ
> ಕರಿಗೊರಳನ ಮೋಹದ ರಾಣಿಯ ಕಂದ| ನೆರೆ ಜಾಣ ಸಲಹು ಸನ್ಮತಿಯ
> ಉತ್ತಮ ಹೀರಾವಳಿ ಚೆನ್ನಪದಕದ | ಕೆತ್ತಿದ ಕಡಗ ಕಂಕಣದ
> ಪುಸ್ತಕ ತಾಳ ದಂಡಿಗೆ ಚೆನ್ನಮತಿಯುಳ್ಳ | ಕರ್ತೃ ಭಾರತಿ ಸಲಹೆನ್ನ

ಗಣಪನ ಚಿತ್ರ ಚೆನ್ನಾಗಿದೆ.

ಈ ಕವಿಯಲ್ಲಿ ಬಹಳ ಮೆಚ್ಚಿಕೊಳ್ಳಬೇಕಾದ ಒಂದು ವಿರಳ ವಿಚಾರವೆಂದರೆ, ಇವನು ವೇಶ್ಯಾವಾಟಿಕೆಯ ವರ್ಣನೆಯನ್ನು ಸಂಪೂರ್ಣವಾಗಿ ವರ್ಜಿಸಿ ಪುಣ್ಯ ಕಟ್ಟಿಕೊಂಡಿದ್ದಾನೆ. ಇದು ನಿಜವಾಗಿಯೂ ದಿಟ್ಟತನ, ಔಚಿತ್ಯ ಪ್ರಜ್ಞೆಯ ನಿದರ್ಶನ. ಇಲ್ಲಿ ರಾಘವಾಂಕನಿಗೇ ಬೊಂಬೆಯ ಲಕ್ಕ ಬುದ್ಧಿ ಕಲಿಸಿದ್ದಾನೆ! ಸೂಳೆಗೇರಿ ಮುಂತಾದುವುಗಳನ್ನು ಸಂಪ್ರದಾಯಬದ್ಧವಾಗಿ ವರ್ಣಿಸುವ ಪದ್ಧತಿ ಇಂದಿನ ಅಭಿರುಚಿಗೇನೂ ಒಗ್ಗುವುದಿಲ್ಲ; ಆದರೆ ಹಿಂದೆಯೆ ಅದರ ಅನೌಚಿತ್ಯವನ್ನು ಕೆಲವರಾದರೂ ಮನಗಂಡವರಿದ್ದರು ಎಂಬುದಕ್ಕೆ ಸಾಕ್ಷಿ, ಬೊಂಬೆಯ ಲಕ್ಕ.

ರಾಜ್ಯತ್ಯಾಗ ಮಾಡಿ ಸತಿಸುತಸಚಿವರೊಡನೆ ಹೊರಟ ಹರಿಶ್ಚಂದ್ರ ತಮ್ಮನ್ನು ಕಾಡಬಂದ ಭೂತಬೇತಾಳಗಳ ಹಿಂಡನ್ನು ಧ್ವಂಸಮಾಡಿ 'ಮೃಡನಂತೆ ನಿಂದು ಬೊಬ್ಬಿಟ್ಟ' ಪ್ರಕರಣ ಮತ್ತಾವ ಕೃತಿಯಲ್ಲೂ ಬರುವುದಿಲ್ಲ. ಇದು ಬೊಂಬೆಯ ಲಕ್ಕನೆ ಹೊಸದಾಗಿ ಕಲ್ಪಿಸಿದ್ದೆಂದು ಕಾಣುತ್ತದೆ. ಹೀಗೆ ಈತನ ಸಾಂಗತ್ಯದಲ್ಲಿ ವಿಶಿಷ್ಟವೆಂದು ಎತ್ತಿ ಹೇಳಬಹುದಾದ ಉದಾಹರಣೆಗಳು ಬಹಳವಿಲ್ಲ.

---

21. ಬೊಂಬೆಯ ಲಕ್ಕನ 'ಹರಿಶ್ಚಂದ್ರ ಸಾಂಗತ್ಯ' (ಸಂ: ಎನ್. ಬಸವಾರಾಧ್ಯ), ಪೀಠಿಕೆ.

೨

ಓದುವ ಗಿರಿಯ : ಈತನ ಬಗ್ಗೆ ಕೆಲವು ಸಂಗತಿಗಳು ತಿಳಿದಿವೆ. ಈತನ ತಂದೆ ಕರಿಯ ಸೋಮಪ್ಪ; ಗುರು ಕಂತೆಯ ದೇವ; ಊರು 'ಅಧಿಕಪ್ರಸ್ಥಪುರ' ದೊಡ್ಡಬಳ್ಳಾಪುರ? 'ಸಾನಂದ ಗಣೇಶ ಸಾಂಗತ್ಯ'ವೆಂಬ ಮತ್ತೊಂದು ಕೃತಿ ಓದುವ ಗಿರಿಯನಿಂದ ರಚಿತವಾಗಿದೆ.ಇವನ ಹರಿಶ್ಚಂದ್ರಸಾಂಗತ್ಯದಲ್ಲಿ ೧೨ ಸಂಧಿಗಳೂ ೧೪೦೦ ಪದ್ಯಗಳೂ ಇವೆ; ಈ ಬಾಹುಳ್ಯವನ್ನು ನೋಡಿದಾಗ ಈ ಕವಿ ವರ್ಣನಾಲೋಲನೆಂದು ತೋರುತ್ತದೆ.[22]

ಓದುವ ಗಿರಿಯ ಈ ಕೃತಿಯಲ್ಲಿ ಮೊದಲು ಮಲ್ಲೇಶನನ್ನೂ ಬಾಣ ಮಯೂರಾದಿ ಕವಿಗಳನ್ನೂ ವಂದಿಸುತ್ತಾನೆ:

ಬಾಲೇಂದು ಜೂಟ ಭಸ್ಮಾಂಗವಿಲೇಪನೆ | ಕಾಲಕಂಧರ ಶೂಲಪಾಣಿ
ಮೂಲೋಕ ಪಾಲಕ ಮುನಿಜನಹೃದ್ಯ ಕ | ಪಾಲಿ ಪಾಲಿಪುದು ಮಲ್ಲೇಶ
ಬಾಣ ಮಯೂರನುದ್ಭಟ ಕಾಳಿದಾಸನು | ಜಾಣ ಹಂಪೆಯ ಪರೀಶ್ವರನ
ಮಾಣದೆ ಮಲುಹಣೇಶ್ವರ ರಾಘವಾಂಕನ | ಕೇಣವಿಲ್ಲದೆ ಬಲಗೊಂಬೆ

ಪರಮೇಶ್ವರಿ, ವಿಘ್ನೇಶ, ವೀರಭದ್ರ, ಬಸವ (ನಂದಿ), ವಾಣಿ ಮುಂತಾದವರನ್ನು ಇವನು ಸ್ಮರಿಸಿದ್ದಾನೆ. ಅನಂತರ ಕವಿಕಾವ್ಯ ಪ್ರಶಂಸೆಯಿದೆ.

೩

ಹಲಗ : ಈ ಕವಿ ತನ್ನ ಪರಿಚಯವನ್ನು ತಕ್ಕಮಟ್ಟಿಗೆ ಕೃತಿಯಲ್ಲಿ ಮಾಡಿಕೊಟ್ಟಿದ್ದಾನೆ; ತಾನು ಗುಮ್ಮಳಾಪುರದ ತೋಪಿನ ವೀರಗಣಾಚಾರಿಯ ಪುತ್ರನೆಂದು ತಿಳಿಸಿದ್ದಾನೆ. ಈತ ಬಹಳ ನಿಷ್ಠಾವಂತನಾದ ವೀರಶೈವನೆಂಬುದು ಕಾವ್ಯದಲ್ಲಿ ಸುವ್ಯಕ್ತವಾಗುತ್ತದೆ; ಶಿವಾಧಿಕ್ಯವರ್ಣನೆಗೂ ಬ್ರಾಹ್ಮಣನಿಂದೆಗೂ ಅಲ್ಲಲ್ಲಿ ಆಸ್ಪದ ಕಲ್ಪಿಸಿಕೊಂಡಿದ್ದಾನೆ.

ಹಲಗನ ಹರಿಶ್ಚಂದ್ರಸಾಂಗತ್ಯದಲ್ಲಿ ಎಂಟು ಸಂಧಿಗಳೂ ೧೦೧೩ ಪದ್ಯಗಳೂ ಇರುವುದಾಗಿ ಕವಿಚರಿತೆಕಾರರು ಸೂಚಿಸುತ್ತಾರೆ.[23]

ಹಲಗ ಕಾವ್ಯಾದಿಯಲ್ಲಿ ಶಂಕರನನ್ನೂ ಸರಸ್ವತಿಯನ್ನೂ ಪ್ರಾರ್ಥಿಸುತ್ತಾನೆ:

ಶ್ರೀಗಿರಿಜೇಶ ಶಂಕರ ಸುಪ್ರಕಾಶನೆ| ಭಾಗೀರಥಿಯರ ವರನೆ
ಯೋಗಗಳಧಿನಾಥ ಗೋರಾಜ ಚಾರುತ | ರಾಗದಿ ಸಲಹು ಶಂಕರನೆ

---

22. ಓದುವ ಗಿರಿಯನ ಸಾಂಗತ್ಯ ನನಗೆ ನೋಡಲು ಸಿಕ್ಕಿಲ್ಲವಾದ್ದರಿಂದ ಅದರ ಬಗೆಗೆ ಏನನ್ನೂ ಹೇಳುವಂತಿಲ್ಲ. ಇಲ್ಲಿ ಎತ್ತಿಕೊಟ್ಟಿರುವ ಪದ್ಯಗಳು ಮದ್ರಾಸಿನ ಪ್ರಾಚ್ಯಕೋಶಾಗಾರದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಿಂದ (ಸಂಪುಟ ೬, ಕ್ರಮಸಂಖ್ಯೆ ೧೧೯೯) ತೆಗೆದುಕೊಂಡವು.

23. ನಾನು ನೋಡಿರುವ ಮೈಸೂರು ಪ್ರಾಚ್ಯ ಸಂಶೋಧನಾಲಯದ ಕೆ. ಬಿ. ೨೬೬ನೆಯ ಹಸ್ತಪ್ರತಿಯಲ್ಲಿ ೭ ಸಂಧಿಗಳಿವೆ; ವಾಸ್ತವವಾಗಿ. ಇವುಗಳಲ್ಲಿ ಐದು ಸಂಧಿಗಳು ಮತ್ತು ಆರನೆಯ ಸಂಧಿಯ ೨೫

ಗತಿಯೆ ಚೌಷಷ್ಟಿ ವಿದ್ಯಂಗಳ ನಾನಾ | ಮತಿಯೆ ತಪಗಳಾಕೃತಿಯೆ
ಸ್ತುತಿಯೆ ಅಗಣಿತದ ಶ್ರುತಿಯೆ ವಿಪ್ರರ ಸರ| ಸ್ವತಿಯೆ ರಕ್ಷಿಸು ವರವಿತ್ತು[24]

ಬಳಿಕ ವಿನಾಯಕ ಷಣ್ಮುಖ ನಂದೀಶರನ್ನು ನೆನೆದು, ಶಿವಭಕ್ತರ ಒಂದು ದೊಡ್ಡ ಪಟ್ಟಿಯನ್ನೆ ಕೊಡುತ್ತಾನೆ. ಅವನು ಸ್ಮರಿಸುವ ಶರಣರಿವರು: 'ಬಸವರಾಜಯ್ಯ, ಮಡಿವಾಳಯ್ಯ, ಚನ್ನಬಸವ, ದಸಡಿಯ ದೇವ, ಶಂಕರ, ಬಾಣ, ಮಯೂರ, ಕಾಳಿದಾಸ, ಹರಿದೇವ, ಉದ್ಭಟ, ಶಂಕರದಾಸಯ್ಯ, ಸುಂಕದ ಬಂಕಣ್ಣ, ಲೆಂಕೆ ಮಂಚಣ್ಣ, ಕಲಕೇತ, ಏಣಾಧಿನಾಥ, ಕಕ್ಕಯ್ಯ, ಚಿಕ್ಕಯ್ಯ, ರಕ್ಕಸ ಬ್ರಹ್ಮಯ್ಯ, ಆದಯ್ಯ, ಚನ್ನಯ್ಯ, ಹೊನ್ನಯ್ಯ, ಕಿನ್ನರಿ ಬ್ರಹ್ಮಯ್ಯ. ಸಿದ್ಧರಾಮ, ನನ್ನಯ್ಯ, ಸಿಂಧುಬಲ್ಲಾಳ, ಮಳೆಯ ರಾಜ. 'ಈ ಶಿವಶರಣರ ಕೃಪೆಯಿಂದ' ತಾನು 'ಶಿವಭಕ್ತ ಹರಿಶ್ಚಂದ್ರನೃಪನ ನವಕಾವ್ಯ'ವನ್ನು ರಚಿಸಿದ್ದೇನೆಂದು ಹೇಳುತ್ತಾನೆ, ಹಲಗ.

ಈ ಕವಿಯ ವಿನಯ ಅತಿಶಯವಾಗಿದೆ. ತಾನು ಚಿಕ್ಕವನೆಂದೂ ತನ್ನ ಕೃತಿಯಲ್ಲಿ ತಪ್ಪುಗಳಿರಬಹುದೆಂದೂ ಬಲ್ಲವರು ತಿದ್ದಬೇಕೆಂದೂ ನಿವೇದಿಸುತ್ತಾನೆ:

ಕಣ್ಣು ಮೂರುಳ್ಳವ ಹರಿಶ್ಚಂದ್ರಗೊಲಿದುದ | ಬಣ್ಣಿಸುವೆನು ಇಳೆಯೊಳಗೆ
ಕಣ್ಣು ಮೂರುಳ್ಳವನ ಶರಣರಾಲಿಸಿ ನಿಮ್ಮ | ಸಣ್ಣವ ಪೇಳಿದ ಕೃತಿಯ
ಬಲ್ಲವನಾಗಿ ಗರ್ವದಿ ಪೇಳಿದುದಲ್ಲ | ಸೊಲ್ಲಲಿ ತಪ್ಪಿರೆ ಕಂಡು
ಖುಲ್ಲತನದಿ ತಪ್ಪ ತಿದ್ದದೆ ಹೋದರೆ | ಬಲ್ಲತನಕೆ ಹಾನಿಯಹುದು
ತಪ್ಪದೆ ಪೇಳ್ದ ಕೃತಿಯಲೊಪ್ಪುತಪ್ಪಿರೆ | ತಪ್ಪು ತಿದ್ದಿದ ಪುರುಷರಿಗೆ
ಸರ್ಪಭೂಷಣ ತನ್ನ ಪದವಿಯ ಕೊಡುವನು | ಕಪ್ಪುಗೊರಳನೊಪ್ಪುವನು

ಪದ್ಯಗಳು ಹಲಗನವು. ಮುಂದಿನ ಭಾಗವೆಲ್ಲ ರಾಮರಸವಿರೂಪಾಕ್ಷನ ಸಾಂಗತ್ಯವು. ಎಂದರೆ ಆರನೆಯ ಸಂಧಿಯ ೧೨ ಪದ್ಯಗಳು ಮತ್ತು ಏಳನೆಯ ಸಂಧಿಯ ೧೬೬ ಪದ್ಯಗಳು ವಿರೂಪಾಕ್ಷನವು. ಕಡೆಯಲ್ಲಿ ಮತ್ತೆ ಹಲಗನ ೬೭ ಪದ್ಯಗಳಿವೆ. ಈ ಹಸ್ತಪ್ರತಿ ಹಲಗನಿಂದ ಆರಂಭಿಸಿ, ನಡುವೆ ವಿರೂಪಾಕ್ಷನನ್ನು ಆಶ್ರಯಿಸಿ, ಹಲಗನಿಂದಲೆ ಮುಕ್ತಾಯವಾಗುತ್ತದೆ. ಇದರ ಅಂತ್ಯದಲ್ಲಿ 'ಸಂಧಿ ೭ಕ್ಕಂ ಪದ ೧೦೦೧ಕ್ಕಂ ಮಂಗಳ ಮಹಾಶ್ರೀ' ಎಂದಿರುವುದು ಸರಿಯಲ್ಲ; ಇದು ಹಲಗನ ಕೃತಿಯ ಪ್ರಮಾಣವನ್ನು ಖಚಿತವಾಗಿ ಹೇಳುವುದಿಲ್ಲ. ಈ ಮಾತೂ 'ಮತ್ತಿಲ್ಲಿಗೇಳನೆ ಸಂಧಿ' ಎಂದು ಪದ್ಯದಲ್ಲೇ ಹೇಳಿರುವುದೂ ಪ್ರತಿಕಾರನ ಕೈವಾಡವಾಗಿರಬೇಕು. ಹಲಗ, ವಿರೂಪಾಕ್ಷ ಇಬ್ಬರೂ ಸೇರಿರುವ ಈ ಹಸ್ತಪ್ರತಿಯನ್ನು ಮೈಸೂರಿನ ಪ್ರಾಚ್ಯಸಂಶೋಧನಾಲಯದ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿ (ಸಂಪುಟ-೪, ಪು. ೫೧೫) ಹಲಗನೊಬ್ಬನ ಹೆಸರಿನಲ್ಲಿ ಕೊಟ್ಟಿರುವುದು ತಪ್ಪು ತಿಳಿವಳಿಕೆಗೆ ಕಾರಣವಾಗುತ್ತದೆ. ಪ್ರಕೃತ, ಹಲಗನ ಐದೂವರೆ ಸಂಧಿಗಳನ್ನಷ್ಟೆ ಇಲ್ಲಿ ನೋಡುವುದು ಶಕ್ಯ.

24. ವೀರಶೈವನಾದ ಹಲಗನಿಗೆ ಸರಸ್ವತಿಯನ್ನು ಸ್ತುತಿಸುವುದಕ್ಕೆ ಸ್ವಲ್ಪ ಸಂಕೋಚವೆಂದು ತೋರುತ್ತದೆ. ಆದರೆ ವಿದ್ಯಾಧಿದೇವತೆಯನ್ನು ಸ್ಮರಿಸದಿರುವಂತಿಲ್ಲ. ಎಂತಲೇ 'ವಿಪ್ರರ ಸರಸ್ವತಿಯೆ' ಎಂದು ಸಂಬೋಧಿಸಿ ಪಾರಾಗಿರಬಹುದು. 'ವಿಪ್ರ' ಶಬ್ದಕ್ಕೆ ವಿಶಾಲವಾದ ಅರ್ಥ 'ವಿಪ್ರಾ ಬಹುಧಾ ವದಂತಿ' ಎನ್ನುವಲ್ಲಿದೆ; ಆದರೆ ಈಚೆಗೆ ಅದು ಬ್ರಾಹ್ಮಣ ಎಂಬರ್ಥವಲ್ಲೆ ಸಾಮಾನ್ಯವಾಗಿ ಬಳಕೆಯಾಗುವುದು.

ತಪ್ಪನ್ನು ತಿದ್ದಿದವರಿಗೆ ಶಿವ ಒಲಿಯುತ್ತಾನಂತೆ. 'ಕಪ್ಪುಗೊರಳ' ಎಂಬ ನುಡಿ ಅರ್ಥವತ್ತಾಗಿದೆ. ಶಿವನ ಕೊರಳಿನಲ್ಲಿ ಕಳಂಕವಿದೆ; ಅಂಥ ಸರ್ವೇಶ್ವರನಲ್ಲೂ ದೋಷವಿರುವುದಾದರೆ ಉಳಿದವರು ನಿರ್ದೋಷಿಗಳು ಹೇಗಾದಾರು? ದೋಷಗಳಿರುತ್ತವೆ; ತಿಳಿದವರು ಸರಿಪಡಿಸಬೇಕಷ್ಟೆ.

ಲೋಕದಲ್ಲಿ ಸರ್ವಜ್ಞರು ಯಾರೂ ಇಲ್ಲ, ಸರ್ವ-ಅಜ್ಞರೂ ಇಲ್ಲ. ಇದನ್ನರಿಯದ ದೋಷಾನ್ವೇಷಕರನ್ನು ಹಲಗ ಮಾರ್ಮಿಕವಾಗಿ ವಿಡಂಬಿಸುತ್ತಾನೆ:

ಎಲ್ಲವ ಬಲ್ಲವರಿಲ್ಲ ಈ ಧರೆಯೊಳು | ಎಲ್ಲವ ಅರಿಯದರಿಲ್ಲ
ಸೊಲ್ಲುಸೊಲ್ಲಿಗೆ ತಪ್ಪ ಹಿಡಿವ ಖೂಳರ ಬಿಟ್ಟು | ಬಲ್ಲ ಜಾಣರಿಗೆರಗುವೆನು
ಮೇಗಣ ರವಿಯು ಗೂಗೆ ನವಿಲು ಕೋಳಿ | ಕಾಗೆ ಕೋಗಿಲೆ ಹಳಿವಂತೆ
ಹೇಗ ಮೂಗರು ಜರಿದರೆ ಕೃತಿ ಕೆಡುವುದೆ | ಈಗ ಬಲ್ಲವರಾಲಿಪುದು

ಹಲಗನಿಗೆ ಬಹುಮಂದಿ ಪ್ರಾಕ್ಕವಿಗಳಿಗಿರುವಂತೆ ವರ್ಣನೆಯ ತಿಕ್ಕಲು ಹೆಚ್ಚು. ಕಾವ್ಯಾರಂಭದಲ್ಲಿ ಸಮುದ್ರವನ್ನೂ ರಜತಾಚಲವನ್ನೂ ನಗರವನ್ನೂ ಕೈಲಾಸದ ಶಿವಾಸ್ಥಾನವನ್ನೂ ಸಾಂಗವಾಗಿ ವರ್ಣಿಸಿದ್ದಾನೆ. ಮುಂದೆ ಚಂಡಾಲಸ್ತ್ರೀಯರ ಸಂಗೀತ ಮೊದಲಾದುವುಗಳ ವರ್ಣನೆ ವಿಸ್ತೃತವಾಗಿ ಬರುತ್ತದೆ. (ಹಲಗ ಸಂಗೀತಜ್ಞನಿರಬಹುದೆ?). ಈತ ವರ್ಣನಾಪ್ರಿಯ ನಾಗಿರುವುದಲ್ಲದೆ 'ಅಧಿಕ ಪ್ರಸಂಗಿ'ಯೂ ಹೌದು. ಹರಿಶ್ಚಂದ್ರ ಕಾವ್ಯದಲ್ಲಿಲ್ಲದ, ಅನವಶ್ಯವಾದ ಎಷ್ಟೋ ಪ್ರಸಂಗಗಳನ್ನು ಇವನು ನಿರೂಪಿಸುತ್ತಾನೆ; ಹರಿಶ್ಚಂದ್ರನ ಪೂರ್ವವೃತ್ತಾಂತ, ಮನ್ಮಥಕುಂಡಕ್ಕೆ ಸಂಬಂಧಿಸಿದ ಕಾಮದಹನಪ್ರಕರಣ ಇತ್ಯಾದಿಗಳ ವರ್ಣನೆ ಇವನ ಕಾವ್ಯದಲ್ಲುಂಟು.[25] ಹಲಗನ ಪುರವರ್ಣನೆಯ ಒಂದು ವಿಶಿಷ್ಟತೆಯೇನೆಂದರೆ, ವೇಶ್ಯಾವಾಟಿಕೆಯ ವರ್ಣನೆಯನ್ನು ಅದರಲ್ಲಿಯೆ ಅವನು ಸಮಾವೇಶಗೊಳಿಸಿದ್ದಾನೆ; ಮುಂದೆ ಅದನ್ನು ಪ್ರತ್ಯೇಕವಾಗಿ ವರ್ಣಿಸುವ ತೊಂದರೆಯಿಂದ ಬಚಾವಾಗಿದ್ದಾನೆ. ಆದರೆ ಹರಿಶ್ಚಂದ್ರ ಸೂಳೆಗೇರಿಗಳಲ್ಲಿ ತೊಳಲುವುದು ಮಾತ್ರ ತಪ್ಪಿಲ್ಲ; ನಗರ ಶೋಧನೆಯ ನೆವದಲ್ಲಿ ಅವನಿಂದ ಆ ಕೆಲಸ ಮಾಡಿಸಿದ್ದಾನೆ ಕವಿ.

ಹಲಗ ಹರಿಶ್ಚಂದ್ರಕಾವ್ಯವನ್ನು ಯಥಾರೀತಿಯಾಗಿ ನಕಲುಮಾಡದೆ, ರಾಮರಸ ವಿರೂಪಾಕ್ಷನಂತೆ ಅಲ್ಲಲ್ಲಿ ತನ್ನದೇ ಆದ ಉಕ್ತಿ ವಿಲಾಸವನ್ನು, ಯುಕ್ತಿ ಕೌಶಲಗಳನ್ನು ಸೂಸಿದ್ದಾನೆ. ಆದರೆ ಅವನ ಮಾತು ಸ್ವಲ್ಪಮಟ್ಟಿಗೆ ಒರಟು; ಸ್ವಭಾವವೆ ಹಾಗಿದ್ದಿರಬೇಕು. ಈಗ ಹಲಗನ ಸಾಂಗತ್ಯದಲ್ಲಿರುವ ರಾಘವಾಂಕಭಿನ್ನವಾದ ಅಂಶಗಳನ್ನು ಒಂದೊಂದಾಗಿ

25. 'ಹರಿಶ್ಚಂದ್ರಕಾವ್ಯ'ದಲ್ಲಿ ಗಿರಿಜಾ ವಿವಾಹ, ದಕ್ಷಾಧ್ವರ, ಕಾಮದಹನ ಮುಂತಾದ 'ಶಂಕರಲೀಲೆಗಳನು ಹಲವಿತಿಹಾಸಕಥನಮಂ ಪೇಳ್ವೆನೀ ಕಾವ್ಯದೊಳಗೆ' (೧-೩೦)ಎಂದಿದೆ. ರಾಘವಾಂಕ ಇವನ್ನೆಲ್ಲ ನಿರೂಪಿಸಬೇಕು ಎಂದು ಮೊದಲು ಉದ್ದೇಶಿಸಿರಬೇಕು; ಅನಂತರ ಅದು ಅನುಚಿತವೆಂದು ಕೈಬಿಟ್ಟಿರಬೇಕು. ಅಂತೂ ಈ ಶಿವಲೀಲೆಗಳಿಲ್ಲ ಹರಿಶ್ಚಂದ್ರಕಾವ್ಯದಲ್ಲಿಲ್ಲ. ರಾಘವಾಂಕ ಬಿಟ್ಟುದರಲ್ಲಿ ಸ್ವಲ್ಪವನ್ನಾದರೂ ತಾನೇಕೆ ವಿಸ್ತರಿಸಬಾರದೆಂದು ಹಲಗ ಆಲೋಚಿಸಿರುವುದು ಸಹಜವೇ. ಆದರೆ ಇದರಿಂದ ಕೃತಿಯ ಐಕ್ಯಕ್ಕೆ ಪೆಟ್ಟು ಬಿದ್ದಿತು.

ಗಮನಿಸಬಹುದು.

ಸಮುದ್ರವನ್ನು ಕವಿ 'ಇಂದುಧರನ ಕೂಡೆ ಗಂಗೆ ಮುನಿದು ಬಂದು ನಿಂದಂತೆ ಶರಧಿಪ್ಪೊಪ್ಪಿಹುದು' ಎಂದು ಬಣ್ಣಿಸುತ್ತಾನೆ: ಅಲ್ಲಿನ ಕೂರ್ಮಗಳ ಬಗೆಗೆ ಅವನ ಅತಿಶಯೋಕ್ತಿ ಹೃದ್ಯವಾಗಿದೆ.

ರಜತಾದ್ರಿಯ ವರ್ಣನೆಯಲ್ಲಿ ಕವಿಯ ಕಲ್ಪನೆ ಕಾಣುತ್ತದೆ: ಕಾಳಿದಾಸನ ಹಿಮಾಲಯ ವರ್ಣನೆಯನ್ನು ಸ್ಮೃತಿಗೆ ತರುತ್ತದೆ:

ಧರೆಯ ನಿರ್ಮಿಸಲೆಂದು ಸರಸಿಜಭವ ನೆಟ್ಟು | ಉರಿಸಿದ ಕರುಗಂಬದಂತೆ
ಸುರರಂದು ಶರಧಿಯ ಕಡೆವರೆ ತಂದಿಟ್ಟ | ಗಿರಿಯಂತೆ ರಜತಾದ್ರಿಯಿಹುದು

ಮನ್ಮಥನ ಮಾಹಾತ್ಮ್ಯವನ್ನು ಹಲಗ ಪರಿಣಾಮಕಾರಿಯಾಗಿ ಹೇಳುವುದು ಹೀಗೆ:

ಕರಿಕಂಠ ಶಿವನು ಕಾಮನ ಕೊಂದನೆಂಬರು | ಅರಿಯದ ಮಾನವರೆಲ್ಲ
ಹರಿಹಂಚು ಮಾಡೆಚ್ಚು ಹರಿಯಜಸುರರಿಗೆ | ಜರೆದು ಮುದ್ರೆಯ ಹಾಕಿದನು

ವೇಶ್ಯಾವಾಟಿಕೆಗೆ ಸಂಬಂಧಿಸಿದ ಕೆಲವು ಪದ್ಯಗಳು ಸ್ವಾರಸ್ಯಯುತವಾಗಿವೆ. ಗಂಟುಬಿದ್ದ ಒಬ್ಬ ಭಂಡ ಗಿರಾಕಿಯನ್ನು ಮುದಿ ಸೂಳೆಯೊಬ್ಬಳು ಚೆನ್ನಾಗಿ ಬಯ್ಯುತ್ತಾಳೆ:

ಹಣವನು ತಾ ಕೊಡ ಬರುವರ ಬರಲೀಸ| ಹೆಣದಂತೆ ಮನೆಯಿಂದ ಹೊರಡ
ಬಣಗ ಮುರುವಯೆಂದು ಬೈವುತ ಕೆಮ್ಮುತ | ಚಣಸುತ ಮುದಿಸೂಳೆಯಿಹಳು

ಆದರೆ ನಿಷ್ಠೆಯಿಂದ ಆ ವಿಟನನ್ನೊಲಿದ ಮಗಳು ತನ್ನ ತಾಯಿಗೇ ತಿರುಮಂತ್ರ ಹೇಳುತ್ತಾಳೆ:

ಎನ್ನ ವಲ್ಲಭ ಹೋಗಿ ನಾನಿನ್ನುಳಿವೆನೆ | ಕುನ್ನಿ ನೀನಾರು ತಾನಾರು
ಚನ್ನಿಗ ಹೋದರೆ ಪ್ರಾಣವ ಬಿಡುವೆನು | ಎನ್ನಲು ಬಾಯ ಮುಚ್ಚಿದಳು

ಶಿವನ ಓಲಗವನ್ನು ಚಿತ್ರಿಸುವಾಗ 'ಹಲವು ಸಾಗರವನು ಕುಡುತೆಯ ಮಾಡುವ ಚಲದಂಕ ಮುನಿಗಳಲ್ಲಿಹರು' ಎನ್ನುತ್ತಾನೆ ಕವಿ. ಇನ್ನು ಎಂತಹ ಶಕ್ತರು ಅಲ್ಲಿದ್ದಾರೆಂಬುದನ್ನು ಪ್ರಭಾವಶಾಲಿಯಾದ ರೀತಿಯಲ್ಲಿ ಹೇಳುತ್ತಾನೆ:

ಉಸುರಿಂದಲಾಕಾಶಕೆ ಹಾರಿಸುವರು | ವಸುಧೆಯ ಕುಲಗಿರಿಗಳನು
ಸಸಿರವಿಗಳ ತಾಳವ ಕುಟ್ಟೆಂಬರು | ಅಸಮಶಂಕರನೋಲಗದಿ

ವಸಿಷ್ಠವಿಶ್ವಾಮಿತ್ರರ ಕಲಹಕ್ಕೆ ನಾರದನೇ ಮೂಲವೆಂಬಂತೆ ಹಲಗನ ನಿರೂಪಣೆ.

ವಸಿಷ್ಠನ ಮಾತು ಕೇಳಿ ವಿಶ್ವಾಮಿತ್ರ ಅಲ್ಲಿಗೆ ಬಂದದ್ದು ಹೀಗೆ:

ಆ ನುಡಿಗೇಳಿ ವಿಶ್ವಾಮಿತ್ರ |ಮುನಿ| ಕೃ | ಶಾನುರೂಪದ ಚಂದವಲಿ
ಭಾನುವಿದ್ದೆಡೆಗೇರುವ ಫಣಿಯೊಲು ಬಂದ | ಜ್ಞಾನಿ ವಸಿಷ್ಠನಿದ್ದೆಡೆಗೆ

ಇಲ್ಲಿನ ಉಪಮಾನ ಔಚಿತ್ಯವಿಲ್ಲದ್ದಾಗಿ ತೋರುತ್ತದೆ. ಹರಿಶ್ಚಂದ್ರ ಏನಾದರೂ ಸತ್ಯಭ್ರಷ್ಟನಾಗುವುದಿಲ್ಲವೆಂಬುದನ್ನು ವಸಿಷ್ಠ ಹೀಗೆ ಸಾರುತ್ತಾನೆ:

ಪರುಷ ತನ್ನಯ ಗುಣಗಳನಳಿದರೆ | ಸುರತರು ಫಲವನುಳಿದರೆ

ಸುರಧೇನು ತಾನು ಗೊಡ್ಡಾದರೆ ಹರಿಶ್ಚಂದ್ರ | ಪೊಡವಿಯೊಳ್ ಸತ್ಯವ ಬಿಡನು

ವಿಶ್ವಾಮಿತ್ರ ವಸಿಷ್ಠನನ್ನು ನಿಂದಿಸುವ ಪರಿ ಮಾರ್ಮಿಕವಾಗಿದೆ, ಒರಟಾಗಿದೆ:

ಉರಗನ ಆಡಿಸಿ ಗಾರುಡಿಗನು ತನ್ನ | ಶರೀರವ ಹೊರೆವಂದದಲಿ

ಹರಿಶ್ಚಂದ್ರನ ಕೊಂಡಾಡಿ ನಿನ್ನುದರವನು | ಹೊರೆವ ವಸಿಷ್ಠ ಹೋಗೆಂದ

'ಇಷ್ಟು ನುಡಿಯ ತಾಳಿದೆನಿನ್ನು ನುಡಿದರೆ ತೊಟ್ಟು ಕಿತ್ತಿಡುವೆ ನಾಲಗೆಯ' ಎಂಬ ನುಡಿ ಕೂಡ ರೂಕ್ಷವಾಗಿದೆ, ಶಕ್ತಿವತ್ತಾಗಿದೆ. ಅವರಿಬ್ಬರ ಜಗಳ ಹೇಗೆ ಜಗದ್ಭಯಂಕರವಾಯಿತೆಂಬುದನ್ನು ಕವಿ 'ಇಬ್ಬರು ಮುನಿಗಳು ಅಬ್ಬರಿಸುತ ನಿಲೆ ಗರ್ಭದ ಶಿಶುಗಳು ನಡುಗೆ' ಎಂದು ಸೊಗಸಾಗಿ ಹೇಳುತ್ತಾನೆ. ಆಗ ನಾರದನ ನಿಲುವು ಹೇಗಿತ್ತು ಎಂಬುದರ ಚಿತ್ರ ಮೆಚ್ಚುವಂತಿದೆ:

ಉರಿವ ಕಿಚ್ಚಿಗೆ ಹುಲ್ಲುಹಾಕಿ ಕತ್ತಿಸುವಂತೆ | ಜಗಳವ ಗಂಟಿಕ್ಕಿ ಮುನಿಪ

ತಗರ ಕಾದಿಸುವಂತೆ ಇಬ್ಬರ ಕಲಿ ಮಾಡಿ | ನಗುತ ನಿಂದಿರ್ದ ನಾರದನು

ತಾನು ದೀರ್ಘಕಾಲ ದೇವೇಂದ್ರನ ಆಸ್ಥಾನಕ್ಕೆ ಬರುವುದಿಲ್ಲವೆಂದು ಕೌಶಿಕ ನುಡಿದಾಗ, ಅದಾವ ಗಹನವೆಂಬ ಅರ್ಥದಲ್ಲಿ 'ಶರಧಿಯ ತೆರೆಗೊಂದು ನೊರಜು ಹರಿವಂತೆ" ಎನ್ನುತ್ತಾನೆ ನಾರದ. ಇಂದ್ರಾಸ್ಥಾನದಲ್ಲಿ ವಿಶ್ವಾಮಿತ್ರ ಒಂದು ನೊರಜು: ಬಂದರೂ ಒಂದೆ, ಬರದಿದ್ದರೂ ಒಂದೆ. 'ಹೊಟ್ಟೆ ನೊಂದರೆ ತುರುಬ ಕೊಯ್ವವನ' ಎಂಬ ಮಾತು ರಾಘವಾಂಕನಲ್ಲಿ ಬರುತ್ತದೆ; ಅದಕ್ಕೆ ಸಂವಾದಿಯಾಗಿ ಹಲಗ 'ಎತ್ತಿಗೆ ಹುಣ್ಣಾಗೆ ಎಮ್ಮೆಗೆ ಬರೆವರೆ?' ಎಂಬ ನಾಣ್ಣುಡಿಯನ್ನು ಹಾಕಿದ್ದಾನೆ. ವಸಿಷ್ಠ ವಿಶ್ವಾಮಿತ್ರರ ಪ್ರತಿಜ್ಞೆಗೆ ಸಾಕ್ಷಿಯೇನು? ನಾರದ ಮಾಡಿದ್ದೇನು ಗೊತ್ತೆ:

ಅಂದವರಾಡಿದ ಮಾತಿಗೆ ನಾರದ | ಒಂದು ಓಲೆಯನಾಗ ಬರೆಸಿ

ಇಂದ್ರನ ಮುದ್ರೆಯ ಹಾಕಿಸಿ ಹೋದನು | ಇಂದುಧರನ ಓಲಗಕೆ

ನಾರದನ ಬುದ್ಧಿವಂತಿಕೆಗೆ ಒಳ್ಳೆಯ ನಿದರ್ಶನ! ಹಲಗ ಸಮಕಾಲೀನ ಸಮಾಜದ ನಡವಳಿಕೆಯನ್ನಿಲ್ಲಿ ಚಿತ್ರಿಸಿದ್ದಾನೆ.

ವಿಶ್ವಾಮಿತ್ರಸೃಷ್ಟ ಮೃಗಗಳ ಉಪಟಳದ ಚಿತ್ರ ಬಹಳ ಸ್ವಾಭಾವಿಕವಾಗಿದೆ:

ಬಿತ್ತಿದ ಬೀಜವ ಗೆದ್ದಲು ತಿಂಬುತವೆ | ತಲೆಯೆತ್ತಲು ಮಿಡತೆ ತಿಂಬುವವು

ಅತ್ತಿತ್ತ ವಂದರೆ ಸಸಿಗಳು ಉಳಿದಿರೆ | ಕತ್ತರಿ ನೆಲದಲ್ಲಿಯಿಹುದು

ಕಾಮದಹನ ಪ್ರಕರಣ ಈ ಕಾವ್ಯದಲ್ಲಿ ಕುತೂಹಲಕಾರಿಯಾಗಿದೆ.[26] ಶಿವ ಉಗ್ರತಪೋನಿರತನಾಗಿದ್ದಾನೆ. ತಾರಕ ಲೋಕಗಳನ್ನೆಲ್ಲ 'ಸೆರೆತುರುವಿಡಿ'ಯುತ್ತಾನೆ. ಸುರರೆಲ್ಲ ಮುಕ್ಕಣ್ಣನೆಡೆಗೆ ಹೋಗಿ ಮೊರೆಯಿಡುತ್ತಾರೆ. ಬೃಹಸ್ಪತಿ ಮದನನನ್ನು ಕರೆಸುತ್ತಾನೆ. ಅವನು ಬಂದು ಹರಿಯಜಸುರರಿಗೆ ಕೈಮುಗಿದು ನಿಲ್ಲುತ್ತಾನೆ. ತಮಗೆ ರಕ್ಷಕರು ಯಾರೆಂದು ಎಲ್ಲ ಚಿಂತಿಸುತ್ತಾರೆ. ತನ್ನ ಸಹಾಯವನ್ನು ಬಯಸುತ್ತಿದ್ದಾರೆಂದು ತಿಳಿದ ಮನ್ಮಥ ಬಿನ್ನವಿಸುತ್ತಾನೆ:

26. ಇಲ್ಲಿ ಹರಿಹರನ ಪ್ರಭಾವಕ್ಕೆ ಹಲಗ ಶರಣಾಗಿದ್ದಾನೆ.

ಪರರ ಮಕ್ಕಳ ನೀರಾಳವ ನೋಡೆಂದು | ಹರಿವ ಹೊಳೆಗೆ ನೂಕುವಂತೆ

ವಿರೂಪಾಕ್ಷನ ತಪವ ಕೆಡಿಸೆಂದು ಕಳುಹಲು | ಹರಣವನುಳಿಯಲೀಸುವನೆ

ಪ್ರಳಯಾಗ್ನಿಯನ್ನು ಕೆಡಿಸಲು ತರಗೆಲೆ ಹೋದಂತೆ ತನ್ನ ಗತಿಯಾಗುವುದೆನ್ನುತ್ತಾನೆ. ಆದರೆ ಪರಾರ್ಥಕ್ಕಾಗಿ ದೇಹತ್ಯಾಗ ಮಾಡುವುದು ಪುಣ್ಯಕರವೆಂದು ಹರಿಯುಜರು ಹೇಳುತ್ತಾರೆ:

ಪರಪುರುಷಾರ್ಥಕೆ ಶರೀರವ ಬಿಟ್ಟರೆ | ಪರಲೋಕಸಾಧನವಹುದು

ಸುರರು ಸಂತೋಷದೊಳಿದ್ದರೆ ಸಾಲದೆ | ಶರೀರವಳಿದರೇನಾಯ್ತು

ಹರಿಯೆ ತನ್ನ ಮಗನಿಗೆ ಕೈಮುಗಿದು ಬೇಡಿದಾಗ, ಅವನು ಹರ್ಷದಿಂದ ಒಡಂಬಟ್ಟು ಶಿವನ ಮೇಲೆ ದಂಡೆತ್ತಿ ಹೋಗುತ್ತಾನೆ. ಮೂಜಗ ನಡುಗುತ್ತದೆ, ತಪಸಿಗಳೆಲ್ಲ ಕೆಟ್ಟೋಡುತ್ತಾರೆ. ಬಾಗಿಲುವಾಡದಲ್ಲೆ ನಂದಿಕೇಶ್ವರ ಕಾಮನ ಬಲವನ್ನೆಲ್ಲ ಕೆದರಿಸುತ್ತಾನೆ; ಮದನ ಏಕಾಂಗಿಯಾಗಿ ಪಾರ್ವತಿಯನ್ನು ಕಂಡು 'ಇಂದೆನ್ನ ಬಲ ಹಾರಿತು, ತಾಯೆ ರಕ್ಷಿಸು' ಎಂದು ಪಾದಕ್ಕೆ ಬೀಳುತ್ತಾನೆ. ಗಿರಿಜೆ ನಂದೀಶನಿಗೆ ಮರೆಯಾಗಿ ನಿಂತು ಮನ್ಮಥನನ್ನು ಶಿವನ ತಪದೆಡೆಗೆ ಕೊಂಡೊಯ್ಯುತ್ತಾಳೆ. ಮನ್ಮಥ ಶರಪ್ರಯೋಗ ಮಾಡುತ್ತಾನೆ. ಆಗ ಶಿವ 'ಕಂಚುಮಿಂಚಾದಂತೆ ನೊಸಲ ಕಣ್ಣುರಿಯಿಂದ ಪಂಚಬಾಣನನುರುಪಿದನು'!

ಮೃಗಯೋದ್ಯುಕ್ತನಾದ ಹರಿಶ್ಚಂದ್ರನಿಗೆ ಮಂತ್ರಿ ಬೇಟೆಯ ಅನಾಹುತಗಳನ್ನು ಪೂರ್ವ ನಿದರ್ಶನಗಳಿಂದ ತಿಳಿಸುತ್ತಾನೆ; ಇದು 'ಹರಿಶ್ಚಂದ್ರ ಕಾವ್ಯ'ದಲ್ಲಿಲ್ಲ:

ದಶರಥಭೂಪತಿ ಸೌಂದರರಾಯನು| ವಸುಧಾಧಿಪತಿ ಬೇಂಟೆಗಳ

ವ್ಯಸನದಿ ಕೆಟ್ಟರು ಋಷಿಗಳ ಶಾಪದಿ | ವಸುಧಾಧಿಪತಿ ಬೇಂಟೆ ಬೇಡ

ವಿಶ್ವಾಮಿತ್ರ ಕಳುಹಿಸಿದ ಹಂದಿಯನ್ನು ಹಲಗ 'ಮೃತ್ಯುಂಜಯನ ಶಾಪದಿ ಮೂಕದಾನವ ಮರ್ತ್ಯಲೋಕಕೆ ಹಂದಿಯಾದ' ಎಂದು ಬಣ್ಣಿಸುತ್ತಾನೆ.[27] 'ಇಂದುಧರನ ಶಾಪದಿ ಹಂದಿಯೆನಲು ಕೊಂದವರಿಗೆ ಕೇಡು ಬಹುದು' ಎಂದು ಮಂತ್ರಿ ಹರಿಶ್ಚಂದ್ರನಿಗೆ ಹೇಳುತ್ತಾನೆ. ಹಂದಿಯ ಘೋರರೂಪದ ಚಿತ್ರವಿದು:

ಸಿಡಿಲ ಸಾಲಗೆಯೊ ಮಾರಿಯ ಕೈ ಕತ್ತಿಯೋ | ಅದರಿದ ಕಾರಮಿಂಚುಗಳೊ

ಪೊಡವಿಯ ವೃಕ್ಷಗಳೆನೆ ಮೈರೋಮವು | ಬಿಡದೆವೊಪ್ಪಿದುದಾ ಹಂದಿ

ಹರಿಶ್ಚಂದ್ರ ಕಂಡ ಸ್ವಪ್ನ ರಾಘವಾಂಕನಲ್ಲಿರುವುದಕ್ಕಿಂತ ತುಸು ಭಿನ್ನವಾಗಿದೆ; ಅದರ ಉತ್ತರಾರ್ಧ ವಾಚ್ಯದ ಮಟ್ಟದಲ್ಲಿಯೇ ಇದೆ:

ಕಾಳ ರಕ್ಕಸ ಬಂದೊದ್ದು ಕೊಂದೆನ್ನನು | ಹಾಳು ಬಾವಿಗೆ ನೂಕುವನು

ಬೀಳುತ ಮೊರೆಯಿಡೆ ವಿರೂಪಾಕ್ಷ ಬಂದೆನ್ನ | ತೋಳ ಪಿಡಿದು ಸೆಳೆಕೊಂಡ

ವಿಶ್ವಾಮಿತ್ರನಿಂದ ಹುಟ್ಟಿದ ಗಾಣನಾಯಕಿಯರು 'ದಿಟ್ಟ ಹರಿಶ್ಚಂದ್ರ ಸತ್ಯವ ಬಿಡದಿರೆ ತಟ್ಟನೆ ಪ್ರಾಣ ಬಿಡುವೆವು' ಎಂದು ಪ್ರತಿಜ್ಞಿಸುತ್ತಾರೆ; 'ಕುಂದ ಹೊರಿಸಿ ನಮ್ಮನೊಪ್ಪದೆ ಬಿಟ್ಟರೆ

27. ಕುಮಾರವ್ಯಾಸನ ಕಿರಾತಾರ್ಜುನೀಯ ಪ್ರಸಂಗ ಅವನ ನೆನಪಿನಲ್ಲಿದೆ.

ಮುಂದಲೆ ಮೂಗರಿಸು' ಎಂದು ಹೇಳುತ್ತಾರೆ ಕೌಶಿಕನಿಗೆ. ಅವರು 'ಉರಿವ ದೀವಿಗೆಯ ಕೆಡಿಸಲೆಂದು ಬಿರುಗಾಳಿ ಉರವಣಿಸಿಯೆ ಬಂದಂತೆ' ಹರಿಶ್ಚಂದ್ರನೆಡೆಗೆ ಬರುತ್ತಾರೆ. ಏನು ಬೇಕಾದರೂ ಬೇಡಿಯೆಂದು ದೊರೆ ನುಡಿದಾಗ, ಅವರು ರಾಘವಾಂಕನಲ್ಲಿರುವಂತೆ ಮೊದಲು ಛತ್ರವನ್ನು ಬೇಡುವುದಿಲ್ಲ, ನೇರವಾಗಿ 'ನೀಡು ಭೋಗವ' ಎಂದು ಬೇಡುತ್ತಾರೆ. ಇದು ನಿಸ್ಸಂದೇಹವಾಗಿ ಅನುಚಿತ. ಹರಿಶ್ಚಂದ್ರ ಅವರನ್ನು ಹೊಲತಿಯರೆಂದು ಜರಿದಾಗ ಅವರ ಉತ್ತರವಿದು:

ಹೊಲೆಯಿಂದ ಜನಿಸಿದ ಮಾನವರಲ್ಲದೆ | ಹೊಲೆ ನಿಲ್ಲದಾರು ಹುಟ್ಟಿದರು

ಹೊಲಸಿನೊಳಗೆ ನವಮಾಸ ಬೆಳೆದುಬಂದು | ಕುಲಕೆ ಹಾರುವರೆ ಬಲ್ಲವರು

ನಾಲ್ಕಿಂದ್ರಿಯ ಅಧಮ, ಒಂದು ಮಾತ್ರ ಉತ್ತಮವೆ ಎಂದು ಹೊಲತಿಯರು ಸವಾಲು ಹಾಕಿದಾಗ, ಹರಿಶ್ಚಂದ್ರನಾಡುವ ಮಾತು ರಾಘವಾಂಕನಲ್ಲಿರುವುದಕ್ಕಿಂತ ಇನಿತೆ ಬೇರೆಯಾಗಿದೆ: 'ಕಿಚ್ಚಿಗೆ ಬಿದ್ದರೆ ಮೈ ಬೇವುದಲ್ಲದೆ ಕಿಚ್ಚೆನೆ ಬಾಯಿ ಬೆಂದಪುದೆ'.

ಹರಿಶ್ಚಂದ್ರ ಚಂಡಾಲ ಕನ್ಯೆಯರನ್ನು ವರಿಸದಿರುವಲ್ಲಿ ಕುಲದ ಪ್ರಶ್ನೆಯೊಂದೆ ಅಲ್ಲ ಇರುವುದು; ಹರಿಶ್ಚಂದ್ರನ ಏಕಪತ್ನೀವ್ರತದ ಪ್ರಶ್ನೆಯೂ ಇದೆ. ಇದನ್ನು ರಾಘವಾಂಕ ಗಮನಿಸಲಿಲ್ಲ; ಹಲಗ ಗಮನಿಸಿ ಹರಿಶ್ಚಂದ್ರನಿಂದ ಕೌಶಿಕನ ಮುಂದೆ ಹೀಗೆ ಆಡಿಸಿದ್ದಾನೆ:

ಮತ್ತೊಂದು ಬಿನ್ನಪವನು ಕೇಳು ಮುನಿನಾಥ | ಹೆತ್ತ ತಾಯಿಗಳಿವರೆನಗೆ

ಸ್ವಸ್ತ್ರೀಯರಲ್ಲದೆ ಲೋಕದ ಹೆಣ್ಗಳು | ಹೆತ್ತ ತಾಯೆಂದು ಭಾವಿಪೆನು

ಹರಿಶ್ಚಂದ್ರ ರಾಜ್ಯದಿಂದ ನಿರ್ಗಮಿಸಿ ಸತಿಸುತಸಚಿವರೊಡನೆ ದುರ್ಗಮ ಪಥದಲ್ಲಿ ತೊಳಲಿ ಬಳಲಿ ಕಂಗೆಡುವಾಗ ವಿಶ್ವಾಮಿತ್ರ ಬಂದು ತನ್ನ ಮಕ್ಕಳನ್ನು ಮದುವೆಯಾಗುವಂತೆ ಪ್ರಲೋಭನಗೊಳಿಸುತ್ತಾನೆ. ಇದು 'ಹರಿಶ್ಚಂದ್ರಕಾವ್ಯ'ದಲ್ಲಿಲ್ಲ.

ಗ್ರಂಥಾಂತ್ಯದಲ್ಲಿ ಹಲಗ ಹರಿಶ್ಚಂದ್ರನ ಆದರ್ಶವನ್ನು ಸೂತ್ರಸದೃಶವಾಗಿ, ಸುಂದರವಾಗಿ ಉದ್ಘೋಷಿಸುತ್ತಾನೆ, 'ಸತ್ಯವೆ ಜಯವು ಅಸತ್ಯವೆ ಲಯವೆಂದು ಸತ್ಯವ ತಾನಂದು ಪಡೆದ' ಮಹಾನುಭಾವನ ಕತೆ ಪೂರ್ಣವಾಯಿತೆಂದು ಮಂಗಳ ಹಾಡುವುದರ ಮೂಲಕ.

ಗ್ರಂಥ ಋಣ

1. ರಾಘವಾಂಕವಿರಚಿತ ಹರಿಶ್ಚಂದ್ರ ಕಾವ್ಯಂ	ಸಂ: ಎನ್. ಬಸವಾರಾಧ್ಯ, ಎಸ್. ಬಸಪ್ಪ
2. ಹರಿಶ್ಚಂದ್ರಕಾವ್ಯ ಸಂಗ್ರಹ	ಸಂ. ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರೀ
3. ಬೊಂಬೆಯ ಲಕ್ಕನ ಹರಿಶ್ಚಂದ್ರ ಸಾಂಗತ್ಯ	ಸಂ : ಎನ್. ಬಸವಾರಾಧ್ಯ
4. ಬೊಂಬೆಯ ಲಕ್ಕನ ಹರಿಶ್ಚಂದ್ರ ಸಾಂಗತ್ಯ	(ಹಸ್ತಪ್ರತಿ)
5. ಹಲಗನ ಹರಿಶ್ಚಂದ್ರಸಾಂಗತ್ಯ	(ಹಸ್ತಪ್ರತಿ)
6. ದೇವೀ ಭಾಗವತ (ಸಪ್ತಮಸ್ಕಂಧ)	ಅರಮನೆಯ ಪ್ರಕಟಣೆ
7. ಸಂಸ್ಕೃತ ನಾಟಕ	ಎ. ಆರ್. ಕೃಷ್ಣಶಾಸ್ತ್ರೀ
8. ರಸೋ ವೈ ಸಃ	ಕುವೆಂಪು
9. ಪರಿಶೀಲನ	ಡಾ. ಜಿ. ಎಸ್. ಶಿವರುದ್ರಪ್ಪ
10. ಹರಿಶ್ಚಂದ್ರ	ಎಸ್. ವಿ. ರಂಗಣ್ಣ
11. ಮೈಸೂರು ಪ್ರಾಚ್ಯಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ	(ಸಂಪುಟ ೪)
12. Descriptive Catalogue of the	Kannada Manuscripts Library, Madras, Vol. VI
13. *The Story of My Experiments with Truth*	Gandhi

ರಾಮರಸ ವಿರೂಪಾಕ್ಷನ ಹರಿಶ್ಚಂದ್ರ ಸಾಂಗತ್ಯ

ಮೊದಲನೆಯ ಸಂಧಿ

ಸೂ|| ಧರಣಿಗೆ ಸತ್ಯನು ಹರಿಶ್ಚಂದ್ರನೆನುತಲಿ
ಸರಿಮುನಿಗಳು ವಾದಿಸಿದರು

ಶ್ರೀ ಮಹಾದೇವನೆ ಕಾಮ[ನ] ನಿರ್ಧೂಮ
ಧಾಮವ ಮಾಡಿದ ಶಿವನೆ
ವ್ಯೋಮಕೇಶನೆ ನಿಮ್ಮ ನಾಮವ ನೆನೆವೆನು
ಕಾಮಿತಫಲವೀವುದೆನಗೆ ೧

ಶ್ರೀವನಿತೆಯ ಕಾಂತ ತಾವರೆಗಂಗಳ
ದೇವ ಪೀತಾಂಬರಧರನೆ
ಕಾವನ ಜನಕ ರಾಜೀವನಾಭನೆ ಕೃಷ್ಣ
ಕಾವುದು ಜನ್ಮ ಜನ್ಮದಲಿ ೨

ಸರುವದಾನದಿ ಬಾಳುವರಮನೆಯೊಡೆಯನ
ತರುಣಿಯ ತ[ನುಜೆ ವಾ]ಮದಲಿ
ಧರಿಸಿದ ಹಂಪೆಯ ವರಗುರು ವಿರೂಪಾಕ್ಷ
ಕರುಣಿಸು ಮತಿಗೆ ಮಂಗಳವ ೩

ಮನದೊಳು ತನ್ನನು ನೆನೆವಲ್ಲಿ ಬಂದಿಪ್ಪ
ಚಿನುಮಯ ಹರಿಯಜರೂಪ
ನೆನೆವೆನು ದತ್ತಾತ್ರೇಯನ ಕೃತಿಯೊಳಗೊಂದು
ಕೊನೆತಪ್ಪು ನನಗಲ್ಲ ತನಗೆ ೪

ಮಣಿಮಯ ಮಕುಟವು ಕನಕದ ಪದಕವು
ಫಣಿಯ ಬಂಧನ ಜಠರದಲಿ
ಮಣಿ ಮಣಿವುತ ಸುರಗಣತತಿ ಪೂಜಿಪ
ಗಣಪತಿ ಕರುಣಿಸು ಮತಿಯ ೫

ಪರಿ ಫರಿ ಮುತ್ತಿನಾಭರಣದ ಕಿರಣವು
ಪರಿಮಳ ಕಸ್ತೂರಿ ತಿಲಕ
ಕರದೊಳು ಕಂಠವು ಬರೆವರೆ ಪುಸ್ತಕ
ಕರುಣಿಸು ಭಾರತಿ ಮತಿಯ ೬

ಜನಪತಿಯರಮನೆ ಕನಕವ ಮಾಡಿದ
ಮನವೊಲಿ[ದು] ಮಂತ್ರದಿಂದ
ಮುನಿ ಯಾಜ್ಞವಲ್ಕ್ಯನ ಘನ ಗುರುರಾಯನ
ಮನಗೊನೆಯಲಿ ಬಲಗೊಂಬೆ ೭

ವಸುಮತಿಯೊಳು ಪಂಚಋಷಿಯು ಪ್ರಥಮಶಾಖೆ
ಹೆಸರುಳ್ಳ ಶ್ರೀವತ್ಸ ಗೋತ್ರ
ಹಸನಾಗಿ ದ್ವಿಜ ರಾಮರಸ ಸುತ ವಿರೂಪಾಕ್ಷ-
ನೆಸಗಿದ ಕೃತಿಯ ಪಾಲಿಪುದು ೮

ಬಿರುದುಳ್ಳ ಸಿಂಹವು ಕರಿಬೇಂಟೆಯಾಡಲು
ಇಱುವೆಯು ಸಕ್ಕರೆಗುಟುಕ
ಹರುಷದಿ ಕೊಂಡೊಯ್ವ ತೆಱನಂತೆ ಬಲ್ಲಷ್ಟು
ಪರಿಯಲಿ ಕೃತಿಯ ಹೇಳುವೆನು ೯

ಮರುಗದ ಗಿಡವೆನ್ನ ಚರಿತೆ[ಯು] ಬಾವನ್ನ
ತರುವೆಂಬ ಕಾವ್ಯದ ಮುಂದೆ
ಬಿರುದನೆ ಕಟ್ಟುವೆ ಧರೆಯೊಳು ಹೊಗಳಿಸಿ
ಹರನೆಂಬ ನಾಮವ ಬಿಡದೆ ೧೦

ಶರಣೆಂಬೆಯಿನ್ನೊಮ್ಮೆ ಗುರು ವಿರೂಪಾಕ್ಷಗೆ
ಕರುಣಾಕರ ಪರಶಿವಗೆ
ಹರಣದಿ ಕಾಯದಿ ಹರ ನಿಮ್ಮ ನಾಮವು
ಇರಲಿಂತು ಜನ್ಮಜನ್ಮದಲಿ ೧೧

ಜನಪತಿ ಧರ್ಮಜ ವನವಾಸದೊಳು ತನ್ನ
ಮನದೊಳು ಚಿಂತಿಸುತಿರಲು
ಮುನಿಗಳ ಸಂದಣಿಯನು ಕೂಡಿ ಮಾರ್ಕಂಡೇಯ
ಮುನಿರಾಯ ಕರುಣಿಸಿ ನುಡಿದ ೧೨

ಎಲೆ ಭೂಪ ನಿನ್ನಿಂದ ಬಲುಕಷ್ಟವನು ಮಾಡಿ
ಬಳಲಿದ ಹರಿಶ್ಚಂದ್ರರಾಯ
ಕಳೆದಾಗ ರಾಜ್ಯವ ಲಲನೆಯ ಸೆಜೆಮಾಡಿ
ಕುಲಗೆಟ್ಟು [ಪುನೀತ]ನಾದ ೧೩

ಧರಣಿಗಯೋಧ್ಯಾಪುರವೆಂಬ ಪಟ್ಟಣ
ಸಿರಿವೊಸಗೆಯಲೆಸೆದಿರಲು
ತರಣಿಯ ಕುಲಕೊಬ್ಬ ಹರಿಶ್ಚಂದ್ರರಾಯನು
ಹರುಷದಿಂದಾಳುತಲಿದ್ದ ೧೪

ಸತಿ ಚಂದ್ರಮತಿಯೊಬ್ಬ ಸುತ ಲೋಹಿತ ಮಂತ್ರಿ
ಪತಿಯಾದ ಸತ್ಕೀರ್ತಿಯಿರಲು
ಅತಿನೀತಿಯಲಿ ಪ್ರಜಾಪಾಲನು ಹರಿಶ್ಚಂದ್ರ
ಕ್ಷಿತಿಯನು ಆಳುತಲಿದ್ದ ೧೫

ಇರುತಿರಲೊಂದಿನ ಇರುಳಿನೊಡ್ಡೋಲಗ
ಸುರರಾಜನ ಸಭೆಯೊಳಗೆ
ಗರುಡ ಗಂಧರ್ವರು ಸುರಮುನಿಗಳುಯೆಲ್ಲ
ನೆರೆದಿರೆ ದೇವೇಂದ್ರ ನುಡಿದ ೧೬

ಆಡಿ ತಪ್ಪದೆ ಕಾಯ ಖೋಡಿಯಿಲ್ಲದೆ ಸತ್ಯ
ಗೂಡಿ ದಾನವ ಮಾಡುವವರು
ರೂಢಿಯೊಳಗೆ ಹುಸಿಯಾಡದರಾರೆಂದು
ಆಡಲು ಕೇಳಿ ವಸಿಷ್ಠ ೧೭

ಪೊಡವಿಪ ಹರಿಶ್ಚಂದ್ರ ಬಿಡನೆಂತು ಸತ್ಯವ
ಕಡುಮೋಹದ ಶಿಷ್ಯನೆನಗೆ
ಕಡೆಮೊದಲಿಲ್ಲದ ನಡುರಾಜ್ಯವಾಳುವ
ನಡೆವಳಿಯಲಿ ಹುಸಿಯಿಲ್ಲ ೧೮

ಕೇಳುತ ಕಿಡಿಸೂಸಿ ನಾಲಗೆಯಲಿ ಕ-
ಣ್ಣಾಲಿ ಕೆಂಪಡರಿ ಘುಡುಘುಡಿಸಿ
ಖೂಳನವನ ಪ್ರತಿಪಾಲಿಸುವರೆಯೆಂದು
ಆಳಿಗೊಂಡನು ವಿಶ್ವಾಮಿತ್ರ ೧೯

ಧನವುಳ್ಳ ರಾಯನೆಂದನುಸರಿಸುವ ಬಗೆ
ಅನುವಾಯಿತನುವಾಯಿತೆನುತ
ಮನವಜ್ಜಿಯಲುವೊಂದು ಕೊನೆಯನು ಹುಸಿದರೆ
ನಿನಗೇನು ಆಣೆ ಹೇಳೆಂದ ೨೦

ಮುನಿಪ ವಸಿಷ್ಠನು ತನಗೊಂದು ಆಣೆಯ
ಮುನಿ ವಿಶ್ವಾಮಿತ್ರಗೆ ನುಡಿದ
ಜನಪತಿ ಹರಿಶ್ಚಂದ್ರ ಬಿನುಗಾಗಿ ಸತ್ಯದ
ಘನಸೀಮೆಯನು ದಾಟಿದಾಗ ೨೧

ಗುರುಲಿಂಗ ಪೂಜೆಗೆ ವರಜಪತಪಕೆಲ್ಲ
ವಿರಹಿತ ದಿಗಂಬರನಾಗಿ
ಸುರೆಯನು ತಲೆಯೋಡಿನೊಳು ತುಂಬಿ ಸುಱಿಯುತ
ಚರಿಸುವೆ ತೆಂಕಣ ದೆಸೆಗೆ ೨೨

ಎಡಬಲದೋಲಗ ಗಡಣದ ಸುರಗಣ
ನಡುಗಿದರಿಬ್ಬರಬ್ಬರಕೆ
ನುಡಿದರೆ ಶಾಪವ ಕೊಡುವರುಯೆನುತ ಕಂ-
ಗೆಡುತಲಿ ದೇವೇಂದ್ರನಿದ್ದ ೨೩

ಗಗನಕೆ ಭೂಮಿಗೆ ಜಗಳ ಮೇಳೈಸಿತು
ಹೊಗಲಿಕೆ ಠಾವಿಲ್ಲದಂತೆ
ನಗಧರ ಬ್ರಹ್ಮರ ಬಗೆಯರುಯೆನುತಲಿ
ತೆಗೆಬಗೆಯಲಿ ತಮತಮಗೆ ೨೪

ಎರಡು ಕೋಣನು ಕಾದಿದರೆ ನಡುವಣ ಗಿಡ
ಮುಱಿದೊಱಗಿದ ತೆಱನಂತೆ
ಹರಿಶ್ಚಂದ್ರ ರಾಯಗೆ ಸರಿಮುನಿಗಳು ಮೇಲು-
ವರಿದರುಯೆಂದರು ಸುರರು ೨೫

ಉರಿವ ಕೈಯಲಿ ಹುಲ್ಲ ಹಱಿದಡಕುವೆನೆಂದು
ಹರುಷದಿ ನಾರದನೆಂದ
ಹಿರಿದು ವಸಿಷ್ಠನ ಕರದೊಳು ಭಾಷೆಯ
ಕರೆದೀವುದೆಲೆ ವಿಶ್ವಾಮಿತ್ರ ೨೬

ಧರೆಯೊಳು ಹುಸಿಯದೆ ಹರಿಶ್ಚಂದ್ರಭೂಪತಿ
ಎರಡಿಲ್ಲದಲ್ಲಿ ನಡೆದಾಗ
ಅರ ದುಃಖ ಸೈರಿಸಿ ವರತಪವಿದ್ದಾನು
ವರುಷವೈವತ್ತು ಕೋಟಿಯಲಿ ೨೭

ಇದಱೊಳಗರ್ಥಕ್ಕೆ ಒದಗಿದ ಫಲವನು
ಹದುಳದಿ ನಿನಗೆ ಧಾರೆಯನು
ಮುದದಿಂದಲೆಱೆವೆನು ಮೊದಲೆ ನಿನ್ನಾತಗೆ
ಹದನನು ಹೇಳಹೋಗೆಂದ ೨೮

ತರಣಿಗೆ ಕಮಲವಲನರಳೆಂದು ಚಂದ್ರಗೆ
ಕರೆದರೆ ಬಹುದೆ ಚಕೋರ
ಶರಧಿಯ ಸಿಂಪ ಬಾಯ್ದೆಱೆವರೆ ಸ್ವಾತಿಯ
ಬಿಱುಮಳೆಗಳು ಬೀಳುವಾಗ ೨೯

ಗಿರಿ[ಯ] ಮಯೂರಗೆ ನೆಱೆ ಪಯೋಧರ ತೋಱಿ
ಧರೆಯೊಳು ಕುಣಿದಾಡಿಸುವರೆ
ಅಱುಹುವರೆ ಸತ್ಯವ ಹರಿಶ್ಚಂದ್ರರಾಯಗೆ
ಮರಳೊಮ್ಮೆ ಸತ್ಯನಾಗೆನುತ ೩೦

ದೆಸೆದೆಸೆಯೊಳು ಬ್ರಹ್ಮಋಷಿಯಾಗಬೇಕೆಂದು
ಹೊಸ ಮಾತ ಕಲಿತೆ ನೀನೆಂದ
ಹೆಸರುಳ್ಳ ಬಲು ರಾಜಋಷಿಯಾಗಿ ಈ ಮಾತ
ಉಸುರಿದೆಯೆಲೆ ವಿಶ್ವಾಮಿತ್ರ ೩೧

ಘುಡುಘುಡಿಸುತ ಕೈಯವಿಡಿದ ಕಮಂಡಲ-
ವೊಡನುಱೆ ಕುದಿಕುದಿದಾಗ
ಇಡಿದಿಹ ಮೋಡದಿ ಪೊಡವಿಗೆಯೆಱಗುವ
ಸಿಡಿಲಂತೆ ಗರ್ಜಿಸಿ ನಡೆದ ೩೨

ನೋಡು ನೋಡೆನ್ನ ಕೆಟ್ಟಾಡುವುದನೆ ಬಿಡೆ
ಹೋಗಿ ಕಾಡುವೆ ನಿನ್ನವನ
ನಾಡಿಗೆ ವ್ರತಭಂಗ ಮಾಡಿಸುವೆನು ಬಿ
ಟ್ಟೋಡಿಸುವೆನು ಹೊಲೆಯೊಳಗೆ ೩೩

ಹೇಳು ಹೇಳಿನ್ನು ಭೂಪಾಲಗೆ ಹೋಗಿಯೆ
ಭಾಳಾಕ್ಷನ ಪಾದದಾಣೆ
ಓಲಗ ಶಾಲೆಯ ಘೀಳಿಡಿಸುತ ಮುನಿ
ಪಾಲನು ಗರ್ಜಿಸಿ ನಡೆದ ೩೪

ಹರೆದುದೊಡ್ಡೋಲಗ ಸುರರಾಜ ತನ್ನಯ
ಅರಮನೆಯನು ಹೊಕ್ಕನಾಗ
ಧರೆಗಿಳಿದರುಯಿತ್ತ ಸರಿ ಮುನಿಗಳು ತಮ್ಮ
ವರ ತಪೋವನದಾಶ್ರಮಕೆ ೩೫

ಎರಡನೆಯ ಸಂಧಿ

ಸೂ|| ವನದೊಳು ಭೂಪತಿ ಜನ ಮೊಱೆಯಿಡಲಿಕೆ
ಮುನಿಮೃಗದ ದೂರ ಕೇಳ್ದ

ರಾಯನ ನಿಜನೋಡಲಾಯವ ನೆನೆದೊಂದು-
ಪಾಯದಲಾ ವಿಶ್ವಾಮಿತ್ರ
ಕಾಯದಿ ಕಪಟದ ದಾಯವನಱಿಯದ
ಜೋಯಿಸ ಮುನಿಗಳ ಕರೆದ ೧

ಹರಿಶ್ಚಂದ್ರರಾಯಗೆ ವಿರಚಿಸಿ ನೀತಿಯ
ವರಮಂತ್ರಬೋಧೆಯ ತುಂಬಿ
ಹಿರಿದು ಸುವರ್ಣದ ವರ ಯಾಗವನು ಹೇಳಿ
ಭರದಲಿ ಮಾಡಿಸಿಯೆಂದ ೨

ಕೇಳುತ ಹೋಗಿ ಭೂ[ಪಾಲ]ನ ಕಾಣಲು
ಕಾಲಿಗೆ ಬಂದೆಱಗಿದನು
ಕೇಳಿದನಿಲ್ಲಿಗೆ ಪಾಲಿಸಿ ಬಂದುದ
ಹೇಳುವುದೆಲೆ ಮುನಿನಿಕರ ೩

ಆಗದ ಮಾತನು ಆಗಲೆ ಹೇಳಿದ-
ರಾಗುವುದೆ ಎಂದರವರು
ಬೇಗದಿ ಹೇಳಲು ಈಗಿಂತು ನಡೆಸುವೆ
ಶ್ರೀಗುರು ಪಾದದಾಣೆಂದ ೪

ಒಲಿದು ಸುವರ್ಣದ ಪ್ರಳಯದ ಯಾಗವ
ಇಳೆಯೊಳು ಮಾಡುವರಿಲ್ಲ
ನೆಲ[ದಿ]ಯಿಲ್ಲದ ಫಲ ಗಳಿಸುವ ರಾಯರ
ಬೆಳವಿಗೆ ನೀನೊಬ್ಬನಿರಲು ೫

ಕರೆದನು ಪರಿಪರಿ ಪರಿಣತ ಮುನಿಗಳ
ಚರಣವ ತೊಳೆತೊಳೆದೆಱಗಿ
ಕರದೊಳು ಧಾರೆಯನೆಱೆದನು ದಣಿಯಲು
ಸುರಿದನು ಹೊಸ ಹೊನ್ನ ಮಳೆಯ ೬

ಅರಮನೆಯೊಳಗಿನ ಗುರು ಹೋದ ಹೊತ್ತಿನ
ತೆಱನಱಿದನು ವಿಶ್ವಾಮಿತ್ರ
ಬರಲರ್ಘ್ಯಪಾದ್ಯದಿ ದರುಶನವನು ಮಾಡಿ
ಧರಣೀಶ ಬೇಡು ಬೇಡೆಂದ ೭

ಪಟ್ಟದಾನೆಯನು ಮೆಟ್ಟಿಯೆ ಕವಡೆಯ
ನೆಟ್ಟನೆ ಮಿಡಿದುದ್ದ ಧನವ
ಕೊಟ್ಟರೆ ಸಾಕೆನ್ನಲೊಟ್ಟಿಸುತಿರೆ ಹೊನ್ನ
ಬೆಟ್ಟವ ಬೇಡಿದಂತಾಗ ೮

ಕಂಡಾಗ ಕೌಶಿಕ [ಲಂ]ಡತನದ ಹೊನ್ನು
ಭಂಡಾರದೊಳಗಿರಲೆನುತ
ಅಂಡಲೆಯಲು ಬಿಜಗೊಂಡಲ್ಲದಿರೆನೆಂದು-
ದ್ದಂಡ ನಡೆದನಾಶ್ರಮಕೆ ೯

ಇನ್ನೇನ ಮಾಡುವೆಯಿನ್ನೊಂದು ಬುದ್ಧಿಯ
ಬೆನ್ನಲಿ ಕಾಣಬೇಕೆನುತ
ತನ್ನೊಳು ಮಂತ್ರಿಸಿದುನ್ನತ ಜಲವನು
ಚೆನ್ನಾಗಿ ಧರೆಯೊಳು ತಳಿದ ೧೦

ದಿಕ್ಕು ದಿಕ್ಕಿಗೆಲ್ಲ ಕಕ್ಕಸ ಮೃಗಪಕ್ಷಿ
ಚಕ್ಕಚಕ್ಕನೆ ಜಲಚರವು
ಸೊಕ್ಕುತ ದೆಸೆದೆಸೆಗೊಕ್ಕಲಿಕ್ಕಲು ಉಬ್ಬಿ
ನಕ್ಕು ನೋಡಿದ ವಿಶ್ವಾಮಿತ್ರ ೧೧

ಇಂತಾಗುತಿರಲು ವಸಂತನ ಋತುಕಾಲ
ಬಂತಾಗ ಬನವೆಲ್ಲ ತಳಿತು
ಕಂತು ಪಾಳಯ ಬಿಟ್ಟನಂತ ಸೇನೆಯೊಳಾಗ
ನಿಂತುದೋಲಗ ಬನದೊಳಗೆ ೧೨

ಮಾಗಿಯ ಮದವಾಱಿ ಕೋಗಿಲೆ ರಾಗವು
ಕೂಗುವ ಮಱಿದುಂಬಿ ಕಹಳೆ
ಸೋಗೆಯ ನವಿಲಾಟವಾಗಲೆ ಹೊಗಳುತ
ಮೂಗಿನ ಗಿಳಿ ಪಾರಿವಾಳ ೧೩

ವನಪಾಲ ಕಾಣುತ ವಿನಯದಿ ನಡೆತಂದು
ಜನಪತಿ ಹರಿಶ್ಚಂದ್ರನಡಿಗೆ
ವನಜವಶೋಕೆಯ ನನೆಗಳ ಕಾಣಿಕೆ-
ಯನುಯಿತ್ತು ಕರ ಮುಗಿದೆಂದ ೧೪

ಕಾವನೊಡ್ಡೋಲಗ ತೀವಿತು ವನದೊಳು
ಕಾವುದು ವಸಂತಋತುವ
ಭಾವೆಯರೊಡಗೂಡಿ ನೀವೀಗ ಬಹುದೆಂದು
ಆ ವನಪಾಲ ಹೇಳಿದನು ೧೫

ಕೇಳುತ ಉಡುಗೊಜೆ ವೀಳಯವನು ಕೊಟ್ಟು
ಪಾಲಿಸಿ ಕಳುಹಿದನಾಗ
ಲಾಲಿಸಿ ಕೆಲಬಲದಾಳನು ಓಲಗ
ಶಾಲೆಗೆ ಸನ್ನೆ ಮಾಡಿದನು ೧೬

ಏಳೆಂಟು ಕೋಟಿ ನಿಸ್ಸಾಳ ತಂಬಟ ಭೇರಿ
ಸಾಲಿಗೆ ಶತಕೋಟಿ ಬಡಿಯೆ
ಸೂಳೈಸಿದವು ಹೆಗ್ಗಾಳೆ ಭೋರಿಡುತಲಿ
ಮೇಲೆ ಎಂಬತ್ತು ಕೋಟಿಗಳು ೧೭

ಚರಣದ ಗತಿ ಮೂವತ್ತೆರಡು ಖರ್ವವು
ಕರದೊಳು ಖಂಡೆಯದವರು
ಸರಿತೂಕ ರಾಯರು ದೊರೆಗಳು ಮನ್ನೆಯ
ಹಿರಿಯರು ನೆರೆಯಿತು ಖರ್ವ ೧೮

ವಾರಣ ಘಟೆಗಳು ಮೂಱು ಸಾವಿರದಿಂದ
ಮೀಱಿತು ಎಂಬತ್ತು ಕೋಟಿ
ಧಾರುಣಿ ಸಾಲದೆ ಮೇರುವೆಯನು ಮೆಟ್ಟಿ
ಹಾಱುವ ತೇಜಿಗಳೆಸೆಯೆ ೧೯

ಒಡೆಯನ ಪಟ್ಟದ ಮಡದಿ ದಂಡಿಗೆಯೇಱಿ
ನಡೆತರಲಾ ಚಂದ್ರಮತಿಯು
ಎಡಬಲದಂದಣ ಬಿಡದೆಂಟು ಸಾವಿರ
ನಡೆಗಾಲ ನಾರಿಯರಾಗ ೨೦

ತರತರದಲಿ ಛತ್ರ ನೆಱೆ ಕುಂಚ ಕಾಳಂಜಿ
ಪರಿಚರ ಹೊಂಗಿಂಡಿಯವರು
ಕರದೊಳು ಕತ್ತಿಯ ಹೊಱೆವಳಯದಿ ಕಾವ
ತರುಣಿಯರೆಂಬತ್ತು ಕೋಟಿ ೨೦

ಸಾಲದು ಭೂಮಿಯು ತಾಳದು ನಾನೇನ
ಹೇಳುವೆ ಶಿವ ಮಹಾದೇವ
ಮೇಲಾದ ಸತ್ತಿಗೆ ಸಾಲುಸಾಲಿನಲಿ ಭೂ
ಪಾಲನು ನಡೆತಂದ ವನಕೆ ೨೧

ವಿರಹಿಗಳನು ಕಾವನಿಱಿವ ಕಠಾರಿಯೊ
ಕೊಱೆದೊಟ್ಟುವ ಗರಗಸವೊ
ಪರಿಮಳಗಳ ಸುತ್ತ ಸುರುಳಿಸಿ ತಱಿಬಿದ
ತೆಱನಂತೆ ಕೇದಗೆವನವು ೨೨

ಧರಣಿಯ ಮೇಲಣ ತರುಣಿಯರೆಲ್ಲರು
ಪುರುಷರ ಪ್ರಣಯದೋಲೆಗಳ
ಪರಬ್ರಹ್ಮಗಿದಿರಾಗಿ ಬರೆಸಲು ನಿಂದಂತೆ
ನೆಱೆದುವು ಬಲು ತಾಳಮರನು ೨೪

ಭಾಳಾಕ್ಷಗೆಂದು ಪಾತಾಳದಿ ಅಮೃತದ
ಕೋಳನೆ ಕೊಂಡು ವೇಗದಲಿ
ಮೇಲಣ ಲೋಕಕ್ಕೆ ದಾಳಿಯನಿಡುವಂತೆ
ಸಾಲಿಟ್ಟು ತೆಂಗುಗಳೆಸೆಯೆ ೨೫

ಆಲ ನೇಱಿಲು ಮಾದಲವು ಹಲಸಿನ
ದಾಳಿಂಬ ನಿಂಬೆಯ ಮರನು
ಈಳೆ ಕಿತ್ತೀಳೆಯು ಬಾಳೆಯ ಬನವಿದೆ
ಸಾಲದ ಮಾವಿನ ಮರನು ೨೬

ಅಗರು ಚಂದನವನ ಬಗೆಬಗೆಯ ಶ್ರೀಗಂಧ
ಸೊಗಸುವಶೋಕೆ ತಾರೆಗಳು
ಮಿಗೆ ರಾಯನೆಲ್ಲಿಯು ಒಗುಮಿಗೆ ಖರ್ಜೂರ
ಅಗತಿ ಬೆಲ್ಲವತ್ತಗಳು ೨೭

ಹಣ್ಣಿನ ಗೊನೆ ದೋರೆವಣ್ಣಿನ ಗೊನೆಗಳು
ಬಣ್ಣದ ಹೂವಿನ ಗೊನೆಯು
ಬಣ್ಣಿಪ ಕಾಯ್‌ಗೊನೆ ಉನ್ನತವಾಗುತ
ಚೆನ್ನಾಗಿ ಪರಿಪರಿ ಮರಕೆ ೨೮

ಸುರರು ಹೂಮಳೆಯನು ಕರೆದರೊ ಮೇಲಿಂದ
ಸುರಿದವೊ ಮುಗಿಲ ತಾರೆಗಳು
ಧರಣಿ ತೊಂಡಿಲ ಕಟ್ಟಿ ಮೆರೆದಳೊಯೆಂಬಂತೆ
ಪರಿಮಳದೊಱ[ತೆ] ಹೂಗಿಡವು ೨೯

ಮರುಗ ಮಲ್ಲಿಗೆ ಜಾಜಿ ಸುರಹೊನ್ನೆ ಸಂಪಗೆ
ಇರವಂತಿಗೆ ಸೇವಂತಿಗೆಯು
ಅರಳಿದ ಪಾದರಿ ಬಿರಿದ ದಾಸ್ವಾಳವು
ಕಱಿಯ ಮಲ್ಲಿಗೆ ಕಣಿಗಿಲೆಯು ೩೦

ಈ ವನದೊಳಗಿಂತು ಭಾವೆಯರಿಲ್ಲದೆ
ಜೀವಿಪ ನಿರ್ಮೋಹಿಯೆದೆಗೆ
ತಾವರೆ ಕೈರವ ಮಾವು ಮಲ್ಲಿಗೆ ಬಾಣ
ತೀವಿದಶೋಕೆಗಾಯಿಗಳು ೩೧

ಗಿಳಿಗಳು ಈ ವನದಳಿಗಳು ಕಱಿಯ ಕೋ-
ಗಿಲೆಗಳು ಚ[ಳೆ]ಯ ದಾಳಿಗಳು
ಕಲಿವೀರ ಕಾವ ಕಗ್ಗೊಲೆಗಿಕ್ಕಿ ಕೊಲಿಸುವ
ಲಲನೆಯರನು ಬಿಟ್ಟರವರು ೩೨

ವನವನು ಹೊಗಳುತ ಜನಪತಿ ಬರುತಿರೆ
ವನಿತೆಯರಂದಣವಿಳಿದು
ದಿನಕರನಱಿಯದ ಘನಮಹಾಕತ್ತಲೆ
ವನದೊಳಗಾಡುತ ಬರಲು ೩೩

ನಸುನಗೆ ಬೆಳದಿಂಗಳೆಸೆಯೆ ಚಕೋರವು
ಪಸರಿಸಿ ಬಾಯ್ಗಳ ತೆರೆದು
ಎಸೆವ ಹೊಂದೊಡಿಗೆ ಹೊಂಬಿಸಿಲಂತೆ ಹೊಳೆಯಲು
ನಸುನಾಚಿ ಕಡೆಗೆ ಸಾರಿದುವು. ೩೪

ಪಾಳಯ ಬಿಟ್ಟು ಭೂಪಾಲನು ಕಬ್ಬಿನ
ಕೋಲಿನ ಮಂಟಪದೊಳಗೆ
ಮೇಲಾದ ಹೂವಿನ ಮಾಲೆಯ ಪಳಿ ಪಟ್ಟಾ-
ವಳಿಗಳ ಮೇಲುಕಟ್ಟುಗಳು ೩೫

ಹೊಳೆವತಿ ಹೊಸ ಹೊನ್ನ ಕಳಸವು ಕನ್ನಡಿ
ಕೆಲ ಬಲದಲಿ ಬಿಂಗ ಬಿಗಿದು
ತಳಿಗೆಯ ತೋರಣ ಚಳೆಯದ ಮಂಟಪ-
ದೊಳು ಚಿತ್ರಶಾಲೆಗಳೆಸೆಯೆ ೩೬

ಕೊಳನೊಳು ಮಿಂದಾಗ ಕೆಳದಿಯರೆಲ್ಲರು
ಅಳಿ ಮುಟ್ಟದ ಹೂವ ಕೊಯ್ದು
ನಲವಿಂದ ರಾಯನ ಬಲು ಶಿವಪೂಜೆಗೆ
ಲಲನೆಯರೆಡೆಯ ಮಾಡಿದರು ೩೭

ಪರಿಪರಿ ಲೀಲೆಯ ಪರಿಮಳ ಪನ್ನೀರು
ಅರಸಿಯರಾಟ ನೋಟಗಳು
ಹರುಷದಿ ನೋಡುವ ತೆಜಿನಂತೆ ತಂಗಾಳಿ
ಬರುತಿರಲೇನ ಬಣ್ಣಿಸುವೆ ೩೮

ಕೊಳನೊಳು ನೀರಾಟ ಚಳೆಯದ ಹೂದೂಳಿ
ಯೊಳಗೆಲ್ಲ ಚೆಲ್ಲಾಟಗಳನು
ಉಲಿಯುತ ಮಾಮಿಡಿಗಳ ಚೆಂಡನಾಡುತ
ಸುಳಿದುದು ತಂಗಾಳಿ ವನಕೆ ೩೯

ತೊಡಕಿದ ಬಳ್ಳಿಯ ಬಿಡಿಸುತ ಪರಿಮಳ-
ದೊಡನಾಡಿ ಕಪ್ಪವ ಕೊಳುತ
ಹುಡಿಯಲಿ ಹೊರಳುತ ಪೊಡವೀಶ ನಗುತಿರೆ
ಮಡದಿಯರನು ಹಿಡಿದೆಳೆದು ೪೦

ತಳದೊಡೆಗಳ ಸುತ್ತಿ ಸುಳಿನಾಭಿಯಡಗಿಸಿ
ನಲವಿಂದ ನಿಜಿಯನಲ್ಲಾಡಿ
ಮೊಲೆಕಟ್ಟ ಬಿಡಿಸುತ ಬಲು ಮುಡಿಗಳ ಹಿಡಿ
ದೆಳವುತ ಮುಂದಲೆ ಸೆಜಿಗ ೪೧

ಪರಿ ಪರಿ ಭೋಗದಿ ತರುಣಿಯರೊಳು ರಾಯ
ಯಿರುತಿರೆ ಮೃಗಜಾತವೆಲ್ಲ
ಕೊಱೆವುತ ತತ್ತರ ದಱಿವುತ ಬೆಳೆಗಳ
ಹುರಿದುವು ದೆಸೆದೆಸೆಗಳಲಿ ೪೨

ಹುಲ್ಲುಕಡ್ಡಿಯ ಕಚ್ಚಿ ಕಲ್ಲನೆ ಹೊತ್ತಾಗ
ತಲ್ಲಣಿಸುತ ತಮತಮಗೆ
ನಿಲ್ಲದೆ ರಾಯನಿದ್ದಲ್ಲಿಗೆ ನಡೆತಂದು
ಎಲ್ಲ ಜನರು ಮೊಱೆಯಿಡಲು ೪೩

ಕೇಳಿದನಾ ಭೂಮಿಪಾಲನು ಹೊನ್ನಿನ
ಊಳಿಗವಿಲ್ಲವುಯೆನಲು
ಆಳು ಬಿಟ್ಟಿಗಳಿಲ್ಲ ಮೇಲೆ ಹೊನ್ನುಗಳಿಲ್ಲ
ದಾಳಿ ಬಂದಿತು ಮೃಗಕುಲದ ೪೪

ಕೇಳುತ ಭೂಪತಿ ನಾಳಿನ್ನು ಮೃಗಕೆಲ್ಲ
ದಾಳಿಯನಿಡುವೆನೆಂದೆನುತ
ವೀಳೆಯ ಉಡುಗೊಱೆ ಪಾಲಿಸಿ ಕಳುಹಿದ
ಪಾಳಯ ತೆಗೆದನು ಪುರಕೆ ೪೫

ಪಡುವಲು ರವಿ ತಾಯ ಒಡಲೊಳಗಡಗಲು
ಉಡುಪತಿ ಉದಯದೋಱಿದನು
ಪೊಡವಿಗೆ ಹಾಲಿನ ಕಡಲುಕ್ಕಿ ಹರಿದಂತೆ
ತುಡುಕುತ ಬೆಳದಿಂಗಳೆಸೆಯೆ ೪೬

ಮೃಡ ಮುಡಿದರ್ಧವೊ ಬಡಿಕೋಲೊ ಮದನನ
ಒಡಗಚ್ಚಿ ರಾಹು ಬಿಟ್ಟನಿತೊ
ಪೊಡವೀಶ ನೋಡಿದ ಬಿಡದರ್ಧ ಚಂದ್ರನ
ಸಡಗರವೇನ ಬಣ್ಣಿಪೆನು ೪೭

ಆ ಸಮಯದಿ ಮೇಘ ದೆಸೆಯಲಿ ಪೊಸಮುತ್ತು
ಪಸರಿಸಿದುವು ನಭಲತೆಯ
ಕುಸುಮವು ಮುಗಿಲಿಗೆ ಬೆಸುಗೆಯ ವಜ್ರ ಕೀ-
ಲಿಸಿದತಿ ಮೊಳೆಯೊ ತಾರೆಗಳೊ ೪೮

ಸುರರೆಲ್ಲ ಚಂದ್ರಗೆ ಹರುಷದಿ ಸೇಸೆಯ
ಸುರಿದಕ್ಕಿಗಳೊ ಮದುವೆಯಲಿ
ಹರಿವ ಕಾವಲಿಯೊ ಬಾಯ್ಬಿಡುವ ಚಕೋರಕೆ
ಕಿರಣದಾರವೆಯೊ ತಾರೆಗಳೊ ೪೯

ಕಡೆದತಿ ಕಡಲಿನ ಸಿಡಿವನಿಗಳೊ ಮೇಣು
ಒಡೆವತಿ ಮೇಘತತ್ತಿಗಳೊ
ಇಡಿದಿರ್ದವಾ ಚಂದ್ರನೆಡಬಲದಲಿ ತಾರೆ
ಜಡಿದುದನೇನ ಹೇಳುವೆನು ೫೦

ಕಲಿದುರ್ಗ ಬಲಿದನೊ ಬೆಳದಿಂಗಳಂಬುಧಿ-
ಯೊಳಗಿಟ್ಟ ಹರಿಗೋಲೊ ಸಸಿಯೊ
ತಲೆಯೆತ್ತಿ ಹರಿಶ್ಚಂದ್ರ ನಲವಿಂದ ನೋಡಲು
ಚೆಲುವಿಕೆ ಗುಡಿಯ ಕಟ್ಟಿದನು ೫೧

ಇಳೆಯೊಳು ಹರಿಶ್ಚಂದ್ರನಳವಿಯ ಸತ್ಯವ
ತಿಳಿವುದೆನುತಲಾಗ ಸುರರು
ಹುಳಗುಂಡ ಬರೆದಂತೆ ಕಳೆಯುಳ್ಳ ಚಂದ್ರನ
ಬಳಿಯಲಿ ಪರಿವೇಷ ಬಲಿಯೆ ೫೨

ಧರಣೇಶ ನೋಡುತ ಹರುಷದಿ ಹತ್ತೆಂಟು
ವರಮಂತ್ರಿಗಳ ಕೂಡಿಕೊಳುತ
ಪುರದೊಳಗಾಡುವ ಪರಿಪರಿಯ ಸೂಳೆ-
ಯರ ಕೇರಿಯೊಳು ನಡೆತಂದ ೫೩

ಜಲದಂತೆ ಗಾಜಿನ ನೆಲೆಕಟ್ಟು ಬಯಲಂತೆ
ಸಲೆ ಚಂದ್ರಕಾಂತದುಪ್ಪರಿಗೆ
ಸುಳಿದರೆ ಮನೆಯೊಳು ಬಲೆಯೊಳಗಣ ಮೀನು
ಹೊಳೆವಂತೆ ನಾರಿಯರೆಸೆಯೆ ೫೪

ಕಡಿವಡೆದ ಚಂದ್ರನೊಡಲೊಳು ಹುತ್ತಿಕ್ಕಿ
ಬಿ[ಡದೆ]ನ್ನ ನೋಡಿದನೆನುತ
ಮಡದಿಯೊರ್ವಳು ಮೇಘದುಡುಪತಿಯನು ದಾಳಿ-
ಯಿಡುವಂತೆ ಒದೆದಳುಯ್ಯಲೆಯ ೫೫

ಬಡನಡು ಬಳುಕುತ ಕುಡಿನೋಟ ಕುಣಿವುತ
ತೊಡಿಗೆ ನೇವುರವು ಝಣರೆನುತ
ಮುಡಿಯಲುಗುತ ಚೆಂಡ ಸಿಡುತೋಳ ಹಾರದಿ
ಹೊಡೆದಾಡುತಲೊಬ್ಬ ಸತಿಯು ೫೬

ಮುತ್ತಿನಾಭರಣವು ಸುತ್ತಿದ ಚಿಮ್ಮುರಿ
ಒತ್ತಿದ ಪನ್ನೆಗಡ್ಡಗಳು
ಕಸ್ತೂರಿ ತಿಲಕದಿ ಚಿತ್ರದ ಚದುರಿನ
ಅರ್ತಿಯ ಕೊನಬುಗಳೆಸೆಯೆ ೫೭

ಹೆಂಗಳೊ ಹರಿಣಿಯ ಕಂಗಳೊ ನಗೆವೆಳೆ-
ದಿಂಗಳೊ ಚಿತ್ರಬೊಂಬೆಗಳೊ
ಮಂಗಳೋದಯ ಕಳಸಂಗಳೊ ಕುಚಕಳೆ
ಯಂಗಳ ಚದುರೆಯರೆಸೆಯೆ ೫೮

ಮೊಲೆಕಟ್ಟು ನೋಡಲು ಹೊಳೆವ ಮೈದೊಡಿಗೆ[ಯು]
ಒಳದೊಡೆ ಕಟಿಸೂತ್ರಗಳು
ಕಳೆಯುಳ್ಳ ವದನ ಸಂಕಲೆಯಂತೆ ವಿಟರಿಗೆ
ಕಳವಳ ಕಂಗಳೊಳೆಸೆಯೆ ೫೯

ತರುಣಿಯರನು ನೋಡುವರೆ ಮೋಹಿ ಬಿಗಿಯಪ್ಪು-
ವರೆ ಮೆಚ್ಚಿ ಮುಂಡಾಡಿಸುವರೆ
ಸುರಪತಿ ಬಾಣಾಸುರ ಭೂಮಿಯನು ಹೊತ್ತ
ಉರಗನಾಗಿರಬೇಕು ಶಿವನೆ ೬೦

ಲಲನೆಯೊರ್ವಳು ತನ್ನ ಮೊಲೆಕಟ್ಟ ಸಡಿಲಿಸಿ
ಬೆಳದಿಂಗಳ ತಂಪಿನೊಳಗೆ
ಕುಳಿತಿರೆ ವಿಟ ನೋಡಿ ತಲೆದೂಗುವುದ ಕಂಡು
ನಲವಿಂದಲವನ ಕೇಳಿದಳು ೬೧

ತರುಣಿಯೆ ಕೇಳ್ ನಿನ್ನ ಸರಿಮೊಲೆಯೊಳಗೆನ್ನ
ಎರಡು ಕಂಗಳು ನಟ್ಟಿರಲು
ಮರಳಿ ಕಿತ್ತರೆ ಕೀಳದಿರೆ ಶಕ್ತಿಯಲಿ ನನ್ನ
ಶಿರವನು ತೂಗಿದೆನೆಂದ ೬೨

ತರುಣಿಯೆ ಬಾ ಹೊನ್ನ ಗಿರಿಮೊಲೆಯಳೆ ಬಾರೆ
ಪರಿಮಳ ಮೃಗಗಂಧಿ ಬಾರೆ
ಅರೆಗಂಗಳರನೋಟದರಸಿಯೆ ಬಾಯೆಂದು
ಕರೆದನು ವಿಟನೊಬ್ಬ ಸತಿಯ ೬೩

ಉಂಗುರವಿಡಿ ನಡು ಹೊಂಗಳಸದ ಮೊಲೆ
ಕಂಗಳ ಥಾಳದಿಂದೆಸೆವ
ಅಂಗನೆಯೊರ್ವಳು ಶೃಂಗಾರವನು ಕೈ
ಹಿಂಗದೆ ವಿಟಗೆ ಹೇಳಿದಳು ೬೪

ಮಡುವಿಗೆ ಕೂರ್ಮನು ಕೆಡೆಯಿತೊ ಪಾದಕ್ಕೆ
ನಡೆಗಾಗಿ ಹಂಸೆಯು ಕೊಳನ
ಒಡನಾಡೆ ಜಂಘೆಗೆ ತಡೆಯದೆ ಹೊದೆ ಹೋಗಿ
ಅಡಗಿತು ಕಾವನ ಬೆನ್ನ ೬೫

ತೊಡೆಗಾಗಿ ಬಾಳೆಯು ಕಡಿವಡೆಯಿತು ಬಟ್ಟು-
ವಿಡಿದ ನಿತಂಬಕ್ಕೆ ಗಿರಿಯು
ನುಡಿಯದೆ ಕಲ್ಲಾಗಿ ನಡುವಿಗೆ ನಾಚುತ
ಅಡವಿಯ ಹೊಕ್ಕಿತು ಸಿಂಹ ೬೬

ನಿಡುತೋಳಿಗಾ ಫಣಿ ಮಡುಹಿತು ಮಕ್ಕಳ-
ಯಿಡಿದತಿ ಮೊಲೆಕಟ್ಟುಗಳಿಗೆ
ಕೊಡಹಿತು ಗಜ ಶಿರ ಬಿಡದೆ ದಾಳಿಂಬವು
ಒಡೆಯಿತು ಸುಲಿಪಲ್ಲುಗಳಿಗೆ ೬೭

ಹಾಡಲು ಕಾಗೆಯು ಗೂಡೊಳು ಕೋಗಿಲೆ
ಈಡಾಡಿತು ತನ್ನ ಮಱಿಯ
ಕಾಡಿಗೆಗಣ್ಣನು ನೋಡುತ ಎರಳೆ ಬಿ-
ಟ್ಟೋಡಿತು ಚಂದ್ರನ ಬೆನ್ನ ೬೮

ಎಸೆವತಿ ವದನಕೆ ಶಶಿನಡು ಕಪ್ಪಾಗಿ
ರಸನಿಂಬೆ ಹುಳಿಯಾಗಿ ಮೈಗೆ
ಮುಸುಕನೆ ತೆಱೆಯಲು ನಸು ಮೋಡಗಡಿದೆದ್ದ
ಶಶಿಯಂತೆ ಕಳೆಯ ತೋಱಿದಳು ೬೯

ಹೆಣ್ಣಿದೆ ರಸರಾಯ ಹಣ್ಣಿದೆ ಕುಂದಣ
ಚಿನ್ನದ ಚಿತ್ರದ ಬೊಂಬೆ
ಕಣ್ಣಲಿ ನೋಡಲು ಕನ್ನಡಿ ತೇಜವು
ಬಣ್ಣಿಸಲಳವಲ್ಲದವಳು ೭೦

ಬೇಕಾದರಿವಳ ವಿವೇಕದಿಂದೊಲಿಸಿಯೆ
ಸಾಕೆನಲಿತ್ತು ಧನವನು
ಜೋಕೆಯಲಿಂತಿರಬೇಕೆಂದು ಸಂಸಾರ
ನಾಕು ದಿನವು ನಚ್ಚಲಿಲ್ಲ ೭೧

ಹೊನ್ನಿಗೆ ಹೆಣಗುತ್ತ ಹೊನ್ನಂಥ ಪ್ರಾಯವ
ಮಣ್ಣನೆ ಮಾಡುವುದಲ್ಲ
ಉನ್ನತ ಭೋಗವು ಕನ್ನೆಯರ ಕೂಟವು
ಚೆನ್ನಾಗುವುದು ಪ್ರಾಯದೊಳಗೆ ೭೨

ಅಡಕತ್ತಿಯಲಿ ಎಲೆಯಡಕೆಯನೊತ್ತುತ
ಸಡಿಲಿದ ದಂತದಿ ಸದೆದು
ನುಡಿಗೊಮ್ಮೆ ಕೆಮ್ಮುತ ಸಡಗರದಲಿ ಕೋಲ
ಹಿಡಿದೆಡಹುತ ಮುದಿವಿಟರು ೭೩

ಜಗುಳಿದ ಹಲ್ಲು ಬಾಯ್ ತೊಗಲೆಲ್ಲ ಬತ್ತಿದ
ಹೆಗಲೆಲುವಿನ ಬಿದ್ದ ಮೊಲೆಯ
ಮಿಗೆ ಸೊಪ್ಪ ಸದೆವುತ ಮಗಳಿಗೆ ನೀತಿಯ
ಬಗುಳುತ ಮುದಿ ಪಾಜಿಯೆಸೆಯೆ ೭೪

ಬಿಡದೊಂದು ತರುವಿನ ಬುಡದಲ್ಲಿ ಬಳ್ಳಿಯ
ಕುಡಿವರಿದೊಡಗೂಡಿ ಬೆಳೆದು
ಎಡಬಲದ ತರು ಗಿಡುವಿಗೆ ಲಂಘಿಸಿ
ನಡೆವಂತಿಹುದು ನಂಟರಲ್ಲಿ ೭೫

ಹೋಗಿ ಹಿಂದಕೆ ಲಾಗು ವೇಗದಿಂದಾಡುತ
ತೂಗಿದುಯ್ಯಾಲೆಯಂತೆ ಮನವ
ತಾಗಿ ಮಚ್ಚಿಸಿ ಸಿಕ್ಕಿ ಹೋಗಲೀಯದೆ ನಸು
ರಾಗದಲಿಹುದು ನಂಟರಲಿ ೭೬

ಹೊನ್ನುಳ್ಳ ವಿಟರಿಗೆ ಬಣ್ಣಿಸಿ ತನುಮನ
ನಿನ್ನಾಣೆ ನಿನ್ನವೆಂದೆನುತ
ಕನ್ನಡಿಗೆದುರಾದ ರನ್ನದ ನೆರಳಂತೆ
ಬಿನ್ನಾಣೆಯಲಿ ಬಳಸುವುದು ೭೭

ಠಮಕಿನ ನಾಚಿಕೆ ಗಮಕ ವಿಚಿತ್ರದ
ಮಮಕಾರದಿಂದ ಮೋಹಿಸುತ
ಸಮತಳಿಸುವ ಸೋಟ ಭ್ರಮೆಯಿಂದ ಚೆನ್ನಿಗ
ರಮಣರೆಲ್ಲರ ಕಾಲ್ಗೆಡಿಸಿ ೭೮

ದುಂಡುಳ್ಳ ಮೊಲೆಕಟ್ಟು ಕಂಡರೆ ವಿಟರೆದೆ
ಗುಂಡಿಗೆಯೊಡೆವಂತೆ ನಗುತ
ಉಂಡಾಡಿದ ಕಾಕ ದಂಡ ಮಾಡುತ ಕಾಡಿ
ಬೆಂಡಾಗದಂತಿರೆ ಮಗಳೆ ೭೯

ಬಾರುಗುತ್ತಿನ ಜೂಜುಗಾಱನಂದದಿ ಠೌಳಿ-
ಕಾಱನಾಡುವ ಚೆಂಡಿನಂತೆ
ಓರೆಗಂಗಳ ಸನ್ನೆದೋಱಿ ಬೆಲ್ಲದ ಮಾತ
ಬೀಱಿ ಸೋಲಿಸು ಹೊನ್ನ ಗಂಟ ೮೦

ಧರಣೀಶ ನೋಡುತ ಹರುಷದಿ ನಡೆತಂದು
ಅರಮನೆಯನು ಹೊಕ್ಕನಾಗ
ನೆಱೆ ಭೋಜನವ ಮಾಡಿ ವರ ತೂಗು ಮಂಚದಿ
ಪರಿಣಾಮದಲಿ ಪವಡಿಸಿದ ೮೧

ಬೀಱುವ ಕಿರಣಕೆ ಹಾಱಿ ಚಕೋರನು
ಹೀರಿ ಹಿಂಡಿದ ತೆಱನಂತೆ
ತೀಱಲು ಶಶಿಕಾಂತಿ ತಾರೆಗಳಾಱಿಯೆ
ವಾರಿಧಿ ಬಡವಾಯಿತಾಗ ೮೨

ಮೂರನೆಯ ಸಂಧಿ

ಸೂ|| ಧಾರುಣಿಪಾಲನು ವಾ[ರು]ವದಿ ಹೊಱವಂಟು
ಸಾರಿದ ಹಂಪೆಯ ಪುರಕೆ

ತರಣಿಯ ಉದಯಕೆ ವರ ಜಪ ತಪ ಮಾಡಿ
ದೊರೆಯೇಱಿದನು ಸಿಂಹಾಸನವ
ಪರಿವಾರವೆಲ್ಲವು ಕರಗಳ ಮುಗಿಯಲು
ಕರಸಿದ ಬೇಡ ಮನ್ನೆಯರ ೧

ಕಾಡಾನೆ ದಾಡೆಯ ಕಾಡಹಂದಿಯ ಕೋಱೆ
ದಾಡೆಯ ಹುಲಿ ಸಿಂಗದುಗುರ
ಜೋಡಿಸಿ ಝುಲ್ಲಿಯ ರೂಢೀಶನಲ್ಲಿಗೆ
ಬೇಡರು ಕಾಣಿಕೆಗೊಡುತ ೨

ಪರಿಪರಿ ಕುಲದ ಕಿರಾತರು ನೆರೆದರು
ನೆಱೆ ನೂರಕ್ಷೋಣಿ ಮಾರ್ಬಲವು
ಕರದೊಳಗಾಯುಧ ಬಿರುದಿನ ಕಾಲಾಳು
ಉರವಣಿಸಿತು ಹತ್ತಕ್ಷೋಣಿ ೩

ತೊಡೆ ಸನ್ನೆಯೊಳಗಾಡಿ ಮಡಸನ್ನೆಯೊಳಗಾಡಿ
ಹಿಡಿದ ವಾಘೆಯ ಸನ್ನೆಗಳಿಗೆ
ತುಡುಕುತ ಗಗನಕೆ ಪೊಡವಿಯೊಳಾಡುತ
ನಡೆದವು ರಾವುತತೇಜಿ ೪

ಪೊಡವಿ ಆಕಾಶವು ಒಡೆವಂತೆ ನಿಸ್ಸಾಳ
ಬಡಿದವು ಹದಿನೈದು ಲಕ್ಷ
ಬಡಿಕೋಲು ಕೈದಂಡೆ ಕೊಡತಿ ಮುದ್ಗರ ಕೊಂತ
ಹಿಡಿದ ಕಕ್ಕಡ ಕರವತಿಗೆ ೫

ಬಲೆ ಬಳ್ಳಿವಲೆ ತಳ್ಳಿವಲೆ ತೋಱುವಲೆ ತಟ್ಟಿ
ವಲೆ ಕಣ್ಣಿವಲೆ ಕೊರಳ ಬಲೆಯು
ಸಲೆ ಬೀಸುವಲೆ ಹಾಸುವಲೆ ದೊಟ್ಟಿವಲೆಗಳು
ಬಲಿದುವು ಬಂಡಿಬಂಡಿಯಲಿ ೬

ಬಲುಹುಳ್ಳ ಜಾಯಿಲ ಬಳಗವನೆಲ್ಲವ
ಬಲಗೈಯ ಬಡಿಕೋಲುಗಳಲಿ
ಬಿಲುಗಳ ಝೇಂಕಾರ ಕಳಕಳ ಬೊಬ್ಬೆಯ
ಬಲು ಬೇಡನಾಯಕರೆಸೆಯೆ ೭

ಪರಿಪರಿಯ ತೇರು ತುರಗ[ವ] ಶೃಂಗರಿಸಿ
ಕರಿಘಟೆಯೆಲ್ಲವ ತರಿಸಿ
ಹೊಜ ಗುಡಿಗಳ ಹೊಯಿಸಿ ಹರುಷದಿ ಸತಿಸುತ
ವರಮಂತ್ರಿ ಸತ್ಕೀರ್ತಿ ಸಹಿತ ೮

ವೀರ ಕಂಕಣ ಕಟ್ಟಿ ತೇರ ಬಂದೇಱಿಯೆ
ವಾರುವಗಳ ಹಾಱಿಸುತ
ಧಾರುಣಿಯೊಳು ಚೆಲ್ಲವರಿದಾಗ ಬರುತಿರೆ
ಭೋರಿಟ್ಟು ಕಹಳೆ ಕೋಟಿಗಳು ೯

ಹೆಡೆಯುಡುಗಿತು ಫಣಿ ಜಡಿದುದು ಭೂಕಾಂತೆ
ಕೊಡಹಿತು ದಿಗುದಂತಿ ಶಿರವ
ಇಡಿದುದು ದೂಳಿಯು ಗಡ ನಭವನು ಮುಟ್ಟಿ
ನಡೆದುದು ಸೇನೆ ಕಾನನಕೆ ೧೦

ತರುಣಿಯ ಬೇಡುವ ತೆಜಿನಂತೆ ಹಿರಿಯರ
ಕರೆವಂತೆ ಸೈರಿಸುವಂತೆ
ಶಿರದಂತೆ ಹರಿ ನಾರದನಂತೆ ಮುನಿಗಳ
ಪರಿಯಂತೆ ಪರದಾರಿಯಂತೆ ೧೧

ಒಡಲಂತೆ ಮಕ್ಕಳ ಕಡುಬೇನೆಯನು ತಿಂದು
ಪಡೆದಂತೆ ಪಾಲಿಸುವಂತೆ
ಒಡಲೊಳಗಣ ವಾಯು ಅಡರೇಱಿ ಕೊರಳಿಗೆ
ತುಡುಕಲು ಹೂಂಕೊಳುವಂತೆ ೧೨

ಪರಿಪರಿಯೂಟದ ಪರಿಮಳವನು ವಾಯು
ಕೊರಳಿಂದ ಸವಿದೋಱುವಂತೆ
ಎರಡನು ನಾಲ್ಕನು ಬೆರಸಿದ ಪರಿಯಂತೆ
ಧರಣದ ಇಮ್ಮಡಿಯಂತೆ ೧೩

ಹರನುಗ್ರನಯನದ ತೇಜನಂತೆ ಹಾಸ್ಯದ
ಪರಿಯಂತೆ ಜನಜಾತದೊಳಗೆ
ಕರೆದವರಿಗೆ ತಾಯ ಹಿರಿಯಣ್ಣನಾದಂತೆ
ಪರಿಪರಿ ಹೆಸರಾದ ಮರನು ೧೪

ಲಾಲಿಸುತಲಿ ಭೂಮಿಪಾಲನು ಮಾತಿನ
ಹೋಲಿಕೆಯ ಮರದೊಳಗೆ
ದಾಳಿಯನಿಟ್ಟನು ಕೋಲಾಹಲವ ಮಾಡಿ
ಘೀಳಿಡಿಸುತ ಮೃಗಕುಲವ ೧೫

ಜಲದೊಳು ತಾವರೆ ಕೊಳದೊಳು ಗಿಡಗಂಟೆ
ಮೆಳೆಯೊಳು ದಾಳಿಯ ಮಾಡಿ
ಮಲೆಯೊಳು ಭೂಮಿಯ ವಳೆಯೊಳು ಕೊಲೆಯೊಳು
ಬಲೆಯೊಳು ಮೃಗಜಾತವೆಸೆಯೆ ೧೬

ಕಳವಂಟಿಕಿಯ ಮೀನುಗಳು ಕಾನಿಗಂಡಿಯು
ಹೊಳೆವತಿ ಹೊದಮೊಟ್ಟೆಗಳು
ಹಲಗೆ ಗೊಗ್ಗರೆ ಬಾಳೆ ಉಳುಚಾರಿ ಚಾಮಾರಿ-
ಗಳು ಚೆಲ್ಲೆ ಕೆಮ್ಮೀನುಯೆಸೆಯೆ ೧೭

ಹಲವು ಜಾತದ ಮೀನುಗಳ ಬೇಂಟೆಯಾಡುತ
ಕೊಲುತಲಿ ಮೊಸಳೆಯನೆಲ್ಲ
ಜಲಚರದೊಳು ಬೀಸುವಲೆಗಳ ಹಾಕಿಯೆ
ಜಲವನು ಹೊಕ್ಕು ಶೋಧಿಸುತ ೧೮

ಬರುತಿರಲಾ ಮುಂದೆ ಗಿರಿಗಳ ತಪ್ಪಲ
ತರುಗಳ ಸರುಗಳ ಹಿಡಿದು
ಕರಿ ಸಿಂಹ ಶಾರ್ದೂಲ ಕರಡಿ ಸಾರಂಗನು
ಹರಿದಾಡಿದ ಹೆಜ್ಜೆಯ ಹಿಡಿದು ೧೯

ಗಿಡುವಿಗೆ ಮಡುವಿಗೆ ನಡುಗವೆಗಳ ಕಟ್ಟಿ
ನಡೆದರು ಹಕ್ಕಿಯ ಮೊಲಕೆ
ಎಡೆಯೆಡೆಗೊಡ್ಡುತ ಸಿಡಿವಲೆಗಳ ಸುತ್ತ
ಕಡಿದಾಡಿ ಕಟ್ಟುವೇಂಟೆಯಲಿ ೨೦

ಹರಮಯ ಶಿವಮಯ ನೆಱೆ ಚಕ್ರಮಯಗಳು
ಹರಿದಾಡಿ ಗೋಮಯದೊಳಗೆ
ಪರಿಪರಿ ಶಿಖಿಮಯ ಬೆರಸಿತು ಭಯದೊಳು
ಶರಮಯ ಧ್ವನಿಮಯದೊಳಗೆ ೨೧

ಕರಿಯೊಳು ಕಾದಲು ಕರಿದೈತ್ಯನೊಳು ಶಿವ-
ನಿಱಿದಾಡಿದಂದದಿ ಮೊಱೆದು
ಸುರರೊಳು ಮಹಿಷಾಸುರ ದಂಡು ನಡೆದಂತೆ
ಪರಿಪರಿ ಕಾಡ್ಗೋಣವೆಸೆಯೆ ೨೨

ಬಿಡದೆತ್ತಿ ಬಾಲವನೊಡೆಮುಱಿಯುತ ಕಣ್ಣ
ಬಿಡುತಲಿ ಕಿಡಿಕಿಡಿಯಾಗಿ
ಕಡೆಯಿಲ್ಲದೆಱಗಿದ ಸಿಡಿಲಿನ ಮಱಿಯಂತೆ
ಹೊಡೆದವು ಹಿಂಡು ಹಿಂಡುಗಳು ೨೩

ಸರಿಯಲು ಸರಳಿನ ಬಿಱುಮಳೆಗಳ ಕಟ್ಟಿ
ತಱುಬಿತು ಬೇಡರ ಪಡೆಯು
ಇಱಿಯಲು ಗಾಯಕೆ ಮೊಱೆವುತ ಹಲುಬಾಯಿ-
ದೆಱೆವುತ ಧರೆಗೊಱಗಿದುವು ೨೪

ನೆಟ್ಟ ಬಾಣವನೆಲ್ಲ ದಿಟ್ಟಿಸಿ ನೋಡುತ
ಮೆಟ್ಟಿ ಕೀಳುತ ಶಬರಿಯರು
ನೆಟ್ಟನೆ ದುರ್ಗಿಯ ಕಟ್ಟಳೆಯಲಿ ಅಳ-
ವಟ್ಟರು ಪೆರ್ಗಾಡಿನೊಳಗೆ ೨೫

ಪರಿಪರಿ ಖಗಮೃಗ ಕರಿ ಸಿಂಹ ಶಾರ್ದೂಲ
ಮೊಱೆವತಿ ಗರ್ಜನೆ ಮೊಳಗೆ
ಇಱಿ ಇಱಿ ಕಡಿ ಖಂಡಗೊಱೆ ತಱಿದೊಟ್ಟೆಂದು
ಬಿರುದಿನ ಕಾಳ್ಬೇಡರೆಸೆಯೆ ೨೬

ಆರಣ್ಯವೊ ವೃಂದಾರಣ್ಯವೊ ಅಡವಿಯ
ಘೋರಾರಣ್ಯವೊ ಬರಲು
ಹೋರುತ ಮೃಗದೊಳಗೇರು [ವಡೆದಾ ಗಾಯ]
ವಾಱಿಸುತ ವರ ನಾರಿಯರು ೨೭

ಹೆಡಗೆಯ ಹಕ್ಕಿಯು ಕಡೆಯಿಲ್ಲದ ಕಲ್ಲಿ
ಜಡಿವತಿ ಹುಲಿಯ ಬಂಡಿಗಳು
ಬಡಿವ ನಿಸ್ಸಾಳವು ಎಡಬಲದ ಸೇನೆ
ಪೊಡವೀಶ ನಡೆತರುತಿರ್ದ ೨೮

ಬರುತಿರೆ ಕಿಷ್ಕಿಂಧಗಿರಿಯೊಳು ಕರಿಸಿಂಹ
ಗರುಡ ನಾಗೇಂದ್ರ ಮುಂಗುಲಿಯು
ಎರಳೆಯ ನೆರೆಯಲಿ ಇರುತಿರೆ ಹುಲಿವಿಂಡು
ಬೆಱಗಾಗಿ ಬೇಡ ನಾಯಕರು ೨೯

ನೋಡು ನೋಡೆಲೆ ಭೂಪ ರೂಢಿಯ ಮಹಿಮೆಯ
ಕೂಡಿದ ಮೃಗವೈರಿಜಾತ
ಬೇಡರ ಪಡೆ ಕೈಯ ಮಾಡಲು ಮನವಿಲ್ಲ
ನೋಡುವ ನಡೆ ಮುಂದಣೆರವ ೩೦

ಶಿರದೊಳು ನಿಡುಜಡೆ ಬೆರಳಿನ ಜಪಮಾಲೆ
ಕೊರಳ ರುದ್ರಾಕ್ಷಿ ಪಾವುಡವು
ಧರಿಸಿದ ವಿಭೂತಿ ವರವೇದಮಂತ್ರವು
ಮೆಱೆವತಿ ಮುನಿಗಳ ಕಂಡ ೩೧

ಎಱಗಿದನಾ ಮುನಿ ಹಿರಿಯರ ಪಾದಕ್ಕೆ
ಕರಗಳ ಮುಗಿದೆಂದ ಭೂಪ
ಬೆರಸಿತು ವೈರವನಱಿಯದೆ ಮೃಗವಿಂತು
ಧರಣಿಯ ಪುಣ್ಯವೆಂದೆನಲು ೩೨

ಅದು ಹೇಮಕೂಟವು ಅದು ತುಂಗಭದ್ರೆಯು
ಅಧಿಕ ಮಾತಂಗ ಪರ್ವತವು
ಅದು ಪಂಪಾಕ್ಷೇತ್ರವು ಅದು ವಿರೂಪಾಕ್ಷನ
ಸದನವಂತದು ಮಾಲ್ಯಗಿರಿಯು ೩೩

ಜನಪತಿಗಱುಹಲು ಮನದೊಳು ಮಣಿವುತ
ಘನಮೂರ್ತಿ ನೀವಾರುಯೆನಲು
ಮುನಿಪ ವಸಿಷ್ಠನ ತನುಜನ ಮಗ ನಾನು
ಮುನಿ ಪರಾಶರನು ತಾನೆಂದ ೩೪

ತೋಱು ತೋಱೆನ್ನಯ ಕಾರುಣ್ಯ ಗುರುಮೂರ್ತಿ
ಮೇರುವೆಯನು ಎಂದು ನಡೆದ
ವಾರಿಜದ ಕೊಳ ತೀರದಿ ಗುರುಪಾದ
ವಾರಿಜಗಳಿಗೆಱಗಿದನು ೩೫

ಜಯ ಜಯ ಗುರುರಾಯ ಜಯ ಜಯ ಮುನಿರಾಯ
ಜಯ ಜಯ ಸುರವಂದಿತನೆ
ಜಯ ಶಾಂತಿಕಿರಣನೆ ಜಯಕಲ್ಪತರು ನೀನೆ
ಜಯ ಜಯ ಎನುತೆಱಗಿದನು ೩೬

ಏಳೇಳು ಎನ್ನಯ ಮೇಲಣ ಮೋಹದ
ಹಾಲಿನ ವಾರಿಧಿ ಭೂಪ
ಬಾಲೆ ಕುಮಾರನು ಮೇಲೆ ಪ್ರಧಾನಿಯು
ಕಾಲಿಗೆ ಬಂದೆಱಗಿದರು ೩೭

ಕರವಿಡಿದೆತ್ತಿಯೆ ಹರುಷದಿ ಬಿಗಿಯಪ್ಪಿ
ಬರವೇನು ಸೋಜಿಗವೆನಲು
ಪರಿಪರಿ ಮೃಗ ಹೆಚ್ಚಿ ಹುರಿಯಲು ಬೇಂಟೆಯ
ಭರವಾಗಿ ನಡೆತಂದೆವೆಂದ ೩೮

ವರವಿಶ್ವಾಮಿತ್ರನ ಕಿಱುಕುಳುಪದ್ರದ
ಪರಿಯ ವಿಚಾರವೆಂದಱಿದು
ಅಱುಹಲುಬಾರದು ಹಿರಿದಾದ ನೀತಿಯ
ಅಱುಹುವ ತೆಱದಿ ಸೂಚಿಸಿದ ೩೯

ಮನವಾಗದಿರು ಪರವನಿತೆಯರೊಳು ಪಾಪ-
ವನು ಮಾಡದಿರು ಸತ್ಯವಿಡಿದು
ಮುನಿ ವಿಶ್ವಾಮಿತ್ರನ ವನವನು ಹೊಗದಿರು
ಎನಗುಳ್ಳ ಶಿಷ್ಯನಾದುದಕೆ ೪೦

ನೋಡುವ ನಡೆ ಹಂಪೆ ರೂಢಿಗೆ ಕೈಲಾಸ
ನೋಡಲು ದಕ್ಷಿಣ ಕಾಶಿ
ಕೂಡಿದ ಕರ್ಮವನೀಡಾಡಿ ವಿರೂಪಾಕ್ಷ
ಬೇಡಿದ ಪದವಿಯನೀವ ೪೧

ಗುರುಮುನಿಗಳು ಕೂಡಿ ಧರಣೇಶ ನಡೆತಂದು
ವರತುಂಗಭದ್ರೆಯ ಮಿಂದು
ಗುರು ಮಂತ್ರ ಜಪ ಮಾಡಿ ಬರುತಿರೆ ಭೂಪತಿ
ಕರುಣಿಸಿ ತೋಱಿದ ಮುನಿಪ ೪೨

ಇದೆ ಮಣಿಕರ್ಣಿಕೆಯಿದೆ ಮನ್ಮಥ ಕುಂಡ
ಇದೆ ಭಾಗೀರಥಿ ತುಂಗಭದ್ರೆ
ಇದೆ ವಿಶಾಲಾಕ್ಷಿಯು ಇದೆ ಪಂಪಾದೇವಿಯು
ಇದೆ ಪಂಚಕೋಶದ ತೀರ್ಥ ೪೩

ಇದೆ ವಿಶ್ವನಾಥನುಯಿದೆ ವಿರೂಪಾಕ್ಷನು
ಇದೆ ಕಾಶಿ ಹಂಪೆಯ ಕ್ಷೇರ
ಇದೆ ಗಯ [ಪಿಂ]ಡಿಕೆಯಿದೆ ರುದ್ರಪಾದವು
ಇದೆ ದಕ್ಷಿಣಕೆ ವಾರಣಾಸಿ ೪೪

ಧರಣೇಶ ಕೇಳುತ ವರ ಪಂಪಾದೇವಿಯ
ಚರಣಕೆ ನಮಿಸುತ ನಡೆದ
ಗುರುರಾಯ ತನ್ನಯ ಗುರು ವಿರೂಪಾಕ್ಷನ
ಚರಣವ ತೋಱಿದನಾಗ ೪೫

ಜಯ ಜಯ ಚಿನ್ಮಯ ಜಯ ಜಯ ಚಿದ್ರೂಪ
ಜಯ ಕಾಮ ನಿರ್ಧೂಮ ಧಾಮ
ಜಯ ಮಾಯಾವಿರಹಿತ ಜಯ ಲಯ ದೂರನೆ
ಜಯ ಪಂಪಾಪತಿ ವಿರೂಪಾಕ್ಷ ೪೬

ಶರಣೆಂದು ಮಾಡಿದ ಪರಿಪೂರ್ಣ ಪೂಜೆಯ
ವರಧೂಪ ದೀಪನೈವೇದ್ಯ
ಹರ ಹರ ದುರಿತಕೆ ವರವಿರೂಪಾಕ್ಷನ
ದರುಶನ ಗುರುಪುಣ್ಯವೆಂದ ೪೭

ಶ್ರೀ ವಿರೂಪಾಕ್ಷನ ಭಾವೆಯು ಶ್ರೀ ಪಂಪಾ
ದೇವಿಯ ಪೂಜೆಯ ಮಾಡಿ
ಹೂವು ಪ್ರಸಾದವ ತೀವಿದ ಮುನಿಗಳು
ಭೂವರಗಿತ್ತರುವೊಲಿದು ೪೮

ಜನಪತಿ ಮುನಿಗಳ ಮಸವಣೆಯಲುಯಿತ್ತು
ಮನ ಬಂದ ನಾಡ ಬೇಡೆಂಪ
ಚಿನುಮಯ ವಿರೂಪಾಕ್ಷನ ಬಿಟ್ಟು ನಾವೇ-
ನನು ಒಲ್ಲೆವೆಂದರು ಅವರು ೪೯

ಆಶೀರ್ವಾದವನುಸುರುವ ಮುನಿಗಳ
ಘೋಷಣ ಮಂತ್ರವಾಸರಕೆ
ಲೇಸಾಗಿ ತಲೆಬಾಗಿ ಭೂಸುರಜನಕೆ ಸಂ-
ತೋಷದಿ ಭೂಪಾಲನೆಂದ ೫೦

ಬಿಟ್ಟಿಯ ಧರ್ಮದಿ ನೆಟ್ಟನೆ ಕಟಕವ
ದಿಟ್ಟಿಸಿದ ತೆಱನಾಯ್ತು
ಕಟ್ಟಾಣೆ ಶಿವನ ವಸಿಷ್ಠನ ದೆಸೆಯಿಂದ
ಬಿಟ್ಟೋಡಿತೆನ್ನಯ ದುರಿತ ೫೧

ನಾಲ್ಕನೆಯ ಸಂಧಿ

ಸೂ|| ಖಳ ವಿಶ್ವಾಮಿತ್ರನು ಕಳುಹಿದ ಹಂದಿಯ
ಬಳಿಗಿನ್ನು ಭೂಪತಿ ನಡೆದ

ಗುರು ವಿರೂಪಾಕ್ಷಗೆಯೆಱಗುತ ತನ್ನಯ
ಗುರುವಿಗೆ ಪೊಡಮಟ್ಟು ಭೂಪ
ಹರುಷದಿ ರಥವೇರಿ ತಿರುಗುತ ತಡವೇಂಟೆ
ಭರದಿಂದ ನಾಡು ನಾಡೊಳಗೆ ೧

ಹೊಸ ಹಂದಿ ಕೌಶಿಕ ಬೆಸನಿತ್ತರದು ಬಂದು
ಪಸರಿಸಿತರಣ್ಯದೊಳಗೆ
ಎಸೆಯಲು ರೋಷದಿ ದೆಸೆದೆಸೆಯಲಿ ನುಗ್ಗು
ನುಸಿ ಮಾಡಿ ಕೊಂದಿತು ದಂಡ ೨

ಚೆಲ್ಲಾಡುತಿರಲೊಬ್ಬನಲ್ಲಿಗೆ ಭೂಪತಿ
ಬಿಲ್ಲಾಳ ಕೇಳ ಕಳುಹಿದನು
ನಿಲ್ಲು ನಿಲ್ಲೆಲೊಯಿಂತು ತಲ್ಲಣವೇಕೆನೆ
ನಿಲ್ಲದೆ ಬಿಟ್ಟೋಡಿದನು ೩

ಬಿಡದಟ್ಟಿ ಹಿಡಿತಂದು ಪೊಡವೀಶನ ಮುಂದೆ
ಗಡಣದಿ ಬೆಸಗೊಳುತಿರಲು
ಕಡುಸೊಕ್ಕಿದೆಕ್ಕಲ ಕಡೆಯಿಲ್ಲದೆ ತನ್ನ
ಪಡೆಯನು ಕೊಂದಿತುಯೆಂದ ೪

ವರಹಾವತಾರವು ತಿರುಗಿಲು ಗಜಾಸುರ
ತಿರುಗಿ [ತಾ] ಜನಿಸಿದ ತೆಱನೊ
ಮರಳೊಮ್ಮೆ ಮಹಿಷಾಸುರ ಹುಟ್ಟಿದನು ಹೇಳೆ
ತೆಱಹಿಲ್ಲ ರಾಯ ಚಿತ್ತೈಸು ೫

ಏಳು ರಾಯರ ಗಂಡ ಕೋಳಾಹಳನುಯೆಂಬ
ಕಾಲ ಪೆಂಡೆಯನಿಟ್ಟು ಬೇಗ
ದಾಳಿಯ ನಡೆಯೆಂದು ಹೇಳಲು ಕೋಪಿಸು-
ತಾಳಿಗೊಂಡನು ಭೂಮಿಪಾಲ ೬

ತೋಱು ತೋಱೆಲೊ ಹೇಡಿ ದೂರಬೇಡವ್ರೊಯೆಂದು
ತರಹರಿಸದೆ ನಡೆತಂದು
ವೀರರಾವುತ ಪರಿವಾರವೆಲ್ಲವು ತಲೆ-
ದೋಱಿತು ಹಂದಿಯಿದ್ದೆಡೆಗೆ ೭

ಬಿಡು ಬಿಡು ಕುನ್ನಿಯ ಎಡಬಲದಲಿ ಕಟ್ಟಿ
ಕಡಿ ಕಡಿ ನಿಟ್ಟೆಲು ಮುಱಿದು
ಹೊಡೆ ಕಾಲ ಸಂದನು ಬಿಡಿಸಿ ಬೆನ್ನೆಲುವನು
ಹೆಡ ತಲೆಯನು ತಿರಿಯುರ್ಚು ೮

ಮೆಳೆಮೆಳೆಗಳ ಸುತ್ತ ವಳಯವ ಕಟ್ಟುತ
ಕಳಕಳ ಬೊಬ್ಬೆಯ ರಭಸ
ತ[ಲಹಿ]ಲ್ಲದಂಬಿನ ಮಳೆಯನು ಸುರಿವುತ
ಬಲು ಬೇಡನಾಯಕರೆಸೆಯೆ ೯

ಕಡುಕೋಪದಲಿ ಹಂದಿ ಅಡವಿಯನೊಡೆವಂತೆ
ಘುಡುಘುಡಿಸುತ ಹೊಕ್ಕು ಹೊಡೆದು
ಕೆಡಹುತ ಬೇಡರ ನಡುಹೊಟ್ಟೆಯನು ತೋಳು
ತೊಡೆಗಳ ಕಡಿಖಂಡ ಮಾಡಿ ೧೦

ಕಾಯಬೇಕೆಲೆ ಜೀಯ ಮಾಯದ ಹಂದಿಯು
ಬಾಯ ತುತ್ತಾದೆವೆಂದೆನುತ
ಬಾಯ ಬಿಟ್ಟೋಡುವ ನಾಯಕರನು ಕಂಡು
ರಾಯನೇಱಿಸಿ ಬಿಲ್ಲ ಹಿಡಿದ ೧೧

ಕುಡಿದಾಡೆ ಮೊನೆಯಲಿ ಕಿಡಿಸೂಸಿ ಕಾರ್ಬೊಗೆ
ತುಡುಕುತ ತುದಿ ಮೂಗಿನುಸುರ
ಬಿಡುತಲಿ ಕಣ್ಣನು ಸಿಡಿಲಂತೆ ಗರ್ಜಿಸಿ
ಹೊಡೆವತಿ ಹಂದಿಯು ಕಂಡ ೧೨

ಧರಣೀಶ ಕೋಪದಿ ಸರಳ ತೊಟ್ಟೆಸೆಯಲು
ತಿರುಗಿತು ಬವರಿಯಾಟದಲಿ
ತರಹರಿಸುತ ಹಂದಿ ಮೊಱೆವುತ ಹಿಂದಕೆ
ತೆರಳಿತು ಲಾಗುವೇಗದಲಿ ೧೩

ಹರಿಣವೇಗದಿ ವಾಯು ಸರಳವೇಗದಿ ಚಿತ್ತ
ಹರಿವ ವೇಗದಿ ಹಂದಿ ಹಾಯ್ದು
ಹರಿತಂದು ಬೆನ್ನಟ್ಟಿ ಬರುತಿರೆ ಗಾಯಕೆ
ಸೊರಗುತ ಬಿಟ್ಟೋಡುತಿರಲು ೧೪

ನಡೆಗೆಡುವಂದದಿ ನಡುಗಿ ತಟ್ಟೊಱಗಿಯೆ
ಕೆಡೆವಂದದಲಿ ಥರಥರಿಸಿ
ಹೊಡೆದರೆ ಕಾಲಿಗೆಯೆಡ ದೂರವಾಗಿಯೆ
ಹಿಡಿದರೆ ಸಿಕ್ಕುವ ತೆಱದಿ ೧೫

ಅಸಮಾಯದಾಸೆಗೆ ಉಸುರಿಕ್ಕದ ಭೂಪ
ಬಿಸಿಲೊಳು ಬೆಂಡಾಗಿ ಬರುತ
ಭಸಿತ ರುದ್ರಾಕ್ಷಿಯ ಹೊಸ ಮುನಿಗಳ ಕಂಡು
ವಸುಧೇಶ ಕರಗಳ ಮುಗಿದ ೧೬

ಅನುವಾಗಿ ಎಕ್ಕಲ ಜುಣುಗಿತು ಕೌಶಿಕ
ಮುನಿರಾಯನಾಶ್ರಮದೊಳಗೆ
ಜನಪತಿ ಕಾಣುತ ವನದೊಳು ಬೆಂಡಾಗಿ
ಘನತರ ತೇರ ಬಂದಿಳಿದ ೧೭

ಫಲಭರದಲಿ ತೂಗಿ ಒಲೆದಾಡುವ ಮರ
ಗಿಳಿವಿಂಡು ಕೋಗಿಲೆ ರಭಸ
ಸುಳಿಗಾಳಿಯು ಸುತ್ತುವಳಯದಿ ತಾವರೆ
ಕೊಳ ತಂಪು ನೆಳಲು ವಿಶ್ರಮದ ೧೮

ಬಳಲಿ ಬಾಯಾಱಿಯೆ ಕೊಳದೊಳು ತಾವರೆ
ಯೆಲೆಯೊಳು ತಿಳಿನೀರ ಕುಡಿದು
ಕುಳಿತಿರೆ ಕೆಂದಳಿರನು ಹಾಸಿ ಕರ್ಪೂರ
ಹಳುಕಿನ ವೀಳ್ಯವ ಕೊಳುತ ೧೯

ವನದೊಳು ತಿರುಗುವ ಮುನಿಯೊಬ್ಬನನು ಕಂಡು
ಜನಪತಿ ಬೆಸಗೊಂಡನಾಗ
ಘನ ಪುಣ್ಯದಾಶ್ರಮವನವಾರದೆಂದರೆ
ಮುನಿ ವಿಶ್ವಾಮಿತ್ರನದೆಂದ ೨೦

ಹೊಱೆಯೆಂಬ ಕೀಲಿಸಿ ಮಱುಮೊನೆಗೊಂಡಂತೆ
ಮಱುಗುತ ಭೂಪಾಲನೆಂದ
ಹರಹರ ನಮ್ಮಯ ಗುರುವಾಜ್ಞೆಗೆಟ್ಟೆವು
ತೆರಳುವ ನಡೆಯೆಂದನಾಗ ೧೦

ನಮಿಸದೆ ತನ್ನಯಾಶ್ರಮದಿಂದ ಹೋದರೆ
ನಮಗೆ ಶಪಿಸುವನೆಂದೆನುತ
ರಮಣಿ ಪ್ರಧಾನಿಯು ಕ್ರಮದಿಂದ ಹೇಳಲು
ನಮೊ ನಮೊ ವಿರೂಪಾಕ್ಷಯೆಂದ ೧೧

ಗುರುವಾಜ್ಞೆಯನು ಮೀಱದಿರಲಾತ ಮುನಿದರೆ
ಪರಿಹರಿಸುವ ಬುದ್ಧಿಗಳನು
ಎರಡಕೆ ಬಿಟ್ಟಕಿ ಕಱುವಿನ ತೆಱನಂತೆ
ಧರಣೇಶ ಧ್ಯಾನಿಸುತಿದ್ದ ೧೨

ಮುಳುಗುತ ಚಿಂತಾಂಬುಧಿಯೊಳು ಭೂಪತಿ
ಲಲನೆಯ ತೊಡೆಯ ಮೇಲೊಱಗಿ
ಹಲವಂಗದೊಳು ಜೀವ ಬಳಲುತ ತೊಳಲುತ
ಬಲುನಿದ್ರೆಯನು ಮಾಡುತಿರಲು ೧೩

ಮನ ಬೆಚ್ಚಿ ಬೆದಱಿಯೆ ದಣಿದಂದದಲಿ ಕೆಟ್ಟ
ಕನಸನು ಕಂಡು ಭೂಪಾಲ
ತನುವನಲ್ಲಾಡಿಸಿ ವನಿತೆ ಪ್ರಧಾನಿಯ
ತನುಜನ ಮುಖವ ನೋಡಿದನು ೧೪

ಮಡದಿಯು ಕಂಗೆಟ್ಟು ಕಡಗವ ಕಳೆದಾಗ
ಬಿಡದೆ ನಿವಾಳಿಸಿ ಬಿಸುಟು
ತಡೆಯದೆ ನಯನಕೆ ತೊಡೆದಳು ಪನ್ನೀರ
ಕೊಡುತಲಿ ಕವಳ ವೀಳಯವ ೧೫

ಎಡವಂಕ ಬಲವಂಕ ಗಡಿಯಂಕ ರಾಯರ
ಹಿಡಿದಾಳಿ ವೈರಿರಾಯರನು
ಕಡಿದೊಟ್ಟುವ ಮಲ್ಲ ನಡುಗಿದೆಯೇಕೆಂದು
ನುಡಿಸಿದಳಾ ನಿಜರಾಣಿ ೧೬

ಬಾಲೆ ಹೂಂಕೊಳುತಿರೆ ಹೇಳಿದ ತನ್ನಯ
ಓಲಗ[ದ] ಶಾಲೆಯೊಳಗೆ
ಘೀಳಿಡಿಸುತ ಮುನಿಪಾಲನು ಬಂದೊಬ್ಬ
ಸಾಲುಗಂಬವ ಬೀಳಗಡಿದು ೨೮

ಒಡೆವನು ಹೊಂಗಳಸವ ತನ್ನ ಕೆಡವುತ
ಹಿಡಿದೊಯ್ದು ಸಿಂಹಾಸನವ
ನಡುಗುತ ಬೆಟ್ಟದೊಳಡಗುವೆ ಶಿವಶಿವ
ಮಡದಿಯಿನ್ನೇನ ಹೇಳುವೆನು ೨೯

ಇದಕಂಜದಿರಿ ನೀವುಯಿದು ವಿಶ್ವಾಮಿತ್ರನ
ಒದಗಿದ ಕೋಪಾಟೋಪಗಳು
ಬೆದಱಿಸಿ ಸಾಮ್ರಾಜ್ಯಪದವಿಯನಳಿವನು
ತುದಿಯಲಿ ಗಿರಿಯಾರೆ ಲೇಸು ೩೦

ಬೇಡಿಕೊಂಬೆನು ನಿಮ್ಮ ನಾಡಿಗೆ ಭಂಡಾರ
ಗೂಡಿ ನಮ್ಮಯ ಪ್ರಾಣಗಳಿಗೆ
ಕೇಡಾದರಾಗಲಿ ಪಾಡಳಿಯದೆ ಸತ್ಯ
ಗೂಡಿನೊಳಿಹುದೆಂದಳಾಗ ೩೧

ತರಳೆಯ ಮಾತಿಗೆ ಕರ ಲೇಸುಯೆನುತಿರೆ
ವರಮಂತ್ರಿ ಕರ ಮುಗಿದೆಂದ
ಗುರುವಾಜ್ಞೆ ಮೀಱಿದ ಪರಿ ಮುಂದುದೋಱುತ
ಬರುತಿದೆ ನಡೆಯೆನುತಿರಲು ೩೨

ಮೊರೆವುತಲಿತ್ತಲು ವರಾಹನು ಬಂದಿತು
ವರ ವಿಶ್ವಾಮಿತ್ರನಿದ್ದೆಡೆಗೆ
ತರಹರಿಸುತ ಬಾಯದೆಱವುತ ನೆತ್ತರ
ಸುರಿವುತ ಸೊರಗುತಲಾಗ ೩೩

ಎಡಬಲದಳ್ಳೆಯು ಹೊಡೆದಾಡಿ ತೇಕುತ
ಕುಡಿಲೋಳೆ ಕಟುವಾಯಿ ಸೂಸೆ
ನಡನಡುಗುತ ಹಂದಿ ಕೆಡೆಯಲು ಕೌಶಿಕ
ಕಡುಗೋಪದಲಿ ಕಣ್ಣ ತೆಱೆದ ೩೪

ಐದನೆಯ ಸಂಧಿ

ಸೂ|| ಮುನಿ ವಿಶ್ವಾಮಿತ್ರನ ಘನಕೋಪದಲಿ ಹುಟ್ಟಿ
ವನಿತೆಯರೈತಂದರಾಗ

ವರಾಹವ ಕಾಣುತ ಉರಿಕೋಪ ಮಸಗುತ
ಜಳಿದನು ಜಪತಪಗಳನು
ಬರಿಸಿದೆ ಭೂಪನ ಧರೆಯೊಳು ತನಗಾರು
ಸರಿಯೆಂದನಾ ವಿಶ್ವಾಮಿತ್ರ ೧

ಘುಡುಘುಡಿಸುತ ಕಣ್ಣ ಕಿಡಿಸೂಸಿ ಪೊಡವಿಯ
ಹೊಡೆದೆದ್ದು ಗರ್ಜಿಸುತಾಗ
ಕಡೆಯಿಲ್ಲದ ಕೋಪದೆಡೆಯಲ್ಲಿ ಹೊಲೆಜಾತ
ಮಡದಿಯರಿಬ್ಬರು ಜನಿಸಿ ೨

ಕುಲಜನಾಗಲಿ ಮುನಿ ತಿಲಕನಾಗಲಿಯಿಂತು
ಹೊಲೆ ಹುಟ್ಟುವುದು ಕೋಪದಿಂದ
ಹೊಲತಿಯರಿಬ್ಬರು ತೊಲಗುತ ನಿಂದಾಗ
ನಲವಿಂದ ಬೆಸನ ಬೇಡಿದರು ೩

ಜನ[ಪ]ಪದವಿಯ ಛತ್ರವನು ಬೇಡಿ ಹರಿಶ್ಚಂದ್ರ
ವನದೊಳಗೈದಾನೆಯೆನುತ
ಮನಮೆಚ್ಚಿ ಕೊಡದಿರೆ ವನಿತೆಯರಾಗವ-
ನನುವಾಗಿ ಕೊಂಡಾಡಿಯೆಂದ ೪

ಕಳುಹಿಸಿಕೊಂಡಾಗ ಮಲಯಜಗಂಧಿಯ-
ರೊಲವಿಂದ ನಡೆತರುತಿರಲು
ಹೊಳೆವಂದಿಗೆ ಘಮ್ಮು ಘಳಿಲೆಂದು ನುಡಿವುತ
ಕಳಹಂಸಗಮನೆಯರೆಸೆಯೆ ೫

ಒಳದೊಡೆ ಹೊಳೆವುತ ಬಳುಕುತ ನಡು ಕೊಬ್ಬಿ
ಬೆಳೆದ ನಿತಂಬವಾಡುತಲಿ
ಹೊಳೆವ ಹೊಂಗಳಸದ ನೆಲೆಮೊಲೆಯಲುಗುತ
ನಳಿತೋಳ ಬೀಸುತ ನಡೆಯೆ ೬

ಕಂಡರು ರಾಯನ ಕೊಂಡಾಡಿ ರಿಪುಗಜ
ಗಂಡಭೇರುಂಡಯೆಂದೆನುತ
ದಂಡಿಗೆವಿಡಿದಾಗ ಮಂಡಿಸಿ ಹಾಡುತ
ತಂಡತಂಡದ ರಾಗದಿಂದ ೭

ಗುರುವಾಜ್ಞೆ ಮೀಱಿದ ಹಿರಿದಾದ ಚಿಂತೆಯ
ವರಾಹದ ಬೆನ್ನಟ್ಟಿ ಬಳಲಿ
ವರ ವಿಶ್ವಾಮಿತ್ರನ ಧರಣಿಯ ಹೊಕ್ಕಂಜಿ
ನೆಱೆ ಕೆಟ್ಟು ಕನಸ ಕಂಡಳುಕಿ ೮

ಬಳಲಿಕೆಯೆಲ್ಲವ ಕಳೆದನು ಭೂಪತಿ
ತಲೆದೂಗಿದನು ಕೇಳುವೆಯಲಿ
ಹೊಳೆವ ಹೊಂದೊಡಿಗೆಯ ಕಳೆಕಳೆದೀಡಾಡೆ
ಲಲನೆಯರದನೊಲ್ಲೆವೆನುತ ೯
ಬಡವಗಾನೆಯನು ನೀರಡಸಲಾಜ್ಯವ ಕೊಟ್ಟು
ಮಡಿದವರಿಗೆ ರಾಜ್ಯಪದವ
ಕೊಡುವರೆ ನರೆದಲೆ ನಡುಗುವ ಮುದುಕಗೆ
ಮಡದಿ ಬಂದರೆ ಫಲವಹುದೆ ೧೦

ಬಲುಬಿಸಿಲಿಗೆ ನಾವು ಬಳಲಿ ಬಂದರೆ ನೀನು
ಹೊಳೆವ ಹೊಂದೊಡಿಗೆಯ ಕೊಡಲು
ನೆಳಲಾಗುವುದೆ ನಮ್ಮ ಕಳೆಯುಳ್ಳ ವದನಕೆ
ಸಲೆ ಕೊಡುವುದು ಸತ್ತಿಗೆಯನು ೧೧

ಗುರುಛತ್ರವಿದು ನಿಮಗಿರಬಾರದಿದು ನಮ್ಮ
ತರಣಿಯ ಕುಲದರಸುಗಳು
ನೆಳಲಲಿ ಬಂದರೆ ಪರಿಹಾರ ಪಾತಕ
ಮುಱಿದೋಡುವುದು ಪರಬಲವು ೧೨

ಕೊಡಬಾರದಿದ ಬಿಟ್ಟು ನುಡಿವುದು ಬೇಕಾದ
ಒಡವೆಯ ಕೊಡುವೆನೆಂದೆನಲು
ಕೊಡಬಾರದೊಡವೆಯ ಕೊಡಲಾಗ ಸೋಜಿಗ
ಕಡೆಯಿಲ್ಲದ ಕೀರ್ತಿ ಭೂಪ ೧೩

ಹರಿವಱಿಯದೆ ಜೇಡೆ ಹಱಿವುದೆ ಬಾಯೊಳು
ಮುಱಿಯದೆ ಮುಳ್ಳು ಮೂದಲಿಸಿ
ನೆಱೆ ಬೇಡಿದಂದದಿ ಧರೆಯೊಳು ಕೊಡುವರೆ
ಮರುಳಾಗುವರೆ ಬೇಡುವವರು ೧೪

ಬಲು ಬೇಡಿದುದು ಕೊಟ್ಟು ಕಳುಹನೆ ಶಿಬಿ ಮುನಿ
ತಿಲಕ ದಧೀಚಿಯೆಂಬವರು
ಕಳೆಯುಳ್ಳ ಕಾಯವನೊಲಿದಿತ್ತು ಕೀರ್ತಿಯ
ಗಳಿಸರೆ ಕೇಳು ಭೂಪಾಲ ೧೫

ಸತ್ಪಾತ್ರಗೊಲಿದಿತ್ತು ಗತಿಯನು ಪಡೆದರು
ಕ್ಷಿತಿಯೊಳು ಬೇಕಾದ ಬೆಳಸ
ಹಿತವಱಿಯದೆ ಬಿತ್ತಿ ಹತವಾಗುವರೆಯಿಂತು
ವ್ರತಗೆಡುವರೆಯೆಂದ ಭೂಪ ೧೬

ಎನ್ನ ಪ್ರಾಣಕೆ ಹೆಚ್ಚು ಉನ್ನತ ಗುರುಛತ್ರ-
ವಿನ್ನಿದ ಕೊಡಬಾರದೆಂದ
ಮನ್ನಿಸಿ ಕೊಡುವೆನುಯಿನ್ನೇನನಾದರೆ
ಭಿನ್ನವಿಲ್ಲದೆ ಬೇಡಿಯೆಂದ ೧೭

ಆಸೆ ಮಾಡಿ ನಿರಾಶೆಯಾಯಿತು ನಮ್ಮ
ಆಸಱಿಕೆಯನೆಲ್ಲ ಕಳೆದು
ಬೇಸಱಿಸದೆ ರಾಣಿವಾಸವ ಮಾಡಿ ಸಂ-
ತೋಷದಿ ಪಾಲಿಸು ಭೂಪ ೧೮

ತಲೆದೂಗಿ ಬೆಱಗಾಗುತಲಿ ಭೂಪ ನುಡಿದನು
ಹೊಲಬುಗೆಟ್ಟಿತು ಕಲಿಯುಗವು
ಅಳವಲ್ಲದ ರವಿಕುಲದೊಳು ತಾನೊಬ್ಬ
ಹೊಲೆಗಲಸುವನಲ್ಲವೆಂದ ೧೯

ಪರಿಮಳ ಮೃಗದೊಳು ಸರಸಿಜ ಕೆಸರೊಳು
ನೊರೆವಾಲು ಸುರಭಿಯೊಳಿರಲು
ಬೆಱೆವರೆ ಹೊಸ ಹೊನ್ನಾಭರಣದಿ ತಮ್ಮಯ
ಮೆಱೆವತಿ ಚೆಲುವಿಕೆಯಿರಲು ೨೦

ತಿಳಿದರೆ ಬಚ್ಚಲವೊಳಗಿದ್ದ ಉದಕವ
ಬಳಸುವರುಂಟೆ ಬಣ್ಣಿಸುತ
ಸಲಹಿದ ನಾಯಿಗೆ ಮೊಲೆಯೊಳು ಹಾಲಿರೆ
ಫಲವೇನು ಹೋಗೆಂದು ಜಜೆದ ೨೧

ನೋಡಲು ನಯನ ಮಾತಾಡಲು ನಾಲಗೆ
ಹಾಡಲು ಕೇಳಿ ಕರ್ಣದಲಿ
ಸೂಡಿದ ಹೂವೆಲ್ಲಗೂಡಿದ ಪರಿಮಳ
ಓಡಿತ್ತು ನಿನ್ನ ಮೂಗಿನಲಿ ೨೨

ನಾಕು ಇಂದ್ರಿಯ[ವೆ]ವೆಲ್ಲ ನೂಕುನುಗ್ಗಾಗುತ
ಏಕೆ ಭೋಗಿಸಿ ಹೊಲೆಯೊಳಗೆ
ಸಾಕೆನ್ನ[ದ]ವಜೊಳು ನೀಕರಿಸುತವೊಂದು
ಏಕೆವೊಲ್ಲದು ಕೇಳು ಭೂಪ ೨೩

ವಿಷವೆಂದು ಕೇಳಲುವೊಸೆದು ಮಾತಾಡಲು
ಎಸೆವತಿ ವಾಸನೆಗೊಳಲು
ಹಸನಾಗಿ ನಯನ ನಿಟ್ಟಿಸಲಾಗಿ ಸಾವರೆ
ವಸುಧೆಯೊಳದ ಕುಡಿಯೆನಲು ೨೪

ಹೊಲೆಸಂಗವಿಲ್ಲವು ಹೊಲೆಗೋಷ್ಠಿಯಿಲ್ಲವು
ಹೊಲೆದನಿಯನು ಕೇಳಲಿಲ್ಲ
ಹೊಲೆ ಸಲಿಗೆಯ ಮಾಡಿಕೊಳಲಾಗ ಹಾದಿಯ
ಕುಲಜಗೆ ಕೊಡರೆಂದ ಭೂಪ ೨೫

ತೊಳೆವುದು ನಿನ್ನಯ ಕುಲದಲಿ ಹೊಲೆಯನು
ಕಳೆದಾಗ ಶುದ್ಧ ಮಾಡೆನಲು
ಹೊಲೆಗಲಸಿದರೇನು ಫಲವುಂಟು ನಿಮಗೆನ್ನ
ಕುಲವನು ಕೆಡಿಸಲೇನೆಂದ ೨೬

ಜಳಕವ ಮಾಡಲು ತೊಳೆದತಿ ಪಾಪಕೆ
ಒಳಗಾಗುವಳೆ ಗಂಗೆ ಭೂಪ
ಅಳವಡದ ಮಾತು ಹುಳಿಯೊಳು ಹಾಲನು
ಕಲಸಲುಬಹುದೆ ಕೇಳೆಂದ ೨೭

ಹಲವು ಮಾತೇತಕೆಯೆಲೆ ಭೂಪ ನಿನ್ನಯ
ಚೆಲುವಿಕೆಯನು ಕಂಡು ನಾವು
ಸಲೆವೊಲಿದೆವು ನಿನ್ನ ಬಲೆಗೊಳಗಾದೆವು
ಬಳಲಿಸಬೇಡವಿನ್ನೆನುತ ೨೮

ಗಂಡನಾಗದೆ ನೀನುದ್ದಂಡತನವನು ಮಾಡೆ
ಕಂಡಲ್ಲಿ ಸಾಱಿ ದೂಱುವೆವು
ಹೆಂಡತಿಯರ ಮಾಡಿಕೊಂಡಲ್ಲದಿರಲಿನ್ನು
ಭಂಡ ಮಾಡದೆ ಬಿಡೆವೆನಲು ೨೯

ಪೊಡವೀಶ ಕೋಪದಿ ಎಡಬಲವನು ನೋಡಿ
ಹೊಡೆ ಬಾಯ ಕಳೆ ಹಲ್ಲನೆಂದ
ತಡೆಯದೆ ಮಂತ್ರಿಯು ಬಿಡದೆದ್ದು ಬೆನ್ನೊಡೆ
ಬಡಿದನು ಚಮ್ಮಟಿಗೆಯಲಿ ೩೦

ಹೊಕ್ಕಲ್ಲಿ ಹೊಗುವನು ಒಕ್ಕಲಿಕ್ಕುತಲೊಂದು
ಲೆಕ್ಕವಿಲ್ಲದೆ ಸದೆಬಡಿದ
ಮುಕ್ಕುಳಿಸುತ ನೆತ್ತರೆಕ್ಕೆಯಲಿರೆ ಮುನಿ
ರಕ್ಕಸಗೊದಱುತ ನಡೆಯೆ ೩೧

ಒಱಲುವ ದನಿಗೇಳಿ ವರ ವಿಶ್ವಾಮಿತ್ರನು
ಹೊಱವಂಟು ಪರ್ಣಶಾಲೆಯನು
ಕರ ಉಗ್ರಕೋಪದಿ ಕರೆಯಲು ಬಾಯನು
ಬಿಱಿಯುತ ಮೊಱೆಯಿಟ್ಟರವರು ೩೨

ಧರಣೇಶ ನಮ್ಮನು ಪರದೇಶಿಗಳ ಮಾಡಿ
ಕೊರಡೆಯಿಂದಲಿ ಕೊಂದ ನೋಡು
ಹೊರಳಿಸಿ ಹಲುಗಳ ಮುಱಿಯಲು ನೆತ್ತರು
ಸುರಿಯಲು ಬೆನ್ನೊಡೆ ಬಡಿದ ೩೩

ನಿನ್ನವರೆಂದರೆ ಮನ್ನಿಸಿ ಉಡುಗೊಱೆ
ಬೆನ್ನೊಡೆಯಲು ಹೊಱಿಸಿದನು
ಎನ್ನ ಹರಕೆಯು ಬಂತು ಇನ್ನಂಜದಿರಿಯೆಂದು
ಮನ್ನಿಸಿದನು ವಿಶ್ವಾಮಿತ್ರ ೩೪

ಆರನೆಯ ಸಂಧಿ

ಸೂ|| ಮುನಿ ವಿಶ್ವಾಮಿತ್ರನು ಜನಪತಿಗಪರಾಧ-
ವನುಯಿಟ್ಟು ಸಾಮ್ರಾಜ್ಯಗೊಂಡ

ಸಿಡಿಲು ವಿಭೂತಿಯ ಜಡೆಯೊಳು ಧರಿಸಿದ
ವಡಬಾಗ್ನಿಯೊ ಮಹಾದೇವ
ಕಡೆಗಣ್ಣ ನೋಟದಿ ಕಿಡಿ ಸೂಸಿ ಗರ್ಜಿಸಿ
ನಡೆತರಲಾ ವಿಶ್ವಾಮಿತ್ರ ೧

ಬರಲಾಗ ರಾಯನ ತರುಣಿಯು ಕಂಡಳು
ಗುರುವಾಜ್ಞೆ ಮೀಱಿದ ಫಲವು
ಧರಣೀಶ ನೀ ಕಂಡ ವರ ಕನಸಿನ ಫಲ
ಹರ ಹರ ನೋಡೆಂದಳಾಕೆ ೨

ಪರಿಪರಿ ರತ್ನವ ಸುರಿವುತಲಿದಿರೆದ್ದು
ಚರಣಕೆ ಮಕುಟವ ಚಾಚಿ
ಶರಣೆನ್ನಲಾ ಕೋಪಭರದಲಿವೊದೆದನು
ಮೊಱೆವುತಲಾ ವಿಶ್ವಾಮಿತ್ರ ೩

ಇಂದು ಧನ್ಯನು ನಾನು ಕುಂದದೆ ಪರುಷವ
ಹೊಂದಿದ ಲೋಹದಂತಾದೆ
ಕಂದನ ಹಣೆ ತಾಗಿ ನೊಂದವು ಶ್ರೀಪಾದ
ತಂದೆ ಮುನೀಂದ್ರ ಪಾಲಿಪುದು ೪

ಧರಣೀಶ ನಿನ್ನಿಂದ ಚರಣದ ಮಾತೇನು
ಉರಿದೆದ್ದು ಸರ್ವಾಂಗ ನೊಂದು
ತರಹರಿಸದುಯಿನ್ನುಯೆಱಗಿ ಬೋಸರಿಸಲು
ಕರುಣವಿಲ್ಲವು ಕೇಳು ಭೂಪ ೫

ಬಿಱುಗಾಳಿ ಬೀಸದು ಅರೆಮಳೆಗಱೆಯದು
ಉರಿಬಿಸಿಲಿಲ್ಲದಾಶ್ರಮವು
ಸುರರಂಜುವರು ನಮ್ಮ ಸಿರಿವನಗಳ ಹೊಕ್ಕು
ಬರಲೇನು ಕಾರಣವೆಂದ ೬

ಕೆಱೆ ಬಾವಿ ಬತ್ತಿತು ತರುವನವೆಲ್ಲವು
ಮುಱಿದವು ನೀ ದಂಡ ಬಿಡಲು
ಬೆಱಗಾಗಿ ತೋಱೆಂದು ಧರಣೇಶ ನುಡಿಯಲು
ವಿರಚಿಸಿ ತೋರಿದ ಮುನಿಪ ೭

ಹಳದಾಗಿ ಬತ್ತಿದ ಕೊಳಗಳನೆಲ್ಲವ
ಕೊಳೆತೊಱಗಿದ ಮುದಿಮರನ
ಹಲಕಾಲ ವನದೊಳಗಳವಟ್ಟ ಹಂದಿಯ
ಕೊಲೆಯನು ನೋಡು ಭೂಪಾಲ ೮

ಹುಟ್ಟಿಸಿ ಪಾಲಿಸಿ ನಿಟ್ಟೊರಸಲು ಬಲ್ಲ
ದಿಟ್ಟ ಮಹಾತ್ಮರು ನೀವು
ನೆಟ್ಟನೆ ಮುನಿದರೆ ಕೆಟ್ಟೆನು ನಾ ನಿಮ್ಮ
ತೊಟ್ಟಿಲ ಶಿಶುವೆಂದ ಭೂಪ ೯

ಪಾಲಿಸಿದನುವೊಂದು ವೇಳೆಗೆಯೆನ್ನಯ
ಬಾಲಕಿಯರನೇಕೆ ಬಡಿದೆ
ಹೇಳುವುದೆನೆ ಮುನಿಪಾಲಗೆ ಧಾರುಣಿ
ಪಾಲನು ಕರ ಮುಗಿದೆಂದ ೧೦

ಪಟ್ಟದ ಸತ್ತಿಗೆ ನೆಟ್ಟನೆ ಬೇಡಿ ಮನ-
ವಿಟ್ಟರು ಮದುವೆಯಾಗೆನುತ
ಸೃಷ್ಟಿಯೊಳೆನ್ನನು ಕೆಟ್ಟಾಡುವೆವುಯೆಂದು
ಪೆಟ್ಟ ಹಾಕಿಸಿಕೊಂಡರವರು ೧೧

ಮೆಟ್ಟಿ ಮೂಗರಿಸುವೆ ಹೆಟ್ಟಕ್ಕೆ ಹೊಟ್ಟೆಯ
ಕಟ್ಟಿಯೆಳಸುವೆ ನಾನವರ
ಥಟ್ಟನೆ ನಿನ್ನವರೆನಲಾಗ ಕರುಣಿಸಿ
ಬಿಟ್ಟೆನು ಕೇಳೆಂದ ಭೂಪ ೧೨

ಸುಡುವೆನು ನಿನ್ನಯ ಪೊಡವಿಯನೆಲ್ಲವ
ಹುಡಿಬಡಿಸುವೆ ಬೆನ್ನ ಬಿಡದೆ
ತಡೆಯದೆ ಮಕ್ಕಳ ಬಡಿದರೆ ಕೈಗಳ
ಕಡಿಸುವೆ ಕೇಳೆಂದ ಮುನಿಪ ೧೩

ಪರಚಿಂತೆಯಿಲ್ಲದೆ ಪರಬ್ರಹ್ಮದಲಿ ಇಹ
ಪರ[ವ] ಸೇರುವ ಮುನಿಗಾಗ
ಪರರನು ಕೆಡಿಸುವ ಗುರುಮಂತ್ರ ಲೇಸೆಂದು
ಧರಣೀಶ ನಗೆಯಿಂದ ನುಡಿದ ೧೪

ಕೆಟ್ಟಾಡಿದುದಕಿನ್ನು ನಿಟ್ಟೊರಸುವೆ ನಿನ್ನ
ಹುಟ್ಟಲಿ ಹೆಸರಿಲ್ಲದಂತೆ
ನಷ್ಟನ ಮಾಡಿ ವಸಿಷ್ಠನ ನಿನಗಾಗಿ
ಬಿಟ್ಟೋಡಿಸುವೆ ಕೇಳೆಂದ ೧೫

ತರಳೆ ಕುಮಾರನು ಧರಣೀಶ ಮಂತ್ರಿಯು
ತರಹರಿಸದೆ ಕೈಯ ಮುಗಿದು
ತರಳನ ಗುಣದೋಷ ಮಱೆವುದು ಮುನಿರಾಯ
ಕರುಣಿಸುಯೆಂದೆಱಗಿದರು ೧೬

ವನದೊಳಗಿಳಿದೆನ್ನ ತನುಜೆಯರನು ಕೊಂದು
ಮುನಿತನವನು ಕೆಟ್ಟು ನುಡಿದು
ಘನತರದ ಕೋಪವನು ಬಿಡುಯೆಂಬುದು
ಅನುವಾಯಿತನುವಾಯಿತೆಂದ ೧೭

ಬಿಡುವೆನು ಕೋಪವ ಬಿಡದೆನ್ನ ಮಕ್ಕಳ
ಮಡದಿಯರನು ಮಾಡಿಕೊಳಲು
ನಡುಗುತ ಕರ್ಣಕೆ ಇಡಿದನು ಬೆರಳನು
ನುಡಿಯಲ್ಲ ಶಿವಶಿವಯೆಂದ ೧೮

ಧರಣೀಶರೊಳು ಕುಂದುಕೊಱತೆಯು ಕಂಡರೆ
ಪರಿಹರಿಸುವ ಬುದ್ಧಿಗಳನು
ಕರುಣಿಸುವುದು ಗುರುಹಿರಿಯರು ಹೊಲತಿಯ
ನೆರೆಯೆಂಬ ಗುರುಮಂತ್ರ ಲೇಸು ೧೯

ಹೊಲತಿಯರೆನುತಲಿ ಚಲನೆವದಲಿ ನಮ್ಮ
ಹೊಲೆಯರ ಮಾಡಿದೆಯೆನಲು
ಜಲದೊಳು ಜನಿಸಿದ ಹುಳುವನು ಗಂಗಾ
ಜಲ ಹೋಲುವುದೆಯೆಂದ ಭೂಪ ೨೦

ಧರಣಿಯನಾಳಿದ ಹಿರಿದಾದ ಪಾಪದ
ಶರಧಿಗೆಯಿದು ಹೆಚ್ಚೆ ಭೂಪ
ನೆಱೆ ತುಂಬಿದ ಬಂಡಿಗೆ ಮೊಱಸೊಂದು ಭಾರವೆ
ಹಿರಿಯರ ಮಾತ ಮನ್ನಿಪುದು ೨೧

ಮೃಡಪೂಜೆ ಗುರುಭಕ್ತಿಗೆಡೆ ದೂರ ಮುನಿ ವಿಪ್ರ-
ರಡಿಯನಾರಾಧಿಸದಾಗ
ಒಡವರ ಬಳಲಿಸಿ ಕಡುಮೂರ್ಖತನದಿಂದ
ನಡೆದವರಿಗೆ ಪಾಪ [ಭೂಪ] ೨೨

ಹಿರಿದೋದಿ ನೀನಿಂತು ಹಿರಿಯರ ಮಾತನು
ಮುಱಿದರೆ ಮುಕುತಿಸಾಧನವೆ
ಕರಗಳ ಮುಗಿದೊಮ್ಮೆ ಸೆಱಗೊಡ್ಡಿ ಬೇಡುವೆ
ಧರಣೀಶ ಕರುಣಿಸುಯೆಂದ ೨೩

ಕೊಡುವೆನು ಬೇಡಲು ಪೊಡವಿಯನೆಲ್ಲವ
ಕೊಡಲಾಱೆ ಈ ಮಾತನೆನಲು
ಬಿಡದಾಗ ಸಾಕೆಂದು ಒಡಗೂಡಿ ಮುನಿಗಳ
ಒಡನಿತ್ತ ಮಂತ್ರವಾಸರವ ೨೪

ಧರಣಿಯ ಧಾರೆಯ[ವರ] ವಿಶ್ವಾಮಿತ್ರಗೆ
ಎಱೆದನು ಹರಿಶ್ಚಂದ್ರನೆನುತ
ವರತಪೋವನಕೆಲ್ಲ ಧರಣಿಗೆ ಡಂಗುರ
ಹರುಷದಿ ಸಾಱೆಂದ ಮುನಿಪ ೨೫

ಬೆಱಗಾಗಿ ಮೂಗಿಗೆ ಬೆರಳಿಟ್ಟು ಭೂಪತಿ
ಮರುಳಾಗಿ ಮರಳೊಮ್ಮೆ ನುಡಿದ
ಖರೆಯವೆ ಧಾರೆಯನೆಱೆದುದು ಮುನಿರಾಯ
ಬಱಿದಿಗೆ ಭಂಡ ಮಾಡುವರೆ ೨೬

ನಗೆ ಮಾತಿಗಾಗಳೆ ಜಗದೊಳು ದೂಱುವ
ಬಗೆಯಿದು ಲೇಸೆಂದ ಭೂಪ
ನಗೆಯಲಿ ಕೊಟ್ಟರೆ ನಗುತಲಿ ಕೊಂಡೆವು
ಜಗಳವುಯಿಲ್ಲೆಂದ ಮುನಿಪ ೨೭

ವಸುಧೆಯ ಬಿಡಲಾಜೆ ಹುಸಿಕನಾಗಿರಲಾಜೆ
ಶಶಿಮುಖಿಯರ ಸೇರಲಾಜೆ
ದೆಸೆದೆಸೆಯೊಳು ನಿನ್ನ ಹೆಸರೆಂತುಯೆಸೆದುದು
ದೆಸೆಯುಳ್ಳ ಹರಿಶ್ಚಂದ್ರನೆನುತ ೨೮

ನುಡಿ ಹುಸಿಯೆನಿಸಿಯೆ ಬಿಡುವೆನಲ್ಲದೆಯಿನ್ನು
ಒಡಲಿಂದ ಬಂದ ನಾರಿಯರ
ಒಡಗೂಡಿದರೆ ನಿನ್ನ ಪೊಡವಿಯ ಮಾತೇನು
ಕೊಡುವೆನು ಸಕಲಸಂಪದವ ೨೯

ತಳಬೇರ ಬಲ್ಲವಗೆಲೆದೋಱುವರೆಯೆನ್ನ
ಅಳಬಳಗಳ ನೋಡಬೇಡ
ಚಲದಿಂದ ನುಡಿದಿನ್ನು ಹಳುವರವಾಗಿಯೆ
ಕಳೆಗುಂದದಿರು ಮುನಿಪಾಲ ೩೦

ಗಳಹಿ ಮಾತಾಡಲುಯೆಲೊ ನಿನ್ನ ಕುಲವನು
ಹೊಲೆಗಲಸುವೆನು ನೋಡೆಂದ
ಲಲನೆಯರ ಸಂಗದೊಳು ಬಂದ ಪಾಪವ
ಕಳೆಯಲಾಜೆನೆ ಕೇಳು ಭೂಪ ೩೧

ಮುನಿಪ ವಸಿಷ್ಠನ ಘನಶಾಪದಲಿ ನಿಮ್ಮ
ಜನಕ ತ್ರಿಶಂಕನು ಹೊಲೆಯ
ಮನವಱಿಯಲು ನಾವಂದಿನಕೆ ಉದ್ಧರಿಸಲು
ಪುನೀತನಾದ ಭೂಪಾಲ ೩೨

ಕೆಡಲೇಕೆ ನೀ ಶುದ್ಧವಿಡಲೇಕೆ ಕೋಪಿಸಿ
ನುಡಿದರೆ ನುಡಿ ಮುನಿಪಾಲ
ಪೊಡವಿಯನೆಲ್ಲವ ಕೊಡುವೆನು ಬಾಯನು
ಬಡಿಯದೆ ನಡೆಯೆಂದ ಭೂಪ ೩೩

ಮುನಿ ವಿಶ್ವಾಮಿತ್ರನು ಜನಪತಿಯ ದಿಟ್ಟ-
ತನವನು ಕಂಡು ಕಂಗೆಡುತ
ಮನದೊಳು ಮಱುಗದೆ ವನಿತೆ ಪ್ರಧಾನಿಯ
ತನುಜನ ಕೇಳೆಂದ ಮುನಿಪ ೩೪

ತರುಣಿಯರನು ಕೇಳಿ ಧರಣಿಯನಾಳುವ
ಅರಸಿನ ಮಗನು ನಾನಲ್ಲ
ಹರುಷದಿ ಕೊಡುವೆನು ಕಿಱುಕುಳುಪದ್ರವ
ಪರಿಹರಿಸುವುದೆಂದ ಭೂಪ ೩೫

ಕರ ಲೇಸು ಭೂಮಿಯ ಕರದೊಳು ಧಾರೆಯ-
ನೆಱೆಯೆಂದನಾ ವಿಶ್ವಾಮಿತ್ರ
ಧರೆಯೊಳು ಬೇಗೆಯನಱಿಯಲಾಪೋಶನ-
ವೆಱೆವರೆ ಅಗ್ನಿಗೆ ಮುನಿಪ ೩೬

ಬಡಮನವನು ಮಾಡಿ ಕೊಡಲಾಱೆ ಭೂಮಿಯ
ಬಿಡದೆನ್ನ ಹೆಣ್ಣುಮಕ್ಕಳನು
ಒಡಗೂಡುವುದು ಮುನ್ನ ಮೃಡನ ಪೂಜೆಯ ಮಾಡಿ
ಪಡೆದವರಿಗೆಯಿಲ್ಲ ಭೂಪ ೩೭

ಎನಲಾಗ ಕೋಪದಿ ಜನಪತಿ ಧಾರೆಯ
ಮುನಿವಿಶ್ವಾಮಿತ್ರನಿಗೆಱೆದ
ಮನವೊಲಿದಿತ್ತನು ಘನಸಪ್ತದ್ವೀಪವ
ಮನೆಯ ಭಂಡಾರವೆಲ್ಲವನು ೩೮

ಏಳನೆಯ ಸಂಧಿ

ಸೂ|| ವರ ವಿಶ್ವಾಮಿತ್ರಗೆ ಅರಮನೆಯೊಪ್ಪವ
ಧರಣೀಶ ತೋಱಲು ನಡೆದ

ಕರಗಳ ಮುಗಿವುತ ಹರುಷದಿ ಸಾಷ್ಟಾಂಗ-
ವೆಱಗುತ ಭೂಪತಿ ಮುನಿಗೆ
ಹರಕೆಯ ಬೇಡಲು ಬರಲಾಗ ಮುನಿಪನು
ಹರುಷದಿ ಹೋಗು ಹೋಗೆಂದ ೧

ಹರಣವುಳ್ಳರೆ ಹಾಡಿ ಹರಿದುಂಬೆ ಶಿವಶಿವ
ನೆಱೆ ಜೀವದಲಿ ಬಿಟ್ಟನೆನುತ
ಹರಿತಂದು ರಥವೇಱ ಬರುತಿರೆ ಬೆನ್ನಟ್ಟಿ
ಕರಸಿದನಾ ವಿಶ್ವಾಮಿತ್ರ ೨

ನಡೆತಂದು ಕೇಳಲು ಪೊಡವೀಶ ನಿನ್ನ ಹೊಂ-
ದೊಡಿಗೆಯ ಸಾಮ್ರಾಜ್ಯದೊಳಗೆ
ಒಡವೆಯ ಕೊಡುಯೆಂದು ನುಡಿಯಲು ನಾಲ್ವರು
ಸಡಿಲಿಸಿ ಕೊಟ್ಟರು ಮುನಿಗೆ ೩

ಉಟ್ಟ ಸೀರೆಯನೆಲ್ಲ ಬಿಟ್ಟು ಹೋಗೆನುತಲಿ
ಧಟ್ಟಿಸಿ ನುಡಿದನು ಮುನಿಪ
ಕೊಟ್ಟನು ಒಬ್ಬನು ಉಟ್ಟಱವೆಯ ನಾಲ್ಕು
ಬಟ್ಟೆಯ ಮಾಡಿ ನಾಲ್ವರಿಗೆ ೪

ಅಱವೆಯನುಟ್ಟು ದಿವ್ಯಾಂಬರವನು ಬಿಟ್ಟು
ಮಱುಗದೆ ಮನಮುಟ್ಟಿ ಕೊಟ್ಟ
ಧರಣೀಶ ತಲೆವಾಗಿ ತೆರಳಲು ನೇಮವ
ಪರಿವಿಡಿಯಲಿ ಕೊಂಡು ನಡೆದ ೫

ಹೋಗಲು ಬಿಟ್ಟು ಮತ್ತಾಗಲೆ ಹಿಂದಕ್ಕೆ
ಬೇಗದೆ ಕರಸಿ ಕೇಳಿದನು
ಯಾಗವ ಮಾಡಿದ ಅಂದಿನ ಹೊನ್ನಿಗೆ
ಹೇಗೆ ಮಾಡಿದೆಯೆಂದ ಮುನಿಪ ೬

ಧನವನು ಭಂಡಾರವನು ತುಂಬಿ ಬೀಯಗ-
ವನು ಮಾಡಿಯದೆ ಹೋಗುಯೆಂದ
ಕನಸಲಿ ಹೊನ್ನಿಲ್ಲ ಚಿನಿವಾಲದವನಾದೆ
ಮುನಿರಾಯ ಕಾಡಬೇಡೆಂದ ೭

ಸೃಷ್ಟಿಯವೊಳಗೆಲ್ಲ ಹುಟ್ಟಿದ ಭಂಡಾರ
ಅಷ್ಟೆಲ್ಲ ಮುನಿ ತನ್ನದೆನಲು
ಒಟ್ಟಿಲನೊಪ್ಪಿಸಿ ಕೊಟ್ಟರೆ ಸುಂಕವ
ಕೊಟ್ಟು ಹೋಗೆಂಬರೆ ಮುನಿಪ ೮

ಕರಿಯನು ಮೆಟ್ಟಿಯೆ ಕರವೆತ್ತಿ ಕವಡೆಯ
ಬೆರಳಿಂದ ಮಿಡಿದುದ್ದ ಧನವ
ಧರಣಿಯವೊಳಗಿನ್ನು ಅಱುಹುತ ಧಾರೆಯ-
ನೆಱೆದರೆ ಬಿಡುವೆನು ಭೂಪ ೯

ಹೊತ್ತ ಸಾಲವುಯಿನ್ನು ಸತ್ತರೆ ಬಿಡುವುದೆ
ಮರ್ತ್ಯಕೆ ಕೈಲಾಸದೊಳಗೆ
ಎತ್ತಲು ಹೋದರೆ ಅರ್ಥವ ಬಿಡೆ ನಿನ್ನ
ಪೃಥ್ವಿಯ ಕೋಯೆಂದ ಮುನಿಪ ೧೦

ಕೊಡುವೆನು ಸಾಲವ ತಡೆದೀಸುಕೊಂಬರೆ
ಕೊಡು ನಿನ್ನ ಧನಕೊಂದು ಗಡುವ
ಪೊಡವೀಶ ನುಡಿಯಲು ಕೊಡು ಹತ್ತು ದಿನಕೆಂದು
ನುಡಿಯಲಿಕನುವಾಗದೆಂದ ೧೧

ಮುನಿಪಾಲಯಿಪ್ಪತ್ತು ದಿನವೆಂದು ಹೇಳಲು
ಧನ ಹುಟ್ಟದೆಂದನು ಭೂಪ
ಮನಮುಟ್ಟಿ ಮೂವತ್ತು ದಿನವೆಂದು ಹೇಳಲು
ಜನಪತಿ ತಾ ಬೇಡಿಕೊಂಡ ೧೨

ಕರಗಳ ಮುಗಿದಾಗ ಹಿರಿದಾಗಿ ಬೇಡಿದ
ನೆಱೆ ನಾಲ್ವತ್ತೆಂಟನೆ ದಿನವ
ತೆಱಕಾಱಿನ ಕೊಟ್ಟು ಕರುಣಿಸಬೇಕೆಂದು
ಚರಣಕೆ ಪೊಡಮಟ್ಟ ಭೂಪ ೧೩

ಕೊಲ್ಲದೆ ತೆಱಕಾಱಗೆಲ್ಲ ಹೊನ್ನನು ಕೊಟ್ಟು
ನಿಲ್ಲದೆ ಕಳುಹುವುದೆನುತ
ಅಲ್ಲದಾಣೆಯ ಮಾಡಿದಲ್ಲದೆ ಭೂಪತಿ
ಯಿಲ್ಲಿಂದ ಹೋಗಬೇಡೆಂದ ೧೪

ಹರನಿಂದೆ ಗುರುನಿಂದೆ ಪರನಿಂದೆಯನು ಮಾಡಿ
ಮಱುಗಿಸಿ ತಾಯಿತಂದೆಯರ
ನರಕಕೆ ನಡೆವರ ಸರಿಯಾಗುವೆನು ನಿಮ್ಮ
ತೆಱಕಾಱಗೆರಡ ಮಾಡಿದರೆ ೧೫

ಪೊಡವಿಪ ಬಿನ್ನವಿಸಿ ಹೊಱವಂಟು ತೆಱಕಾಱ-
ನೊಡಗೂಡಿ ನಡೆಯಲು ಮುನಿಪ
ಬಡ ಮನದವನಲ್ಲ ನುಡಿದರೆ ಹುಸಿಯಿಲ್ಲ
ನಡುಗದೆ ಇವ ಹೋದನೆಂದ ೧೬

ಹಸಿದರೆ ಲೋಹದ ಹೊಸ ಚೂರ್ಣ ಉಕ್ಕಿನ
ಮಸೆದ ಸೂಜಿಯ ಮೇಲೆ ಶಿರವ
ಪಸರಿಸಿ ಪಂಚಾಗ್ನಿ ಮಿಸುಕಲೀಯವುಯೆನ್ನ
ಹೆಸರುಳ್ಳ ತಪ ಹೋಯಿತೆಂದ ೧೭

ಶರದಶಕದ ಕೋಟಿ ವರುಷದ ತಪವಿದ್ದು
ಹರುವಾಯಿತಿವನಿಂದಲೆನುತ
ಸರಿಮುನಿಗಳುಯೆಲ್ಲ ಜಱೆವರು ತಪವಿದ್ದು
ಮರುಳಾಗಿ ಹೋಗಾಡಿದೆನು ತಾ ೧೮

ಇಱಿದುಕೊಂಬೆನುಯೆಂದು ತರಹರಿಸದೆ ನೋಡಿ
ಮರಳೊಂದು ಬುದ್ಧಿಯ ನೆಸೆವ
ಪುರದ ವಿನೋದದ ತರುಣಿಯರನು ನೋಡಿ
ಮಱುಗನೆಯಿವನೆಂದು ಮುನಿಪ ೧೯

ಕರೆಕರೆಯೆನಲಿಕೆ ಕರೆದರೆ ಭೂಪತಿ
ತರಹರಿಸದೆ ಬಂದು ನಿಂದ
ಕರಗಳ ಮುಗಿದಾಗ ಕರೆಸಿದ ಪರಿಯೇನು
ಕರುಣಿಸಬೇಕೆಂದ ಭೂಪ ೨೦

ಕಲಿದುರ್ಗ ಪರರಿಗೆ ಅಳವಲ್ಲ ಪುರಜನ
ಕಲುಮಳೆಗಜೆದು ಕೊಲ್ಲುವರು
ಹೊಲಬಜಿಯೆವು ಬಂದು ಒಲಿದೊಪ್ಪಿಸಿಯೆ ಹೋಗು
ನಲವಿಂದ ಸಕಲಸಂಪದವ ೨೧

ತಡವೇಕೆ ರಥವೇಜಿ ನಡೆಯೆಂದು ಭೂಪತಿ
ನುಡಿದರೆ ಮುನಿ ಒಲ್ಲೆನೆಂದು
ಪೊಡವಿಯನೊಪ್ಪಿಸಿ ಕೊಡಲಾಗಯೇಜುವೆ
ತಡೆಯದೆ ರಥವೇಱು ಭೂಪ ೨೨

ಕೊಟ್ಟ ದಾನವ ಕೊಂಡು ನಷ್ಟನಾಗುವನಲ್ಲ
ನೆಟ್ಟನೆ ನಾ ಮಾಡಿದುದನು
ತಟ್ಟನೆ ನಾ ಮನಮುಟ್ಟಿ ಮಾಡುವೆ ಹೊನ್ನು
ಹುಟ್ಟಲು ದಿನವಿಲ್ಲವೆಂದ ೨೩

ಜಿನ್ನಾಣೆ ಮಾತಾಡಿ ಬೆನ್ನಲೋಡುವೆ ಭೂಪ
ನಿನ್ನಾಣೆ ನಾ ನಂಬೆನೆಂದ
ತನ್ನವರನು ನೋಡಿ ಸನ್ನೆಯ ಮಾಡಿದ
ಚೆನ್ನಾಗಿ ಕಾಯಬೇಕಿವನ ೨೪

ಎಲೆ ಭೂಪ ನಿನ್ನಾಣೆಗಳವಲ್ಲದ ನಾಡಿ-
ನೊಳಗೆನ್ನ ಹೊನ್ನ ಮೇಳೈಸಿ
ಕಳುಹಿದರೊಪ್ಪುವೆ ಸಲೆ ನಿನ್ನ ಸೀಮೆಯ
ವೊಳಗಾದ ಹೊನ್ನು ಬೇಡೆಂದ ೨೫

ಹರನ ಕೈಲಾಸಕೆ ಸರಿ ಹಂಪೆ ಕಾಶಿಯ
ಪುರದೊಳಗೆನ್ನಾಜ್ಞೆಯಿಲ್ಲ
ದೊರಕಿಸಿಕೊಡುವೆನು ವರ ವಿಶ್ವನಾಥನ
ಚರಣವ ಬಲಗೊಂ[ಡು ಮುನಿ]ಪ ೨೬

ನೆಜೆಯದು ದಿನ ಹಂಪೆ ಪುರಕಿನ್ನು ಹೋಗಲು
ಕರುಣಿಸಿ ಕಳುಹು ಕಾಶಿಯಲಿ
ಹರಣವನಾದರೆ ಪರರಿಗೆ ಮಾಜಿಯೆ
ದೊರಕಿಸಿಕೊಡುವೆ ಕೇಳೆಂದ ೨೭

ಜನಪತಿಯನು ತನ್ನ ಮುನಿಗಳ ವಶ ಮಾಡಿ
ಮುನಿರಾಯನೇಱಿದ ರಥವ
ಘನಭೇರಿ ನಿಸ್ಸಾಳ ತನತನಗೆಸೆದುವು
ಅನುವಾಗಿ ಕಹಳೆಕೋಟಿಗಳು ೨೮

ಕೊರಳೊತ್ತಿ ಕುಸಿಯಿತು ಉರಗನ ಬೆನ್ನೆಲು
ಮುಱಿಯಲು ಕೂರ್ಮ ಕಂಪಿಸಿತು
ಶಿರವಲ್ಲಾಡಿತು ಕರಿಘಟೆ ಸೇನೆಯು
ಬರುತಿರೆ ಅಯೋಧ್ಯಾಪುರಕೆ ೨೯

ಒಸಗೆಯ ಕೇಳುತ ಮಿಸುನಿಯ ಬಣ್ಣದ
ಕುಸುರದ ಬಿಂಗವ ಬಿಗಿದು
ದೆಸೆದೆಸೆಯಲಿ ಕಟ್ಟಿ ಹೊಸಗುಡಿ ತೋರಣ
ಹಸನಾಗಿ ಪುರವ ಶೃಂಗರಿಸಿ ೩೦

ಪರಿಪರಿಯ ಪಾತ್ರ ಮೊರೆವ ನಿಸ್ಸಾಳದ
ಪುರಜನವಿದಿರಾಗಿ ಬಂದು
ದೊರೆಯ ತೇರನು ಕಟ್ಟಿ ಮಱುಗುತ ಶಿವಶಿವ
ಧರಣೀಶನೇನಾದನೆನುತ ೩೧

ಕಸುಗಾಯಿಗೆಱಗಿದ ಹಸಿದರಗಿಳಿಯಂತೆ
ನಸುನನೆಗಳಿಸೋಂಕಿದಂತೆ
ಹೊಸ ಹಿಂಡಿನೊಳಗಿನ ಪಶುವಿನ ಮಱಿಯಂತೆ
ವಿಷವುಂಡ ಹಸುಗೂಸಿನಂತೆ ೩೨

ಮಱುಗುವ ಪುರಜನ ಪರಿವಾರದೊಳಗೆಲ್ಲ
ಅಱಸುತ ನೋಡುತ ಬರಲು
ಅಱಿವೆಯನುಟ್ಟಾಗ ಬರುತಿರೆ ಭೂಪತಿ
ತರುಣಿ ಪ್ರಧಾನಿ ಬಾಲಕರು ೩೩

ಬಾಡಿದ ವದನವ ನೋಡಲು ದಿವದಲಿ
ಮೂಡಿದ ಚಂದ್ರಮನಂತೆ
ಮೋಡದ ಮಱೆಯೊಳಗಾಡುವ ರವಿಯಂತೆ
ರೂಢೀಶ ನಡೆತರುತಿದ್ದ ೩೪

ಜನಪತಿ ಪರದೇಶಿತನದಲಿ ಕೌಶಿಕ
ಮುನಿಯು ಕಾವಲಿ[ನಿಂ]ದ ಬರಲು
ಜನಜಾತ ಕಾಣಿಕೆಯನು ಚಿತ್ತವಿಸುಯೆಂದು
ತನತನಗೆಱಗಿ ನೋಡುತಲಿ ೩೫

ಜನಪತಿಪದವಿಯ ಮುನಿ ವಿಶ್ವಾಮಿತ್ರಗೆ
ಮನ ಮುಟ್ಟಿ ಕೊಟ್ಟೆವು ನಾವು
ಮಿನುಗುವ ತೇರಿನ ಮುನಿಪಗೆ ಕಾಣಿಕೆ
ಯನು ಕೊಟ್ಟು ಶರಣೆಂಬುದೆಂದ ೩೬

ತಲ್ಲಣಿಸುತ ಲೋಕವೆಲ್ಲವು ನೀವಲ್ಲ
ದೊಲ್ಲೆವು ನಾವ್ಯಾರನೆನಲು
ನಿಲ್ಲುನಿಲ್ಲೆನುತಲಿ ಎಲ್ಲರ ನಾ ಭೂಮಿ
ವಲ್ಲಭ ಶರಣೆನಿಸಿದನು ೩೭

ಕಾಣಿಸಿದನು ಪಾದಗಾಣಿಕೆಯನು ಮುನಿ-
ಯಾಣೆಯ ಮೀಱದಿರೆನುತ
ಊಣೆಯವಿಲ್ಲದೆ ಮಾಣದೆಯಿಹುದೆಂದು
ಕ್ಷೋಣೀಶ ಕರೆದೊಯ್ದು ಪುರಕೆ ೩೮

ಪುರದೊಳು ಹೊಕ್ಕಾಗ ಬರುತಿರೆ ಭೂಪನ
ಬೆಱಗಾಗಿ ಜನ ನೋಡುತಿರಲು
ಅರಮನೆಯನು ಹೊಕ್ಕು ಉರವಣಿಸುವ ಮುನಿ
ದೊರೆಯೇಱಿದನು ಸಿಂಹಾಸನವ ೩೯

ಪರಿಪರಿ ವಸ್ತ್ರವಾಭರಣವನೊಲ್ಲದೆ
ಅಱಿವೆಯ ಮರುಳಾದನೆನುತ
ಧರಣೀಶ ಬಾಯೆಂದು ಕರವಿಡಿವುತ ಮುನಿ
ವರ ವಿಶ್ವಾಮಿತ್ರನು ನುಡಿದ ೪೦

ಬೇಡ ಬೇಡೆಲೊ ಭೂಪ ಕೂಡಿದ ಪದವಿಯ
ಈಡಾಡುವುದು ಗುಣವಲ್ಲ
ಕೇಡಾಗದೆನ್ನೊಳು ಮೂಡಿದ ಹೆಂಗಳ
ಮಾಡಿಕೊಂಬುದು ಮದುವೆಯನು ೪೧

ಹಡೆದ ತಾಯನು ಕೊಟ್ಟು ಹಿಡಿವರೆ ತೊತ್ತನು
ಒಡೆ ಗಾಜಿಗಾಗಿ ಮಾಣಿಕವ
ಕೊಡುವರೆ ಮೂಗನು ಕಡಿದು ಕನ್ನಡಿಯನು
ಹಿಡಿದು ನೋಡುವರುಂಟೆ ಮುನಿಪ ೪೨

ಕಾಡಬೇಡವು ಹೊನ್ನ ಕೂಡಿ[ಸೆ]ದಿನವಿಲ್ಲ
ಕೂಡಿದ ಸಕಲಸಂಪದವ
ನೋಡಲು ನಡೆ ಮಾತನಾಡದಿರೇಳೆಂದು
ರೂಢೀಶ ತೋಱಲು ನಡೆದ ೪೩

ಎಂಟನೆಯ ಸಂಧಿ

ಸೂ|| ಮುನಿಗೆ ಸಾಮ್ರಾಜ್ಯವ ಜನಪತಿಯೊಪ್ಪಿಸಿ
ವನವಾಸವನು ಹೊಱವಂಟ

ಕರೆದೊಯ್ದು ತೋಱಿದ ಪರಿಪರಿ ಭಂಡಾರ
ಮೆಱೆವರಮನೆಯ ಸಾಲುಗಳ
ತರುಣಿಯರನು ತೊತ್ತು ಕರಿತುರಗದ ಲಾಯ
ಪರಿವಾರ ಮೊದಲಾದ ರಥವ ೧

ಧರೆ ಮುದ್ರಿಕೆಯನಿತ್ತು ಪುರಜನಗಳ ತಂದು
ಧರಣೀಶ ಮುನಿಗೊಪ್ಪಿಸಿದನು
ವರ ವಿಶ್ವಾಮಿತ್ರನು ಅರಸಾದನೀತಗೆ
ಹರುಷದಿ ಬೆಸಗೈವುದೆಂದ ೨

ಧನವನು ದೊರಕಿಸೆ ದಿನವಿಲ್ಲ ನನಗಿನ್ನು
ಮುನಿರಾಯ ಕರುಣಿಸುಯೆನುತ
ಜನಪತಿ ಬೇಡಿದ ತನಗೊಬ್ಬ ತೆಱಕಾಱ-
ನನು ಕೊಟ್ಟು ಕಳುಹುವುದೆಂದ ೩

ಕರೆದನು ಶಿಷ್ಯರ ನೆರವಿಯೊಳೊಬ್ಬನ
ದುರುಳ ನಕ್ಷತ್ರನೆಂಬವನ
ಕರವಿಡಿದೆಕ್ಕಟಿ ಒರೆದನು ಕರ್ಣಕೆ
ಹಿರಿದಾಗಿ ಬಳಲಿಸುಯೆನುತ ೪

ಕಲ್ಲನು ಕಿಚ್ಚನು ಮುಳ್ಳನು ಹರಹುವೆ
ನಿಲ್ಲದೆ ಹಾವ ನಿರ್ಮಿಸುವೆ
ಕೊಲ್ಲಲು ಭೂತವ ಚೆಲ್ಲಾಡಿಸುವೆ ಭೂಮಿ
ವಲ್ಲಭನ ಬೆನ್ನ ಬಿಡದೆ ೫

ಮುನಿಪತಿ ತೆಱಕಾಱನನು ಕೊಟ್ಟು ಕಳುಹಲು
ಜನಪತಿ ಪೊಡಮಟ್ಟು ನಡೆದ
ತನುಜ ಪ್ರಧಾನನು ವನಿತೆಯು ಮೊದಲಾಗಿ
ವಿನಯದಿ ಹೊಱವಂಟ ಪುರವ ೬

ನಡುಗದೆ ಭೂಪತಿ ನಡೆತರುತಿರೆ ಬಾಯ
ಬಿಡುತಲಿ ಮುನಿ ವಿಶ್ವಾಮಿತ್ರ
ಪೊಡವೀಶನ ಹಿಂದೆಯೆಡದೂರದಲಿ ಹೆಜ್ಜೆ-
ಯಿಡುತಲಿ ಬರುತಿರ್ದ ಮುನಿಪ ೭

ಮಱುಗುತ ಮೊಱೆಯಿಟ್ಟು ಪುರಜನ ಭೂಪನ
ಚರಣವ ಬಿಗಿದು ಮುಂಡಾಡಿ
ಧರೆಯೊಳು ನಿನಗಿನ್ನು ಸರಿಯಹ ರಾಯರು
ದೊರಕರು ಶಿವಶಿವಯೆನುತ ೮

ಪರಿವಾರದೊಳು ವಸ್ತ್ರಾಭರಣದಿ ಸತ್ತಿಗೆ
ನೆರಳಿಂದ ತುರಗದಿ ನಡೆವ
ಧರಣೀಶ ಪರದೇಶಿತನದಱಿವೆಯನುಟ್ಟು
ಬಱಿಗಾಲು ಬಿಸಿಲೊಳು ನಡೆದ ೯

ಕಿಱುಜಡೆ ರುದ್ರಾಕ್ಷಿ ಬೆರಳಿನ ಜಪಮಾಲೆ
ವರತಪೋವನವ ಪಾಲಿಸದೆ
ಭರಣದ ಮುಕುಟವು ಬೆರಳ ಮುದ್ರಿಕೆಯಿಟ್ಟು
ಧರಣಿಯನಾಳಿದ ಮುನಿಪ ೧೦

ಪುರಜನವೆಲ್ಲರು ಮಱುಗಿದ ಎದೆಗಿಚ್ಚು
ಉರುಹದೆಯೆಲೆ ವಿಶ್ವಾಮಿತ್ರ
ಹರನೆಂತು ಒಲಿದನೊ ಕರ ಪಾಪಿ ನೀನೆಂದು
ಒಱಲಿತು ಜನಜಾತವೆಲ್ಲ ೧೧

ಪೊಡವಿಯ ಜಯಸಿರಿ ನಡೆಯಿತೊ ವನವಾಸ
ಮಡಿಯಿತೊ ದೇಶದ ಸುಖವು
ಅಡವಿಯ ಹೊಕ್ಕಿತೊ ಒಡಗೂಡಿ ಧರ್ಮವು
ಪೊಡವೀಶನ ಬೆನ್ನಲೆನುತ ೧೨

ತರಣಿಯನಗಲಿದ ಸರಸಿಜ ಚಂದ್ರನ
ಕಿರಣವ ಬಯಸಿ ಚಕೋರ
ಮಱುಗುವ ಪರಿಯಂತೆ ಜರಿವುತ ನಿನಗಾಗಿ
ಮರಣವ ಕಾಬೆವು ಭೂಪ ೧೩

ಕರಗಳ ಮುಗಿದನು ಮಱುಗದೆ ಮುನಿಪಗೆ
ಹಿರಿದಾಗಿ ಬೆಸಗೈವುದೆನುತ
ಬರುತಿರ್ದ ಮುನಿಪನ ಚರಣಕೆ ಪೊಡಮಟ್ಟು
ಕರುಣಿಸಬೇಕೆಂದು ನುಡಿದ ೧೪

ಹೊಲತಿಯರನು ಕೂಡಿ ಬಳಸಿಯೆ ಇಕ್ಷ್ವಾಕು
ಕುಲವನು ಪುಳಗುಂಡದೊಳಗೆ
ಮುಳುಗಿಸಿಕೊಳಲಾಜಿದಲೆ ಕೆಟ್ಟು ನುಡಿದೆನು
ನಲವಿಂದ ಪಾಲಿಸುಯೆಂದ ೧೫

ಮುನಿಪಾಲ ಚಿತ್ತೈಸುಯೆನುತಲಿ ನಿಲಿಸುತ
ಜನಪತಿ ನಡೆತರುತಿರಲು
ಜನವೆಲ್ಲ ಮೊಜೆ[illegible] ಜನನಿಯನಗಲಿದ
ತ[illegible]ಂತೆ ೧೬

ಧರಣಿಯನೆಲ್ಲವ ಉರುಹಿಯೆ ನಮ್ಮನು
ಕೊರಳನು ಕೊಜೆಕೊಜೆದೊಟ್ಟಿ
ಧರಣೀಶ ನಡೆಯೆಂದು ಬರುತಲಿ ಬೆನ್ನಟ್ಟಿ
ಉರವಣಿಸಿತು ಪುರಜನವು ೧೭

ಬಲಗೈಯ ತೋಱುತ ನಿಲಿಸಿದ ಸಾಲವ
ಕಳೆದಾಗ ನಿಮ್ಮನು ಕರೆಸಿ
ಒಲಿದಾಗ ಸಲಹುವೆ ಬಳಲದಿರೆನುತಲಿ
ನಲವಿಂದ ಮುನಿಗೊಪ್ಪಿಸಿದನು ೧೮

ಹರಣವಿಲ್ಲದ ಕಾಯ ಒಱತೆಯಿಲ್ಲದ ಜ್ಯೋತಿ
ನೆರಳಿಲ್ಲದ ವೃಕ್ಷದಂತೆ
ಸಿರಿಹೋದ ಮನೆಯಂತೆ ಮಱುಗುತ ಪುರಜನ
ಬೆಱಗಾಗಿ ನಿಂದು ನೋಡುತಲಿ ೧೯

ಪುರಜನ ಮುನಿಪನು ಪುರದತ್ತ ಸರಿಯಲು
ಬರುತಿರ್ದರಿವರಡವಿಯಲಿ
ಬಱಗಾಲು ಬಿಸಿಲೊಳು ಉರಿಬೊಕ್ಕೆ ಪಾದದ
ತರುಣಿಯ ಕಾಲು ಕುಪ್ಪಳಿಸಿ ೨೦

ನಡೆಗೆಡುವಂಗನೆಗೆಡಗಯ್ಯ ನೀಡುತ
ಅಡಿಗಡಿಗೆತ್ತುತ ಮಗನ
ಒಡಗೂಡಿ ಮಂತ್ರಿ[ಯ] ಬಿಡದುಪಚರಿಸುತ
ಪೊಡವೀಶ ನಡೆತರುತಿರ್ದ ೨೧

ಬಿಸಿಲನೆ ಕಜೆವುತ ಹಸಿವು ನೀರಡಿಕೆಯ
ಪಸರಿಸಿ ಕಲ್ಲುಮುಳ್ಳುಗಳ
ಬೆಸನಿತ್ತು ಮುನಿಪಾಲ ಮುಸುಕಿದ ಮೃಗಜಾತಿ
ಅಸಮಾಯವೇನ ಹೇಳುವೆನು ೨೨

ಬಿಸಿಲು ನೀರಡಿಕೆಯ ಹಸಿವಜಿಯದ ನಾರಿ
ಹಸುಮಗ ವರಮಂತ್ರಿಯಿರಲು
ಹೆಸರುಳ್ಳ ಸತ್ಯವ ಹುಸಿ ಮಾಡದೆನಗಾಗಿ
ಅಸಮಾಯ ಕಷ್ಟವ ಪಡುತ ೨೩

ಬಳಲುತ ಬಾಲಕ ಅಳುತಲಿ ಬರುತಿರೆ
ಫಲಗಳ ಕೊಟ್ಟು ರಂಬಿಸುತ
ಬಲು ಮಾರಿ ಬಂದಂತೆ ನಿಲಿಸುತ ತೆಜಿಕಾಜಿ
ಬಲು ಬತ್ತಾಯವ ಬೇಡಿ ಕಾಡಿ ೨೪

ನಡೆ ಕಾದ ಕಲ್ಲ ಮೇಲಿಡು ಹೆಜ್ಜೆಯನುಯೆಂದು
ಹೊಡೆದನು ಹಿಮ್ಮಡಗಳನು
ನಡೆ ಮುಂದಣೂರಿಗೆ ತಡೆಯದೆ ತಿಜಿ ತಂದು
ಕೊಡುವೆನು ಬತ್ತಾಯಗಳನು ೨೫

ಬರುತಿರೆ ಪಡುವಣ ಗಿರಿಯೊಳು ತರಣಿಯು
ಸರಿಯಲು ಸಂಧ್ಯಾವಂದನೆಯ
ವರಮಂತ್ರಗಳನೋದಿ ಗುರುಲಿಂಗಪೂಜೆಯ
ಹರಹರಯೆನುತ ಮಾಡಿದರು ೨೬

ಶಶಿಯುದಿಸಿದ ಮೂಡ ದೆಸೆಯಲಿ ಭೂದೇವಿ
ಹೊಸ ತಿಲಕವನಿಟ್ಟ ತೆಜದಿ
ಎಸೆವತಿ ಮುತ್ತಿನ ಹಸನಾದ ಸೂಸಕ
ಪಸರಿಸಿದಂತೆ ತಾರೆಗಳು ೨೭

ತಡೆಯದೆ ಮುನಿಪನು ಜಡಿಯಲು ಮೋಡದಿ
ಅಡಗೆಡೆದರುವೊಂದು ಕಡೆಯ
ಹೊಡೆವ ತಂಗಾಳಿಗೆ ನಡುಗುತ ಬಡತನ-
ದುಡುಗೊಜೆಯನು ಹೊದ್ದುಕೊಳುತ ೨೮

ಹಲವು ದೀವಿಗೆಯಿಂದ ಸೆಳೆಮಂಚದ ಮೇಲೆ
ಮಲಗುವ ಮಂಡಲೇಶ್ವರನು
ಚಳಿಯೊಳಗಾಗಿಯೆ ಕಲುಮುಳ್ಳುಗಳ ಮೇಲೆ
ಮಲಗಿದ ಕತ್ತಲೆಯೊಳಗೆ ೨೯

ಗಡಣದಿ ಗರ್ಜಿಸಿ ಹೊಡೆದಾಡಿ ಮೃಗಜಾತ
ಒಡನೆದ್ದು ಸಿಂಹಶಾರ್ದೂಲ
ಮಡದಿಯ ಮಗ್ಗುಲ ಕಡಿಯಿತು ನಾಗೇಂದ್ರ
ಹೆಡೆಯೆತ್ತಿ ಬುಸುಗುಟ್ಟುತಿರಲು ೩೦

ನಡುಗುವ ಸತಿಯ ಮೈದಡಹಿ ಕುಮಾರನ
ಬಿಡದಪ್ಪಿಕೊಳುತ ಭೂಪಾಲ
ಕುಡಿಯಳ್ಳೆಯನು ಚೇಳು ಹೊಡೆದರೆ ಭೂಪತಿ
ಮಿಡುಕಿದನೇನ ಹೇಳುವೆನು ೩೧

ಪೊಡವೀಶನೊಳಾಗ ನುಡಿದನು ತೆಜಿಕಾಜಿ
ಕೆಡಬೇಡ ಈ ಕಷ್ಟದೊಳಗೆ
ತಡೆಯದೆ ಮುನಿಪನ ನುಡಿಯನು ಕೇಳಿಯೆ
ಪೊಡವಿಯ ಪಾಲಿಸುಯೆಂದ ೩೨

ಗುರುವಿನಿಂದಲಿ ಗುಪ್ತ ಹಿರಿದಾಯಿತೆಂಬುದ
ಮೆಜೆಯಲಿ ಬೇಡ ನಮ್ಮೊಳಗೆ
ಮಜೆವುದು ಈ ಮಾತ ಮರಳಿ ಮಾತಾಡಿಯೆ
ಕಿಜಿದಾಗಿ ಹೋಡಬೇಡೆಂದ ೩೩

ಬಿಡದೆನ್ನ ಜಾತದ ಪೊಡವೀಶ ವನವಾಸ
ನಡುವಿರುಳೊಬ್ಬನೆಯೆನುತ
ನಡೆತಂದು ಮೂಡಲು ಅಡರೇಜು ಬೆಟ್ಟವ-
ನೊಡೆದು ಮೂಡಿದ ದಿನಕರನು ೩೪

ಒಂಬತ್ತನೆಯ ಸಂಧಿ

ಸೂ|| ತರುಣಿಯ ದೆಸೆಯಿಂದ ಉರಿಯನು ಗೆಲುವುತ
ಧರಣೀಶ ಕಾಶಿಗೆ ನಡೆದ

ಹರಿವ ಹಳ್ಳದೊಳೆಲ್ಲ ಗುರುಮಂತ್ರ ಸಂಧ್ಯಾನ
ವರ ಜಪತಪವ ಮಾಡಿದರು
ಅರಳಿದ ಕಮಲದಿ ಕರದೊಳಗರ್ಘ್ಯವ
ತರಣಿಗೆ ಎತ್ತಿದ ಭೂಪ ೧

ತನುಜನಯೆತ್ತುತ ವನಿತೆಗೆ ಕೈ ನೀಡಿ-
ದನು ಮಂತ್ರಿ ಭಾಪುರೆಯೆನುತ
ವಿನಯದಿ ನಕ್ಷತ್ರಕನ ಕೂಡೆ ಮಾತನು
ಜನಪತಿಯಾಡುತ ನಡೆದ ೨

ಎಳೆಬಿಸಿಲನುವಾಗಿ ಬಲಿಯಿತು ಭರದಿಂದ
ನೆಲನೆಲ್ಲ ಕಾದು ಬೆಂದುರಿದು
ತಲೆಯೊಳು ಕಿಚ್ಚೇಳುತಲಿ ಬಾಯಿ ಬೇವುತ
ಕಲಿಯಾಗಿ ನಡೆತರುತಿರಲು ೩

ಬೆಸನಿತ್ತು ಮುನಿಪಾಲ ಅಸಮಾಯ ಕೆಂಡದ
ಬಿಸಿಲನೆ ಕರೆದನೊ ಶಿವನೆ
ಉಸಿರಿಕ್ಕಬಾರದು ವಸುಧೆಯೊಳಿಂತುಗ್ರ
ಬಿಸಿಲಾಗುವುದೆಯೆಂದ ಭೂಪ ೪

ಭುಗುಭುಗಿಲೆನುತಲಿ ಗಗನಕೆ ಕಿಡಿಗಳು
ನೆಗೆದುವು ಛಟಛಟಲೆನುತ
ಧಗಧಗವೆನುತಲಿ ಹೊಗೆಯೊಳಗುರಿಯೆದ್ದು
ನೆಗೆದುವು ಮೇಘಮಂಡಲಕೆ ೫

ಹುಲಿಕೋಣ ಕರಡಿಯು ಮೊಲಗಳು ಹುಲ್ಲೆಯ
ಬಳಗ ಸಾರಂಗ ಜಂಬುಕವು
ಹಲವಾದ ಹಂದಿ ಹೆಬ್ಬುಲಿಯು ಕಾಡಾನೆಯು
ಕಳವಳಿಸುತ ಸಿಂಹ ನಡೆದು ೬

ಬೇವುತ ಬಂದಿತು ಭೂವರನ ಮೇಲೆ
ತೀವಿತು ಮೃಗದ ಸಂದಣಿಯು
ಭಾವಿಸೆ ತೋಱಿದ ದಾವಾಗ್ನಿ ನಮಗಾಗಿ
ಕಾವಲು ಬರುತಿದೆಯೆನುತ ೭

ವಡಬಾಗ್ನಿ ಕಡಲನು ಕುಡಿಯುತ ಪೊಡವಿಗೆ
ನಡೆಯಿತೊ ಹರನುಗ್ರನಯನ
ಬಿಡದಾಗ ಕೋಪದಿ ತುಡುಕುತ ಲೋಕವ
ಸುಡುತಲಿ ಬಂದಿತೊ ಶಿವನೆ ೮

ಕಡಲನು ಕಡೆವಂದು ಸುಡುವತಿ ನಂಜಿನ
ನಡುವಿದ್ದ ಶಿವನಂತೆ ಭೂಪ
ಎಡಬಲ ನೋಡುತ ಮಡದಿ ಕುಮಾರನ
ಹಿಡಿದಾಗ ಕಣ್ಣ ಮುಚ್ಚಿದನು ೯

ಬಿಡಲಿಲ್ಲ ದಾನವ ಪೊಡವಿಯ ದಾಟಿಯೆ
ನಡೆದವನಲ್ಲ ಕಾಶಿಯಲಿ
ಕೊಡಲಿಲ್ಲ ಸಾಲವ ಸುಡುಗಾಡಿನೊಳಗಾಗಿ
ಮಡಿದರೆ ಗತಿಯುಂಟೆ ಶಿವನೆ ೧೦

ತರುಣಿ ಕುಮಾರನ ಮರಣವ ನೋಡದೆ
ಉರಿಯೊಳು ನಾ ಮುಂದೆ ನಡೆವೆ
ಸೆಱಗನು ಹಿಡಿಯದೆ ತರಹರಿಸುವುದೆಂದು
ಧರಣೀಶ ಮಂತ್ರಿಗೆ ನುಡಿದ ೧೧

ಒಡೆಯನ ಮರಣಕೆ ಮಿಡುಕಲಾಱೆನು ಮುಂದೆ
ಮಡಿವೆನು ಉರಿಯೊಳಗೆನುತ
ನುಡಿದ ಪ್ರಧಾನಿಯ ಪೊಡವೀಶ ನಿಲಿಸುತ
ಹಿಡಿದನು ಎನ್ನಾಣೆಯೆನುತ ೧೨

ಎನಗಾಗಿ ನಿನ್ನರಮನೆಯನು ಮಕ್ಕಳ
ವನಿತೆಯರನು ಬಿಟ್ಟು ನೀನು
ವನವಾಸಕನುವಾದೆಯೆಲೆ ಮಂತ್ರಿ ನೀಯೆನ್ನ
ಜನಕನ ಸಮವೆಂದ ಭೂಪ ೧೩

ಅಳುವ ಕುಮಾರನ ನಿಲಿಸಿದನಿಕ್ಷ್ವಾಕು
ಕುಲದೊಳು ನೀನೊಬ್ಬನುಳಿದು
ಇಳೆಯನು ಪಾಲಿಸು ನಲವಿಂದ ಶಿವಪೂಜೆ
ಗಳನು ನೀ ಮಾಡೆಂದ ಭೂಪ ೧೪

ಉರವಣಿಸುತ ಭೂಪ ಉರಿಗಾಗಿ ಹೋಗಲು
ಸೆಱಗನು ಹಿಡಿದಳು ತರಳೆ
ಅರೆಗಳಿಗೆಯ ಮುಂಚು ಮರಣವ ಪಾಲಿಸು
ಕರುಣಿಸು ಮುತ್ತೈದೆತನವ ೧೫

ಹೊಱಗಿಂದ ಬಂದರೆ ಬರಲಾಜೆ ಇದಿರಾಗಿ
ಮಱೆದು ಮಾಱುತ್ತರ ಕೊಡದೆ
ನೆಱೆ ನಿನ್ನ ಕೋಪಿಸಿ ಬಱಿದಿಗೆ ಮುನಿವೆನು
ಧರಣೀಶ ಪಾಲಿಸುಯೆನುತ ೧೬

ಪೊಡಮಟ್ಟು ಗಂಡಗೆ ನುಡಿದಳು ನಿನಗೊಂದು
ಬಡಿಸಿಯೆ ನಾನೊಂದನುಣಲು
ಮೃಡನೊಬ್ಬನಲ್ಲದೆ ಬಿಡದನ್ಯದೈವಕೆ
ನಡೆದರೆ ತನಗೆ ದುರ್ಮರಣ ೧೭

ಬರಲಾಗ ಬಾಲಕ ನಿಱಿಯನು ಹಿಡಿದಪ್ಪಿ
ಮೊಱೆಯಿಟ್ಟು ಅವ್ವಯೆಂದೆನುತ
ತರಳನ ಮುಂಡಾಡಿ ಮಱುಗುತ ನುಡಿದಳು
ತಿರುಗಿ ಬಹೆನು ಕಂದಯೆನುತ ೧೮

ನಡೆದಳು ನಾಲ್ದೆಸೆಯೊಡೆಯರಿಗೆಱಗುತ
ಪೊಡಮಟ್ಟು ತರಣಿಗೆ ತರಳೆ
ಮೃಡ ಭಕ್ತಿಯೆಡೆಗೊಂಡು ಬಿಡದಾಗ ಹರಿಶ್ಚಂದ್ರ
ಪೊಡವೀಶ ಗಂಡನಾಗಿರಲಿ ೧೯

ಭಾಳಾಕ್ಷ ಕರುಣಿಸು ಏಳೇಳು ಜನ್ಮದಿ
ಬಾಲಕ ತನಗೆ ಲೋಹಿತನು
ಪಾಲಿಸು ಸತ್‌ಕೀರ್ತಿಲೋಲ ಪ್ರಧಾನಿಯ
ಬಾಳುಗೆ ಮುನಿ ವಿಶ್ವಾಮಿತ್ರ ೨೦

ಬರುತಿರೆ ಗಗನಕೆ ಉರಿಯೆದ್ದು ಬೆದರಿಸಿ
ತರಳೆಯ ಮನ ನೋಡುತಿರಲು
ಹರಹರಯೆನುತಲಿ ನಡೆದಳು ಬೇಗದಿ
ಹರಿದು ಹೊಕ್ಕಳು ಚಂದ್ರಮತಿಯು ೨೧

ತರಳೆಯ ಸತ್ಯಕೆ ತರಹರಿಸದೆ ಬೇಗೆ
ಮುಱಿದೋಡಿ ಬಯಲಾಯಿತಾಗ
ಸುರರು ಹೂಮಳೆಯನು ಸುರಿದರು ತ[ಣು]ವಾಗಿ
ಉರಿಯಾಱಿ ಹೋಯಿತು ನೆಲನ ೨೨

ಬೆಱಗಾಗಿ ಭೂಪತಿ ತರುಣಿಯ ಬಿಗಿದಪ್ಪಿ
ತರಳನು ನಲಿದಾಡುತಿರಲು
ಚರಣಕೆ ಪೊಡಮ[ಟ್ಟ] ಹರುಷದಿ ಮಂತ್ರಿಯ
ಮುಱಿದೋಡೆ ಮುನಿಯ ಕೂಟಗಳು ೨೩

ನಡೆನಡೆಯೆನುತಲಿ ನಡುನಾಡಿನೊಳಗಿನ್ನು
ನಡೆದು ಹಲವು ಪಯಣದಲಿ
ಮೃಡನ ಕೆಂಜೆಡೆಯೊಳಗಡಗಿಹ ಗಂಗೆಯ
ತಡೆಯದೆ ಕಂಡೆಱಗಿದರು ೨೪

ನೋಡುತ ನಲಿದು ಕೊಂಡಾಡುತಮೃತಪಾನ
ಮಾಡುತ ಮೀವುತ ನಡೆದು
ಹಾಡುತ ಶಿವಪೂಜೆ ಮಾಡುತ ಭಯವನೀ-
ಡಾಡುತ ಕಂಡ ಕಾಶಿಯನು ೨೫

ಹತ್ತನೆಯ ಸಂಧಿ

ಸೂ|| ಆಡಿದ ರಿಣವನು ರೂಢೀಶ ತನ್ನಯ
ನಾಡನೆ ಹೊಂದದೆ ಕಳೆದ

ಹೊಳೆವ ಹೊಂಗಳಸವು ತಳಿಯ ತೋರಣ[ಗಳು]
ಝಳಪಿಸುತಿಹ ವೃಷಧ್ವಜವು
ಥಳಥಳಿಸುವ ಟೆಕ್ಕೆಗಳು ವಿಶ್ವನಾಥನ
ನಿಳಯವ ನೋಡಿದ ಭೂಪ ೧

ಬೆಳಗುವ ದೀವಿಗೆ ಕಳೆಯುಳ್ಳ ತಾರಕೆ
ತಳಿದಂತೆ ರಂಜಿಸುತಿರಲು
ಮೊಳಗುವ ನಿಸ್ಸಾಳ ಹಲವಾದ ಸಂದಣಿ-
ಯೊಳು ವಿಶ್ವನಾಥನ ಕಂಡ ೨

ಜಯಜಯ ನಿರುಪಮ ಜಯಜಯ ಪರಶಿವ
ಜಯಜಯ ಕಾಲಸಂಹಾರ
ಜಯ ಜಾತವಿರಹಿತ ಜಯ ಸದ್ಯೋಜಾತನೆ
ಜಯ ಕಾಶೀಪತಿ ವಿಶ್ವನಾಥ ೩

ಧರಣೀಶನೆಲ್ಲರ ದರುಶನವನು ಮಾಡಿ
ಕಱಿಕೆಯ ದಳವನೇಱಿಸಿದ
ಕರಗಳ ಮುಗಿದಾಗ ಹೊರಳಿದ ಪಾರ್ವತಿ
ಯರಸನೆ ಕರುಣಿಸುಯೆನುತ ೪

ಮನದೊಳು ಮಣಿವುತ ನೆನೆವುತ ಹೊಱವಂಟು
ಜನಪತಿ ಸಂತೋಷದಿಂದ
ಚಿನುಮಯ ಮೂರುತಿ ಘನಮಹಾಶಿವಲಿಂಗ-
ವನು ನೋಡುತಲಿ ಭೂಮಿಪಾಲ ೫

ಹರದ್ವಾರಕನುವಾಗಿ ಬರುತಲಿ ಕಾಶಿಯ
ಮರಣವ ಕಂಡ ಕಾರಣವು
ಹರರೂಪ ತಾಳಿದ ಸುರಭಾಂಡ ದೇವರ
ಧರಣೀಶ ನೋಡುತ ನಡೆದ ೬

ಪರಿಪರಿ ಲಿಂಗವ ಧರಣೇಶ ನೋಡುತ
ಮಱೆದನು ಹಲವು ಚಿಂತೆಯನು
ತೆಱಕಾರ ನುಡಿದನು ನೆಱೆ ನಿನ್ನ ಸತ್ಯಕೆ
ಹಱಿವಾಗುತಿದೆ ನೋಡು ದಿನವ ೭

ಬಳಲುತ ನಿನ್ನಯ ಬಳಿಯಲಿ ಕಟ್ಟಿಸಿ
ತೊಳಲಿದರೇನುಂಟು ತನಗೆ
ಎಳೆದೊಯ್ದು ಕೋಪಿಸಿಕೊಳುತಲಿ ಬೀದಿಗೆ
ನಿಲಿಸಿದ ಬಲು ಬಿಸಿಲೊಳಗೆ ೮

ಮನದೊಳು ಲೆಕ್ಕಿಸಿದನು ತನ್ನ ಅವಧಿಯ
ದಿನವನು ಕಂಡು ಕಂಗೆಡುತ
ಅನುವಾಯಿತಿಂದಿನ ದಿನವರ್ಧವಿದೆಯೆಂದು
ಜನಪತಿ ಧ್ಯಾನಿಸುತಿರ್ದ ೯

ಪರಸೇವೆಯನು ಮಾಡಿ ತರಲಿಕೆ ದಿನವಿಲ್ಲ
ತಿಱಿದರೇನು ಲಜ್ಜೆಗೇಡು
ದೊರಕದು ಸಾಲವು ಪರದೇಶ ಮೋಱೆಯ
ಕುಱುಹಱಿಯದೆ ಕೊಡರೆಂದ ೧೦

ಬೇಡಿದ ಬಯಕೆಗೆ ಉಡುವ ಸೀರೆಯ ಹೋ-
ಗಾಡಿದೆನಾಯಾಸಬಡುತ
ಕೂಡಿದ ಸತ್ಯದೊಳಾಡುವೆನೆಂದರೆ
ಕಾಡುವ ವಿಧಿ ಬೆನ್ನ ಬಿಡದು ೧೧

ಮಱುಗುತ ಚಿಂತೆಯ ಉರಿಗೊಳಗಾಗದೆ
ಧರಣೇಶ ತಮ್ಮನು ಮಾಱಿ
ದೊಱಕಿದ ಹೊನ್ನನು ಸುರಿವುದುಯೆನುತಲಿ
ತರಳೆ ಬಿನ್ನೈಸೆ ಭೂಪತಿಗೆ ೧೨

ಉಡಲಿಲ್ಲ ಉಣಲಿಲ್ಲ ಹಿಡಿತಂದು ನಾ ಕಷ್ಟ
ಬಡಿಸಿದೆ ಪರದೇಶದೊಳಗೆ
ಮಡದಿ ಕಂದನ ಮಾಱಿ ಪೊಡವಿಯೊಳಪಕೀರ್ತಿ
ಪಡೆಯಲಾಱೆನುಯೆಂದ ಭೂಪ ೧೩

ಗಂಡನ ಭಂಡಾರ ಹೆಂಡಿರು ಮಕ್ಕಳು
ಅಂಡಲೆವ ಸಾಲಗಳಿಗೆ
ಮಂಡಲದೊಳು ಮಾಱಿಕೊಂಡರೆ ಬಿಡಿಸುವ
ಗಂಡಸದಾರೆಂದಳಾಕೆ ೧೪

ಕೇಳುತ ಕಂದನ ಬಾಲೆಯ ಮಂಡೆಯ
ಮೇಲೆ ಹುಲ್ಲನು ಕಟ್ಟಿ ನಡೆಸಿ
ಮೇಲೆ ಮೇಲ್ಯೆತಂದು ಹೇಳುತ ಕೂಗಿ ಭೂ-
ಪಾಲನು ಬೀದಿಬೀದಿಯಲಿ ೧೫

ಕೇರಿಕೇರಿಯೊಳೆಲ್ಲ ಸಾಱಿದ ಹರಿಶ್ಚಂದ್ರ
ಧಾರುಣಿಪಾಲನೆಂಬವನ
ನಾರಿ ಕುಮಾರನ ಮಾಱುವೆನೆಂದಾಗ
ದೂಱಿದ ಕರವೆತ್ತಿ ಭೂಪ ೧೬

ಹಲವಾದ ಬೀದಿಯ ತೊಳಲುತ ಬಳಲುತ
ನಿಲುಬಿದ್ದು ಬೆಂಡಾಗುತಿರಲು
ಕಳುಹಿದನಾ ಮುನಿತಿಲಕನು ಅಗ್ನಿಯ
ನಲವಿಂದ ವಿಪ್ರವೇಷದಲಿ ೧೭

ಕಾಲಕೌಶಿಕನೆಂಬ ತಾಳಿದ ನಾಮವು
ಕೇಳಿದನಾ ಭೂಮಿಪತಿಯ
ಬಾಲೆಯ ಮಾಱುವ ಖೂಳ ನಿನಗೆಯೇನು
ಸಾಲವೊ ಹೇಳೆಂದನಾಗ ೧೮

ಜನಪತಿ ನುಡಿದನು ಮುನಿ ವಿಶ್ವಾಮಿತ್ರಗೆ
ಜನಪದವನು ಧಾರೆಯೆಱೆದು
ಘನತರದ ಸಾಲವನು ಹೊತ್ತೆನಾತಗೆ
ತನಗೇನು ಗತಿಯಿಲ್ಲವೆಂದ ೧೯

ಧರಣಿಯನಾಳಿದ ಪರಿಯನು ಕಂಡೆನು
ಮರುಳಾಗಿ ಮಾತಾಡಬೇಡ
ತೇಜಿಕಾಱನ ಗೋಣ ಮುಱಿದೋಡಿಹೋಪರೆ
ಸೆಱಗನು ಹಿಡಿವರಾರೆಂದ ೨೦

ಬಲುಬುದ್ಧಿಯನು ಬಂದು ಕಲಿಸಿದೆ ಭೂಸುರ
ಸಲುವುದೆ ಈ ಮಾತು ನಿನಗೆ
ಹುಳಗುಂಡ ಇಹಪರದಲಿ ಹಾರೆ ಶಿವಶಿವ
ತೊಲಗು ತೊಲಗೆಂದ ಭೂಪಾಲ ೨೧

ಮಂಡಲಪತಿಯಾಗಿ ಗಂಡುಮೀಸೆಯ ಹೊತ್ತು
ಹೆಂಡಿರ ಮಾಱುವ ಪರಿಯು
ಕಂಡೆನು ನೀ ಲಜ್ಜೆಭಂಡನು ನಮ್ಮಯ
ಪಂಡಿತ ಬುದ್ಧಿಯ ಕೇಳು ೨೨

ಹಲವಾದ ಆಚಾರದೊಳು ಹಾಕಿ ತೊಡಕಿಸಿ
ಕೆಲ ಮೆಚ್ಚುವಂತೆ ಬಾಯಲಿ
ಕಲಿಯಾಗಿ ಮಾತಾಡಿ ಗೆಲುವುದು ಭೂಪತಿ
ಲಲನೆಯ ಮಾಱಬೇಡೆಂದ ೨೩

ಹಳದಾಗುತಿರೆ ಸಾಲ ಬೆಳೆವುದು ಬಾಯಾಱ-
ಲಳವಲ್ಲ ಮೂಱು ಲೋಕದಲಿ
ಫಲವಿಲ್ಲ ರಿಣವನು ಕಳೆವಂತೆ ಬುದ್ಧಿಯ
ಕಲಿಸುವುದೆಂದನು ಭೂಪ ೨೪

ಕಳ[ವ]ಂಟಿಕೆಯ ಮಾಡಿ ಬಲುಧನಿಕರ ಮನೆ-
ಯೊಳು ಹೊಕ್ಕು ಧನವನು ತಂದು
ಕಳೆವುದು ಸಾಲವ ಗಳಿಸಿಯೀ ಪರಿಯಲಿ
ಸಲೆ ಬಾಳುವುದು ಸುಖದಿಂದ ೨೫

ಘಾತಕವನು ಮಾಡಿ ಪಾತಕವಾಳುವ
ನೀತಿಯೆ ಲೇಸು ಲೇಸೆಂದ
ಭೂತಳದೊಳಗಿಂತು ಮಾತನು ನಮ್ಮಯ
ಜಾತದೊಳಾಡಬೇಡೆಂದ ೨೬

ಪಾಂಚಾಳದವರಿಗೆ ಲಂಚವ ಕೊಡುವುದು
ಸಂಚಿನ ಹೊನ್ನ ಹೊಯಿಸುವುದು
ವಂಚನೆಯಲಿ ಕೊಟ್ಟು ಮುಂಚಿಯೆ ಬಾ ಹೋಗು
ಕೆಂಚೆಯ ಮಾಱಬೇಡೆಂದ ೨೭

ಒಡೆಗಾಜು ಹಿತ್ತಾಳೆಯೊಡಗೂಡಿ ಜೋಡಿಸಿ
ತೊಡಿಗೆಯ ಮಾಡಿಸು ಮರುಳೆ
ತಡೆಯದೆ ಸಾಲಕೆ ಕೊಡುವುದು ಮಾಣಿಕ
ಜಡಿತದ ಕೆಲಸವೆಂದೆನುತ ೨೮

ಕಳವಳದಲಿ ಸಾಲ ಕಳೆವುದೆ ಮುನಿಪಾಲ
ಕೊಲುವನೆ ಕೊಡಲಾಜೆನೆನಲು
ಲಲನೆ ಕುಮಾರನ ಕೊಳಲಾಜೆ ಬುದ್ಧಿಯ
ಕಲಿಸಲಿ ಬೇಡ ಹೋಗೆಂದ ೨೯

ರೂಢೀಶ ನುಡಿದನು ನಾಡನು ಧಾರೆಯ
ಮಾಡುತ ಮಱೆದೆನು ಋಣವ
ಕೇಡಿಗೆ ಬುದ್ಧಿಯು ಕೂಡದು ಅಡಿಗೆಯ
ಮಾಡಿ ಕಳೆವರುಂಟೆ ಕಸವ ೩೦

ಕೇಳಿದ ಭೂಸುರ ಬಾಲಕ ಹಸುಮಗ
ಬಾಲಕಿ ಮುದುಕಿ ನೋಡೆಂದ
ಸಾಲದ ಹೊನ್ನನು ತಾಳುವೆ ಪ್ರಾಯದಿ
ಬಾಳುವರನು ಕೊಡು ಭೂಪ ೩೧

ತನಗಾರುಯಿಲ್ಲವುಯೆನಲಾಗವು[ದ್ದಾ]ರೆ
ಯನು ಮಾಡಿಕೊಡುಯೆಂದು ನುಡಿದ
ಎನಗೀಗ ಅವಸರ ಮನಸಿಗೆ ಬಂದಷ್ಟು
ಧನವಿತ್ತು ಇವರ ಸಾಕೆಂದ ೩೨

ಇಪ್ಪತ್ತು ಸಾವಿರವೊಪ್ಪುವ ನಾರಿಗೆ
ಇಪ್ಪತ್ತು ಸಾವಿರ ಸುತಗೆ
ತಪ್ಪದೆಯೆಣಿಸುವೆ ಕುಪ್ಪೆಯ ಮಾಡುತ
ಒಪ್ಪಿಸುವೆನು ಹೊನ್ನನೆಂದ ೩೩

ಕೊಡುಯೆಂದು ಭೂಪತಿ ನುಡಿದರೆ ಕೊಟ್ಟನು
ತಡೆಯದೆ ತೆಱಕಾಱಗಾಗ
ಪೊಡವೀಶ ಕೇಳಲು ಬಿಡದೆ ಬತ್ತಾಯಕೆ
ಹಿಡಿದೆನು ಈ ಹೊನ್ನನೆಂದ ೩೪

ಕೊಡಲಾಱೆನೆಂದರೆ ನುಡಿದನು ಕರಿಯುದ್ದ
ಒಡವೆಯ ಬತ್ತಾಯಗಳಿಗೆ
ನಡೆತಂದ ದಿನದಿಂದ ಕೊಡಲಿಕೆಯಿದು ಹೆಚ್ಚೆ
ನಡುಮಧ್ಯದಲಿ ವಿಪ್ರನೆಂದ ೩೫

ಅಳವಲ್ಲದ ಸಾಲ ಸಲುವುದೆ ಈ ಹೊನ್ನು-
ಗಳುಯೆಂದು ಭೂಸುರ ನುಡಿದ
ಬಲು ಸತ್ಯವಾಡಿದೆ ಎಲೆ ವಿಪ್ರ ನೀ ನಮ್ಮ
ಕೊಳಲಾಱೆ ಹೋಗೆಂದನರಸ ೩೬

ತನಗೆ ಕಾರಣವೇನುಯೆನುತಲಿ ಕೋಪಿಸಿ
ವನಿತೆ ಕುಮಾರನ ನೂಕಿ
ಜನಪತಿಯ ಮಾತು ನಿನಗೇಕೆಯೆಲೆ ತೊತ್ತೆ
ಮನೆಗೀಗ ನಡೆಯೆಂದು ಜಱೆದ ೩೭

ಹೇಳಿ ಬಾ ಹೋಗು ಭೂಪಾಲಗೆ ನೀನೆಂದು
ಬಾಲಕನನು ಕಳುಹಿದಳು
ಕೇಳುವ ಕಂದನ ಬಿಗಿಯಪ್ಪಿ ಭೂಪನು
ಬಾಲಕ ಹೋಗು ಹೋಗೆಂದ ೩೮

ಕಡೆಯಲಿ ತಲೆಗುತ್ತಿ ನುಡಿಯದ ನಾರಿಯ
ಕಡುಗೋಪದಲಿ ವಿಪ್ರನೊದೆದ
ಒಡೆಯನ ಕೇಳದೆ ಹಿಡಿತಂದು ಮಾಱಿದ
ಜಡದೇಹಿಯನು ಕೇಳಬಹುದೆ ೩೯

ಹುಲ್ಲುಹುಳ್ಳಿಯ ತಾರೊ ಎಲೊ ಬಾಲ ಮನೆಗಾಗಿ
ಕೆಲಸಕೆ ನಡೆ ಮೂಳದೊತ್ತೆ
ಹಲುಬುತ ನೂಕುತ ಎಳೆದೊಯ್ದು ಪಾವಕ
ಅಳವಟ್ಟ ವಿಪ್ರವೇಷದಲಿ ೪೦

ನಾರಿಗೆ ಪರಿಪರಿ ಹಾರುವ ಗಂಟಿನ
ಭಾರವ ಹೊರಿಸಿದನಾಗ
ಊರೊಳು ಬರುತಿರೆ ಮಾಱಲಿಕೊಂಡನು
ಸೂಱೆಯ ನೋಡೆಂದು ಜನರು ೪೧

ಸುರಪತಿಯ ಲೋಕದರಸಿಯೊ ರಾಯರ
ತರುಣಿಯೊ ಶಿವಶಿವಯೆನುತ
ಕರಗಳ ಮುಗಿದಾಗ ಬೆಱಗಾಗಿ ಕಾಶಿಯ
ಪುರದೊಳು ಜನ ನೋಡುತಿರಲು ೪೨

ತರುಣಿ ಕುಮಾರನ ಸೆಱೆಯನು ಹಿಡಿದಾಗ
ಕರೆದೊಯ್ದು ತನ್ನಯ ಮನೆಗೆ
ತರಳಗೆ ಕಟ್ಟಿಗೆ ಹೊಱೆಯನು ಮಱೆಯದೆ
ತರಹೇಳಿದನು ದಿನದಿನವು ೪೩

ಹಳೆಯ ಸೀರೆಯನುಟ್ಟು ಕಳೆದೋಱುವಳು ತೊತ್ತು
ಕೆಲಸವನಱಿಯಳುಯೆನುತ
ಹಲವು ತಪ್ಪನು ಹಾಕಿ ಕೊಲುತಲಿ ಬಯ್ಯುತ
ಲಲನೆಯ ಮಾಱುಗೊಂಡವರು ೪೪

ಇರುತಿರಲಿತ್ತಲು ತೆಱಕಾಱ ರಾಯನ
ತಱುಬಿದ ಬಲುಬಿಸಿಲೊಳಗೆ
ಹರಹರ ಪಾತಕ ಪರಿಹರಿಸದುಯೆಂದು
ಮಱುಗಿದ ಮಂತ್ರಿ ಭೂಪತಿಗೆ ೪೫

ಧುರದೊಳು ಕಾದದೆ ನೆಱೆ ಜೂಜನಾಡದೆ
ಸೆಱೆಹೋಗಿ ಸಕಲಸಂಪದವು
ತರಳೆ ಕುಮಾರನ ಧರಣೀಶ ಹೋಗಾಡಿ
ಹಱಿವಾಗದೆಂದನು ಮಂತ್ರಿ ೪೬

ಬಿಡದೇಳು ದ್ವೀಪದ ಒಡೆಯನ ಪರದಳ
ಸಿಡಿಲಿನ ಮಱಿ ನಿನ್ನ ಮಾತು
ತೊಡಕಿಸಿ ಸಾಮ್ರಾಜ್ಯ ಪಡೆದಾಗ ಋಣದೊಳು
ಕೆಡಹಿದ ಬಡ ಮುನಿಪಾಲ ೪೭

ಬಡಮನವನು ಮಾಡಿ ಬಿಡದಿರು ಸತ್ಯವ
ಮೃಡ ನೋಡುವನು ನಿನ್ನ ಮನವ
ಒಡೆಯರಿಲ್ಲದೆ ಬಿಟ್ಟಿ ಹಿಡಿವರೆಯೆನುತಲಿ
ನುಡಿದನು ಮಂತ್ರಿ ಭೂಪತಿಗೆ ೪೮

ಮನದೊಳು ಬುದ್ಧಿಯ ನೆನೆದನು ಭೂಪತಿ
ತನಗೆ ತಾ ಮಾಱುವೆನೆನುತ
ದನಿದೋಱಿದನು ತನ್ನ ಧನಿಕರು ಕೊಳಹೇಳಿ-
ದನು ಮ[ತ್ತ]ದಾರಾದರೆನುತ ೨೯

ಇಳೆಯೊಳಗಿಕ್ಷ್ವಾಕು ಬಳಕ ತ್ರಿಶಂಕನ
ಕಳೆವರದಲಿ ಹುಟ್ಟಿದಾತ
ಕಳೆಯುಳ್ಳ ಕಲಿಧೀರ ಹರಿಶ್ಚಂದ್ರನನು ಮಾಱಿ
ಕೊಳಹೇಳಿ ಬೀದಿಬೀದಿಯಲಿ ೩೦

ಹೊಲತಿಯರನು ಮಾಡಿಕೊಳಲೊಲ್ಲೆನೆಂಬನ
ಹೊಲೆಗಲಸುವೆನೆಂದು ಮುನಿಪ
ಕಳುಹಿದ ಯಮನಾಗ ಹೊಲೆವೇಷದಲಿ ಬಂದು
ಸುಳಿದನು ವೀರಬಾಹುಕನು ೩೧

ಶಿರದೊಳು ಸುತ್ತಿದ ಕುಱಿವಾರು ಕೆಂಗಣ್ಣು
ಕರದಲಿ ಸಂಬಳಿಗೋಲು
ತರಹರಿಸದೆ ಹೊಟ್ಟೆ ಬಿಱಿಯಲು ಕುಡಿದಾಗ
ಬಿಱುನುಡಿಯಲಿ ಬಂದನವನು ೩೨

ಹಲುಬುವ ದನಿಯನು ನಲವಿಂದ ಕೇಳಲು
ಕಳುಹಿದನಾ ಹಡಪಿಗನ
ಬೆಲೆಯೇನೊ ನಿನ್ನನು ಕೊಳಲಾಪಯೆನ್ನನು
ಸಲಹುವ ವೀರಬಾಹುಕನು ೩೩

ಏನಲಾಗ ಬೆಱಗಾಗಿ ಜನಪತಿ ಗರ್ಜಿಸಿ
ಘನ ಕೋಪಾಟೋಪದಿಂದವನ
ಮುನಿವುತ ಭುಗಿಲೆಂದು ಅನುವೇಳೆಯನು ನೋಡಿ
ನೆನೆದನು ಭಾಪುರೆ ವಿಧಿಯೆ ೩೪

ಹುಳಿತರೆ ಮೆಣಸನು ಹಳೆಜೋಳಕಿಂತಲು
ಹಳಿವರೆ ಹೊಲೆಯ ನೋಡೆನ್ನ
ಬೆಲೆ ಮಾಡಿ ಒಡೆಯನ ಬಳಿಗೊಯ್ಯಬಂದನು
ತೊಲಗು ತೊಲಗೆಂದು ಕೋಪಿಸಿದ ೩೫

ದಾರಾದರಾಗಲಿ ಮಾಱುವೆನೆನಲಿಕೆ
ಹಾರುವರೇ ಕೊಂಬುದೆನುತ
ಮಾಱಲು ಕೇಳದೆ ಬಾರೆವು ನಾವೆಂದು
ವೀರಬಾಹುಕ ಬಂದು ನುಡಿದ ೫೬

ಜಱೆಯದಿರೆಲೊ ನೀನು ಧರಣಿ ತಮ್ಮವ್ವೆಯ
ಹೊಱಗೇನೊ ನೆಱೆ ಭಕ್ತರೊಳಗೆ
ಧರಣಿಯೊಳಗೆ ಹುಟ್ಟಿ ಬಱುದಿಗೆ ಹುಸಿಯೊಳು
ಪೊರಳುವ ಹೊಲೆಯ ನೀನೆಂದ ೫೭

ಧರಣೇಶ ನುಡಿದನು ಧರೆಯೊಳು ಹುಟ್ಟಿದ
ಪರಿಪರಿಯ ಫಲದೊಳಗೆ
ಗರಳವು ಹೊಱಗಾದ ಪರಿ ನೀವು ನಾನೆಂತು
ಬಱಿದಿಗೆ ಹುಸಿದೆ ಹೇಳೆಂದ ೫೮

ಹೊನ್ನುಳ್ಳ ಧನಿಕ ಸಂಪನ್ನರು ದಾರಾದ-
ರೆನ್ನನು ಕೊಳಬನ್ನಿಯೆನುತ
ಮುನ್ನಲಿ ನೀನಾಡಿ ಬೆನ್ನಲಿ ಹುಸಿದೆ ಸಂ-
ಪನ್ನ ಹೊಲೆಯನೆ ಹೋಗೆಂದ ೫೯

ತಿರುಗಲು ಹಿಂದಕೆ ತರಹರಿಸದೆ ಭೂಪ
ದೊರೆಯಿಲ್ಲಯಿವನೊಬ್ಬನೆನುತ
ಅಱಿಯದ ಮಾತಿನ ಮಱೆಯೊಳು ಹುಸಿ ಬಂದು
ಕೊರಳನೆ ಸುತ್ತಿತುಯೆಂದ ೬೦

ಬಿಡದೆನ್ನ ಕುಲವನು ಕೆಡಿಸುವೆನೆಂದವ
ಘುಡದಲಿ ಮುನಿ ವಿಶ್ವಾಮಿತ್ರ
ನುಡಿದಂತೆ ತಪ್ಪದು ಕಡೆಯಿಲ್ಲದ ಸಾಲ
ಗಡಿದರೆ ಸಾಕೆಂದು ಕರೆದ ೬೧

ಜಱೆದವನೇತಕೆ ಕರೆದೆಯೊ ನಮ್ಮನು
ಬಱುದಿಗೆ ಹುಸಿಕ ಚಂಡಾಲ
ಧರಣೇಶ ನುಡಿದನು ಬೆರಸುವೆ ಹುಸಿಯೆಂಬ
ನೆರೆದತಿ ಹೊಲೆಯ ನಿಮ್ಮೊಳಗೆ ೬೨

ಹಲವು ಮದ್ದನು ಮಾಡಿ ಕಲಸಿಕೊಟ್ಟರೆ ಕೆಟ್ಟ
ಬಲುರೋಗ ಬಿಟ್ಟೋಡುವಂತೆ
ಕುಲಗೆಟ್ಟು ಸುಖದಿಂದ ಬೆಳೆವಂತೆ ಋಣವನು
ಕಳೆವಂತೆ ಕರುಣಿಸು ಧನವ ೬೩

ಸಾಲವು ನೂಜಾಜೊ ಪೇಳೆನಲಾನೆಯ
ಮೇಲೇಜಿ ಕವಡೆಯ ಹಿಡಿದು
ಮೇಲಕೆ ಮಿಡಿದುದ್ದ ಪಾಲಿಸುಯೆನಲಿಕೆ
ಕೇಳಿದ ವೀರಬಾಹುಕನು ೬೪

ಇಷ್ಟು ಹೊನ್ನನು ತಂದು ಕೊಟ್ಟರೆ ನೀಯೇನು
ಕಷ್ಟವ ಮಾಡುವೆಯೆನಲು
ಘಟ್ಟಿ ಬೆಟ್ಟದಿ ನಟ್ಟಡವಿಯಿರುಳೆನ್ನದೆ
ಕಷ್ಟವ ಮಾಡುವೆನೆಂದ ೬೫

ಹೊನ್ನನು ಕೊಡುವಂತೆ ತನ್ನಯ ಕೆಲಸವ
ಭಿನ್ನವಿಲ್ಲದೆ ಮಾಡುವಂತೆ
ಉನ್ನತ ಭಾಷೆಯ ಚೆನ್ನಾಗಿ ಕೈಕೊಂಡು
ಹೊನ್ನನು ತರಲಾಳ ಕಳುಹೆ ೬೬

ಹೆಡಗೆಗಳನು ಹೊತ್ತು ಅಡಕುತ ಹೊನ್ನನು
ಅಡಿಗಡಿಗಾನೆಯ ನಿಲಿಸಿ
ಅಡರೇಜಿ ಕವಡೆಯ ಮಿಡಿಮುದ್ದ ಧನವನು
ಕುಡಿವರಿಯಲಿ ಕೊಟ್ಟನಾಗ ೬೭

ಧರಣೀಶವೊಪ್ಪಿಸಿ ತೆಜಿಕಾಜಿನವಧಿಗೆ
ಎರಡನೆ ಗಳಿಗೆ ಮುಂದಿರಲು
ನೆಜೆ ನಿನ್ನ ಸಾಲವು ಹಜಿಯಿತು ಹುಸಿಮಾತು
ಬರಲಿಲ್ಲ ನೀ ನೋಡುಯೆಂದ ೬೮

ಬಳಲಿಸಿದೆನು ನಿನ್ನ ಬಲು ಮೂಢನವಗುಣ
ಗಳ ನೋಡಬೇಡೆಂದನವನು
ತಲೆವಾಗಿದೆನುಯೆಂದು ನಲವಿಂದ ಬಿನ್ನೈಸು
ಕಳೆಯುಳ್ಳ ಕೌಶಿಕಗೆಂದ ೬೯

ಕಾಲನು ಹಿಡಿದು ಭೂಪಾಲ ಮಾತಾಡಲು
ಏಳೇಳುಯೆಂದಾಗ ನುಡಿದ
ಹೇಳಿ ನಾಚಿಸಿ ನಿಮ್ಮನಾಳಿಗೊಂಬರೆಯಿನ್ನು
ಮೇಲಾಗಿ ಬದುಕು ಸತ್ಯದಲಿ ೨೦

ಬಿಡದಾಗ ಹರಸುತ ನಡೆದನು ಹೊನ್ನನು
ಅಡಕಲು ತೆಱಕಾಱನತ್ತ
ಒಡೆಯನ ಬೆನ್ನಲಿ ನಡೆತಂದ ಹರಿಶ್ಚಂದ್ರ
ನಡುವಾದ ಹೊಲೆಗೇರಿಯೊಳಗೆ ೨೧

ಕಾಸುವ ಖಂಡದ ಹೇಸಿಕೆ ಹೊಲಸಿನ
ಸೂಸುವ ಕರುಳು ಕಲ್ಮಷದ
ಹಾಸಿದ ಹಸಿಯ ದುರ್ಮಾಂಸದ ರಾಶಿಯು
ಗಾಸಿ ಮಾಡುತ ಪ್ರಾಣಿಗಳನು ೨೨

ಹೆಣವಿನ ಹಸಿಯ ತೋರಣ ಕಟ್ಟಿ ಒಣಗುವ
ನೆಣಗಳು ನೆತ್ತರ ಕೆಸರು
ದಣಿಯಲು ಕುಡಿದು ಬಂದಣಕಿಸಿ ಹಾಡುತ
ಕುಣಿವುತ ಕೂಗಿಡುತವರು ೨೩

ಎಡೆಯಾಡಿ ಖಂಡವ ಕಚ್ಚಿಯೆ ಹಾಱುವ
ಗಿಡುಗನು ನೆಱೆ ಹದ್ದು ಕಾಗೆ
ಕಡಿದಾಡುವ ನಾಯಿ ಅಡರೇಱಿ ಬಗುಳುತ
ಎಡೆಯೆಡೆಗಾ ಕೇರಿಯೊಳಗೆ ೨೪

ಪರಿಪರಿ ಘೋರವ ನೆಱಹಿದನೀತನ
ಪರಿಯನು ನೋಡುವೆನೆನುತ
ಸುರರು ಕೊಂಡಾಡಲು ಹರ ಹರಯೆನುತಲಿ
ಧರಣೀಶ ಕಣ್ಮುಚ್ಚಿ ನಡೆದ ೨೫

ಎಲುವಿನ ಹೊರಸಿಗೆ ಅಳವಟ್ಟ ಬೀವಿನ
ನುಲಿಯ ಹಮ್ಮಿದ ಹಸಿಯ ತೊಗಲ
ನಲವಿಂದ ಹಾಸಲು ಅಂಗಳದೊಳು ಬಂದು
ಕುಳಿತನು ವೀರಬಾಹುಕನು ೨೬

ತಲೆಯೋಡಿನೊಳು ತುಂಬಿ ಮೆಲುತ ಗೋಮಾಂಸವ
ಕೊಳುತಲಿ ಮದ್ಯಪಾನವನು
ಕುಲಗಿರಿಗಳ ಭಾರದಲಿ ತನ್ನ ಕಾಲನು
ಇಳುಹಿದ ದೇಶಾಧಿಪತಿಗೆ ೭೭

ಹೆಗಲ ಮೇಲಕೆ ಕಾಲ ತೆಗೆದುಕೊಂಡನು ಭೂಪ
ಬಗೆಬಗೆಯಲಿ ಒತ್ತುತಾಗ
ಜಗದೊಳು ರಾಯರ ಮಗನಾರು ವಿಧಿಯೊಳು
ನಗೆಗೇಡಿಯಾದನು ಋಣಕೆ ೭೮

ಸಾಲವ ಕಳೆದು ಭೂಪಾಲ ಹರುಷದಿ ವಿ-
ಶಾಲದಿ ಕುಳಿತನುಯೆನುತ
ಹೇಳು ನೀ ಮಾಡುವ ಊಳಿಗವೇನೆಂದು
ಕೇಳಿದ ವೀರಬಾಹುಕನು ೭೯

ಲಲನೆಯಸಿಜಿ ತಾಯ ಮೊಲೆಯನು ಕೊಯ್ಯೆಂದು
ಖಳರನು ಕಡಿಯೆಂದು ವಿಷವ
ಕೊಳಹೇಳಿ ಹಾವನು ಹುಲಿಯನು ಹಿಡಿಯೆಂದು
ಕುಲಗಿರಿಯನು ಕೀಳುಯೆನಲು ೮೦

ನೋಡಲು ನೆಜೆ ನಲಿದಾಡಲು ಕೆಲಸವ
ಮಾಡುವೆ ಮೆಚ್ಚಿಸಿ ನಿನಗೆ
ರೂಢೀಶ ನುಡಿದನು ಕೂಡಿದ ಋಣವ ಹೋ-
ಗಾಡಿದ ಒಡೆಯ ಕೇಳೆಂದ ೮೧

ಒಡೆಯನು ಪಾಲಿಸಿ ನುಡಿದನು ತನ್ನಯ
ಸುಡುಗಾಡ ಕಾವುದುಯೆನುತ
ತಡೆಯದೆ ನೆಲಹಾಗ ಉಡುಗೆಯ ತಂದರೆ
ಕೊಡುವೆನು ಹಣೆಯಕ್ಕಿ ನಿನಗೆ ೮೨

ನಡೆಸುವೆ ಬತ್ತಾಯ ಹಿಡಿಯೆಂದು ವೀಳ್ಯವ
ಉಡುಗೊಜೆಯನು ಕೊಟ್ಟನವನು
ಒಡನಿತ್ತು ಮುದ್ರಿಕೆ ಹಿಡಿದ ಸಂಬಳಿಗೋಲು
ಪೊಡವೀಶ ಕೈಕೊಂಡು ನಡೆದ ೮೩

ಹಱೆಯನು ಹೊಯಿಸುತ ಮೊಱೆವುತ ಸಾಱುತ
ಕುಱುಹನೆ ತೋಱುತ ನಡೆದ
ಇರುಳಿನ ವೇಳೆಯನಱಿಯದೆ ಹಣೆಯಕ್ಕಿ
ಅಱಿವೆಯ ನೆಲಹಾಗಗೊಡದೆ ೮೪

ಸುಡಬೇಡವೆನ್ನಾಣೆ ಒಡೆಯನ ಮೋಹದ
ಮಡದಿಯ ಪಾದದಾಣೆಂದ
ಹಿಡಿದ ಗಗ್ಗರಗೋಲ ಬಿಡದಾಗ ಬಾಱಿಸಿ
ನಡೆತಂದ ಸಂಬಳಿಯೆನುತ ೮೫

ಆರಾದರಾಗಲಿ ಧಾರುಣಿಯಾಳುವ
ವೀರರಾವುತರಾಗಲೆನುತ
ಮೀಱಿಲು ತಲೆಗಳ ಹಾಱಿಸುವೆನುಯೆಂದು
ಸಾಱುತ ನಡೆತಂದನಾಗ ೮೬

ಹೊಲೆಯನು ಹುಸಿಯನೆ ಬಳಸದೆ ಸೀಮೆಯ-
ವೊಳಗಿರೆ ಶಿವನಾತಗೊಲಿವ
ಕುಲಜನು ಚಂಡಾಲಗಲಸಿದ ಹೊಲೆಯನು
ಕೊಳೆವನು ಹುಳಗುಂಡದೊಳಗೆ ೮೭

ಪೊಡವೀಶ ತನ್ನಯ ನುಡಿ ಹುಸಿಯಾದರೆ
ಕಡೆಗಾಗಿ ಹೊಲೆವೇಷದೊಳಗೆ
ಬಿಡದಾಗ ಜೋಹದಿ ಎಡೆಯಾಡುತಿರೆ ಬಾಯ
ಬಿಡುತಲಿ ನೋಡುತ ಸುರರು ೮೮

ಧರಣೀಶ ತನ್ನಯ ಸಿರಿಯನು ಪಟ್ಟದ
ಅರಸಿಯ ಮೋಹದ ಮಗನ
ತರಣಿಯ ಕುಲವನು ಧರಣೀಶ ಹೋಗಾಡಿ
ಬರುತಿರ್ದ ಸುಡುಗಾಡಿನೊಳಗೆ ೮೯

ಕಡುಗೋಪದಲಿ ಹೊಕ್ಕು ನಡೆದನು ಹೆಣಗಳ
ಸುಡಬೇಡಯೆನುತ ಕೂಗಿಡುತ
ಪೊಡವಿಯ ಹಾಗವ ಕೊಡುವುದು ಹೆಣಸುಟ್ಟು
ಉಡುಗೆಯ ಹಣೆಯಕ್ಕಿಗಳನು ೯೦

ಬೇಡುವ ಭರದಲಿ ಓಡುತ ಎಲುಗಳ
ನೋಡದೆ ಒಡೆದುಳಿವುತಲಿ
ಕೂಡಿದ ಹೊಗೆಯೊಳಗಾಡುತ ಹೆಣಗಳ-
ಯೀಡಾಡಿ ಹೊಡೆಹುಳ್ಳಿಯೊಳಗೆ ೯೧

ಕೊಡದಿರೆ ತಲೆಗಳ ಕಡಿವೆನು ತನ್ನಯ
ಒಡೆಯನ ಪಾದದಾಣೆಂದ
ಬಿಡದೀಸುಕೊಳ್ಳುತ ಪೊಡವೀಶ ಕಾವುತ
ಸುಡುಗಾಡಿನಧಿಕಾರಿಯಾದ ೯೨

ನಲವಿಂದ ಸಿದಿಗೆಯ ಹುಲ್ಲುಹುಳ್ಳಿಯ ತಂದು
ನುಲಿಯಿಂದ ಬಿಗಿದು ಮಂಚಿಕೆಯ
ಅಳವಟ್ಟ ಗುಡಿಸಿಲ ತಲೆಮಱೆಯನು ಕಟ್ಟಿ
ಕುಳಿತಾಗ ಕಾವುತಲಿದ್ದ ೯೩

ಬೆಳಗುವ ಜಾವದಿ ಜಳಕವ ಜಪತಪ
ಗಳ ಮಾಡಿ ಮಂತ್ರಿ ಗಂಗೆಯಲಿ
ನಲವಿಂದ ನಡೆತಂದು ಫಲಗಳನೇಱಿಸಿ
ಬಲಗೊಂಡು ಕಾಶಿಯ ಪತಿಯ ೯೪

ಮೃಡ ನೀನೆಯೆನ್ನಯ ಒಡೆಯನ ದುರಿತವ
ಬಿಡುಗಡೆಯನು ಮಾಡುಯೆನುತ
ಪೊಡಮಟ್ಟು ನಡೆತಂದು ಬಿಡದೆ ಪ್ರಸಾದವ
ಕೊಡುತಲಿ ಭೂಪತಿಗಾಗ ೯೫

ಹರ ನಿನಗೊಲಿವನು ಬಱುದಿಗೆ ಚಿಂತಿಸ-
ದಿರು ಹಿಂದ ನೆನೆಯಬೇಡೆಂದ
ಚರಣವನೊತ್ತುತ ಹಿರಿದುಪಚರಿಸುತ
ಇರುತಿರೆ ಮಂತ್ರಿಗೆ ನುಡಿದ ೯೬

ಕಾಶಿಯ ಪುರ ಲಾಳ ದೇಶಕಯೋಧ್ಯೆಯ
ವಾಸವೆ ಸುಡುಗಾಡು ತನಗೆ
ಹಾಸಿದ ತವಗ ಸಿಂಹಾಸನ ಗುರುವಾಜ್ಞೆ
ಲೇಸಾದ ಛತ್ರ ನೋಡೆಂದ ೯೭

ಕರದ ಸಂಬಳಿಗೋಲು ಸುರಗಿ ಭೂತವೆಯೆನ್ನ
ಪರಿವಾರ ಸತ್ಯಭಂಡಾರ
ವರಮಂತ್ರಿ ನೀನುಪಚರಿಸುವ ಕಷ್ಟಕೆ
ಹರ ಮೆಚ್ಚುವನು ನಿನ್ನ ದೆಸೆಯ ೯೮

ಪಡಿಯಕ್ಕಿಯನು ತಂದು ಕೊಡಲಾಗ ಮಂತ್ರಿಯು
ಬಿಡದೊಂದು ಬಸವಗೆ ಮೆಲಿಸಿ
ತಡೆಯದೆ ಹೋದಲ್ಲಿಯೆಡೆಯಾಡಿ ಗೋಮಯ
ಹಿಡಿತಂದು ತೊಳೆದಕ್ಕಿಗಳನು ೯೯

ಪೊಡವೀಶನ ಕೈಗೆ ಕೊಡಲಾಗ ಲಿಂಗಕೆ
ಎಡೆಮಾಡಿ ಸವಿಸವಿದಾಗ
ಒಡಲಿಗೆ ಹಿತವಾಗಿ ಸಡಗರದಲಿ ಭೂಪ
ಕುಡಿದನು ಗಂಗೆಯ ಜಲವ ೧೦೦

ಉಳಿದುದ ಸೇವಿಸಿ ಕೊಳುತಲಿ ಗಂಗೆಯ
ಜಲವನು ಮಂತ್ರಿ ಮತ್ತಾಗ
ಒಲಿದಾಗ ಭೂಪನ ಬಳಿಯಲಿ ತಾನಿಂತು
ಕೆಲಸವ ಮಾಡುತಲಿರ್ದ ೧೦೧

ಹನ್ನೊಂದನೆಯ ಸಂಧಿ

ಸೂ|| ಹರಿಶ್ಚಂದ್ರರಾಯನ ತರಳನು ಕಟ್ಟಿಗೆ
ತರಲಾಗ ಕಚ್ಚಿತು ಉರಗ

ಪೊಡವೀಶ ಮಾಜಿದ ಮಡದಿ ಕುಮಾರನ
ಒಡೆಯನ ಮನೆಯನೇನೆಂಬೆ
ಕಡಿವ ಕಸಬರಿಗೆಯೊ ಸುಡುಗಾಡೊ ರಕ್ಕಸ-
ರಡವಿಯೊ ಹಾವಿನ ಮನೆಯೊ ೧

ಒಡೆಯನು ಸಾಯಲು ಬಡಿವನು ತಪ್ಪನು
ಹಿಡಿದಾಗ ಸಾಧಿಸಿ ಒದೆವ
ಮಡದಿಯು ಮಕ್ಕಳು ನಡುವಣ ಸೊಸೆ ಕಾಳು-
ಗೆಡೆವುತ ನೆರೆಯ ಗೊಡ್ಡಾಟ ೨

ಓಡಿಹೋದರೆ ತಮ್ಮ ಕೂಡಿದ ಸತ್ಯಕೆ
ಕೇಡುಂಟು ಜೀವದಾಸೆಯನು
ಈಡಾಡುವರೆ ಮತ್ತೆ ರೂಢೀಶನೇನಾದ
ನೋಡುವ ಹಾದಿಯನೆನುತ ೩

ಹೇಳಲುಬಾರದು ಕೇಳಲುಬಾರದು
ಬಾಲೆಯ ಮಗನ ಸಂಕಟವ
ಮೂಲವಾದನು ಮುನಿಪಾಲನು ಪಾಪದಿ
ಹಾಳಾಗಿ ಹೋಗನೆ ಶಿವನೆ ೪

ಬೆಳಗಾಗದ ಮುನ್ನ ಹುಲುಹುಳ್ಳಿಗೆಡೆಯಾಡು-
ತಲಿ ಬಾಲಕನು ಒಂದು ದಿವಸ
ಅಳವಟ್ಟ ಓರಗೆ ಎಳೆಯ ಮಕ್ಕಳು ಕೂಡಿ-
ಕೊಳುತಲಿ ಕಟ್ಟಿಗೆ ತರುತ ೫

ಬಿಸಿಲಿಂದ ಬೆವರುತ ಹಸಿದು ನೀರಡಸಿಯೆ
ಬಸವಳಿವುತ ಬರುತಿರಲು
ಹಸನಾಗಿ ಹುತ್ತನು ಮುಸುಕಿಯೆ ಬೆಳೆದಿರ್ದ
ಹಸಿಯಾದ ಹುಲ್ಲನೆ ಕಂಡು ೬

ಒಡೆಯನ ಚಿತ್ತವ ಹಿಡಿವೆನುಯೆನುತಲಿ
ಪೊಡವಿಗೆ ಇಳುಹಿದ ಹೊಱೆಯ
ಕುಡುಗೋಲ ಕೊಂಡಾಗ ನಡೆತಂದು ಹುತ್ತಿನ
ಹೊಡೆಹುಲ್ಲ ಕೊಯ್ಯುತ ಬರಲು ೭

ಒಡಗಚ್ಚಿ ಹದರನು ಹಿಡಿದು ಕಾಳುರಗನು
ಕಡಿಯಿತು ಮುನಿಯ ನೇಮದಲಿ
ತಡೆಯದೆ ಝಾಡಿಸೆ ಒಡಮುಱಿವುತ ಬಿದ್ದು
ಕೆಡೆವುತ ಬಿಟ್ಟೋಡಿತಾಗ ೮

ಥರಥರಿಸುತ ಕಂದ ಒಱಲಿ ಕೂಗಿಡುತಲಿ
ಮೊಱೆಯಿಟ್ಟನವ್ವವ್ವಯೆನುತ
ಸೊರಗುತ ತಂದೆಯ ಕರೆವುತ ಧೊಪ್ಪನೆ
ಶಿರವಡಿಯಾಗಿಯೆ ಕೆಡೆದ ೯

ಒಡನಿದ್ದ ಮಕ್ಕಳು ನಡುಗುತ ಬಿಟ್ಟೋಡೆ
ಅಡವಿಯೊಳೊಬ್ಬ ಕುಮಾರ
ಬಡಿವುತ ಕೈಕಾಲನಡರೇಱಿ ವಿಷ ಬಂದು
ನಡುನೆತ್ತಿಗೇಱಲು ಮಡಿದ ೧೦

ಮಟ್ಟ ಮಧ್ಯಾಹ್ನದಿ ನೆಟ್ಟನೆ ರವಿಕುಲ
ಶ್ರೇಷ್ಠನ ಮಗ ಸತ್ತನೆನುತ
ದಿಟ್ಟಿಸಲಾಱದೆ ತಟ್ಟನೆ ರವಿ ತಾಯ
ಹೊಟ್ಟೆಯ ಹೊಗುವಂತೆ ನಡೆದ ೧೧

ತರಣಿಯ ಮಂಡಲ ಹರೆಯಿತು ಮಗನೇಕೆ
ಬರಲಿಲ್ಲ ನಾ ಕೆಟ್ಟೆನೆನುತ
ಹೊಱಗೆ ಬಂದಾಲಿಸಿ ಬೆರಳನೆ ಮುಱಿವುತ
ತರಳೆಯು ಕೆಲಸಕೆ ನಡೆದು ೧೨

ಹಸಿದನೊ ಬೆಂಡಾಗಿ ಬಿಸಿಲಿಂದ ಬೆವರುತ
ಬಸವಳಿದನೊ ಬಟ್ಟೆಯೊಳಗೆ
ಎಸೆದರೊ ಕಳ್ಳರು ಹಸುಮಗ ಮರನೇಱಿ
ವಸುಧೆಗೆ ಬಿದ್ದನೊ ಶಿವನೆ ೧೩

ಕೆಲಸವ ಮಾಡಲು ಕೊಲುವುದ ಬಿಡರೆಂದು
ಅಲಸಿ ಬಿದ್ದನೊ ಬಾವಿಯೊಳಗೆ
ಹುಲಿ ಬಂದು ಓಡಿಯಿತೊ ಬಲು ಹಾವು ಕಚ್ಚಿತೊ
ನೆಲೆದಪ್ಪಿದನೊ ದಾರಿಯೊಳಗೆ ೧೪

ಅಡಿಗಬ್ಬು ದೊರಕದೆ ಒಡೆಯನ ಬಾಧೆಗೆ
ಅಡಗಿದನೊ ಬನದೊಳಗೆ
ಎಡೆಯಾಡಿ ನೋಡಲು ಒಡತಿಯು ಕೋಪಿಸಿ
ಬಡಿದುದನೇನ ಹೇಳುವೆನೊ ೧೫

ಹಲುಬಲು ಸಾಪಿಸಿದಳು ಖೋಡಿಯೆಂಬರು
ಅಳುತಿರೆ ಕೈಕಾಲುಗೆಡುತ
ನಿಲಲು ಬೇಸತ್ತಳು ಒಳಗಿಂದ ಹೊಱವಂಟು
ಸುಳಿದರೆ ಓಡುವಳೆನುತ ೧೬

ತಲೆಬಾಗಿಲೊಳಗೊಬ್ಬ ಸುಳಿದರೆ ಲೋಹಿತ
ಗಲಭೆಗೆ ಲೋಹಿತನೆನುತ
ಬಳಲುತ ದನಿದೋಱಿ ಅಳಲುತ ನಿಂದಿರೆ
ಬಳಿಗೊಂಡು ಹೋದವ ನುಡಿದ ೧೭

ತರಳನು ಕಟ್ಟಿಗೆ ಹೊಱೆಯನು ತರುತಲಿ
ಮರಕೆ ನೆಮ್ಮಿಸುತ ದಾರಿಯಲಿ
ಉರವಣಿಸುತ ಹುಲ್ಲ ಕೊಱೆವುತಲಿರೆ ಕೈಯ
ಉರಗನು ಕಡಿಯಲು ಮಡಿದ ೧೮

ಹೊಡೆವತಿ ಬಿಸಿಲೊಳು ಮಡಿವ ಮಧ್ಯಾಹ್ನದಿ
ತಡೆಯದೆ ಹೋಗು ಹೋಗೆನಲು
ಒಡಲನು ಹೊಯ್ಕೊಂಡು ಮಿಡುಕುತ ಹೊಲನಾವ
ಕಡೆಯೆಂದು ಕೇಳಿದಳಾಗ ೧೯

ಇಲ್ಲಿಂದಲಿತ್ತಲು ಪಲ್ಲವಿಸಿದ ಮರ
ಅಲ್ಲಿಯೆ ದಾರಿಯವೊಳಗೆ
ಮೆಲ್ಲಗೆ ಹೋಗದಿರೆಲ್ಲಡವಿ ಮೃಗಜಾತಿ
ನಿಲ್ಲದೆ ಎಳೆದೊಯ್ವುವೆನಲು ೨೦

ಒಡೆಯನ ಪಾದಕೆ ಕೆಡೆದಳು ಉರಗನು
ಕಡಿಯಿತು ಎನ್ನಯ ಮಗನ
ತಡೆಯದೆ ನಿಮ್ಮಾಳ ಬಿಡುವುದು ನೋಡಿಸಿ
ಸುಡುವಂತೆ ಮಾಡಯ್ಯ ತಂದೆ ೨೧

ಸತ್ತರೆ ಸಾಯಲಿ ಕತ್ತಲೆಯೊಳಗಿನ್ನು
[ಯೆ]ತ್ತಲು ನೋಡುವರವನ
ಮಿತ್ತಾಗಿ ಮನೆಯೊಳು ಕುತ್ತಾಗಿ ಕರೆಕರೆ-
ದತ್ತರೆ ಕೊಲ್ಲುವೆನೆಂದ ೨೨

ಮಡಿದ ದುರ್ಮರಣದಿ ಕಡುಪಾಪಿ ಶೂದ್ರನ
ಗೊಡವೆಯ ಮಾತಾಡಬೇಡ
ನುಡಿದಳು ಮೃಗಜಾತಿ ಕೆಡಿಸದ ಮುನ್ನವೆ
ಸುಡುವೆನು ತಾನೆಂದಳಾಗ ೨೩

ಕೆಲಸವ ಮಾಡಿದ ಬಳಿಕಲಿ ಹೋಗಿನ್ನು
ಮಲಗುವೆ ಕಾಡಬೇಡೆಂದ
ಅಳುತಲಿ ಕೆಲಸವ ಬಲುಬೇಗ ಮಾಡಿಯೆ
ನಿಳಯವ ಹೊಱವಂಟಳಾಗ ೨೪

ಏಡವುತ ಮುಗ್ಗುತ ನಡುವಿರುಳೊಬ್ಬಳೆ
ನಡೆದಳು ಹೊಱವಂಟು ಪುರವ
ಒಡೆದುಳಿವುತ ಮುಳ್ಳು ಗಿಡಗಂಟೆಯೊಳು ಬಿದ್ದು
ಕೆಡೆವುತ ಬರುತಿರ್ದಳಾಗ ೨೫

ಕುಱುಹಿನ ದಾರಿಯ ಮರನನು ಕಂಡಳು
ಒಱಗಿದ ಕಟ್ಟಿಗೆ ಹೊಱೆಯ
ತರಳನ ಕಾಣದೆ ಹರಿದಾಡಿ ಅರಸುತ
ಮೊಱೆಯಿಟ್ಟು ಕರೆದಳು ಮಗನ ೨೬

ಜನನಿಯು ಮಾತಿಗೆ ದನಿದೋಱಬಾರದೆ
ಮುನಿವರೆ ಬಾ ಮುದ್ದು ಮಗನೆ
ತನಗಿನ್ನು ದೇಶಿಕತನವಾಯಿತೆನುತಲಿ
ತನುಜನ ಕಂಡಳು ತರುಣಿ ೨೭

ಹಸಿದು ನೀರಡಸಿದ ಬಸುರು ಬೆನ್ನಿಗೆ ಹತ್ತಿ
ಒಸರಿದ ಕಟವಾಯಿ ನೊರೆಯ
ಹಸುರಿಟ್ಟು ಹುತ್ತಿನ ದೆಸೆಯಲ್ಲಿ ಬಿದ್ದಿರೆ
ಶಶಿಮುಖಿ ಧೊಪ್ಪನೆ ಕೆಡೆದು ೨೮

ಏಳೇಳು ನೀನುಂಬ ವೇಳೆಯು ಹೋಯಿತು
ಏಳೆನ್ನ ಮಗ್ಗುಲದೊಳಗೆ
ಬಾಲಕ ಮಲಗುವ ವೇಳೆಯೆನ್ನಯ ಮಾತ
ಕೇಳದೆ ಮುನಿವರೆ ಕಂದ ೨೯

ಹಡೆದ ಹೊಟ್ಟೆಯ ಸುಟ್ಟು, ಸುಡುಗಾಡಿನೊಳಗೇಕೆ
ಅಡಗಿದೆ ಬಾ ಮುದ್ದುಕಂದ
ಓಡಿದೆತ್ತಿ ಮುದ್ದಾಡಿ ಮಿಡುಕುತ ಬಾಯಸು
ಬಿಡುತಲಿ ಹುಡಿಯಲಿ ಹೊರಳಿ ೩೦

ಕರದೊಳು ನಾಡಿಯ ಬೆರಳಿಗೆ ಚಿಟುಕನು
ಮುಱಿಮುಱಿದಂಗಾಲ ಬಿಸಿಯ
ತರಹರಿಸದೆಯಿಂತು ಪರಿಯಲಿ ಪ್ರಾಣವ
ತರಳೆ ಕಾಣದೆ ಹೊರಳಿದಳು ೩೧

ಧರೆ ಹೋಗಿ ಸಿರಿ ಹೋಗಿ ಪರದೇಶದೊಳು ಬಂದು
ಪರರಿಗೆ ಮಾಱಿಸಿಕೊಂಡು
ಕರೆಕರೆಯನು ಮತ್ತೆ ಮಱೆತೆನು ನಿನ್ನಿಂದ
ಪರದೇಶಿಯಾದೆನೊ ಮಗನೆ ೩೨

ಧರಣೀಶ ತಾನಾವ ಪರಿಯಿಂದಲಾದರೆ
ದೊರಕಿಸಿ ಹೊನ್ನನು ತಂದು
ಸೆಱೆಯನು ಬಿಡಿಸುವ ಭರದಲಿ ನಿನ್ನನು
ಕರೆದರೆಯೇನೆಂಬೆ ಕಂದ ೩೩

ಸೆಳೆಮಂಚದ ಸುತ್ತ ವಳಯ[ದ] ದೀವಿಗೆ
ಲಲನೆಯರೋಲಗದಿಂದ
ಮಲಗುವ ರವಿಕುಲತಿಲಕನೆ ಕತ್ತಲೆ
ಯೊಳಗೆಂತು ಮಲಗಿದೆ ಕಂದ ೩೪

ಹಾ ಹಾ ರವಿಕುಲ ತಿಲಕನೆ ಬಾ ಬಾ
ಹಾ ಹಾ ಹಸುಳೆಕುಮಾರನೆ ಬಾ ಬಾ
ಅರಿರಾಯರ ಗಜಸಿಂಹದ ಮಱಿಯೆ
ಬಿರುದುಂಟಿಳೆಯೊಳು ನಿನಗಾರ್ ಸರಿಯೆ
ಕಳವಳಿಸುತ ನೃಪನರಮನೆಯೊಳಗೆ
ಬೆಳೆದುದನಳವಡಿಸುತ ಮನದೊಳಗೆ
ಹಸಿದಾಗ ಬೇಡಲು ರಸರಸದೂಟ
ಬಸವಳಿದಾಡುವ ಪರಿಪರಿಯಾಟ
ಗಳಿಗೆಗೆ ನೂಱಾಱು ದೊರೆಗಳು ಬಂದು
ಫಲಗಳನಿತ್ತು ಮುದ್ದಾಡುವರಂದು
ರಾಯನ ಸತ್ಯಕೆ ಸಾಯಸಬಡುತ
ಕಾಯವ ಕರಗಿಸಿ ಬಾಯನೆ ಬಿಡುತ
ಹಸಿದು ನೀರಡಸಿಯೆ ಬಿಸಿಲೊಳಗಂದು
ಹಸುಮಗನಾ ಕಷ್ಟಬಡಿಸುತ ತಂದು
ಕೊಡಲಾಗ ಪರರಿಗೆ ಮಾಱಿಸಿಕೊಂಡು
ಅಡಿಗಬ್ಬು ಹುಲ್ಲನು ತರ ಕೈಕೊಂಡು
ಕಾಡಿ ಬೇಡಿ ಉಂಡಾಡುವ ದಿನದಲಿ
ಮಾಡಿದೆ ಕೆಲಸವ ಮನಮಱುಗುತಲಿ
ಎಲ್ಲಿಯೆ ಕಲಿತನೊ ಗಾವುದಿ(?) ಕೆಲಸ
ಹುಲ್ಲನು ಕಟ್ಟಿಗೆ ತರಲಿಕೆ ಹೇಸ
ಒಡೆಯಗೆ ಹೊಡೆಹುಳ್ಳಿಯ ತರಲಾಱದೆ
ತಡೆಯದೆ ಹುತ್ತದ ತಡಿಯಲಿ ಮಲಗಿದೆ
ನಿನ್ನನು ಕಚ್ಚಿದ ಉರಗನು ಬಂದು
ಎನ್ನನು ಏತಕೆ ಹಿಡಿಯದು ಎಂದು
ಪೊಡವಿಗೆ ರವಿಕುಲದ ಕುಡಿ ಸುಟ್ಟು
ಹುಡಿಯಾಗಿ ಹೋಯಿತು ತಳಪಟವಿಟ್ಟು
ಗಲ್ಲವ ಹಿಡಿದು ಮುದ್ದಾಡುವ ಮಱುಕ
ನಿಲ್ಲದೆ ಬಿಗಿಯಪ್ಪುವ ತನುತವಕ
ಎಂದಿಗೆ ಮಱೆವೆನೊ ಎನ್ನಯ ಕಂದ
ಒಂದೊಂದು ಮಾತಿನ ಸವಿಗುಣದಿಂದ
ಬೆಳಗಾದ ಬಳಿಕಲಿ ಒಡೆಯನು ಬಂದು
ಕೊಲುವನುಯೆನುತಲಿ ತನ್ನೊಳಗಂದು

ತಡೆದರೆ ತನ್ನಯ ಒಡೆಯನು ಕೋಪಿಸಿ
ಬಡಿವನುಯೆನುತಲಿ ನಿಂದು
ಮಿಡುಕುವ ಕಂದನ ಒಡಿದೆತ್ತಿಕೊಂಡಾಗ
ನಡೆತಂದಳಾ ನಡುವಿರುಳೆ ೩೫

ಬಲುಭೂತ ಬೇತಾಳ ಸುಳಿದವು ಬತ್ತಲೆ
ಹಲುಬಾಯ ತೆಱೆದು ಕೂಗಿಡುತ
ತಲೆಯನು ಕೆದಱಿ ಕೋಮಲೆಯನು ಬೆದಱಿಸಿ
ಕೊಲುವಂತೆ ಮುನಿಯ ನೇಮದಲಿ ೩೬

ತರಳೆಯು ಶುಚಿಯಾಗಿ ತರಳನ ತಾ ಸಂಚ-
ಕರಿಸುವೆನೆಂಬ ನಿಷ್ಠೆಯಲಿ
ಹರಹರಯೆನುತಲಿ ಬರುತಾಗ ಮಸಣದ
ಉರಿಯನು ಕಂಡಳು ಬಂದು ೩೭

ಧರಣಿಗೆ ಇಳುಹುತ ಕೊಱಕೊಳ್ಳಿಗಳನೊಟ್ಟಿ
ಮಱುಗುತ ಮಗನ ಮಲಗಿಸಿ
ಬಿಱಿಯುತ ಬಳಲುತ ಮೊಱೆಯಿಟ್ಟು ಕಿಚ್ಚನು
ಕರದಲಿ ಹಿಡಿದಾಗ ನಿಂದು ೩೮

ಸಲೆ ಹುಟ್ಟುವಲಿ ಹುಟ್ಟಿ ಬೆಳೆವಲ್ಲಿ ಬೆಳೆಯೆಂದು
ಅಳುತಿರೆ ಸುಡುಗಾಡಿನೊಳಗೆ
ಮಲಗಿದ್ದ ರವಿಕುಲತಿಲಕನು ಎಚ್ಚತ್ತು
ಗಲಭೆಯ ಕೇಳಿ ಗರ್ಜಿಸುತ ೩೯

ಸುಡಬೇಡವೆಲೆ ತಲೆಗಡಿವೆನು ನಿನಗಾಣೆ
ಒಡೆಯನು ವೀರಬಾಹುಕನು
ನಡೆತಂದು ಹಿಂಗಾಲ ಬಿಡಿದಾಗ ಬಿಸುಟನು
ಬಡವಿಯ ಕಂದನ ಭೂಪ ೪೦

ವಸುಧೆಗೆ ಈಡಾಡಿ ಬಿಸುಡುವದಕೆಯೆನ್ನ
ಹಸುಮಗನೆಂದೆತ್ತಿಕೊಳುತ
ಹಸುಳೆಯು ನಿನ್ನಯ ಶಿಶುವಿನ ಸಮನೆಂದು
ಶಶಿವದನೆಯು ಬೇಡಿಕೊಳಲು ೪೧

ನೆಲಹಾಗ ಹೆಣನುಟ್ಟ ಕಳೆದಂಬರವ ಕೊಟ್ಟು
ಬಳಿಕಲಿ ದಹನ ಮಾಡೆಂದ
ಹಲವು ಮಾತಾಡದೆ ತೊಲಗೆಂದು ಕೋಪಿಸಿ-
ಕೊಳುತಿರೆ ಮೊಱೆಯಿಟ್ಟಳಾಗ ೪೨

ನೆಱೆ ಸಪ್ತದ್ವೀಪದ ಅರಸಿನ ಮಗನಾಗಿ
ಮರಣವ ಕಾಣಲು ನಿನಗೆ
ಹರುವಿಲ್ಲ ನೆಲಹಾಗ ಉರಿಯಿತು ನಿನ್ನಾಣೆ
ಮೆಱೆಯಿತು ಚಂಡಾಲನಾಣೆ ೪೩

ಮುನಿ ವಿಶ್ವಾಮಿತ್ರನು ತನಗಿಕ್ಕಿದ ಬೇಗೆ
ಎನುತಿರೆ ಬೆದಱಿ ಭೂಪಾಲ
ಜನಪತಿಯ ಮಾತು ನಿನಗೇಕೆ ನೀನಾರು
ತನುಜ ತಾನಾರು ಹೇಳೆಂದ ೪೪

ಧರಣಿಗೆ ಹರಿಶ್ಚಂದ್ರ ಧರಣೀಶನ ಪಟ್ಟ
ದರಸಿಯು ತಾನೀತ ಮಗನು
ಪರರಿಗೆ ಮಾಱಿಲು ತರಳನು ಕಟ್ಟಿಗೆ
ತರಲಾಗ ಕಚ್ಚಿತು ಉರಗ ೪೫

ಮನಮುಟ್ಟಿ ಮಱೆಯದೆ ನೆನೆದಳು ಹರಿಶ್ಚಂದ್ರ
ತನುಜಗೆಯಿಂತಾಯಿತೆನುತ
ಜನಪತಿ ನುಡಿದನು ಘನಪಾತಕನ ಮತ್ತೆ
ನೆನೆಯಲು ಬೇಡ ನೀನೆಂದ ೪೬

ಬಱಿದಿಗೆ ಮಾತಾಡಲಱಿಯದೆ ಧರಣಿಯ
ಸಿರಿಯನು ಹೋಗಾಡಿ ಋಣಕೆ
ತರುಣಿ ಕುಮಾರರ ಸೆಱೆ ಮಾಡಿ ಹೊಟ್ಟೆಯ
ಹೊರೆದನು ಹೊಲೆಯಗಾಳಾಗಿ ೪೭

ನುಡಿದಳು ಪರಶಿವ ಜಡೆಯನು ಹೊತ್ತರೆ
ಹಿಡಿದರೆ ಶೂಲದ ಹೆಣನ
ಪೊಡಪಿಗೆ ಮರುಳೊಡನಾಡಲು ಒಡೆಯನು
ಮೃಡ ತಾನೆ ಲೋಕ ಮೂಱಱಲಿ ೪೮

ವಿಷವನು ಧರಿಸಲು ಭಸಿತವ ಹೂಸಲು
ಹಸಿದೊಗಲುಡುಗೆಯನುಡಲು
ಮಸಣದೊಳಾಡಲು ಬಿಸಿಗಣ್ಣನೊಬ್ಬನೆ
ಹೆಸರಾದ ಮೂಱು ಲೋಕದಲಿ ೪೯

ಶಿರಸ ಕಪಾಲದಿ ಪರಿಪರಿ ಜಾತವ
ತಿರಿದುಂಡು ಶಿರಮಾಲೆ ಧರಿಸಿ
ಧರೆ ಮೂಱು ಲೋಕಕ್ಕೆ ಹರನಾದ ಪರಿಯಲಿ
ಹರಿಶ್ಚಂದ್ರ ತನಗೆಂದಳಾಗ ೫೦

ತರುಣಿಯ ಮಾತಿಗೆ ಮಱುಕವನೆಬ್ಬಿಸಿ
ಕರಣಂಗಳನು ಕರಗಿಸುತ
ಹಱಿವುತ ಧೈರ್ಯವ ಹೊಱಹೊಮ್ಮಿ ಕಂಬನಿ
ಗಱೆವುತ ಧೊಪ್ಪನೆ ಕೆಡೆದ ೫೧

ಈ ಶುಚಿ ನಾರಿಯನೀ ಸುಕುಮಾರನ
ಗಾಸಿಯ ಮಾಡಿ ನಾಡೊಳಗೆ
ಹೇಸದೆ ನಾ ಪರದೇಶದಿ ಪಾತಕ
ಭೂಸುರಗಿವರ ಮಾಱಿದೆನು ೫೨

ಪರರಾಯರೋಲೈಸಿ ದೊರಕಿಸಿ ಹೊನ್ನನು
ಸೆಱೆಯನು ಬಿಡಿಸುವೆನೆನುತ
ಹರುಷವ ತಾಳುತ ತರಳನ ತಾ ಸಂಚ-
ಕರಿಸದೆ ಹೊಱಗಾದೆನೆಂದ ೫೩

ಕಡೆಯಿಲ್ಲದೆನ್ನಯ ಪೊಡವಿಯ ಹೋಗಾಡಿ
ಜಡದೇಹಿ ಹೊಲೆಯಗಾಳಾಗಿ
ಸುಡುಗಾಡ ಕಾವಲ್ಲಿಗೊಡೆಯ ಪಾತಕನೆನ್ನ
ಪಡಿಯಾಗದಿರು ಅಜ್ಜನಂತೆ ೫೪

[ಧಾರುಣಿ]ಗೊಡೆಯ ಕುಮಾರನಾದನೆಂಬ
ಹಾರೈಕೆಯಿಂದ ನಾನಿರಲು
ಅರಣ್ಯದೊಳು ಹಾವಿಗೊಡಲಿತ್ತು ಮಡಿದ ನಿ
[ಷ್ಕಾರ]ಣ ಸುಕುಮಾರನೆಂದ ೫೫

ಕೇಳುತ ಬಾಲೆ ಭೂಪಾಲನು ಹೊಲೆಯಗೆ
ಆಳಾದನೆಂಬ ಚಿಂತೆಯಲಿ
ಬಾಲಕನ ಚಿಂತೆ ತಾಳಿತು ತೂಕದ
ಕೋಲಾಗಿ ಕಂಗೆಟ್ಟಳಾಗ ೫೬

ನಿನಗಾಗುವ ರಾಜ್ಯವನು ಕೊಟ್ಟು ಪರರಿಗೆ
ಮನಮುಟ್ಟಿ ನಿನ್ನ ಮಾಱಿದರೆ
ಮುನಿದೆಯೊ ಮಾತಾಡುಯೆನುತ ಮಾಱುತ್ತರ-
ವನು ಹಾರಿದನು ಭೂಮಿಪಾಲ ೫೭

ಕಾಶಿಯ ವಾಸ ವಿಶ್ವೇಶನ ಪೂಜಿಸಿ
ಭೂಸುರರಿಗೆ ದಾನ ಮಾಡಿ
ದೇಶವನಾಳಿ ಸಂತೋಷದೆ ಬಾಳದೆ
ವಾಸುಕಿಗೊಳಗಾದೆ ಮಗನೆ ೫೮

ನರಮೇ[ಧ]ಯಾಗಕೆ ವರುಣನು ಬೇಡುತ
ಬರೆ ನೀನು ತಪ್ಪಿಸಿಕೊಳಲು
ಪರರ ಮಕ್ಕಳ ಕೊಟ್ಟು ಬಱಿದಿಗೆ ಅಪಕೀರ್ತಿ
ಮೆಱೆದೆನೊ ನಿನಗಾಗಿ ಮಗನೆ ೫೯

ಬಾಲೆ ಸಂತೈಸಿ ಭೂಪಾಲಗೆ ನುಡಿದಳು
ಬಾಲಕನನು ಸಂಚಕರಿಸಿ
ಮೇಲಾದ ಬುದ್ಧಿಯ ಹೇಳುವುದಿನ್ನು [ಮುಂ
ಗಾಳವು] ಬೆಳಗಾಗದ ಮುನ್ನ ೬೦

ಮಡದಿಯ ಮಾತಿಗೆ ನುಡಿದನು ಹಣೆಯಕ್ಕಿ
ಬಿಡುವೆ[ನೆ] ಎನ್ನಯ ಪಡಿಯ
ಒಡೆಯನ ಭಂಡಾರಗಡಿದರೆ ಪಾತಕ
ಬಿಡಲಾಱೆ ಬಾಲೆ ಕೇಳೆಂದ ೬೧

ಕುಲಹೀನನಾದರೆ ಸಲಹಿದ ಒಡೆಯನ
ನೆಲಹಾಗವನು ಮಾಜಿದಾಗ
ಕುಲಕೋಟಿಯನು ಕೂಡಿ ಹುಳಗುಂಡದಲಿ ತನ್ನ
ಮುಳುಗಿಸಿ ಕೊಲುವನು ಯಮನು ೬೨

ಸುಡುಗಾಡ ತೆಱಿಗೆಯ ಒಡೆಯನು ಬೇಡಲು
ಕೊಡದಿರೆ ತಿರಿವುದು ತರಳೆ
ಕಡ ಹುಟ್ಟಿದರೆ ಲೇಸು ಕಡೆಗೇನು ದೊರಕದೆ
ಸುಡುವ ಮಾತಾಡಬೇಡೆಂದ ೬೩

ಧರಣೀಶ ಬಂದುದು ಬರಲೆಂದು ಹೆಣಸುಟ್ಟು
ಅಱುವೆಯ ಸೆಳಕೊಂಡು ನಡೆದ
ತರಳೆಯು ಮೊಱೆಯಿಟ್ಟು ಸೊರಗುತ ಮರುಳಾಗಿ
ಬರುತಿರೆ ಬಟ್ಟೆಯೊಳಾಗ ೬೪

ಹನ್ನೆರಡನೆಯ ಸಂಧಿ

ಸೂ|| ಮಡದಿಯ ತಲೆಯನು ಪೊಡವೀಶ ಹೊಡೆಯಲು
ಬಿಡಿಸುತ ಮೆಚ್ಚಿದ ಶಿವನು

ಪುರವನು ಪಾಲಿಪ ದೊರೆಯ ಕುಮಾರನಾ-
ಭರಣಕ್ಕೆ ಕಳ್ಳರು ಕವಿದು
ಹೊಱಯಿಕೆ ತಂದಾಗ ಕೊರಳನು ಕೊಱೆಯಲು
ಒಱಲುವ ದನಿಯ ಕೇಳಿದಳು ೧

ಧರೆಯೊಳು ಹಡೆದೊಡಲಿನ ದುಃಖದವರಿಗೆ
ಸ್ಥಿರಬುದ್ಧಿ ಕೂಡವೆಂಬುದಕೆ
ತರುಣಿಯೆ ಸಾಕ್ಷಿ ನೋಡೆಂಬಂತೆ ಹರಿದಳು
ತರಳನಳುವ ದನಿಯೆಡೆಗೆ ೨

ತರುಣಿಯು ತನ್ನಯ ತರಳನ ದನಿಯೆಂದು
ಕರೆದಳು ಅರಸುತಲಾಗ
ಪುರಜನವಿಲ್ಲಿಗೆ ತರಲಿಕೆ ಬಂದನೊ
ತಿಱುಗಿತೊ ಪ್ರಾಣವು ಶಿವನೆ ೩

ಕಳವಳಿಸುತ ಬಾಲೆ ಬಳಲುತ ಕಂದನ
ಬಳಿಯಲಿ ನಿಂದು ನೋಡಲಿಕೆ
ಬಲು ಹುಯ್ಯಲಾಗಲು ಲಲನೆಯ ಗುಱಿಮಾಡಿ
ಕಲಿಯಾಗಿ ಕಳ್ಳರೋಡಿದರು ೪

ನಡೆತಂದು ಹುಯ್ಯಲು ಎಡೆಯಾಡಿ ನೋಡುತ
ಮಡದಿ ಕುಮಾರನ ಕಂಡು
ಕಡೆಗಾಗಿ ನಾರಿಯು ನಡುಗುತಲಿರೆ ಕಟ್ಟಿ
ಹೆಡಗಯ್ಯ ಬಿಗಿದರು ಭಟರು ೫

ನಾರಿಯೊ ರಕ್ಕಸ ಮಾರಿಯೊ ರಾಯಗೆ
ತೋಱುವ ಕೊಲ್ಲಬೇಡೆನುತ
ವೀರರು ಸಮರಂಗಧೀರರು ತಂದರು
ಧಾರುಣಿಪಾಲನಿದ್ದೆಡೆಗೆ ೬

ಕಾಡುವ ವಿಧಿಯೆನ್ನನಾಡಿಸುವಂತೆ ತಾ
ನಾಡುವೆನೆಂದು ಬಾಲಕಿಯು
ರೂಢೀಶ ಕೇಳಲು ಖೋಡಿಯಾಗದ ಮಾತ
ನಾಡಿದಳಾ ಸಭೆಯೊಳಗೆ ೭

ಗಂಡನು ತನ್ನನುದ್ದಂಡತನಕೆ ಮಾಜಿ
ಕೊಂಡರೆ ತಾ ಕಳ್ಳೆಯಾಗಿ
ಕಂಡು ಕುಮಾರನ ಕೊಂಡೊಯ್ದು ಪ್ರಾಣವ
ಕೊಂಡೆನಾಭರಣದಾಸೆಯಲಿ ೮

ಪರರು ಕೊಂದರೊ ನಿನ್ನ ಗುಜಿ ಮಾಡಿದರೊ ಅಂಜ-
ದಿರು ಹೇಳು ಬಾಲಕಿಯೆನುತ
ಧರಣೀಶ ಕೇಳಲು ತರಳನ ಕೊರಳನು
ಮುಱಿದೆನು ತಾನೆಂದಳಾಗ ೯

ಎಡಬಲದೋಲಗ ಕಿಡಿಕಿಡಿಯೋಗುತ
ಘುಡುಘುಡಿಸುತ ಭೂಮಿಪಾಲ
ಸುಡುಗಾಡಿಗೊಯ್ಯಿರೊ ಹೆಡತಲೆ ಪೊಡೆಯಲಿ
ಕೊಡಿಯೆಂದ ವೀರಬಾಹುಕಗೆ ೧೦

ಕರೆದರೆ ಬಂದನು ತರುಣಿಯ ಕೊಲಹೇಳಿ-
ದರೆ ವೀರಬಾಹುಕನಾಗ
ಹೊಱಯಿಕೆ ಹಿಡಿದೊಯ್ದು ಕರೆಸಿದ ಸುಡುಗಾಡ
ಚರಿಸುತ ಕಾವ ಚಂದುಗನ ೧೧

ಪೊಡವೀಶ ನಡೆತಂದು ತಡೆಯದೆ ತನ್ನಯ
ಒಡೆಯನ ಮಾತ ಕೇಳುತಲಿ
ಮಡದಿಯ ಮುಂದಲೆವಿಡಿದಾಗ ಬಡಿವುತ
ಹೆಡಗುಡಿಯನು ಸೇದಿ ಬಿಗಿದು ೧೨

ನಡೆಸಿದನಾಕೆಯ ಸುಡುಗಾಡ ತವಗದ
ಗುಡಿಸಲ ಬಳಿಗಾಗಿ ಭೂಪ
ಮಡದಿಯ ಹೆಡತಲೆ ಪೊಡೆವುದ ರವಿ ನೋಡ-
ಲಡರಿದ ಮೂಡಣ ಗಿರಿಯ ೧೩

ಗಿರಿಜಾಮನೋಹರ ಗುರು ವಿಶ್ವನಾಥನು
ಹರಿಯಜ ಮೊದಲಾದ ಸುರರು
ಸುರಪ ವಸಿಷ್ಠರು ವರ ವಿಶ್ವಾಮಿತ್ರನು
ನೆರೆದರು ಗಗನ ಮಾರ್ಗದಲಿ ೧೪

ಪತಿವ್ರತೆ ಚಂದಿರಮತಿಯನು ಹೋಲುವ
ಸತಿಯುಂಟೆ ಮೂಱು ಲೋಕದಲಿ
ಪ್ರತಿಯಿಲ್ಲವೆಂದು ಪಾರ್ವತಿಗೂಡಿ ದಿವಿಜರ
ಸತಿಯರು ಬೆಱಗಾಗುತಿರಲು ೧೫

ಹೆಡಗುಡಿಯನು ಕೊಯ್ದು ಒಡನೆ ಪದ್ಮಾಸನ-
ವಿಡಿದು ಮಂಡಿಸಿ ಮೂಡದೆಸೆಯ
ಮೃಡಗತಿಯೆನುತಲಿ ಪೊಡಮಟ್ಟು ಕರಗಳ
ತಡೆಯದೆ ಮುಗಿದಳು ತರಳೆ ೧೬

ಜನಪತಿ ಖಂಡೆಯವನು ಕೊಂಡು ಹೊಡೆಯಲು
ಅನುವಾದನೇನ ಹೇಳುವೆನು
ವನಿತೆಗೆ ನುಡಿದನು ಮನಮುಟ್ಟಿ ನಿನ್ನಯ
ಮನೆದೈವವನು ನೆನೆಯೆಂದ ೧೭

ಹರ ನನ್ನ ಮನೆದೈವ ಹರಿಶ್ಚಂದ್ರ ಗಂಡನು
ನೆಱೆ ಮಂತ್ರಿ ಸತ್ಕೀರ್ತಿ ತನಗೆ
ವರಪುತ್ರ ಲೋಹಿತ ತರಳನು ತನಗಾಗಿ
ಇರಲಿಂತು ಜನ್ಮಜನ್ಮದಲಿ ೧೮

ಮುನಿಪ ವಸಿಷ್ಠನ ಘನಪದವನು ಮತ್ತೆ
ಮುನಿ ವಿಶ್ವಾಮಿತ್ರನ ನೆನೆದು
ತನುಜನ ಸಂಗಡವನು ಮಾಡಿಕೊಂಬೆನು-
ಯೆನುತಲಿ ಹೊಡೆಯೆಂದಳಾಗ ೧೯

ಕೇಳುತಲಾ ಭೂಮಿಪಾಲನು ತನ್ನಯ
ಬಾಲೆಯ ಕುಱುಹ ನೋಡಿದನು
ಬಾಲಕನನು ತಂದ ಬಾಲೆಯು ಮರುಳೆ ಮುಂ-
ಗಾಣದೆ ಹೋದಳುಯೆಂದ ೨೦

ನಡುವಿರುಳೊಬ್ಬಳೆ ನಡೆಯಲು ವಿಧಿಯೇನು
ಗೊಡವೆಯ ಮಾಡಿತೊ ಶಿವನೆ
ಮಡದಿಯ ಕೈಯಾರೆ ಹಿಡಿತಂದು ತಲೆಯನು
ಹೊಡೆವಂತೆ ತನಗಾಯಿತೆಂದ ೨೧

ಸಲಹಿದ ಒಡೆಯನು ಕೊಲಹೇಳಿ ಕಳುಹಿದ
ಕೆಲಸವ ಮಾಡುವೆನೆನುತ
ಅಳವಲ್ಲದ ಸತ್ಯಕಳವಾಗಿ ಹುಸಿ ಹೊಕ್ಕು
ಬಳಸುವುದೆನುತ ಕೋಪದಲಿ ೨೨

ಎಱಗಲಿಕನುವಾಗುತಿರೆ ವಿಶ್ವಾಮಿತ್ರಗೆ
ಸುರರೆಲ್ಲ ಕೋಪಿಸಿ ನುಡಿದು
ಕರವನು ಹಿಡಿವುದು ಕರ ಪಾಪಿತನ ಬೇಡ
ಕರುಣಿಸು ಭೂಪಾಲಗೆನಲು ೨೩

ಜನಪತಿ ಬಿಡುಬಿಡು ಘನತರದ ಸತ್ಯ-
ವನು ಕಂಡು ಮೆಚ್ಚಿದೆ ನಿನಗೆ
ಮುನಿಯದೆ ತನ್ನಯ ತನುಜೆಯರನು ನೀನು
ವನಿತೆಯರನು ಮಾಡಿಕೊಳಲು ೨೪

ಹೊಲೆ ಸೇವೆ ಬಿಡಿಸುವೆ ಕುಲಜನ ಮಾಡುವೆ
ಲಲನೆಯ ತಲೆಗಾಯ್ವೆ ಮಗನ
ಉಳುಹುವೆ ಸಾಮ್ರಾಜ್ಯಗಳನೀವೆನೆನುತಲಿ
ಹಲುಬಿದ ಮೇಘಮಾರ್ಗದಲಿ ೨೫

ವರವಿಶ್ವಾಮಿತ್ರನಂಬರದಲಿ ಮಾತಾಡಿ-
ದರೆ ಕೇಳಿ ಭೂಪಾಲ ನೋಡಿ
ಶಿರವನು ತೂಗಿದ ನೆಱೆ ನೀನು ಮೆಚ್ಚಿದ
ಪರಿಯನು ಕಂಡೆ ಹೋಗೆಂದ ೨೬

ಬಲಗೈಯ ಖಡ್ಗವ ಝಳಪಿಸಿ ತಲೆಯನು
ಕಲಿಯಾಗಿ ಹೊಡೆಯಲು ಶಿವನು
ಹೊಳೆವ ಖಂಡೆಯಧಾರೆಯೊಳು ಮಾಯದಲಿ ಮೂಡಿ
ನಲವಿಂದ ನಿಜವ ತೋಱಿದನು ೨೭

ದಶಭುಜ ಕೆಂಜೆಡೆ ಶಶಿರವಿಗಳ ಜೂಟ
ನೊಸಲೊಳು ನಯನ ರಂಜಿಸುತ
ಪಶುಪತಿ ಪರಶಿವನಸಮಾಯದಲಿ ಮೂಡಿ
ಬೆಸನಿತ್ತು ಬೇಡು ಬೇಡೆಂದ ೨೮

ಹದಿಮೂರನೆಯ ಸಂಧಿ

ಸೂ|| ಮೃಡ ಮೆಚ್ಚಿ ಕೊಟ್ಟಿರೆ ಪೊಡವೀಶ ಹರಿಶ್ಚಂದ್ರ
ನಡೆತಂದನಯೋಧ್ಯಾಪುರಕೆ

ಸುರರೆಲ್ಲ ಹೂಮಳೆಗಜೆದರಂಬರದಲ್ಲಿ
ನೆರೆದರು ಸಕಲಮುನಿಜನರು
ಪರಿಪರಿ ನಿಸ್ಸಾಳ ಮೊಜೆದವು ಕಾಶಿಯ
ಪುರದೊಳು ವಿರೂಪಾಕ್ಷನೆಡೆಯ ೧

ಕುಡಿಸಲು ಸಾಯಸಬಡಿಸಿದ ವೈದ್ಯವ
ಒಡಲಿಗೆ ಹಿತವಾಗುವಂತೆ
ಮೃಡಮೂರ್ತಿಯನು ತೋಜಿ ಪೊಡವೀಶನಿದಿರಾಗಿ
ನಡೆತಂದನಾ ವಿಶ್ವಾಮಿತ್ರ ೨

ಅಂಡಲೆದಾ ಚಂದ್ರಮಂಡಲವನು ರಾಹು
ಕೊಂಡೆಸಗಿಯೆ ಬಿಡಲಾಗ
ಬೆಂಡಾಗಿ ಶಶಿ ಶುದ್ಧಮಂಡಲದೊಳು ಕಳೆ
ಗೊಂಡಂತೆ ಮಗನುದಿಸಿದನು ೩

ಮುನಿ ತನ್ನ ಕೃತಕವ ಮನಮುಟ್ಟಿ ತೆಗೆಯಲು
ಘನಸರ್ಪದಷ್ಟವ ಕಳೆದು
ತನುಜನು ಲೋಹಿತ ಚಿನುಮಯ ಮೂರುತಿ-
ಯನು ಕಂಡು ಪೊಡಮಟ್ಟನಾಗ ೪

ಧರಣೀಶ ತರುಣಿಯ ತರಳನ ಬಿಗಿಯಪ್ಪಿ
ವರಮಂತ್ರಿಯನು ಕೂಡಿಕೊಳುತ
ಎಜಗಿದ ಪಾದಕೆ ಹರುಷದಿ ಪಾರ್ವತಿ-
ಯರಸನೆ ಜಯಜಯವೆನುತ ೫

ಹೊಲೆಸೆಲ್ಲೆಯನು ಪೊತ್ತು ತಲೆಯಕ್ಕಿಗಳನುಂಡು
ಸುಳಿದಾಡಿ ಸುಡುಗಾಡಿನೊಳಗೆ
ಲಲನೆಯ ಕೈಯಾರೆ ಕೊಲುವತಿ ಪಾಪಿಯ
ಬಳಿಗೇಕೆ ಬಂದಿರಿ ಶಿವನೆ ೬

ಸಿರಿಹೋಗಿ ಅಭಿಮಾನ ಸೆರೆಯಾಗಿ ಸುಡುಗಾಡ
ಚರಿಸುತ ಸಾಯಸಬಡುತ
ವರಪುತ್ರ ತರುಣಿಯ ಮರಣಾಂತಕವ ನೋಡಿ-
ದರೆ ಸತ್ಯ ಹುಸಿಯಾಗಲಿಲ್ಲ ೭

ಕರುಣಿಸಿ ಕಾಶಿಯ ಪುರದ ವಿಶ್ವೇಶನು
ಧರಣೀಶ ಭಾಪುರೆಯೆನುತ
ಧರೆಯೊಳು ನಿನಗಾರು ಸರಿಯೆಂದು ಬಿಗಿದಪ್ಪಿ
ವರ ವಿಶ್ವಾಮಿತ್ರಗೆ ನುಡಿದ ೮

ನುಡಿದ ವಸಿಷ್ಠಗೆ ಕೊಡುವರ್ಧ ಫಲವನು
ಕೊಡುವುದು ಭೂಪತಿಗೆನಲು
ಪೊಡವೀಶ ಧಾರೆಯ ಹಿಡಿಯೆಂದು ತಪ್ಪದೆ
ತಡೆಯದೆ ಎರೆದನು ಮುನಿಪ ೯

ಕರ ಉಗ್ರತಪವನಾಚರಿಸಿದ ವರುಷವು
ನೆರೆಯೈವತ್ತು ಕೋಟಿಯನು
ಸರಿಮಾಡಿ ಅರ್ಧವನೆರೆದನು ಧಾರೆಯ
ವರ ವಿಶ್ವಾಮಿತ್ರ ಭೂಪತಿಗೆ ೧೦

ಪೊಡವಿಗಯೋಧ್ಯೆಯ ನಡುವೆ ಪಟ್ಟವ ಕಟ್ಟಿ
ಕೊಡುವೆನು ಸಾಮ್ರಾಜ್ಯಪದವ
ತಡೆಯದೆ ರಥವೇರಿ ನಡೆಯೆಂದು ಹೇಳಲು
ನುಡಿದನು ಮುನಿಗೆ ಭೂಪಾಲ ೧೧

ಧಾರೆಯ ಮಾಡಿದ ಧಾರುಣಿಯನು ಕೊಳ್ಳ-
ಬಾರದು ಬೇಡ ಬೇಡೆನಲು
ಸಾರಾಯ ಸತ್ಯನುದಾರ ನೀನೆಂಬುದ
ಆರೈದೆ ಕೇಳೆಂದ ಮುನಿಪ ೧೨

ಆಡಿದ ಮಾತನು ಕೂಡಲೆ ತೊಡಕಿಸಿ
ಬೇಡಿದೆ ಸಾಮ್ರಾಜ್ಯಪದವ
ಕಾಡೊಳು ದಾವಾಗ್ನಿ ಮಾಡಿದೆ ಸತ್ಯವ
ನೋಡಿದೆ ನಿನ್ನಯ ಮನದ ೧೩

ಲಲನೆ ಕುಮಾರನ ಕೊಳಹೇಳಿ ಅಗ್ನಿಯ
ಕಳುಹಿದೆ ವಿಪ್ರವೇಷದಲಿ
ಸುಳಿದನು ಯಮನಾಗ ಹೊಲೆವೇಷದಲಿ ನಿನ್ನ
ಕೊಳಬಂದ ವೀರಬಾಹುಕನು ೧೪

ಧಾರುಣಿಪತಿಯ ಕುಮಾರನ ಕೊಂದರು
ಚೋರರುಯೆನ್ನ ತಂತ್ರದಲಿ
ನಾರಿಯ ಗುಱಿ ಮಾಡಿ ತೋಱಿದೆ ನಿನ್ನ ಕೈ-
ಯಾರೆಲೆ ಕೊಲಿಸುವೆನೆನುತ ೧೫

ಧರಣೇಶ ಕೇಳಿನ್ನು ಸರಿಮಾಡಿ ಚಿನ್ನಕೆ
ಒರೆದು ನೋಡಿದೆ ನಿನ್ನ ಮನಸ
ಕರಗಿಸಿದರೆ ನೋಯಲಱಿಯದು ಕಡಿದರೆ
ಪರಿಪರಿ ಬಣ್ಣದೋಱುವುದು ೧೬

ಎಲೆ ಭೂಪ ನಿನ್ನಯ ನೆಲೆಗೊಂಡ ಸತ್ಯದ
ಬಲುಹನು ನೋಡಿದೆನೆನುತ
ಬಳಲಿಸಿದೆನು ನಿನ್ನ ಕೊಲೆಗೊಳಗಾದೆನು
ಅಳವಲ್ಲದಪರಾಧಿ ತಾನು ೧೭

ಪೊಡವೀಶ ನುಡಿದನು ಒಡಿದು ಹಾಲೆಱೆಯುತ
ಹಡೆದ ಮಕ್ಕಳ ಸಾಕುವಂತೆ
ಜಡಮತಿಯನು ಸುಟ್ಟು ಹುಡಿಬಡಿಸಿದೆ ನಿನ್ನ
ಕಡೆಯಿಂದ ಕಂಡೆ ಶಂಕರನ ೧೮

ತಲೆಯೂಱಿ ತಪಮಾಡಿ ಹಲವಂಗದಲಿ ನೋಡಿ
ಹೊಲಬನೆ ಕಾಣರು ಶಿವನ
ಕಿಲುಬುಗಟ್ಟಿದ ಲೋಹಗಳು ತಾಗೆ ಪರುಷವ
ಹಳಚಲು ಕನಕವು ಮುನಿಪ ೧೯

ಹರುಷದಿ ಮುನಿಪನ ಚರಣಕೆ ನಮಿಸುತ
ಕರಗಳ ಮುಗಿದನು ಭೂಪ
ಕರಗಿದರಿಬ್ಬರ ಕರಣ ನಿರ್ಮಲವಾಗಿ
ಹಱಿಯಿತು ಮನದ ಕಲ್ಮಷವು ೨೦

ಜನಪತಿ ಕಾಣುತ ಮುನಿಪ ವಸಿಷ್ಠಗೆ
ಮನಮುಟ್ಟಿ ಪೊಡಮಟ್ಟನಾಗ
ಅನುದಿನ ಗುರುಮಂತ್ರವನು ಮಾಡಿ ನಿಮ್ಮಿಂದ
ಪುನೀತನಾದೆನು ಮುನಿಪ ೨೧

ಜನಪತಿ ಕೇಳೆನ್ನ ಮುನಿತನ ಚಾಂಡಾಲ-
ವನು ಹೊತ್ತು ಹೊಱಗಾಗುತಿರಲು
ಅನುದಿನ ತನ್ನಾಣೆಯನು ಗೆಲಿಸಿದೆಯೆಂದು
ಮನ ಮೆಚ್ಚಿ ಕೊಂಡಾಡುತಿರ್ದ ೨೨

ನೆಱೆ ಸಪ್ತದ್ವೀಪದ ಧರಣೀಶನೀತನ
ಪುರಕೊಯ್ಯಲೇತಕೆಯೆನುತ
ಹರಿಹರ ಮೊದಲಾದ ಸುರಮುನಿಗಳು ಕಾಶಿ
ಪುರದೊಳು ಪಟ್ಟಗಟ್ಟಿದರು ೨೩

ಹೊಳೆವ ಸಿಂಹಾಸನದಲಿ ಬಂದು ಭೂಪತಿ
ಕುಳಿತನು ಮುನಿಯ ನೇಮದಲಿ
ಲಲನೆ ಕುಮಾರನು ಕುಳಿತರು ರವಿಕುಲ
ತಿಲಕನ ತೊಡೆಯ ಮೇಲುಗಡೆ ೨೪

ಮೃಡ ಗತಿಯೆನುತಲಿ ಪೊಡಮಟ್ಟು ಮಂತ್ರಿಯು
ಒಡೆಯನ ಬಳಿಯಲಿ ಕುಳಿತ
ಬಡಿವ ನಿಸ್ಸಾಳವು ಎಡಬಲದಲಿ ಸೇನೆ
ಕಡೆಯಿಲ್ಲ ಕಹಳೆ ಕೂಗಿದುವು ೨೫

ಭಸಿತದ ಪಟ್ಟವ ನೊಸಲೊಳು ಕಟ್ಟಿದ
ಶಶಿಧರನೊಲಿದು ಭೂಪತಿಗೆ
ವಸುಧೆಗೆ ಹೂಮಳೆ ಪಸರಿಸಿದುವು ನಾಲ್ಕು
ದೆಸೆದೆಸೆಯಲಿ ಕೀರ್ತಿಯೆಸೆಯೆ ೨೬

ಇಳೆಯೊಳು ತಾರಕೆ ತಳಿವಂತೆ ದಿವಿಜರ
ಲಲನೆಯರಾರತಿಗಳನು
ಬೆಳಗುತ ಹರಸುತ ನಲವಿಂದ ರವಿಕುಲ
ತಿಲಕನೆ ಜಯಜಯವೆನುತ ೨೭

ಮನಸಿಗೆ ಬಂದಷ್ಟು ದಿನ ರಾಜ್ಯಪದವಿಯ
ಅನುಭವಿಸುವುದೆಂದು ಶಿವನು
ದಿನಕರನುಳ್ಳಷ್ಟು ದಿನ ರಾಜಭೋಗವ
ಮನಮುಟ್ಟಿ ಕೊಟ್ಟ ಭೂಪತಿಗೆ ೨೮

ಏಳುತ ಮನುಜರ ಪಾಲಿ[ಪ] ಹರಿಶ್ಚಂದ್ರ
ಲೋಲನ ಮನಮುಟ್ಟಿ ನೆನೆಯೆ
ಏಳೇಳು ಜನ್ಮದಿ ಬಾಳುವರಿಳೆಯೊಳು
ಮೇಲಾಗಿ ಸತ್ಯರೆಂದೆನಿಸಿ ೨೯

ಧರೆಯೊಳಗೇಳುತ ಹರಿಹರ ಹನುಮಂತ
ಹರಿಶ್ಚಂದ್ರ ಬಲಭದ್ರನೆನುತ
ಹರುಷದಿ ನೆನೆದರೆ ದುರಿತವಿನಾಶನ
ವರಕಥೆಯೊಳಗೊಂದು ಮಾತು ೩೦

ಸುರಪತಿ ಮೊದಲಾದ ಸುರಮುನಿಗಳುಯೆಲ್ಲ
ಪುರಕೊಯ್ದು ಕಳುಹುವುದೆನುತ
ಕರುಣಿಸಿ ಕೈಲಾಸಪುರದತ್ತ ಪರಶಿವ
ಗುರು ವಿರೂಪಾಕ್ಷನು ನಡೆದ ೩೧

ಸುರಗಣಗಳು ಲೋಕವಜಿಯಲು ನಡೆದರು
ಧರಣೀಶನನು ಕೂಡಿಕೊಳುತ
ಬರುತಿರಲಯೋಧ್ಯೆ ಪುರಜನಗಳು ಕೇಳಿ
ಹರುಷದಿ ಗುಡಿಯ ಕಟ್ಟಿದರು ೩೨

ಬಾಜಿಸಿ ಗಂಭೀರ ಭೇರಿ ಭೋರಿಡುತಲಿ
ಬೀಜುವ ಕಹಳೆ ಕೋಟಿಗಳು
ವಾರುವಗಳ ಕೂಡಿ ತೇರ ಶೃಂಗಾರಿಸಿ
ವಾರಣಘಟೆ ಚೆಲ್ಲವರಿದು ೩೩

ಪರಿವಾರವೆಲ್ಲವು ಪುರಜನವನು ಕೂಡಿ
ತೆರಳಿತು ಸಂಭ್ರಮದಿಂದ
ಧರಣೀಶನನು ಕಂಡು ಪರಿಪರಿ ರತುನವ
ಸುರಿದರು ಪಾದಗಾಣಿಕೆಯ ೩೪

ಸರಸಿಜವನದೊಳು ತರುಣಿಯು ಮೆಱೆವಂತೆ
ಧರಣೀಶ ಅಯೋಧ್ಯಾಪುರಕೆ
ಹರುಷದಿ ನಡೆತಂದು ಹರನ ಕೊಂಡಾಡುತ
ಅರಮನೆಯನು ಹೊಕ್ಕನಾಗ ೩೫

ಅಳವಲ್ಲದಾರತಿ ಬೆಳಗುತ ಹೂವಿನ
ಮಳೆಯನೆ ಸುರಿಸುತ ಜನರು
ನಲವಿಂದ ಸುರಮುನಿಗಳು ವೇದಮಂತ್ರದಿ
ತಳಿದರು ಮುತ್ತಿನಕ್ಷತೆಯ ೩೬

ಇದೆ ನಿನ್ನ ಭಂಡಾರ ಇದೆ ನಿನ್ನ ಉಗ್ರಾಣ
ಇದೆ ಕರಿತುರಗದ ಲಾಯ
ಇದೆ ನಾರಿಸಂದೋಹ ಇದೆ ಸರ್ವಸಾಮ್ರಾಜ್ಯ
ಇದೆ ರಾಜಮುದ್ರಿಕೆಯೆಂದ ೩೭

ಧರಣೇಶ ನೀನಂದು ಇರಿಸಿದ ಪರಿಯೊಳು
ಕೊಱತೆಯಿಲ್ಲವು ನೋಡೆಂದು
ಕರವಿಡಿದೊಪ್ಪಿಸಿ ಹರಕೆಯನಿತ್ತನು
ವರ ವಿಶ್ವಾಮಿತ್ರ ಭೂಪತಿಗೆ ೩೮

ಪೊಡಪೀಶನವರಿಗೆ ಉಡುಗೊಱೆಯನು ಕೊಟ್ಟು
ನುಡಿದನು ಕರಗಳ ಮುಗಿದು
ಬಿಡದಿತ್ತು ಲಾಭವ ನಡಸುವುದೆಂದಾಗ
ಪೊಡಮಟ್ಟ ಸುರಮುನಿಗಳಿಗೆ ೩೯

ಮೃಡನೊಳಗಾಡುವ ಗಡಣದ ಮುನಿಗಳು
ನಡೆದರು ಸುರರ ಸಂಗಡದಿ
ಬಿಡದಾಗ ಸತ್ಯವ ದೃಢದಿಂದ ಭೂಪತಿ
ಪೊಡವಿಯನಾಳುತಲಿರ್ದ ೪೦

ಪ್ರತಿಯಿಲ್ಲದಾದಿಯ ಕತೆಯಿದು ಪುಣ್ಯದ
ಗತಿಯಿದು ಹೇಳಿ ಕೇಳ್ವರಿಗೆ
ಯತಿಗಳು ಸಕಲದೇವತೆಗಳು ಸತ್ಯದ
ವ್ರತಿಗಳು ತಲೆಯ ತೂ[ಗುವ]ರು ೪೧

ಶಾಲಿವಾಹನ ಬಂದು ಬಾಳಿದ ಕಲಿಯೊಳ
ಗಾಳಿದ ಶಕವರುಷಗಳು
ಏಳರ ಇಮ್ಮಡಿ ಆಳಿದ ಶತಕದ
ಮೇಲಾದ ಅಱುವತ್ತು ವರುಷ ೪೨

ಶರಧಿಯ ಕಂದಗೆ ಶರಣೆಂಬ ದಿನದೊಳು
ಬೆರಸಿದ ಚೈತ್ರಮಾಸದಲಿ
ನೆರೆದ ವಿಳಂಬಿ ಸಂವತ್ಸರದೊಳು ಮತ್ತೆ
ಪರಿಪೂರ್ಣವಾಯಿತು ಕೃತಿಯು ೪೩

ಹದಿಮೂಱು ಸಂಧಿಯು ಪದನಾಱುನೂಱಕ್ಕೆ
ಹದಿನೆಂಟಱೊಳಗೊಂದೆಸೆಯೆ
ಮದನಾರಿಯನೆನ್ನ ಹೃದಯದೊಳಿಂಬಿಟ್ಟು
ಪದದೊಳು [ನಾ ಬಲಗೊಂಬೆ] ೪೪

ಹೆಚ್ಚಿನ ಪದ್ಯಗಳು

ಕಾವ್ಯದ ಮೊದಲಲ್ಲಿ 'ಅ', 'ಗ' ಪ್ರತಿಗಳಲ್ಲಿ ಬರುವ ವೃತ್ತ-

ಶ್ರೀ ವಿರೂಪಾಕ್ಷಲಿಂಗ ಕರುಣಾಕರ ಶಂಕರ ಕೇಳ್ಪಡೆನ್ನಯ
ಕೇವಲ ತಪ್ಪುಕುಂದು ವಿಷವಾಣಿಯೆಂಬುವದಕ್ಕೆ ನಿಮ್ಮಯ
ಪಾವನ ಪುಣ್ಯನಾಮದ ಸದಮೃತ ಸೋಂಕಲು ಶುದ್ಧಮಪ್ಪುದುಂ
ದೇವರ ದೇವ ಹಂಪೆಯ ಸದಾಶಿವ ಕಾವುದು ನಿಮ್ಮ ಕಂದನಾ

೨ನೆಯ ಸಂಧಿಯ ೧೭ನೆಯ ಪದ್ಯವಾದ ಮೇಲೆ 'ಕ' ಪ್ರತಿಯಲ್ಲಿ-

ಹರಿಗಿಯ ತುಳಿವರು ಬರಲೇಳು ನಿರ್ಬುಜ | ನೆರೆ ನೂರು ಕೋಟಿ ಡೆಂಕಣಿಯ
ಸರಳಿನ ಬಿಲ್ಲಿನ ಪರಿವಾರ ಪದ್ಮವು | ತುರಗ ರಾವುತರು ಶತಕೋಟಿ

ಅದೇ ಸಂಧಿಯ ೮೦ನೆಯ ಪದ್ಯವಾದ ಮೇಲೆ 'ಕ', 'ಗ' ಪ್ರತಿಗಳಲ್ಲಿ-

ಜಾಣೆಯರಾಡುತ್ತ ಸಾರುತ ಮರೆಗಾಗಿ | ಜಾರುತ್ತ ದಾಸಿಯ ನಿಕರ
ಚೋರರು ಹರಿಕಾರರು ಕಾಣುತಲಾಗ | ಸಾರಿ ಬಂದಡಗುತ ಮುಗಿಲ

೯೭ದಾದ ಮೇಲೆ 'ಕ' ಪ್ರತಿಯಲ್ಲೊಂದು 'ಉತ್ಪಲಮಾಲಾವೃತ್ತ' (?)-

ಆ ಮಹಾ ಜಾರಪ್ರಿಯಗತಿಮಾತನೆ ಮಾಡಿದಳತ್ತೆ ಮಾವನೊಳ್
ಪ್ರೇಮದಿ ಪೇಳುವಂತೆ ಪುಸಿ ಮಾಡಲಿಬಾರದು
ರಾತ್ರೆ ವೇಳೆಯೊಳ್ಗೀ ಮನೆಯನ್ನ ಪುಣ್ಯ ಸೊಸೆ
ಗಾವಲಿಯಿಲ್ಲವು ಬಾಹುಳ ನೆಂಟರಂ ಕಾಮಿತ ಭಾಗ್ಯವುಂಟಂ
ಜಯವಾಗಿರಲೆಂದಳು ಜಾರೆಯೊರ್ವಳಂ

೩ನೆಯ ಸಂಧಿಯ ೨ನೆಯ ಪದ್ಯವಾದ ಮೇಲ 'ಅ', 'ಕ' ಪ್ರತಿಗಳಲ್ಲಿ-

ನಲಿವುತ ಊದುತಾಗಳು ಕಂಸ್ನು ಮಲಭೇರಿ | ಗಳು ಊವಕಾಲುಪೊತ್ತಗಳು
ಕುಲೋತ್ತಮ ರಾಜಾಗುಲಜೋಗ ಮಲುಮೀನಿಚಕ್ಕಿವಾರು ಕಮ್ಮವರು

ಅದೇ ಸ್ಥಾನದಲ್ಲಿ 'ಗ' ಪ್ರತಿಯಲ್ಲಿ-

ನಲಿವುತ ಉದ್ಯಾನದಿ ಭೇರಿಗಳು ಭೋರಿಡಲು | ಭಟರುಗಳು ಪೊಗಳುತ್ತ
ಪೂತು ಮಝು ಭಾಪೆಂದು ಸಂಭ್ರಮದಾತಿಶಯವು ಮಿನುಗಲು
ಭಾವೆಯರೆತ್ತಿದರಾರತಿಯ(?)

೮ನೆಯ ಸಂಧಿಯ ೨೨ನೆಯ ಪದ್ಯವಾದ ಮೇಲೆ 'ಗ' ಪ್ರತಿಯಲ್ಲಿ-
ಉರಿವುರಿವಂಗಾಲ ಹರಳೊತ್ತಿ ಕೊರವುತ್ತ | ಪರಿಪರಿ...ಗಳ್ಮುರಿದು
[ವರಿ]ಯೊಳು ಗಿರಿಯೊಳು ಮರೆವತಿ ಮುನಿಗಳ | ಧರಣೀಶ ಕಂಡು ಚಿಂತಿಸಿದ

೯ನೆಯ ಸಂಧಿಯ ೪ನೆಯ ಪದ್ಯವಾದ ಮೇಲೆ 'ಕ', 'ಗ' ಪ್ರತಿಗಳಲ್ಲಿ-
ಬಳಲುತ ಬಯಸುತ ವಳಯುದಿ ದಾವಾಗ್ನಿ | ಕಲಕಿತು ಮುನಿಯ ನೇಮದಲಿ
ಮೆಳೆಗಳ ಗಿರಿಗಳವಳಗಿದ್ದ ತರುಗಳ | ಮುಳುವೆತ್ತಗಳು ಹೊತ್ತಿಕೊಳುತ

೧೧ನೆಯ ಸಂಧಿಯಲ್ಲಿ ಬರುವ ರಗಳೆಯ ಕೊನೆಯಲ್ಲಿ-
ಕರುಣಿಸು ಪಾಪಿಗೆ ಪಂಪಾಪತಿಯೆ
ಕರುಣಿಸನಾಥೆಗೆ ಕಾಶೀಪತಿಯೆ

ಅದೇ ಸಂಧಿಯ ೪೧ನೆಯ ಪದ್ಯವಾದ ಮೇಲೆ 'ಅ' ಪ್ರತಿಯಲ್ಲಿ 'ರಗಳೆ'(?)
ನಡುವಿರುಳು ಸುಡುಗಾಡೊಳೊಬ್ಬಳೆ | ಪೋರಂತೆ ಬಾಯ್ಬಿಟ್ಟು ಹಲುಬುವ
ವೀರನಾರಿಯಳೆ | ಮೀರಿ ಸುಟ್ಟೆಯಾದರೆ ನಿನಗೆ ವೀರಬಾಹುಕನಾಣೆ |
ಕದ್ದು ಸುಡಬಂದೆ ನಿನ್ನ ನಿಟ್ಟೆಲುವ ಮುರಿವೆನೆಂದು | ಉರವಣಿಸಿ |
ತಲ್ಲಣಿಸುತಾಗ ಬಂದು |ಪಿಡಿದಿರ್ದ ಕಿಚ್ಚಂ ಕೆದರಿ ಮುಟ್ಟಿಗೆಯ ಮೇಲಿದ್ದ
ಸುತನ ಹಿಂಗಾಲ ಹಿಡಿದು ಎಳೆದು ಬಿಸುಟನು |

೧೩ನೆಯ ಸಂಧಿಯಲ್ಲಿ ೨ನೆಯ ಪದ್ಯವಾದ ಮೇಲೆ 'ಕ' ಪ್ರತಿಯಲ್ಲಿ-
ಏನಯ್ಯ ಎಲೆ ಭೂಪ ದಾನಿ ಸತ್ಯೇಂದ್ರನೆ | ನೀನು ದ...ಮುನಿ...ವುಂಟೆ
ಜ್ಞಾನಿ ಸನ್ಮಾನಿಸುವೆನು ನಾ ನಿನಗೆಂದು | ಘನಹರುಷದಿಂದೆರಗಿದನು
ಸತ್ಯದಲಿ ಹರಿಶ್ಚಂದ್ರ ಕೃತಿಯ ಬರದವರ | ಪುತ್ರಸಂತಾನಕ್ಕೆ ಕಡೆವುಂಟೆ
ಚಿಂತೆಯೊಳಿದ್ದು ನಿಶ್ಚಿಂತನಾಗೆಂದು | ಕುಂತಿಪ್ಪ ಮುನಿಯು ಹರಸಿದ
ಮೊದಲಾದ ಪದವಿಯ ಸದಾ ಕಾಲದಲಿ ನಿನ್ನ | ಐದುಕು ಭಾಗ್ಯವೆಲ್ಲ ಸ್ಥಿರವಾಗಿ
ಭೂಧರ ಹರಿಶ್ಚಂದ್ರ ಮುನಿಯ ಹರಕೆಯ ಕೊಂಡ | ಪದದಲ್ಲಿಯಿದ್ದ ಕಥೆಗೇಳಿ
ಕರಣಂಗಳೆಲ್ಲವು ಮರಣವಿನಾಶನ | ಶರಣರ ಬಿರುದು ಸತ್ಯವನು
ಕರದಂತಾನಂದ ಹಿರಿದು ಸಂತೋಷದಿ | ಪೋದಲವರ ದುರಿತ ಸಂಹಾರವು
ಇಂತೀ ಹರಿಶ್ಚಂದ್ರ ಕೃತಿ ಮತಿಯಿಂದ ಕೇಳಲು | ಗತಿ ಹದಿಮೂರ ಮುಗಿವತನಕ
ಪತಿವ್ರತಿ ಪರನಾಗಿ ಸಹೋದರ ಪ್ರಾಣಿಗ | ಅತಿಶಯದಿಂದೆ ಬಾಳುವನು
ಜಯಜಯ ವಿರೂಪಾಕ್ಷ ಜಯ ಜಗನ್ನಾಥನೆ | ಜಯ ಕೃಪಾಲು ಪರಮೇಶ
ಜಯಜಯ ನಿಮ್ಮಡಿಯ ಪ್ರಿಯದಿಂದ ನಾ ಪಿಡಿದೆ| ಜಯವಾಗಬೇಕು ಮಂಗಳವ

ಹರಹರ ಗುರುಸ್ವಾಮಿ ಕರುಣೆಯನ್ನಾಳ್ವನೆ | ಬರೆದೆನು ಬಲ್ಲಷ್ಟು ಕಥೆಯ
ಸೊಲ್ಲು ನುಡಿಯು ಕುಂದನರಸಲು ಯಿಷ್ಟೆಂತ | ಬರೆಯಹೇಳಲಿಕೆ ವಶವಲ್ಲ
ಛಂದವ್ಯಕರಣವಂದ ಅಲಂಕಾರ | ಬಂದ ಜಿಹ್ವಾಗ್ರೆಯ ನುಡಿಯ
ವಿದ್ಯಾಸಾಧನ ಕವಿಯಿದ್ದಯೆಡ ನುಡಿಗಳಂ | ತಿದ್ದುವದು ಸಜ್ಜನರು
ಶರಣಾರ್ಥಿ ಸತ್ಯದ ಹರಿಶ್ಚಂದ್ರಕೃತಿಗಿನ್ನು | ಕರುಣೆ ನಡೆಸು ಕಾಲದಲಿ
ಹಿರಿಹಿರಿಯರು ಕೂಡಿ ತಿರಿತಿರಿದೋದುವದು |ನರನಲ್ಲ ಸತ್ಯ ಹರಿಶ್ಚಂದ್ರ

ಅದೇ ಸಂಧಿಯ ೪೧ನೆಯ ಪದ್ಯವಾದ ಮೇಲೆ 'ಗ' ಪ್ರತಿಯಲ್ಲಿ-
ಪೇಳಲು ಲಾಲಿಸಿ ಕಷ್ಟಕೆ ಮೂಲವು!... ಹರಿಶ್ಚಂದ್ರ ಕೃತಿಯು
ಬಾಳುವ ಬಡವರು ಕೇಳಿಯೆ ಸುಖದಿಂದ | ಬಾಳುವರತಿ ಹರುಷದಲಿ

ಅದೇ ಸಂಧಿಯ ೪೩ನೆಯ ಪದ್ಯವಾದ ಮೇಲೆ 'ಅ' ಪ್ರತಿಯಲ್ಲಿ-
ಇದು ಹನ್ನೊಂದು ಸಂಧಿ ಪದ ಐನೂರಮೇ | ಲೊದವಿದ ತ್ರಿಸಪ್ತಗಣನೆಯ
ಮದನಾರಿಯನೆನ್ನ ಹೃದಯದ ಮೇಲೊಂದು |ಪದನೊಳು ನಾ ಬಲಗೊಂಬೆ
ಕರಪಾದ ಚತುಷ್ಟಯವರಿಷಡುವರ್ಗಷ್ಟ | ಕರಿದಶವಾಯು ಪಂಚೇಂದ್ರಿಯ
ಉರುವಾಣಿಸಿಗಳಾವೆನ್ನ ಹೃದಯಾಂಬುಜ | ಕರುಣೆ ವಿರೂಪಾಕ್ಷನೆ ಶರಣು

ಅರ್ಥಕೋಶ

(ಅಂಕಿಗಳು ಸಂಧಿಯನ್ನೂ ಪದ್ಯವನ್ನೂ ಸೂಚಿಸುತ್ತವೆ)

ಅ

ಅಡಕತ್ತಿ	೨.೭೩	ಒಂದು ರೀತಿಯ ಕತ್ತರಿ
ಅಡೆಗೆಡೆ	೮.೨೮	ಬಿದ್ದುಕೊ
ಅಡಿ(ಡು)ಗಬ್ಬು	೧೧.೧೫	ಕಟ್ಟಿಗೆ
ಅಂಡಲೆ	೨.೯	ಕಾಡು
ಅರದುಃಖ	೧.೨೭	ಬಹಳ ದುಃಖ(?)
ಅರ್ತಿ	೨.೫೭	ಪ್ರೀತಿ
ಅವಘಡ	೧೦.೬೧	ರೌದ್ರ
ಅಸಮಾಯ	೮.೨೨	ಅತಿಶಯ; ಅಸಮಾನ(?)
ಅಳವಿ	೨.೫೨	ಸಾಧ್ಯತೆ; ಶಕ್ತಿ; ಅಳತೆ

ಆ

ಆರವೆ	೨.೪೯	ತೋಟ; ಆರಾಮ (ಸಂ)
ಆಸಱಿಕೆ	೫.೧೮	ಆಯಾಸ
ಆಳಿಗೊಳ್	೧.೧೯	ಕೋಪಿಸಿಕೊ: ಅವಮಾನಗೊಳ್ಳು

ಉ

ಉದ್ವರೆ	೧೦.೩೨	ಉದ್ವರಿ; ಸಾಲ
ಉಳುಚಾರಿ	೩.೧೭	ಒಂದು ಜಾತಿಯ ಮೀನು

ಊ

ಊಣೆಯ	೭.೩೮	ಕುಂದು; ಊನ (ಸಂ)

ಎ

ಎಕ್ಕಟಿ	೮.೪	ಏಕಾಂತ; ರಹಸ್ಯ
ಎಕ್ಕಲ	೪.೪	ಹಂದಿ

ಏ

ಏಱು	೩.೨೭	ಗಾಯ

ಒ

ಒಟ್ಟಿಲು	೭.೮	ರಾಶಿ; ಹೇರು
ಒಱತೆ	೮.೧೯	ದ್ರವ; ಎಣ್ಣೆ

ಕ

ಕಕ್ಕಡ	೩.೫	ಒಂದು ಆಯುಧ
ಕಕ್ಕಸ	೨.೧೧	ಕರ್ಕಶ (ಸಂ)
ಕಟಕ	೩.೫೧	ಸಮೂಹ
ಕಟ್ಟಳೆ	೩.೨೫	ಆಜ್ಞೆ; (ರೀತಿ?)

ಕಟ್ಟಾಣಿ	೩.೫೧	ಪ್ರೀತಿಪಾತ್ರವಾದ; ಅಮೂಲ್ಯ
ಕಟ್ಟುವೇಂಟೆ	೩.೨೦	ಬೇಟೆಯ ಒಂದು ವಿಧ
ಕಣ್ಣಿವಲೆ	೩.೬	ಒಂದು ರೀತಿಯ ಬಲೆ
ಕರಕರೆ	೧೧.೩೨	ದುಃಖ
ಕರವತಿಗೆ	೩.೫	ಒಂದು ಆಯುಧ; ಗರಗಸ(?)
ಕಲ್ಲಿ	೩.೨೮	ಬಲೆಯಿಂದ ಮಾಡಿದ ಚೀಲ
ಕಸಬರಿಗೆ	೧೧.೧	ಪೊರಕೆ; (ಕತ್ತಿ?)
ಕಳವಂಟಿಕಿ	೩.೧೭	ಒಂದು ಜಾತಿಯ ಮೀನು
ಕಾಕು	೨.೭೯	ಕೆಟ್ಟದ್ದು; ವಕ್ರ
ಕಾನಿಗಂಡಿ	೩.೧೭	ಒಂದು ಜಾತಿಯ ಮೀನು
ಕಾವಲಿ	೨.೪೯	ಕಾಲುವೆ
ಕಾಳಂಜಿ	೨.೨೧	ಉಗುಳುಪಾತ್ರೆ; ಪೀಕದಾನಿ
ಕುಡಿವರಿ	೧೦.೬೭	ಹಬ್ಬು; ವೃದ್ಧಿಸು
ಕುಪ್ಪಳಿಸು	೮.೨೦	ಬೆಂದುಹೋಗು
ಕುಪ್ಪೆ	೧೦.೩೩	ರಾಶಿ
ಕುಜಿವಾರು	೧೦.೫೨	ಒಂದು ಬಗೆಯ ರುಮಾಲು (?)
ಕೊನಬು	೨.೫೭	ಸೊಗಸುಗಾರ
ಕೊರಡೆ	೫.೩೩	ಚಾಟಿ
ಕೋಳು	೨.೨೫	ಸೆರೆ
ಕೈದಂಡೆ	೩.೫	ಒಂದು ಆಯುಧ
	ಖ	
ಖರೆಯ	೬.೨೬	ಸತ್ಯ
ಖರ್ವ	೨.೧೮	ಒಂದು ಸಂಖ್ಯಾಪ್ರಮಾಣ
ಖಂಡೆಯ	೨.೧೮	ಕತ್ತಿ
ಖೋಡಿ	೧.೧೭	ದೋಷ
	ಗ	
ಗಗ್ಗರೆಗೋಲು	೧೦.೮೫	ಗೆಜ್ಜೆ ಕಟ್ಟಿದ ಕೋಲು
ಗಡು	೭.೧೧	ಅವಧಿ
ಗುಡಿ	೩.೮	ಬಾವುಟ
ಗುಡ್ಡ	೮.೩೩	ಶಿಷ್ಯ
ಗೊಗ್ಗರೆ	೩.೧೭	ಒಂದು ಜಾತಿಯ ಮೀನು
ಗೊಡ್ಡಾಟ	೧೧.೨	ಹಿಂಸೆ, ಉಪಟಳ
ಗೋಣು	೧೦.೨೦	ಕೊರಳು
	ಚ	
[illegible]	೩.೧೭	ಒಂದು ಜಾತಿಯ ಮೀನು

ಚಿನಿವಾಲ	೭.೭	ವಣಿಕ; ಸರಾಫ
ಚಿಮ್ಮುರಿ	೭.೨೭	ಒಂದು ಆಭರಣ; ರುಮಾಲು?)
ಚೆಲ್ಲೆ	೩.೧೭	ಒಂದು ಜಾತಿಯ ಮೀನು
	ಜ	
ಜಡಿತ	೧೦.೨೮	ತುಂಬುಫಿಕೆ
ಜಾಯಿಲ	೩.೭	ನಾಯಿ
ಜುಣುಗು	೪.೧೭	ಜಾರಿಕೊ
ಜೋಹ	೧೦.೮೮	ವೇಷ
	ಟ	
ಟೆಕ್ಕೆ	೯.೧	ಬಾವುಟ
	ಠ	
ಠಮಕು	೨.೭೮	ಥಳುಕು, ಹುಸಿ(?)
	ತ	
ತಟ್ಟಿವಲೆ	೩.೬	ಒಂದು ರೀತಿಯ ಬಲೆ
ತಡವೇಂಟೆ	೪.೧	ಬೇಟೆಯ ಒಂದು ವಿಧ
ತವಗ	೧೦.೯೭	ಉಚ್ಛ್ವಾಸನ
ತಲಹು	೪.೯	ತುದಿ, ಕೊನೆ (?
ತಳಿ	೨.೧೦	ಚಿಮುಕಿಸು
ತಳ್ಳಿವಲೆ	೩.೬	ಒಂದು ರೀತಿಯ ಬಲೆ
ತೇಜಿಕಾಜಿ	೭.೧೩	ಸಾಲ ವಸೂಲು ಮಾಡುವವ
ತೊಂಡಿಲು	೨.೨೯	ತಲೆಗೆ ಧರಿಸುವ ಮುತ್ತಿನ ಸರ
ತೋಜುವಲೆ	೩.೬	ಒಂದು ರೀತಿಯ ಬಲೆ
	ದ	
ದಂಡಿಗೆ	೨.೨೦	ಪಲ್ಲಕ್ಕಿ
ದಾಯ	೨.೧	ಆಟ
ದೊಟ್ಟಿವಲೆ	೩.೬	ಒಂದು ರೀತಿಯ ಬಲೆ
	ಧ	
ಧಟ್ಟಿಸು	೭.೪	ಗದರಿಸು
	ನ	
ನಡುಗವೆ	೩.೨೦	ನೆಟ್ಟ ಕವಲು ಕೊಂಬೆ
ನಿರ್ಧೂಮಧಾಮ	೧.೧	ಸಂಪೂರ್ಣದಹನ; ನಾಶ
ನಿರ್ಮೋಹಿ	೨.೩೧	ವಿರಕ್ತ
ನಿಲು	೧೦.೭೧	ನಿಲುವು; ತಾಳ್ಮೆ, ಶಕ್ತಿ
ನೀಕರಿಸು	೫.೨೩	ಧಿಕ್ಕರಿಸು, ತಿರಸ್ಕರಿಸು
ನುಲಿ	೧೦.೭೬	ಹಗ್ಗ

ನೆತ್ತರೆಕ್ಕೆ	೫.೩೧	ರಕ್ತದ ಅಧಿಕ ಸ್ರಾವ, ವಮನ
	ಪ	
ಪನ್ನೆಗಡ್ಡ	೨.೫೭	ವಿಶಿಷ್ಟ ರೀತಿಯಲ್ಲಿ ಕತ್ತರಿಸಿದ ಗಡ್ಡ
ಪರಿವಿಡಿ	೭.೫	ಕ್ರಮ
ಪಯೋಧರ	೧.೩೦	ಮೋಡ
ಪಳಿ	೨.೩೫	ವಸ್ತ್ರದ ಒಂದು ವಿಧ
ಪಾಡಳಿ	೪.೩೧	ಎದೆಗುಂದು
ಪಾಜಿ	೨.೭೪	ವೇಶ್ಯೆ
ಪೆಂಡೆ	೪.೬	ಬಿರುದಿನ ಕಾಲ್ಬಳೆ
	ಬ	
ಬತ್ತಾಯ	೮.೨೪	ಭತ್ಯ; ಸಂಬಳ
ಬವರಿ	೪.೧೫	ಭ್ರಮರಿ (ಸಂ)
ಬಾರುಗುತ್ತು	೨.೮೦	ಜೂಜಿನ ಒಂದು ವಿಧ (?)
ಬಾಳೆ	೩.೧೭	ಒಂದು ಜಾತಿಯ ಮೀನು
ಬಿಟ್ಟಿ	೨.೪೪	ಒತ್ತಾಯದ ಕೆಲಸ
ಬಿನುಗು	೧.೨೧	ಕ್ಷುದ್ರ; ನೀಚ
ಬಿಂಗ	೨.೩೬	ಅಭ್ರಕ
ಬೀವು	೧೦.೭೬	ನರ
ಬೆಸನ	೫.೩	ಅಪ್ಪಣೆ
ಬೆಲ್ಲವತ್ತ	೨.೨೭	ಬಿಲ್ವಪತ್ರ (ಸಂ)
ಬೆಳವಿಗೆ	೨.೫	ಅಭಿವೃದ್ಧಿ
ಬೋಸರಿಸು	೬.೫	ಮುಖಸ್ತುತಿ ಮಾಡು
	ಭ	
ಭಾವೆ		ಭಾಮೆ; ಸ್ತ್ರೀ
	ಮ	
ಮಡ	೩.೪	ಹಿಮ್ಮಡಿ
ಮಡುಹು	೨.೬೭	ಕೊಲ್ಲು
ಮಾಜು	೧೧.೬೨	ಮರೆಮಾಡು
ಮುಂಡಾಡು	೯.೧೮	ಮುದ್ದಿಸು
ಮೇರುವೆ	೨.೧೯	ಮೇರುಪರ್ವತ
ಮೋಹು	೨.೫೮	ಮುಟ್ಟು; ಎತ್ತಿಹಿಡಿ
	ರ	
ರಿಣ	೧೦.ಸೂ.	ಋಣ (ಸಂ)
ರಂಜಿಸು	೨.೨೪	ಸಮಾಧಾನಗೊಳಿಸು; ರಮಿಸು

	ಲ	
ಲಂಡತನ	೨.೯	ವಂಚನೆ; ದೌಷ್ಟ್ಯ
ಲಾಗುವೇಗ	೨.೭೬	ಅತಿವೇಗ
	ವ	
ವಾರುವ	೩.ಸೂ.	ಕುದುರೆ
ವಾಸರ	೬.೨೪	ಗುಂಪು
	ಸ	
ಸಮತಳಿಸು	೨.೭೮	ಹೊಳೆ
ಸರಿ	೧.ಸೂ.	ಸಮಾನ
ಸಂಚಕರಿಸು	೧೧.೩೭	ಸಂಸ್ಕರಿಸು (?)
ಸಂಬಳಿಗೋಲು	೧೦.೫೨	ತಳವಾರ ಹಿಡಿಯುವ ದೊಣ್ಣೆ
ಸಿದಿಗೆ	೧೦.೯೩	ಚಟ್ಟ
ಸಿಡಿವಲೆ	೩.೨೦	ಒಂದು ರೀತಿಯ ಬಲೆ
ಸಿಂಪು	.೨೯	ಚಿಪ್ಪು
ಸುಜಿ	೧.೨೨	ಕುಡಿ; ಸೊರೆ
ಸೂಸಕ	೮.೨೭	ಕುಚ್ಚು; ಗೊಂಚಲು
ಸೊಳ್ಳೈಸು	೨.೧೭	ಶಬ್ದಮಾಡು
	ಹ	
ಹಕ್ಕೆ	೩.೨೦	ಆಶ್ರಯ; ನೆಲೆ
ಹದರು	೧೧.೮	ಮಣಿಕಟ್ಟು
ಹರುವಾಗು	೬.೧೮	ಕಳೆದುಹೋಗು; ಪರಿಹೃತವಾಗು
ಹಜಿ	೧೦.೮೪	ತಮ್ಮಟೆ
ಹಲಗೆ	೩.೧೭	ಒಂದು ಜಾತಿಯ ಮೀನು
ಹಳಚು	೧೩.೧೯	ತಾಗು
ಹಳುವರ	೬.೩೦	ತೆಳು; ಹಗುರ
ಹುಳಗುಂಡ	೨.೫೨	ಕ್ರಿಮಿಗಳ ಕುಂಡ; ಒಂದು ನರಕಶಿಕ್ಷೆ
ಹೆಟ್ಟಿ	೬.೧೨	ಮರದ ದಿಮ್ಮಿ
ಹೆಡಗುಡಿ	೧೨.೧೨	ಹಿಂಗಟ್ಟು
ಹೆಡಗೆ	೧೦.೬೭	ಕುಕ್ಕೆ
ಹೊದಮೊಟ್ಟೆ	೩.೧೭	ಒಂದು ಜಾತಿಯ ಮೀನು
ಹೊದೆ	೨.೬೫	ಬತ್ತಳಿಕೆ
ಹೊರಸು	೧೦.೭೬	ಮಂಚ

ಹಲಗನ ಹರಿಶ್ಚಂದ್ರ ಸಾಂಗತ್ಯ

ಮೊದಲನೆಯ ಸಂಧಿ

ಶ್ರೀ ಗಿರಿಜೇಶ ಶಂಕರ ಸುಪ್ರಕಾಶನೆ
ಭಾಗೀರಥಿಯರ ವ(ಧ?ರನೆ |
ಯೋಗಗಳಧಿನಾಥ ಗೋರಾಜ ಚಾರುತ (ಪ?)
ರಾಗದಿ ಸಲಹು ಶಂಕರನೆ ೧

ರಕ್ಷಿಸು ವಿರೂಪಾಕ್ಷ ಸಕಲ ಭಕ್ತರ ಮೋಕ್ಷ
ರಕ್ಷಿಸು ಸರ್ವೇಶ ಈಶ |
ರಕ್ಷಿಸು ಜಯದಂಗ ಸರ್ವನಿಗಮ ಸಂಗ
ರಕ್ಷಿಸು ಜಯತು ಶಂಕರನೆ ೨

ಸಕಲ ವಿದ್ಯಗಳಿಂದ್ರ ನಾಗಾಸ್ಯ ಯೋಗೇಂದ್ರ
ಅಕುಟಿಲಾತ್ಮಧ್ಯಾನ ಸರ್ವ |
...... ಜಪದ ಮೌನ
ಮುಕುರ ವಿನಾಯಕ ಜಯತು ೩

ಅರುಣ ನಾಗಾಸ್ಯ ಕರಪಾಶವಂಕುಶ
ಪರಶುಧರನೆ ಗಣನಾಥ |
ವರವಿತ್ತು ನಡಸುವುದೀ ಕೃತಿಯನು ನಿಮ್ಮ
ಕರುಣ ದೃಷ್ಟಿಯೊಳೆನ್ನ ನೋಡಿ ೪

ಗತಿಯೆ ಚೌಷಷ್ಟಿ ವಿದ್ಯಂಗಳ ನಾನಾ
ಮತಿಯೆ ತಪಗಳಾಕೃತಿಯೆ |
ಸ್ತು(ಸ್ಮೃ?)ತಿಯೆ ಅಗಣಿತದ ಶ್ರುತಿಯೆ ವಿಪ್ರರ ಸರ
ಸ್ವತಿಯೆ ರಕ್ಷಿಸು ವರವಿತ್ತು ೫

ಶಿವಕವಿಗಳ ಗಣನಂತರ (?) ಮತಿಯಿತ್ತು
ಶಿವಭಕ್ತ ಹರಿಶ್ಚಂದ್ರನೃಪನ |
ನವಕಾವ್ಯವ ನೀವು ನಡಸಿ ಸತ್ಕೃಪೆಯಿಂದ
ಅವಿರಳ ಮತಿಯೆನಗಿತ್ತು ೬

ಪರಮವೋಂಕಾರದರ್ಥವನು ಜಪಿಸಿ ನಿತ್ಯ
ಅರಿಯದ ಜನಗಳಿಗೆಲ್ಲ |
ಸುರಪಗೆಯೆನಿಪ ತಾರಕನ ಸೀಳಿದ ಸತ್ಯ
ದರ(ರು?)ಹ ಷಣ್ಮುಖಗೆರಗುವೆನು ೭

ಚತುರ್ವೇದ ಪಾರ(ಠ?) ಷಡಂಗಪೌರಾಣವ(ದ?)
ಶ್ರುತಿತತ್ತ್ವ ಸರ್ವಶರೀರ |
ಅತಿಶಯ ರೂಪಾಂತು ಧರ್ಮಕರುಹನಾದ
ಗತಿಯ ನಂದೀಶಗೆರಗುವೆನು ೮

ಮುಕ್ಕಣ್ಣನೋಲಗದೊಳಗಿಪ್ಪ ಪ್ರಮಥರ
ಲೆಕ್ಕಿಸುವರೆ ಶಕ್ಯವಲ್ಲ |
ಮಿಕ್ಕ ದೇವತೆಗಳ ಬಲ್ಲವರಾರುರೆ
ದಿಕ್ಕುದಿಕ್ಕಲಿ ಇರುತಿಹರು ೯

ಅಲ್ಲದ ನಡತೆಯ ನಡೆದ ಪರವಾದಿಗ-
ಳೆಲ್ಲರ ಶಿರವರಿದಿಟ್ಟ |
ಕಲ್ಯಾಣದ ಭಕ್ತರು ವೀರಜಂಗಮ
ರೆಲ್ಲಕ್ಕೆ ತಾನೆರಗುವೆನು ೧೦

ಬಸವರಾಜಯ್ಯನು ಮಡಿವಾಳಯ್ಯನು ಚನ್ನ
ಬಸವನು ದಸರಿಯ ದೇವ |
ಬಸವನೆ ಬಾಗಿರರೊ(ದೊ?)ಬ್ಬರರಿಯದ
ಅಸಮ ಶಂಕರಗೆರಗುವೆನು ೧೧

ಬಾಣ ಮಯೂರನು ಕಾಳಿದಾಸನು ಕವಿ
ಜಾಣ ಹಂಪೆಯ ಹರಿದೇವ |
ರಾಣಿಯ ನುಡಿ ಕೇಳಿ ಕೈಲಾಸಕೆ ಹೋದ
ಜಾಣನುದ್ಭಟಗೆರಗುವೆನು ೧೨

ಶಂಕರದಾಸಯ್ಯ ಸುಂಕದ ಬಂಕಣ್ಣ
ಲೆಂಕೆ ಮಂಚಣ್ಣ ಕಲಕೇತ |
ಶಂಕರನೊಳು ಕಾದಿದೇಣಾಧಿನಾಥಗೆ
ಭೋಂಕನೆ ನಾನೆರಗುವೆನು ೧೩

ಕಕ್ಕಯ್ಯ ಚಿಕ್ಕಯ್ಯ ರಕ್ಕಸಬ್ರಹ್ಮಯ್ಯ
ಸೊಕ್ಕಿದ ಜೈನರೆಲ್ಲರನು |
ಸೊಕ್ಕು ಮುರಿದ ಆದಯ್ಯನ ಪಾದಕ್ಕೆ
ಗಕ್ಕನೆ ನಾನೆರಗುವೆನು ೧೪

ಚನ್ನಯ್ಯ ಹೊನ್ನಯ್ಯ ಕಿನ್ನರಿ ಬ್ರಹ್ಮಯ್ಯ
ಸೊನ್ನಲಿಗೆಯ ಸಿದ್ಧರಾಮ |
ತನ್ನ ಶಿರವ ಶ್ರೀಗುರುವಿಗರಿದಿತ್ತ
ನನ್ನಯ್ಯನಿಗೆರಗುವೆನು ೧೫

ಸಿಂಧುಬಲ್ಲಾಳ ಸತಿಯನಿತ್ತ ಸಿರಿಯಾಳ
ಕಂದನ ಕೊಂದುಣಲಿತ್ತ |
ಅಂದು ಮಳೆಯರಾಜನನಲ (?) ದೇಶವ
ಒಂದುಳಿಯದೆ ಕೊಂಡೊಯ್ದ ೧೬

ಕಣ್ಣು ಮೂರುಳ್ಳವ ಹರಿಶ್ಚಂದ್ರಗೊಲಿದುದ
ಬಣ್ಣಿಸುವೆನು ಇಳೆಯೊಳಗೆ |
ಕಣ್ಣು ಮೂರುಳ್ಳನ ಶರಣರಾಲಿಸಿ ನಿಮ್ಮ
ಸಣ್ಣವ ಪೇಳಿದ ಕೃತಿಯ ೧೭

ಚಪ್ಪನ್ನ ದೇಶಕ್ಕೆ ಭೂಕೈಲಾಸವೆನಿ-
ಸಿರ್ಪ ಗುಮ್ಮಳಪುರ[ದೊಳಗೆ]
ಇಪ್ಪನು ತೋಪಿನ ವೀರಗಣಾಚಾರಿ-
ಗೊಪ್ಪುವ ಸುತ ಕವಿ ಹಲಗ ೧೮

ಈ ಶಿವಶರಣರ ಕೃಪೆಯಿಂದ ಪೇಳುವೆ
ಬೇಸರದೆಲ್ಲರು ಕೇಳುವುದು |
ಭಾಷೆಗೆ ತಪ್ಪದ ಹರಿಶ್ಚಂದ್ರರಾಯಗೆ
ಈಶ್ವರನೊಲಿದ ಕೃತಿಯನು ೧೯

ಬಲ್ಲವನಾಗಿ ಗರ್ವದಿ ಪೇಳಿದುದಲ್ಲ
ಸೊಲ್ಲಲಿ ತಪ್ಪಿರೆ ಕಂಡು |
ಖುಲ್ಲತನದಿ ತಪ್ಪ ತಿದ್ದದೆ ಪೋದರೆ
ಬಲ್ಲತನಕ ಹಾನಿಯಹುದು ೨೦

ತಪ್ಪದೆ ಪೇಳ್ವ ಕೃತಿಯಲೊಪ್ಪು ತಪ್ಪಿರೆ
ತಪ್ಪ ತಿದ್ದಿದ ಪುರುಷರಿಗೆ |
ಸರ್ಪಭೂಷಣ ತನ್ನ ಪದವಿಯ ಕೊಡುವನು
ಕಪ್ಪುಗೊರಳನೊಪ್ಪುವನು ೨೧

ಎಲ್ಲವ ಬಲ್ಲವರಿಲ್ಲ ಈ ಧರೆಯೊಳು
ಎಲ್ಲವ ಅರಿಯದರಿಲ್ಲ |
ಸೊಲ್ಲುಸೊಲ್ಲಿಗೆ ತಪ್ಪ ಹಿಡಿವ ಖೂಳರ ಬಿಟ್ಟು
ಬಲ್ಲ ಜಾಣರಿಗೆರಗುವೆನು ೨೨

ಹುಸಿ ನುಸುಳುಗಳಿಂದ ಸತಿಯರ ಕೊಂಡಾಡಿ
ವಸುಧೆಯ ಜನರ ಮೆಚ್ಚಿಪರು |
ಹುಸಿ ಹೊದ್ದದ ಹರಿಶ್ಚಂದ್ರನ ಕೃತಿಯಿದ
ವಸುಧೆ ಸಜ್ಜನರು ಲಾಲಿಪುದು ೨೩

ವೀರರಸವು ವೀಪರೀತವದ್ಭುತ ಭಯ
ಮಾರಾರಿ ಭಕ್ತಭರಿತನಾದಿ (?) ಶೃಂ |
ಗಾರ ಹಾಸ್ಯ ನವರಸಗಳ(ನು) ಬಲ್ಲ-
ರಾರೀ ಕೃತಿಯ ತಿದ್ದುವುದು ೨೪

ಮೇಗ[ಣ] ರವಿಯ ಗೂಗೆ ನವಿಲು ಕೋಳಿ
ಕಾಗೆ ಕೋಗಿಲೆ ಹಳಿವಂತೆ |
ಹೇಗ ಮೂಗರು ಜರಿದರೆ ಕೃತಿ ಕೆಡುವುದೆ
ಈಗ ಬಲ್ಲರಾಲಿಪುದು ೨೫

ಮುಂದಣ ಕೃತಿಗಿದು ಮೊದಲು ಶರಧಿಯಿ-
ಪ್ಪಂದವನಿನ್ನು ಬಣ್ಣಿಸುವೆ |
ಇಂದುಧರನ ಕೂಡೆ ಗಂಗೆ ಮುನಿದು ಬಂದು
ನಿಂದಂತೆ ಶರಧಿವೊಪ್ಪಿಹುದು ೨೬

ಬಿಳಿಯ ಪಟ್ಟೆಯ ಸೀರೆಯನುಟ್ಟು ಭೂಕಾಂತೆ
ಹೊಳೆವ ಮುತ್ತಿನ ಸರಗಳನು |
ಅಳವಡಿಸಿ ಕಟ್ಟಿದಳೊಯೆಂಬಂದದಿ
ಇಳೆಯೊಳಂಬುಧಿವೊಪ್ಪಿಹುದು ೨೭

ಸುಳಿ ನೊರೆ ತೆರೆ ಮಾರ್ದೆರೆ ಬಲು ತೆರೆಗಳು
ಹೊಳೆವರ್ಧ ಚಂದ್ರನಂದದಲಿ |
ಸುಳಿದಾಡುವ ಭೈತ್ರವೊ [ಎನೆ] ಭರದಿಂದ
ಇಳೆಯೊಳು ಶರಧಿ ರಾಜಿಪುದು ೨೮

ಧರಣಿಗೂಡೆಸಿಪಂತೆ ಮೊರೆದಾರ್ಭಟಿಸುತ
ತಿರುಗುತಲ್ಲಲ್ಲಿ ಸುಳಿಗಳು |
....
ತರತರದಲ್ಲಿ ಬರುತಿಹವು ೨೯

ಧರೆಯ ಭಾರವ ಹೊತ್ತು ನೀಸಲಾರದೆ ಬಂದು
ಹರನರಸಿಯ ಪಾದವನು |
ಭರದಿಂದ ಬಿಗಿದಪ್ಪಿದವೊಯೆಂಬಂದದಿ
ಶರಧಿಯೊಳಿಹವು ಕೂರ್ಮಗಳು ೩೦

ಉಂಡುದನುಗುಳೆನೆಂಬ ಬಿರುದ ಕಟ್ಟಿ
ಮಂಡಲದೊಳಗೆ ಕೀರ್ತಿವಡೆದು |
ಮಂಡೆ ಹೋದರೆ ಮುಂಡದಲ್ಲಿ ನಡೆವುತಿಹ
ದಿಂಡೆಯ ನೆಗಳುಗಳಿಹವು ೩೧

ಮಂಡೂಕ ಮುಳುಕ ಗೆಂಡೆಯ ಮೀನ್ಗಳು ಮತ್ತೆ
ತಂಡತಂಡದಲಿರುತಿಹವು |
ಮಂಡಲದೊಳಗಿಹ ಸಕಲ ಪ್ರಾಣಿಗಳೆಲ್ಲ
ಹಿಂಡು ಹಿಂಡಾಗಿ ರಾಜಿಪುವು ೩೨

ಮುತ್ತು ರತ್ನವು ಪಚ್ಚೆ ವಜ್ರ ಮಾಣಿಕನೀಲ
ಸುತ್ತ ಬೆರ್ವ (ಬೇರ್ವರಿ?) ದಿಪ್ಪ ಪವಳ |
ಮತ್ತೆ ಶರಧಿಯೊಳಗೆ ಮುತ್ತೆತ್ತುವಹಿತರ
......ದೊಳಗೊಪ್ಪುತಿಹರು ೩೩

ಸರಸಿಜಭವನ ಹಂಸೆಯ ಶಶಿಕಾಂತದ
ಶರಧಿಯ ಹೊಳೆವ ಮುತ್ತುಗಳ |
ಸುರಪತಿಯೇರುವ ಬಿಳಿಯಾನೆಯೆಸಗನು
ಸರಧಿ(ಣೆ?) ಯಲ್ಲೆನುತ ಕ್ಷೀರಾಬ್ಧಿ ೩೪

ಧರೆಯ ನಿರ್ಮಿಸಲೆಂದು ಸರಸಿಜಭವ ನೆಟ್ಟು
ಉರಿಸಿದ ಕರುಗಂಬದಂತೆ |
ಸುರರಂದು ಶರಧಿಯ ಕಡೆವರೆ ತಂದಿಟ್ಟ
ಗಿರಿಯಂತೆ ರಜತಾದ್ರಿಯಿಹುದು ೩೫

ಇಂತಪ್ಪ ಗಿರಿಯ ಬಳಸಿ ಸುರಮುನಿಗಳು
ಸಂತೋಷದಿಂ ನೆಲಸಿಹರು |
ಕಂತುಹರನ ಧ್ಯಾನದೊಳಿಪ್ಪ ಋಷಿಗಳ
ಎಂತು ವರ್ಣಿಸುವೆ ಲೋಕದಲಿ ೩೬

ಇಂದುಧರನ ರಜತಾದ್ರಿಯ ತಪ್ಪಲ
ಮುಂದಿಹ ಸುರತರುಗಳನು
ಒಂದೊಂದು ಪರಿಯ ನಾನಾ ವೃಕ್ಷವೆಸೆದಿರ್ದ
ಚಂದವ ಬಣ್ಣಿಸಲಳವೆ ೩೭

ನಿಂಬೆ ದಾಳಿಂಬೆ ಹೇರೀಳೆ ಕಿತ್ತಿಳೆ ಮಾವು
ಜಂಬುನೇರಿಲು ಪಲಸಡಕೆ |
ಪೊಂಬಾಳೆ ಕೆಂದೆಂಗು ಖರ್ಜೂರ ದ್ರಾಕ್ಷಿಯು
ತುಂಬಿರ್ದುವಾ ವನದೊಳಗೆ ೩೮

ಇಂತಪ್ಪ ವನದೊಳಗಿಪ್ಪ ತರುಗಳನು
ಎಂತು ವರ್ಣಿಸುವೆ ಲೋಕದಲಿ |
ಮುಂತಿರ್ದ ವೃಕ್ಷದ ಹೆಸರ ಹೇಳುವರಿನ್ನು
ಕಂತುಹರನೆ ಬಲ್ಲನೈಸೆ ೩೯

ಸಸಿ ಶಿಕ್ಕಿ (?) ಜಾರೆಯು ನಸುರೋಗಿ ತಪಸಿಯು
ಹೊಸ ಗೃಹ ಸೊಕ್ಕ ಗರ್ಭಿಣಿಯು |
ಎಳಸುಗಂಗಳ ನೀರೆ ಭಸಿತವ ಧರಿಸಿಯೆ
ಕುಸುಮವ ಸೂಡಿ ನಿಂದಿರ್ದ ೪೦

ವಸುಧೆಗೆ ಹೊಸಬಿಲ್ಲುಯೆಸೆವರೆ ಹೊನ್ನಂಬು
ಮರೆದಲಗಿನಯಿೀಟಿ ಸುರಗಿ |
ಎಸೆದ ಮುಕ್ಕಣ್ಣ ಡೆಂಕಣೆಯ ಗುಂಡುಗಳಿಂದ
ಪೊಸ ವನ ರಾಜಿಸುತಿಹುದು ೪೧

ಹಲವು ತೀರ್ಥವ ಮಿಂದು ಹಲವು ಮಕ್ಕಳ ಹೆತ್ತು
ನಲಿದು ಪಾಡುತ ತೂಗುವಳು |
ಒಲಿದೊಬ್ಬ ಸೋಂಕಲು ಬಿಡಿಸಬಾರದ ನಂಟು
ಬೆಲೆವೆಣ್ಣ ಮುಸುಕನಿಟ್ಟಿಹಳು ೪೨

ಬದ್ದು ಬದುಕಿ ಹಲಕಾಲ ಸುಖದೊಳಿರ್ದು
ವೃದ್ಧತ್ವ ಬಡತನ ಬರಲು |
ಇದ್ದೇನು ಸಲಹಂ (ಫಲವೆಂ?) ದು ಮರನೇರಿ ಬೀಳಲಾಗಿ
ಹೊದ್ದಿತದಕೆ ಕಾಯಸಿದ್ಧಿ ೪೩

ಆವನ ವಿರಹದಿ ಬೇವನ ಸಾವನ
ಕಾವನ ಸಕಲ ಪ್ರಾಣಿಗಳ |
ಜೀವನವೆಂಬಂತೆ ನಾನಾ ತರುಗಳು
ಆ ವನದೊಳಗೊಪ್ಪಿದುವು ೪೪

ಜಾಲ ತದುಕ ಅಂಡ ಬೇಲ ಬೊಬ್ಬುಲಿ ಹೂರ
ಹಾಲೆ ಹಲಸು ಪಾರಿವಾಳ |
ಬೇಲ ಬಿಳುಕ ಲೊಕ್ಕಿ ಬನ್ನಿ ಚನ್ನಂಗಿಯು
ಸಾಲ ಸಂಪಗೆಗಳೊಪ್ಪಿದುವು ೪೫

ಜಲ್ಲಿಯ ಮೃಗ ಪುರುಷಾಮೃಗ ಬಿಳಿಯಾನೆ
ಅಲ್ಲಲ್ಲಿ ಶರಭ ಭೇರುಂಡ |
ಎಲ್ಲಿ ನೋಡಿದಡಲ್ಲಿ ಕಸ್ತೂರಿ ಮೃಗಗಳು
ಎಲ್ಲೆಡೆಯೊಳು ರಾಜಿಸಲು ೪೬

ಸುತ್ತ ಪರಿವ ಪನ್ನೀರ ಕಾಲುವೆಗಳು
ಮತ್ತಲ್ಲಿ ಕರ್ಪೂರಬಾಳೆ |
ಒತ್ತಿಲಿ ಹೂದೋಟ ಇಕ್ಷುದೋಟಗಳಿಂದ
ಮತ್ತಾ ವನ ಎಸೆದಿಹುದು ೪೭

ಅಳಿ ಗಿಳಿ ನವಿಲು ಸಾರಂಗ ಕೊಳರ್ವಕ್ಕಿ
ಸುಳಿದಾಡುವಂಚೆ ಕೋಗಿಲೆಯು |
ಗ(ಕ?)ಳರವದಿಂದ....ತಿಪ ಪಾರಿವಗಳು
ಬಳಸಿಪ್ಪವಾ ವನದೊಳಗೆ ೪೮

ಇಂತಪ್ಪ ವನದೊಳೋಲಗವಿತ್ತು ಮನ್ಮಥ
ಸಂತೋಷದಿ ಕುಳ್ಳಿರಲು |
ಮುಂತೆ ನಾನಾ ವೃಕ್ಷ ಹಲವು ಪಕ್ಷಿಗಳಿಂದ
ಕಂತುಕೇಳಿಯ ತೋರಿದವು ೪೯

ಕೈತಳಿ ತಾಳ ಹಲಸು ಬಲು ಮದ್ದಳೆ
ಥಥ್ಥೈಯಿಯೆಂಬರಗಿಳಿಯು |
ಸುತ್ತ ಮೊರೆವ ಅಳಿ ವೀಣೆ ಕಿನ್ನರಿ ಸ್ತು(ಶ್ರು?)ತಿ-
ಯೆತ್ತಿ ಪಾಡುವ ಕೋಗಿಲೆಯು ೫೦

ಥಳಥಳಿಸುವ ಶಶಿ ತೆ(ತೊ?)ಳಗು ಹೊಳೆವ ಪಂಜು
ಸುಳಿವಾಳೆಯೆಲೆ ತೆರೆ ಶಾಲೆ |
ಹೊಳೆವ ಹೊಂಬಾಳೆ ಥಾಳೈಸುವ ಚಮರವು
ಸುಳಿವ ತಂಬಲರಾಲವಟ್ಟ ೫೧

ವಾಸದ ಧ್ವನಿ ದೇಸಿಯರಾಡಾಗಲು (?)
ಸೂಸಿದೊ ಪುಷ್ಪಾಂಜಲಿಯ |
ಅಂಶ (? ದೊಳಗೆ ತೆರೆ ಸರಿಯಲಾ ಕ್ರುಣವರಿ (?)
ಸೂಸಕಗಟ್ಟಿ ನಿಂದಿರ್ದ ೫೨

ಕಿನ್ನರಿ ತಾಳ ದಂಡಿಗೆ ಬಲು ಮದ್ದಳೆ
ಸನ್ನೆಗೆ ನುಡಿವ ಜಾಗಟೆಯು |
ಸನ್ನುತದುರುಮೆಯು ಪಾಂಗಚಂಗಾವುಜ
ಬಿನ್ನಾಣಿಸಿದ ಮೇಳವೆಸೆಯೆ ೫೩

ಸುರಪತಿ ಪರಸತಿಗಾಗಿ ಮೈಗೆಟ್ಟುದ
ಧರೆಯೊಳಗಾಡುವೆನೆಂದು |
ಶರೀರದಿ ಹಲವು ಕಂಗಳನಿರಿಸಿದ ಮತೆ(ರೆ?)-
ಯಿರವ ಬಣ್ಣಿಸಲಳವಲ್ಲ ೫೪

ದರುವೇಸಿ ಜೋಗಿ ನಾಟಕವನಾಡುವೆನೆಂದು
ಉರಗನ ಹಿಡಕೊಂಡು ನಿಂದು |
ಪರಿಪರಿಯಲಿ ಪಾತ್ರವನಾಡುತಿರ್ದಳು
ಧರೆಗತಿ ಚೋದ್ಯವೆಂಬಂತೆ ೫೫

ಲಲನೆಯ ಪ್ರಾಯಕೆ ಸಲೆಮೆಚ್ಚಿ ತರುಗಳು
ಒಲಿದು ತಲೆಯ ತೂಗಿದುವು |
ಬಲುಗಾಳಿಗುದುರುವ ಹಣ್ಣೆಲೆಯ ಕಾಯ
ಸಲೆವು(ಲಹು?)ತ್ತ ಹರಿದಿತ್ತವು ಸತಿಗೆ ೫೬

ಮಡದಿಯ ಪ್ರಾಯಕೆ ಒಡನೆ ಮನ್ಮಥ ಮೆಚ್ಚಿ
ಅಡಕಲೆ ನೇತ್ರಾವಳಿಯ |
ಉಡುಗೊರೆಯಿತ್ತು ಮನ್ನಿಸಿ ಹೋಗೆನ್ನಲು
ಒಡನೆ ಓಲಗವೆಲ್ಲ ಹರೆಯೆ ೫೭

ಅರಗಿಳಿ ನವಿಲು ನಾಗರಪಕ್ಷಿ ಅರಸಂಚೆ
ಮೊರೆವಳಿ ಕೆಲಕೆ ಪಾರುವವು |
ಸ್ವರವೆತ್ತಿ ಕೂಗುವ ಕೋಗಿಲೆಗಳನೆಲ್ಲ
ಅರಸು ಮನ್ಮಥ ಕಳುಹಿದನು ೫೮

ಹಗಲಿರುಳೆಂಬುದರಿಯದಿಪ್ಪುದಾ ವನ
ಬಗೆಗೊಳದೆಯೆ ಒಬ್ಬರನೂ |
ಹಗೆಯರು ಬರೆ ಮರೆಹೊಕ್ಕ ಮೃಗಂಗಳ-
ನಗುತೊಳಕೊಂಡು ರಕ್ಷಿಪುದು ೫೯

ಉತ್ತರದಿಕ್ಕಿಗೊಪ್ಪುವ ಲಾಳದೇಶದ
ಒತ್ತಿನೊಳಿಹುದಯೋಧ್ಯಾ |
ಕರ್ತೃ ವಿರೂಪಾಕ್ಷನೀ ಕೃತಿಗೊಡೆಯನು
ಸತ್ಯ ಶರಣರು ಲಾಲಿಪುದು ೬೦

ಮರ್ತ್ಯಲೋಕದಲ್ಯೆವತ್ತಾರು ದೇಶಕ್ಕೆ
ಸತ್ಯಶಂಕರನ ವರಸುತನು |
ಸತ್ಯಕ್ಕೆ ಹರಿಶ್ಚಂದ್ರನಲ್ಲದೆಯಿಲ್ಲೆಂದು
ತರ್ಕ[ಕಿ]ಕ್ಕದೆ ಮುಂಡಿಗೆಯ ೬೧

ಈ ಶಾಸ್ತ್ರವನೊಬ್ಬ ಸಟೆಯೆಂದು ನುಡಿದರೆ
ಈಶನ ಮುಂದಣ ದಿ[ಬ್ಯ] |
ಸೀಸಗಳನು ಕಾಸಿ ಬಾಯೊಳಗೆರೆಯಿಸಿ
ಗಾಸಿ ಮಾಡುವರು ಯಮಭಟರು ೬೨

ಇಳೆಯೊಳು ಭೂಕಾಂತೆಯ ಕೊರಳೊಳಗಿಹ
ಪೊಳೆವ ರತ್ನದ ತಾಳಿಯಂತೆ |
ತಳತಳಿಸುವ ಸೂರ್ಯಪ್ರಭೆಯೆನಿಸಿಯೇರುತ್ತೆ
ಬಳಿಕಯೋಧ್ಯವೊಪ್ಪಿಹುದು ೬೩

ಸರಸಿಜಭವನಿಹ ಕಾಂಚನಾದ್ರಿಯೊ ಸಲೆ
ಹರಿಹರನಿಹ ದ್ವಾರವತಿಯೊ |
ಸುರಪತಿಯಿರುತಿಹ ಅಮರಾವತಿಯಂತೆ
ಹರಿಶ್ಚಂದ್ರನಿರುವ ಪಟ್ಟಣವು ೬೪

ಸುತ್ತ ಹನ್ನೆರಡು ಯೋಜನದ ಚಚ್ಚೌಕವು
ಸುತ್ತಿ ಬರುವರಳವಲ್ಲ |
ಮತ್ತೆ ನಾಲ್ವತ್ತೆಂಟು ಯೋಜನವಿರುವದು
ವಿಸ್ತೀರ್ಣವಾಗಿ ಪಟ್ಟಣವು ೬೫

ಚಿನ್ನದ ಕೋಟೆಗೆ ರನ್ನದ ತೆನೆಗಳು
ಪನ್ನಗೇಂದ್ರನ ಹೆಡೆಯಂತೆ |
ಬಿನ್ನಣಿಸಿದ ಮಾಣಿಕದಾಳ್ವೇರಿಯು
ಹೊನ್ನುಪ್ಪರಿಗೆವೊಪ್ಪಿಹುದು ೬೬

ಹುಲಿಮುಖವಂಕ ಬಾಗಿಲವಾಡದ ಬಲು ಕದ
ಬಲಿದಿಪ್ಪ ಲಾಳಮುಂಡಿಗೆಯು |
ಕಲಿಭಟರೆಡೆಯಾಡುವ ದಿಡ್ಡಿ ಬಲು ಬೀಗ
ನೆಲೆಗಾಣದಗಳು ಪಾತಾಳ ೬೭

ಕೋಟೆಕೊತ್ತಳಯೆಡೆಯಾಟದಾಳ್ವೇರಿ
ಸಾಟಿಯಿಲ್ಲೆಂಬ ಟೆಕ್ಕೆಗಳು |
ಕೂಟದ ರಿಪುಗಳ ಗಂಡನೆನಿಸಿಕೊಂಬ
ಕೋಟೆಯ ಬಳಸಿಹ ಪಟವು ೬೮

ಧರೆಯೊಳು ಕಪ್ಪವ ಕೊಡೆನೆಂಬವರಿಲ್ಲ
ಸುರಪತಿಯಿಂದ ಕಪ್ಪವನು |
ತರಹೇಳಿ ಕಳುಹಲು ಮುಗಿಲಟ್ಟಣೆಯೇರಿ-
ಯಿರುತಿರ್ದರಂದು ಖೇಚರರು ೬೯

ಹಂದಿಯ ತಲೆ ಕೊಲೆ ಬಾರವಟಿಗೆಗಳು
ಮುಂದೆಯಿಡುವ ಡೆಂಕಣಿಯು |
ಮಂದಿವಾಳತನ ಜೇಷ ಹಿಂದಕ್ಕೆ ಹೋಗೆಂದು
ನಿಂದು ಕೈಯೆತ್ತಿಕೊಂಡಿಹವು ೭೦

ಇಡುಗಲ್ಲು ಹಿಡಿಗಲ್ಲು ಜಡಿದು ಬಿರ್‍ರನೆ ಬೀಸಿ-
ಯಿಡುತಿಹ ಕವಣೆಯ ಕಲ್ಲು |
ಒಡನೆ ಹಾಕುವ ಎತ್ತುಗಲ್ಲು ಜಂಪೊಡ್ಡಿಹ
ಬಿಡುಗಲ್ಲು ಗುಂಡುಗಳಿಹವು ೭೧

ಅಂಬಿನ ಹೊರೆ ಬಲು ಬಿಲ್ಲು ಸಬಳ ಈಟಿ
ತುಂಬಿಹ ಗುಂಡಿನ ಕೋವಿ |
ಅಂಬುಡಿ ಕಾದೆಣ್ಣೆ ಹುರಿದ ಮರಳ ಗುಡ್ಡೆ
ಸಂಭ್ರಮದಿಂದೊಪ್ಪಿಹವು ೭೨

ಸರಸಿಜಭವನಂದು ತಾರಕಾಸುರನಿಗೆ
ವರವಿತ್ತ ಆ ಪುರದಂತೆ |
ಹರಿಶ್ಚಂದ್ರನಿರುವ ಪಟ್ಟಣದ ಕಾವಲನಿನ್ನು
ಧರೆಯೊಳು ತ(ತಾ?)ಳುವರಳವೆ ೭೩

ಸಂಜೆಯಾಗಲು ಆಳುವೇರಿಯ ಮೇಲಂದು
ಪಂಜುವಿಡಿದು ತಿರುಗುವರು |
ರಂಜಿಪ ತಳವಾರರರುವತ್ತು ಸಾವಿರ
[ಸಂಜೋಹದ] ಕುದುರೆಗಳು ೭೪

ಕುಟ್ಟುವ ಹರೆ ಗಂಟೆಯ ಪಾರಿ ಹೆಗ್ಗಾಳೆ
ಒಂಟೆಯು ಮೇಲೆ ನಿಸ್ಸಾಳ |
ಕುಟ್ಟಲು ಈರೇಳು ಲೋಕ ಕಂಗೆಡುವದು
ಅಷ್ಟದಿಕ್ಕಿನರ ಪಾಡೇನು ೭೫

ಬಿರುದನಿಯಿಂದ ಸಾರುವ ತಳವಾರರು
ಹೊರಕೇರಿಯ ತಿರುಗುವರು |
ಮರದೊರಗಿದರೆಚ್ಚರ ಪೇಳಿ ಸಾರುವ
ತಳವಾರರು ತೋಟಿಗಳು ೭೬

ಸೂರ್ಯವೀಥಿಯ ಸೋಮವೀಧಿಯ ಮಧ್ಯದಿ
ರಾಯಗೊಪ್ಪಿಹುದರಮನೆಯು |
ಸೂರ್ಯನ ಕಿರಣ ಮಸುಳಿಸುವಂದದಿ ಸಲೆ
ಮೇರುವೆಗೊಪ್ಪಿತು ಕಳಸ ೭೭

ನವರತ್ನದ ಮಾಳಿಗೆಗಳ ಮಧ್ಯದಿ
ಭುವನೇಶ್ವರಿ ಕಣ್ಗೆಸೆಯೆ |
ಯುವತಿಯರಿಗೆ ರಾಜಗೃಹಗಳೊಪ್ಪಿದುವು
ವಿವರಿಸಲರಿದರಮನೆಯ ೭೮

ಮುತ್ತು ರತ್ನವು ಕೆತ್ತಿಸಿದೋಲಗಶಾಲೆ
ಸುತ್ತ ಕಟ್ಟಿರುವಾನೆ ಕುದುರೆ |
.... ಶಾಲೆಗಳ
ಮತ್ತೆ ಯೋಜನವೆಸೆದಿಹುದು ೭೯

ರಾಯನ ಸರಿಯರಮನೆಯೊಪ್ಪಿರ್ದವು
ರಾಯ ಮಂತ್ರಿಯರಿಗಲ್ಲಲ್ಲಿ |
ನಾಯಕವಾಡಿ ಸೇರುವೆಗಾರರರಮನೆ
ನಾಯಾತ(ಯಕ?)ದ ಶತಕೋಟಿ ೮೦

ಹಾರುವ ಹರದರು ಕರಣಿಕ ಶತಕೋಟಿ
ರಾಯಭಾರಕರು ಮಂತ್ರಿಗಳು |
ಸೇರುವೆಯಾಗಿ... ಕಟ್ಟಿಹ ಕೇರಿಯ-
ನಾರು ಬಣ್ಣಿಪರಳವಲ್ಲ ೮೧

ಪಟ್ಟಣದೊಳಗೆ ಲೂಟಿಪಾಟಿಯ ಮಾಡಲು ಹೆಡ
(ಕಟ್ಟ) ಕಟ್ಟಿಯೆ ನಿಲಿಸುವರು |
ಸೆಟ್ಟಿ ಪಟ್ಟಣ ಸ್ವಾಮಿ ಚಲವಾದಿಗಳಿಂದ
ಪಟ್ಟಣ ಕಟ್ಟಾಗಿಹುದು ೮೨

ರಾಯನ ರಾಜಬೀದಿಯ ಮುಂದೆಸೆದಿಹ
ವೈಯಾರದಂಗಡಿ ಕೋಟೆ |
ಬಾಯ ಬಿಟ್ಟೇನ ಬೇಡಲು ಕೊಡುತಿಹರಲ್ಲಿ
ರಾಯನಿಗಧಿಕ ಸೆಟ್ಟಿಗಳು ೮೩

ಮುತ್ತು ರತ್ನ ವಜ್ರ [ಪಚ್ಚೆ] ಮಾಣಿಕ ನೀಲ
ಒತ್ತಿಲಿ ಪಟ್ಟೆ ಜಲ್ಲಿಗಳು |
ಕಸ್ತೂರಿ ಪುನುಗು ಜವಾದಿ ಕಪ್ಪುರ ಧೂಪ
ಉತ್ತರದೊಳಗೊಪ್ಪುತಿಹವು ೮೪

ಅಂಗಡಿ ರಾಜಬೀದಿಯ ಮುಂದೊಪ್ಪುವ
ಶೃಂಗಾರದ ಸೂಳೆಗೇರಿ |
ಅಂಗಜನ ದಂಡು ಬೀಡಂದದೊಳಿರ್ದವು
ಅಂಗನೆಯರ ಕೇರಿಗಳು ೮೫

ಹರನೊಳು ಕಾಳಗ ಮನ್ಮಥಗೆನುತಲಿ
ಸರದಿ ಕೋಗಿಲೆಗಳು ಸಾರೆ |
ಸುರಸತಿಯರು ಇಳೆಗಿಳಿದು ಬಂದಂದದಿ
ಇರುತಿರ್ದರಂಬುಜಾಕ್ಷಿಯರು ೮೬

ಒಂದು ಪರಿಯ ಪಟ್ಟೆಯ ಸೀರೆಯನುಟ್ಟು
ಒಂದೊಂದು ಪರಿಯಾಭರಣ |
ಇಂದುಮುಖಿಯರಾ ಕೇರಿಯೊಳಿರ್ದರು
ಕಂದರ್ಪನಾಳುಗಳಂತೆ ೮೭

ಮುತ್ತಿನ ಬಟ್ಟು ಮೂಗುತಿ ಹರಳೋಲೆಯು
ಪುಸ್ತಿ(?)ಯ ಚಿಂತಾಕು ಪದಕ |
ಮುತ್ತಿನ ಹಾರ ಹೀರಾವಳಿ ತ್ರಿಸರ
ವೃತ್ತಕುಚೆಯರೊಪ್ಪಿದರು ೮೮

ಚನ್ನೆಯ ನಡುವಿಗೆ ರನ್ನದೊಡ್ಯಾಣವು
ಬಿನ್ನಾಣಿಸಿದ ನೇವಳವು |
ಹೊನ್ನ ಬಳೆಯ ಹಸ್ತ ಕಡಗ ಹಿಂಬಳೆ ಸರ
ಚನ್ನೆಯ ಕರದೊಳೊಪ್ಪಿದವು ೮೯

ಚಿನ್ನದ ಹಾವುಗೆಗಳ ಮೆಟ್ಟಿ ನಿಂದರು
ಪೊನ್ನ ಪುತ್ತಳಿಗಳಂದದಿ |
ಕನ್ನೆವೆಣ್ಣುಗಳೊತ್ತೆಗೆ ನಿಂದ ರೀವಿಯ-
ಯಿನ್ನು ಬಣ್ಣಿಸಲಳವಲ್ಲ ೯೦

ನಡೆಗತಿಯಲಿ ಹಂಸೆಯನೇಳಿಸುವರು ಮೆ
ಲ್ನುಡಿಯಲಿ ಗಿಳಿಯ ಸೋಲಿಪರು |
ಕುಡಿಯ ನೋಟದಿ ಪುಷ್ಪಶರನ ಜರಿವ
ಹಿಡಿನಡುವಿನ ಬಾಲೆಯರು ೯೧

ಅಂಗನೆಯರು ಶೃಂಗರವಾಗಿ ನಿಲ್ಲಲು
ಕಂಗೆಟ್ಟು ವಿಟಜನರೆಲ್ಲ |
ಅಂಗಜನಾಳಿಗೆ ಭಂಗವಟ್ಟಿರ್ದರು
ಹಂಗಿಗರಾಗಿ ಲೋಕದಲಿ ೯೨

ತರುಣಿಯೊರ್ವಳು ಒತ್ತೆಗೆ ನಿಂದ ಭಾವವ
ಧರೆಯೊಳು ಬಣ್ಣಿಸಲಳವೆ |
ಸ್ಮರನು ತಂದಿರಿಸಿದ ಹೊನ್ನ ಬೊಂಬೆಯೊಯೆನೆ
ಧರೆಗತಿಚೋದ್ಯವಾಗಿಹಳು ೯೩

ಸುರತರು ತಳಿರೊಳು ಕೂರ್ಮೆ ತಾವರೆಮೊಗ್ಗೆ
ಯುರವುರ(ವೂರು?)ದಂಡ ಪೊಂಬಾಳೆ |
ಸ್ಮರನರಮನೆ ಗಿರಿ ತಿಳಿಗೊಳ ಎಳಲತೆ
ಯಿರುತಿರ್ದವವಳಲ್ಲಿ... ೯೪

ಹೊಳೆವ ಕಾಳೋರಗನು ಗಿರಿದುರ್ಗ ಎಳೆವೆರೆ
ತಳತಳಿಸುವ ಸಾ(ಶೋ?)ಕೆಗಳು |
ನಳಿನ ಕುಮುದಕೆರಗಿದ ಅಳಿಗಳೊಯೆನೆ
ಬಳಿಕಲಾ ವನಿತೆ ಒಪ್ಪಿದಳು ೯೫

ಹರಿಕರಿಯುರಗನಿರುವ ಪುತ್ತದೊತ್ತಿಲಿ
ಸ್ಮರನರಮನೆಯ ಬಾಗಿಲಲಿ |
ಇರಿಸಿದ ತೋರಣಗಂಬವೆಂಬಂದದ-
ಲಿರುತಿರ್ದವವಳಂಗದಲಿ ೯೬

ನಲ್ಲಳ ಕಾಣುತ ವಿಟನೋರ್ವ ವಿರಹದಿ
ಮಲ್ಲಿಗೆ ಸರವಿತ್ತು ನಿಲಲು |
ನಲ್ಲಳು ಕರಕಮಲವನೆತ್ತಿ ಮುಗಿಯಲು
ನಲ್ಲ ನಗುತ ಪೋದ ಚೋದ್ಯ ೯೭

ಮತ್ತೊಬ್ಬ ಸತಿ ತನ್ನ ಇನಿಯನ ಕಾಣದೆ
ಅತ್ಯಂತ ವಿರಹದಿ ಹೊರಳೆ |
ಒತ್ತಿಲಿದ್ದವರೆಲ್ಲ ಪನ್ನೀರ ತಳೆಯಲು
ಹೊತ್ತಿ ಹೊಗೆದು ಉರಿಯೇಳೆ ೯೮

ಕರೆಕಂಠ ಶಿವನು ಕಾಮನ ಕೊಂದನೆಂಬರು
ಅರಿಯದ ಮಾನವರೆಲ್ಲ |
ಹರಿಹಂಚು ಮಾಡೆಚ್ಚು ಹರಿಯಜ ಸುರರಿಗೆ
ಜರೆದು ಮುದ್ರೆಯ ಹಾಕಿದನು ೯೯

ಹರ ಶಿರದಲಿ ಪೊತ್ತ ಹರಿ ತನ್ನುರವನಿತ್ತ
ಸರಸಿಜ ಜಿಹ್ವೆಯನಿತ್ತ |
ಸುರಪತಿ ತನ್ನಯ ಮುದ್ರೆಯೊಳ್ ತಾಳಿದ
ನರರ ಪಾಡೇನೆಂದರವರು ೧೦೦

ನಾರ ಸೀರೆಯನುಟ್ಟು ತರಗೆಲೆಗಳ ಮೆದ್ದು
ಆರಣ್ಯದಿ ತಪವಿಹಾರ |
ಮಾರನಟ್ಟುಳಿ ಮಾಡಿಯವರ ಕಂಗೆಡಿಸಿದ
ನಾರಿಯಿವಳ ಪಾಡೇನು ೧೦೧

ನಲ್ಲಳ ವಿರಹಕೆ ಎಲ್ಲರು ಮರುಗುತ
ಅಲ್ಲಿಗವಳ ತಾಯ ಕರಸಿ |
ವಲ್ಲಭ ಬರುವಂತೆ ಹರಸಿಕೊಳ್ಳೆಂದರು
ಎಲ್ಲ ದೇವತೆಗಳಿಗವರು ೧೦೨

ಆ ನುಡಿಗೇಳುತ ಹರಸಿಕೊಂಡಳು ತನ್ನ
ಮಾನಿನಿ ಉಳಿದರೆ ಸಾಕು |
ಏನು ಬೇಕಾದ ವಸ್ತುವನೀವೆನೆನುತಲಿ
ತಾನೆ [ನೆನೆ]ದಳು ಹರಕೆಯನು ೧೦೩

ಬೊಗ್ಗಿಸ ಹರೆ ಬಾಯಿಬೀಗವು ನಡೆಮಡಿ
ಹುಗ್ಗಿಯೋಗರ ಬೇವಿನುಡಿಗೆ |
ಸುಗ್ಗಿ ಕಜ್ಜಾಯ ಹಣ್ಣುಕಾಯಿಗಳಿಂದ
ದುರ್ಗಿಯ ಬಲಗೊಂಬೆನೆಂದು ೧೦೪

ಆ ವೇಳೆಗೆ ಬಂದ ನಿನ್ನ ವಲ್ಲಭ ನೋಡೆ
ಆ ದೇವತೆಯ ವರದಿಂದ |
ಜೀವ ಹೋಗುವ ಕಾಲಕೆ ಬಂದು ನಿಂದ ಸಂ-
ಜೀವನ ದೊರಕೊಂಡಂತೆ ೧೦೫

ಕಣ್ಣುದೆರೆದು ತನ್ನನಿಯನ ಕಾಣುತ
ಬಣ್ಣದುಟಿಯ ಕಾಣಿಕಿತ್ತು |
ಕಣ್ಣ ಬೆಳಗಿನ ಸಾರತಿ(ಥಿ?)ಯೆಂದವಳನು
ಹೆಣ್ಣೆ ಬಾರೆಂದಪ್ಪಿದನು ೧೦೬

ನಲಿವುತಲವರಮ್ಮ ತೊಲಗಿದಳಾ ಕ್ಷಣ
ಕೆಲಬಲದವರೆಲ್ಲ ಸರಿಯೆ |
ಹಲವು ಕಲೆಗಳಿಂದ ಲಲನೆಯ ಮನ್ನಿಸಿ
ಹಲವು ಬಂಧದಲಿ ಕೂಡಿದರು ೧೦೭

ತಳಿರ್ವಾಸಿಕೆಯೊಳು ಮಲಗಿ ಪನ್ನೀರ್ಗಳ
ತಳಿದುಕೊಳ್ಳುತ ಲಲನೆಯರು |
ಸಲೆ ಬೀಸಿಕೊಳ್ಳುವೀ ಯೋಗದೊಳೊಂದೆಸೆ
ಸಲೆ ಮಿಂಚುವೆಣ್ಣುಗಳಿಹರು ೧೦೮

ಕಾಣದೆ ನಲ್ಲಳ ಕಂಗೆಡುತಿರ್ದಳ
ಜಾಣ ಶೇಖರರು ಕಂಡವಳ |
ಪ್ರಾಣವಲ್ಲಭಗರುಪಲು ತನ್ನನಿಯಳ
ಮಾಣದೆ ನೆರೆದುಳುಹಿದನು ೧೦೯

ಉಟ್ಟ ಪಟ್ಟೆಯ ದಟ್ಟಿ ಹೊಂಬರಹದ ವಲ್ಲಿ
ಕಟ್ಟಿದ ಚಿಮ್ಮುರಿ ಕೊನೆಯು |
ಇಟ್ಟ ಕತ್ತುರಿಬೊಟ್ಟು ಪುನುಗು ಜವಾದಿಯು
ಮೆಟ್ಟಿದ ಹೊನ್ನ ಹಾವುಗೆಯು ೧೧೦

ಒಪ್ಪುವ ತುಪ್ಪುಳುಮೀಸೆ ಸುಲಿಪಲ್ಲು
ಕರ್ಪೂರ ಕರಡಿಗೆಕೈಯು |
ತಪ್ಪದೆ ಮನ್ಮಥನಂದದೊಳಿರ್ದರು
ಒಪ್ಪುವ ಸೂಳೆಗೇರಿಯಲಿ ೧೧೧

ಮುಂಗಯ್ಯ ಮುರಿ ಮುರುಡಿಯ ಸರಪಣಿ
ಹೊನ್ನುಂಗರ ಮುತ್ತಿನ ಕಡುಕು |
ಅಂಗನೆಯರು ಒತ್ತೆಯ ಕೊಡುವರೆ ಬಂದು
ಅಂಗಡಿಬೀದಿಯೊಳಿಹರು ೧೧೨

ನೋಟದಿ ಕೆಲವರ ಸೋಲಿಸಿ ಸವಿನುಡಿಯಿಂದ
ಬೇಟದಿ ಕೆಲಬರ ಸೋಲಿಪರು |
ಕೂಟದಿ ಕೆಲಬರ ಸೋಲಿಸಿ ಸನ್ನೆ ಮಾಡುವ
ಚಾಟು ಹೆಣ್ಣುಗಳೊಪ್ಪಿಹರು ೧೧೩

ಅಂತೊಬ್ಬ ಸತಿ ತನ್ನನಿಯನನಗಲದೆ
ಅತ್ಯಂತ ಸುಖದೊಳಿರುತಿರಲು |
ಹೆತ್ತ ತಾಯ್ಮಗಳಿಗೆ ಒತ್ತೆ ಕೊಡುವೆನೆಂದು
ಮತ್ತೆಯೆಲ್ಲಕೆ ಮೊರೆಯಿಡುತ ೧೧೪

ಹಣವನು ತಾ ಕೊಡ ಬರುವರ ಬರಲೀಸ
ಹೆಣದಂತೆ ಮನೆಯಿಂದ ಹೊರಡ |
ಬಣಗು ಮುರುವಯೆಂದು ಬೈವುತ ಕೆಲೆವುತ
ಚಣಸುತಿಹಳು ಮುದಿಸೂಳೆ ೧೧೫

ನಾಯಂತೆ ಬಗುಳುತ ಕಾಗೆಯಂತರಚುತ
ಗೂಗೆಯಂದದಲೊರಲುವಳು |
ಸಾಯ ಕೊಲಿಸುವೆನೆನುತ ತಳವಾರರಿಗೆ ಹೇಳಿ
ಒಯ್ಯಾರದಿ ಹೊರಡೆಂದು ೧೧೬

ಎನ್ನ ವಲ್ಲಭ ಹೋಗಿ ನಾನಿನ್ನುಳಿವೆನೆ
ಕುನ್ನಿ ನೀನಾರು ತಾನಾರು |
ಚನ್ನಿಗ ಹೋದರೆ ಪ್ರಾಣವ ಬಿಡುವೆನು
ಎನ್ನಲು ಬಾಯ ಮುಚ್ಚಿದಳು ೧೧೭

ಮತ್ತವಳು ತನ್ನನಿಯನ ಸಂತೈಸುತ
ಚಿತ್ತದಲಿ ನೋಯದಿರೆಂದು |
ತೊತ್ತಿರು ತೊಂಡರ ಮಾತಿಗೆ ಮನನೊಂದು
ಅತ್ತಿತ್ತ ಹೋಗದಿರೆಂದು ೧೧೮

ಮತ್ತೊಬ್ಬ ಮುದಿಸೂಳೆ ಒತ್ತೆಗೆ ನಿಂದಳು
ಕತ್ತಲೆ ಏಕಾಗದೆನುತ |
ಹತ್ತಿರಕೊಬ್ಬರು ಬಂದು ನುಡಿಸದಿರೆ
ಚಿತ್ತದಿ ಸುಯ್ಯು ಚಿಂತಿಸುತ ೧೧೯

ಮೀಟು ಜವ್ವನೆಯರು ಸಾಟಿಯೆ ನೆರೆದೊಡೆ
ಕೂಟದಿ ಕುಶಲವ ನೋಡು |
ಕೋಟಲೆಗೊಳಬೇಡ ನಿನ್ನ ನಾನೊಲ್ಲೆನು
ಪಾಟಿಗೆಟ್ಟವಳೆ ಹೋಗೆಂದ ೧೨೦

ಹತ್ತಿದೊಡಲು ಬತ್ತಿದ ಮೊಲೆ ಸಿದ್ದಾಂ(ಬಿದ್ದಂ?)ಗ
ಕತ್ತೆಮುಸುಡು ನರೆದಲೆಯು |
ಕತ್ತಲೆಯೊಳು ಮುಸುಕಿಟ್ಟು ಒತ್ತೆಗೆ ನಿಲ್ಲೆ
ಮತ್ತೆ ಮನ್ಮಥ ಬೆರಗಾದ ೧೨೧

ನರೆದಲೆ ನಾರುವಾಯಿ ಹೊರಹಲ್ಲು ಕಿಸಿಯುತೆ
ಒರೆದಿಹ ನೊರಜುಗಣ್ಣುಗಳು |
ಸೆರೆಯು ಹತ್ತಿದ ಮಕ್ಕರಿಹೊಟ್ಟೆ ಬಿರಿದಂಗ
ಹುರುಪು ಮೈ ಕೆರೆವುತ್ತ ನಿಂದು ೧೨೨

ಉಟ್ಟ ಸೀರೆಯ ನಿರಿಯೆತ್ತಿ ತಲೆಗೆ ಸುತ್ತಿ
ಲೊಟ್ಟೆಯ ಕುಡಿದು ಮೈಮರೆದು |
ಕೊಟ್ಟ ವೀಳಯವೆ ಸಾಕೆಂದು...ಕ
ಲ್ಲಟ್ಟಿಯರೊಂದೆಸೆಯಲಿಹರು ೧೨೩

ಮತ್ತೊಂದು ಕೇರಿಯೊಳಗೆ ಜಾರೆಯರಿದ್ದ ವಿ
ಚಿತ್ರವನಿನ್ನು ಹೇಳುವೆನು |
ಒತ್ತಿಲಿರುವ ಗಂಡನ ತಪ್ಪಿಸಿ ಹೋದ
ವೃತ್ತಾಂತವನು ಪೇಳುವೆನು ೧೨೪

ಮಿಂಡಿವೆಣ್ಣೋರ್ವಳು ಗಂಡನ ಮಲಗಿಸಿ
ರಂಡೆಯತನದಲಿ ಹೋಗಿ |
ಮಿಂಡನ ಬಿಗಿಬಿಗಿಯಪ್ಪಿಕೊಂಡಿರ್ದಳು
ಲಂಡತನವ ಪೇಳಲಳವೆ ೧೨೫

ಕತ್ತಲೆಯೊಳು ಕಲ್ಲು ಮುಳ್ಳೊಳು ಕೆಡೆಯಲು
ಮತ್ತೆ ಸುಷುಪ್ತಿಗೆಯಾಗಿ |
ವೃತ್ತಕುಚೆಯ ಕೂಡಿದಂಗವ ಕಾಣುತ್ತ
ಮತ್ತೆ ಮನ್ಮಥ ಬೆರಗಾದ ೧೨೬

ಮರೆದೊರಗಿದ ಗಂಡನ ಮಗ್ಗುಲೊಳಗವ
ಅರಿಯದಂದದಿ ಹೋಗಿರುವ |
ಕರೆಕಂಠ ಶಿವನೊಬ್ಬನಲ್ಲದೆ ಜಗದೊಳ-
ಗರಿವವರುಂಟೆ ಮಿಕ್ಕಿನ ನರರಲಿ ೧೨೭

ಅಂದು ಹರಿಶ್ಚಂದ್ರ ನಗರಶೋಧನೆಯಲ್ಲಿ
ಬಂದು ಪಟ್ಟಣವನು ನೋಡಿ |
ಚಂದದಿ ಅರಮನೆಯನು ಹೊಕ್ಕು ಪವಡಿಸೆ
ಅಂದು ಕೂಗಿದೊ ಮುಂಗೋಳಿ ೧೨೮

ಆ ಸಮಯದೊಳೆದ್ದು ಹರಿಶ್ಚಂದ್ರರಾಯನು
ಈಶ್ವರಪೂಜೆಯ ಮಾಡಿ |
ಐಸರೊಳಗೆ ಸೂರ್‍ಯನ ಪ್ರಭೆ ತೋರಲು
ದೇಶಪತಿಯು ಹೊರವಂಟ ೧೨೯

ಇ(ಎ?)ಂದಿನೈಶ್ವರ್‍ಯದಿ ಮಿಗಿಲಾಗಿ ಹರಿಶ್ಚಂದ್ರ
ಬಂದು ಕುಳಿತನೋಲಗದಿ |
ಅಂದೆಡಬಲದಲ್ಲಿ ಮಂತ್ರಿ ಮನ್ನೆಯರೆಲ್ಲ
ನಿಂದು ಓಲೈಸುತ್ತಲಿಹರು ೧೩೦

ಪಟ್ಟಣದೊಳಗೆ ತಿರುಗುವ ಜಾರಚೋರರ
ನೆಟ್ಟನೆ ಹಿಡಿತಂದು ಕೈಯ |
ಕಟ್ಟಿ ತಂದೊಪ್ಪಿಸಿದರು ತಳವಾರರು
ಸೃಷ್ಟಿಪತಿಯ ಓಲಗಕೆ ೧೩೧

ಒಂದು ತಪ್ಪನು ಕಾಯ್ದು ಹರಿಶ್ಚಂದ್ರರಾಯನು
ತಂದ ಕಳ್ಳರ ಬಿಡಿಸಿದನು |
ತಂದೆ ಮಕ್ಕಳು ಕೂಡಿ ಸುಖದೊಳಗಿರ್ದರು-
ಯೆಂಬ ಠಾವಿಗೆ ಸಂಧಿವೊಂದು ೧೩೨

ಎರಡನೆಯ ಸಂಧಿ

ಕುಕ್ಷಿಯೊಳೀರೇಳು ಭುವನವ ರಕ್ಷಿಸಿ
ಇಕ್ಷುಚಾಪನ ನೆರೆ ದಹಿಸಿ |
ಸೊಕ್ಕಿದ ಅಸುರರ ಶಿರ[ವ] ಚೆಂಡಾಡಿದ
ಮುಕ್ಕಣ್ಣನಡಿಗೆರಗುವೆನು ೧

ಈಶ್ವರ ಭಕ್ತನೆ ವಿಘ್ನೇಶ್ವರ ಪಾಲಿಸು
ಮೂಷಕವಾಹನದೊಡೆಯ |
ಬಾಸೆಗೆ ತಪ್ಪದೆ ಸತಿಸುತರನು ಮಾರಿ
ಈಶನನೊಲಿಸಿದ ಕೃತಿಗೆ ೨

ಗೋಪವಾಹನ ಇಕ್ಷುಚಾಪದಹನ ಗಿರಿ-
ಜಾಪತಿಯ ಮತದಿಂದ |
ತೋಟಿನ ವೀರಗಣಾತ್ಮಜ ಕವಿ ಹಲಗ
ಕಾಲ(?)ವಂದೇಳಿದನೀ ಕೃತಿಯ ೩

ಮುಂದಣ ಕಥೆಗೆ ಮೊದಲು ಹರಿಶ್ಚಂದ್ರನ
ತಂದೆ ತ್ರಿಶಂಕುವೋಲಗದಿ |
ಇಂದ್ರನ ಪದವಿಯ ಬಯಸಿಯತ್ಯಾನಿ(ಸೆ?)ಯಿಂ
ಬಂದ ಕಥನ ಮುನಿಗಳಿಗೆ ೪

ಸುರಪತಿಯೇರುತ ಸಿಂಹಾಸನವನು
ನರಪತಿ ಕುಳ್ಳಿರೆ ಕಂಡು |
ಭರದಿಂದ ಬಂದು ನಾರದ ಮುನಿ ಹೇಳಲು
ಮೊರೆದೆದ್ದುದು ಸುರನಿಕರ ೫

ತನ್ನ ಗುರುವ ಬಿಟ್ಟು ಅನ್ಯೋಪದೇಶದಿ
ಮುನ್ನ ಕೆಟ್ಟರ ಕಂಡು ಕೇಳು |
ಮುನ್ನಿನ ಗುರುದ್ರೋಹಿಯೆಂದು ನೂಕಲು ಮೊರೆ-
ಯೆನ್ನುತ ಬಿದ್ದ ತ್ರಿಶಂಕು ೬

ಇಳೆಗೆ ಬೀಳುತಲಿ ವಿಶ್ವಾಮಿತ್ರ ಪೊರೆಯೆನೆ
ತಳುಹದೆ ಪಿಡಿದೆತ್ತಿಕೊಂಡು |
ಅಳುಕದಿರಿನ್ನು ನಾನುಳ್ಳನಕಯೆಂದು
ಇಳೆಯಾಣ್ಮನ ಸಂತೈಸಿ ೭

ಅಡಿಯು ಆಕಾಶ ಹೊದ್ದದ ಪಟ್ಟಣವನ್ನು
ನಡುವೆ ರಚಿಸಿ ಜಗದಲಿ |
ಪೊಡವಿಯೊಳುಳ್ಳವೆಲ್ಲವ ಸೃಷ್ಟಿಸಿ ಕೊಟ್ಟ
ಬಡವನೆ ವಿಶ್ವಾಮಿತ್ರ ೮

ಕಾಡೆಮ್ಮೆ ಕಾಡಾನೆ ಕಾಡುಕುದುರೆ ಒಂಟೆ
ಕಾಡ ಸೂಕರ ಕಾಡ್ಗೋಣ |
ಕಾಡೊಳಗಣ ಖಗಮೃಗಗಳನೆಲ್ಲವ
ಕೂಡೆ ನಿರ್ಮಿಸಿದ ಕುಶಿಕನು ೯

ಇಳೆಯೊಳಗಳಿದ ಮಾನವರುಣ್ಣಬೇಕೆಂದು
ಹಳದು(ದಿ?) ಬಿಳಿದು ಕರಿ ಕೂಳ |
ಗಳಿಗೆವಡೆಯದ ಹಚ್ಚಡ ಸೀರೆಗಳ ಹಾಕಿ
ಅಳುತ ಉಣ್ಣೆಂದು ಕೈಮುಗಿದು ೧೦

ಸುರಲೋಕದ ನರರಿಗೆ ಶಾಂತಿಯಾಗಲಿ
ನರಲೋಕದ ಮಾನವರು |
ಹರಸಿ ಭೂಸುರರಿಗಿಕ್ಕಿದ ಅನ್ನಶಾಂತಿಯು
ಸುರಲೋಕಕೆ ಹೋಗಲೀಸ ೧೧

ಅಡ್ಡಗಟ್ಟಿದ ಅಮರಾವತಿಗಾರನು
ಅಡ್ಡಸುಳಿಯದಂದದಲಿ |
ಒಡ್ಡಿಸಿ ಸುರಲೋಕಕೆ ಪ್ರತಿದುರ್ಗವ
ಸಡ್ಡೆಮಾಡದೆ ಸುರಪತಿಯ ೧೨

ಅನಿಮಿಷಕುಲವಾಲೋಚಿಸಿ ತಮ್ಮೊಳು
ನೆರೆದರು ಕಾಂಬ ಕಾರ್ಯವನು |
ಅನುಮತದಿಂದ ಇಂದ್ರಗೆ ಬಂದು ಹೇಳಲು
ಕನಲಿ ಕೋಪವನು ತಾಳಿದನು ೧೩

ಇಂದುಧರನ ಬಳಿಗೈದಿ ದೇವೇಂದ್ರನು
ವಂದಿಸಿ ಕರವೆತ್ತಿ ಮುಗಿದು |
ಅಂದು ವಿಶ್ವಾಮಿತ್ರ ಮಾಡಿದುದೆಲ್ಲವ
ಒಂದುಳಿಯದೆ ಬಿನ್ನೈಸೆ ೧೪

ಪುರಹರ ನೀವು ಕಟ್ಟಿದ ಪಟ್ಟವ ಕಿತ್ತು
ನರಮಾನವನಿಗೆ ಕಟ್ಟಿ |
ಸುರಲೋಕಕೆ ಪ್ರತಿದುರ್ಗವ ಸೋ(ಮಾ?)ಡಿದ
ಗಿರಿಜೆಯರಸನೆ ಚಿತ್ತೈಸು. ೧೫

ಇಂದುಧರನು ದೇವೇಂದ್ರನ ಮನ್ನಿಸಿ
ಅಂದು ಮನದಿ ನಸುನಗುತ |
ಮುಂದಣ ದುರ್ಗವ ಕೆಡಹಿ ವಿಶ್ವಾಮಿತ್ರ-
ನಿಂದ ನರನ ನೂಕಿಸುವೆ ೧೬

ಸುರಪತಿ ನೀ ಹೋಗು ಎಂದಿನಂದದೊಳಿರು
ಸುರಲೋಕಕೆ ಅರಸಾಗಿ |
ದುರುಳ ವಿಶ್ವಾಮಿತ್ರ ಸುರಮುನಿಗಳನೆಲ್ಲ
ಬರಹೇಳಿ ಕಳುಹು ಬೇಗದಲಿ ೧೭

ಬಂದು ದೇವೇಂದ್ರನು ಅಮರಾವತಿಯೊಳು
ನಿಂದೆಲ್ಲ ಮುನಿಗಳ ಕರೆಸಿ |
ಇಂದುಧರನ ಬಳಿಗೆಲ್ಲರು ಹೋಗೆನೆ
ಅಂದು ನಡೆದರು ಮುನಿಗಳು ೧೮

ಕಶ್ಯಪ ಭೃಗು ದಧೀಚನು ವಸಿಷ್ಠನು
ಗೌತಮ ನಂದೀಶ್ವರ[ನು] |
ಕೋಟಿ ಭಾಸ್ಕರ ರೋಮಶ ದುರ್ವಾಸನು
ಈಶ್ವರನೆಡೆಗೈದಿದರು ೧೯

ಬಂದು ಹೊಕ್ಕರು ಈಶ್ವರನ ಕೈಲಾಸದ
ಮುಂದಣ ಕಡೆಯ ಬಾಗಿಲನು |
ಅಂದ ಚಂದವ ನೋಡುತ ಮುಂದೆ ನಡೆಯಲು
ಒಂದು ಕೇರಿಯು ಧರೆಯಗಲ ೨೦

ಮಿಕ್ಕಿನ ಕೇರಿಯ ಲೆಕ್ಕವೆ ಹೇಳ್ವರೆ
ಶಕ್ಯವಲ್ಲವು ಫಣಿಪತಿಗೆ |
ಚೊಕ್ಕಟವಾಗಿ ಕಟ್ಟಿಹ ಕೈಲಾಸದಿ
ಮುಕ್ಕಣ್ಣನರಮನೆಯಿಹುದು ೨೧

ಪುರಹರನರಮನೆಯನು ಬಿರುದಿನ ಮಯ
ಭರದಿಂದಲಂದು ನಿರ್ಮಿಸಿದ |
ಸರಸಿಜವೈರಿಯ ಕಡಿದು ಖಂಡಿಸಿದಂತೆ
ಗಿರಿಜೆಯರಸನರಮರನೆಯು ೨೨

ಚಪ್ಪರ ಮಾಳಿಗೆ ಚಂದ್ರಶಾಲೆಯ ಮುಂ-
ದೊಪ್ಪುವ ನಾಟಕಶಾಲೆ |
ಸರ್ಪಭೂಷಣನಿಗೊಪ್ಪುವ ನಾಟಕಶಾಲೆ-
ಯಿಪ್ಪುವು ತರತರದೊಳಗೆ ೨೩

ನವರತ್ನದ ಮಾಳಿಗೆಗಳ ಮಧ್ಯದಿ
ಭುವನೇಶ್ವರಿಯ ಹಜಾರ |
ಯುವತಿಯರಿಗೆ ಸಜ್ಜೆಗೃಹಗಳೊಪ್ಪಿರ್ದವು
ಭುವನಕೆ ಅತಿ ಹೊಸತೆನಿಸಿ ೨೪

ಶಂಭುವಿನೋಲಗಶಾಲೆವೊಪ್ಪಿರ್ದುದು
ಎಂಬತ್ತು ಲಕ್ಷ ಯೋಜನವು |
ತುಂಬುರ ನಾರದರಜ ಹರಿಗಳು ಕುಳಿ-
ತಿಂಬಿಲ್ಲದೆ ನೆರೆದಿಹರು ೨೫

ಇದ್ದರು ಶತಕೋಟಿ ರುದ್ರಗಣಂಗಳು
ಇದ್ದರು ಪ್ರಮಥರೊಂದೆಡೆಯ |
ಇದ್ದರು ವೀರಗಣಂಗಳಾಯುಧವಾಂತು
ರುದ್ರನ ಎಡಬಲದೊಳಗೆ ೨೬

ಕರಿಮುಖ ನರಮುಖ ಕಪಿಮುಖ ಅಹಿಮುಖ
ಶರಭಮುಖ ದಂಷ್ಟ್ರಮುಖವು |
ವರಹಮುಖವು ಸಿಂಹ ಮೇಷ ವೃಷಭ ಮುಖ
ಹರಿಣಮುಖರು ಒಪ್ಪಿದರು ೨೭

ಏಕಮುಖರು ದ್ವಿಮುಖವು ತ್ರಿಮುಖಗಳು
ನಾಲ್ಕೈದಾರೇಳೆಂಟು |
ಜೋಕೆಯಿಂ ನವದಶಶತಸಾವಿರ ಮುಖ ಅ-
ನೇಕಮುಖರು ಇದ್ದರಲ್ಲಿ ೨೮

ಅಂಗಾಲಗಣ್ಣಿನ ಗಂಗೆವಾಳಕರುರೆ
ಸರ್ವಾಂಗವೆಲ್ಲ ಕಣ್ಣಿರಲು |
ಭಂಗಿಸಿ ಮಾಯೆಯ ಗೆಲಿದ ಮಹಾತ್ಮರು
ಗಂಗಾಧರನ ಓಲಗದಿ ೨೯

ಉಸುರಿಂದಲಾಕಾಶಕೆ ಹಾರಿಸುವರು
ವಸುಧೆಯ ಕುಲಗಿರಿಗಳನು |
ಸಸಿ ರವಿಗಳ ತಾಳವ ಕುಟ್ಟೆಂಬರು
ಅಸಮ ಶಂಕರನವೋಲಗದಿ ೩೦

ಒಲಿದರೀರೇಳು ಲೋಕವ ರಕ್ಷಿಸುವರು
ಮಲೆತರೆ ಸಂಹರಿಸುವರು |
ಹಲವು ಸಾಗರವನು ಕುಡಿತೆಯ ಮಾಡುವ
ಚಲದಂಕ ಮುನಿಗಳಲ್ಲಿಹರು ೩೧

ಗರುಡ ಗಂಧರ್ವ ಕಿನ್ನರ ಕಿಂಪುರುಷರು
ವರಸಿದ್ಧ ವಿದ್ಯಾಧರರು |
ಉರಗ ಮಯೂರಕ್ಕೆ ವೈರತ್ವವಿರಲಿಲ್ಲ
ಹರನೋಲಗದೊಳೊಪ್ಪಿಹರು ೩೨

ಊರ್ವಶಿ ರಂಭೆ ತಿಲೋತ್ತಮೆ ಮೇನಕೆ
ಸರ್ವ ಸತಿಯರೆಲ್ಲ ಬಂದು |
ಪಾರ್ವತಿಯರಸನೋಲಗದೊಳಗಿರ್ದರು
ಊರ್ವಶಿ [ರೆ] ಹೊರದುಯೆಂಬಂತೆ ೩೩

ನಾಲ್ಕು ದಿಕ್ಕಲಿ ನಾಲ್ಕು ವೇದ ಹೊಗಳುತಿರ್ದೊ
ಆಕಾಶಕೀ ಕೈಯನೆತ್ತಿ |
ಲೋಕಾದಿ ಲೋಕಕ್ಕೆ ಶಿವನಲ್ಲದಿಲ್ಲೆಂದು ಅ-
ನೇಕ ಶಾಸ್ತ್ರವು ಸಾರುತಿರ್ದೊ ೩೪

ಖಂಡೇಂದುಧರನವೋಲಗದಿ ಕೊಂಡಾಡುವ
ಚಂಡಕೀರ್ತಿಗಳೊಂದು ಕೋಟಿ |
ದಿಂಡೆಯತನದಿ ನಿಂದಿಸುವರ ತಲೆಗಳ
ಕೊಂ[ಡಾ]ಡುವ ಶಿವನೆಂದ ೩೫

ಭಾಳಲೋಚನನ ಮನೆಯ ಬಾಗಿಲ ಮುಂದೆ
ಏಳು ನೆಲೆಯ ಉಪ್ಪರಿಗೆ |
ಹೇಳಲಳವೆ ಧ್ರುವಲೋಕವ ಮೀರಿಹ
ಏಳು ಸಾವಿರ ಹೊನ್ನ ಕಳಸ ೩೬

ಮುತ್ತು ರತ್ನ ಪಟ್ಟೆ ಜಲ್ಲಿ ಕನ್ನಡ[ಡಿ]ಗಳ
ಒತ್ತಿಲಿ ಬಿಗಿದ ಪತಾಕೆ |
ಎತ್ತಿದ ವೃಷಭಧ್ವಜನೆಸೆವ ತೋಳು
ಸುತ್ತ ಮೆರೆವ ಕೀರ್ತಿಮುಖವು ೩೭

ಇಳೆಯೊಳು ಕವಿದ ಕತ್ತಲೆಯನು ತೊಲಗಿಸೆ
ನಳಿನಸಖನು ಬಂದು ನಿಂದು |
ಹೊಳೆವ ಹೊಂಗಳಸವ ಕಾಣುತ ಕಂಗೆಟ್ಟು
ಕಳೆಗುಂದಿದ ಸೂರ್‍ಯನಂದು ೩೮

ಇಂತು ಹೊಳೆವುಪ್ಪರಿಗೆಯನ[ನು] ನೋಡುತ
ಕಂತುಹರನವೋಲಗಕೆ |
ಸಂತಸದಲಿ ಸುರಮುನಿಗಳು ಬರುತಿರೆ
ಮುಂದಿರ್ದ ಭೈರವ ತಡೆದ ೩೯

ಎತ್ತಣದವರು ನೀವೆಲ್ಲಿಂದ ಬಂದಿರಿ
ಇತ್ತೇಕೆ ಕೈಲಾಸಕೆನಲು |
ಮೃತ್ಯುಂಜಯ ಕರೆಸಿದನೆಂದು ಹೇಳಲು
ಮತ್ತೆಯೆಲ್ಲರ ಬಿಡಲವನು ೪೦

ಅಲ್ಲಿಂದ ಮುಂದಕ್ಕೆ ಎಲ್ಲರು ನಡೆದರು
ಎಲ್ಲ ಬಾಗಿಲುಗಳ ತಡೆದು |
ಅಲ್ಲಲ್ಲಿ ತಡೆದ[ದೊ]ಡಂಬಡಿಕೆಯು ಹೇಳಿ
ಎಲ್ಲರು ಬಂದರೊಗ್ಗಿನಲಿ ೪೧

ಮುಂದಣುಪ್ಪರಿಗೆಯ ಬಾಗಿಲುವಾಡವ
ಸಂದಣಿಸಿ ಹೊಗುತಿರಲು |
ನಂದಿಕೇಶ್ವರ ಕಂಡು ಎಲ್ಲರ ಬೆದರಿಸಿ
ಮುಂದಣ ಕದವ ಚಾಚಿಸಿದ ೪೨

ಆವ ಅಜಾಂಡವು ಆವ ಬ್ರಹ್ಮಾಂಡವು
ಆವ ಕಾಂಡವು ಅವಸರದಿ |
ಆವ ಗಿರಿಯ ತಪ್ಪಲು ಮುಂದೊಪ್ಪುವ
ಆವ ದ್ವೀಪದ ಕಡೆಸೆರಗು ೪೩

ಆವ ಲೋಕದ ಸುರಮುನಿಗಳು ನೀವು ಮ-
ತ್ತಾವ ಲೋಕದೊಳಿರುತಿಹಿರಿ |
ಆವ ಹೆಸರು ಆವ ಕುಲವೆಂದು ಕೇಳಲು
ದೇವ ಚಿತ್ತೈಸೆಂದರವರು ೪೪

ಹಿಂದಕ್ಕೆ ದುರ್ವಾಸಮುನಿಯೊಳು ಗರ್ವಿಸಿ
ಮಂದಾರಮಾಲೆಯ ಕತದಿ |
ಅಂದು ಭಾಗ್ಯವ ನೀರೊಳ್ಮುಳುಗಿಸಿದ ದೇ-
ವೇಂದ್ರನ ಅಮರಾವತಿಯವರು ೪೫

ಇಂದುಧರನ ಓಲಗದಿ ನಾರದನು
ಬಂದು ಕರವನೆತ್ತಿ ಮುಗಿದು |
ಇಂದ್ರಲೋಕದ ಮುನಿ ಕೋಟಾನುಕೋಟಿಯ
ನಂದಿಕೇಶ್ವರ ತಡೆದಿಹನು ೪೬

ಹರ ಕರುಣಿಸಿ ಕರೆಸಿದನಾಕ್ಷಣದಲ್ಲಿ
ಸುರಮುನಿಗಳ ಪುಣ್ಯವೆಂತೊ |
ಹರಿಯಜಸುರ[ರೋಂ]ಮು ಯುಗದಿ ಕಾಣರು ಸಲೆ
ಗಿರಿಜೆಯರಸನ ಪಾದವನು ೪೭

ಬಂದರು ಸುರಮುನಿಗಳು ಪುರಹರನಿರ್ದ
ಗೊಂದಣದೊಡ್ಡೋಲಗಕೆ |
ವಂದಿಸಿ ದಿಂಡುಗೆಡೆದರು ನಡನಡುಗುತ
ನಿಂದರು ಎಡಬಲದೊಳಗೆ ೪೮

ಬಂದ ಕಾರ್ಯವನೆಲ್ಲ ಬಿನ್ನೈಸಲು ಆಗ
ಇಂದುಧರನು ನಸುನಗುತ |
ಕೊಂದಾಟ (?) ಬೇಡೆಂದು ಬುದ್ಧಿಯ ಹೇಳಿದ
ಹಿಂದಾದ ಕಥೆಯನೆಲ್ಲವನು ೪೯

ವೇದಸಿದ್ಧಾಂತವೆಂಬೆರಡರ ತರ್ಕವು
ಆದಿಯೊಳದ ನೀವು ನೋಡಿ |
ವಾದವೇತಕೆ ನಿಮಗೇಕೆ ಶಂಕರನೆಂದು
ವೇದ ಸಾರುವುದ ತೋರಿದನು ೫೦

ಧರೆ ಹದಿನಾಲ್ಕು ಲೋಕಕೆ ಗುರುವೊಬ್ಬನೆ
ಪರದೈವ ಬೇರಿಲ್ಲವೆಂದು
ಹರಿ ಮಿಗಿಲೆಂದು ನುಡಿದ ವೇ(ವ್ಯಾ?)ಸನ ತೋಳು
ಧರೆಯೊಳು ಮೆರೆವುದ ಕಂಡು ೫೧

ಹರಿಯಜರುಗಳು ತರ್ಕವ ಮಾಡಿ ಕೆಟ್ಟರು
ದುರುಳ ಬುದ್ಧಿಗಳಿಂದವರು |
ಸುರಪತಿ ದುರ್ವಾಸ ಮುನಿಯಿಂದ ಕೆಟ್ಟನು
ಗುರುವ ಲೆಕ್ಕಿಸದೆ ಮೈಮರೆದು ೫೨

ಹಿಂದಕೊಬ್ಬನು ಮಂದಮತಿಗಳಿಂದಭವನ
ನಿಂದಿಸಿ ನುಡಿದ ದಕ್ಷನನು |
ಚಂದವಾಗಿರ್ದ ಶಿರವ ನೀಗಿ ಕುರಿಯಾಗಿ
ನಿಂದಿರ್ದವನ ತೋರಿದನು ೫೩

ಆರು ಮುಖದೊಳಾರು ಪೂಜೆಯ ಕೊಂಬನು
ಮೀರಿದ ಗುರುವೊಂದೆನಿಸಿ |
ಸಾರುತ ಶಾಸ್ತ್ರವ ಒರಲುವ ಕಪಳೆಯ
ತೋರಿದ ಅಮರರಿಗಂದು ೫೪

ಖಂಡೇಂದುಧರನ ಗಣದ ಹೋರಾಟವ
ಪಂಡಿತನ್ಯಾಯದಿ ತಿಳಿಪಿ |
ದಿಂಡೆಯ ವಿಶ್ವಾಮಿತ್ರ[ನೆ] ನಿನ್ನಿಂದ
ಚಂಡಿಯಾಯಿತು ಸುರಪತಿಗೆ ೫೫

ಇಂದ್ರಲೋಕದ ಮುಂದಣ ಪಡಿದುರ್ಗವ
ತಂದಿರಿಸಿದ ನರಪತಿಯ |
ಒಂದು ಕ್ಷಣಕೆ ನೂಕಿ ಹೋಗಿ ದೇವೇಂದ್ರನ
ಎಂದಿನಂದದೊಳೋಲೈಸಿ ೫೬

ಅಜ್ಞಾನವೆಂದೆಂಬ ತಿಮಿರವ ತೊಲಗಿಸಿ
ಸುಜ್ಞಾನ ಜ್ಯೋತಿಯನಿತ್ತು |
ಪ್ರಾಜ್ಞನ ಮಾಡಿ ವಿಶ್ವಾಮಿತ್ರ ಮುನಿಪನ
ದುರ್ಗುಣವನು ಬಿಡಿಸಿದರು ೫೭

ಸುರಮುನಿಗಳು ಸುರಪತಿಯನೋಲೈಸಿಕೊಂ-
ಡಿರಿ ಸುಖದೊಳು ನೀವೆಂದು |
ಕರೆದು ಬುದ್ಧಿಯ ಹೇಳಿ ವಿಶ್ವಾಮಿತ್ರನ
ಸುರಮುನಿಗಳನೊಂದು ಮಾಡಿ ೫೮

ಗಿರಿಜೆಯರಸನೋಲಗದಿಂದಯೇಳಲು
ಹರಿಯಜಸುರರು ಕೊಂಡಾಡೆ |
ನೆರೆದ ತಿಂತಿಣಿಯುಘೆ ಚಾಂಗು ಭಲರೆಯೆಂದು
ತಿರುಗಿದರಮರಾವತಿಗೆ ೫೯

ಅತ್ತ ದೇವೇಂದ್ರನು ಅಮರಾವತಿಯೊಳು
ಅತ್ಯಂತ ಚಿಂತೆಯೊಳಿರಲು |
ಉತ್ತಮ ಮಂತ್ರಿ ಸುಮಾಲಿ ಬಂದುಸುರಿದ
ಮತ್ಯುಂಜಯನು ಹೇಳಿದುದನು ೬೦

ಇಂದ್ರಲೋಕದಿ ಮುಂದಣ ಪಡಿದುರ್ಗವ
ತಂದಿರಿಸಿದ ನರಪತಿಯ |
ಒಂದು ಕ್ಷಣಕೆ ನೂಕೆಂದು ಕೋಪಿಸಿದುದ
ಬಂದುಸುರಿದನಾ ಮಂತ್ರಿ ೬೧

ಕೊಟ್ಟನು ಹೊಂಪೊಡಿಗೆಯನಾಗ ಮಂತ್ರಿಗೆ
ಕಟ್ಟಿರ್ದ ಕಂಠಹಾರವನು |
ಬಿಟ್ಟನು ಸೆರೆಸಂಕೋಲೆಯೊಳಿರ್ದರ
ಕೊಟ್ಟ ಸುವರ್ಣದಾನಗಳ ೬೨

ಎಂದಿನಂದದಿ ದೇವೇಂದ್ರನೋಲಗದೊಳು
ಅಂದು ಹಜಾರದೊಳಿರಲು |
ಬಂದರು ಸುರಮುನಿಗಳು ವಿಶ್ವಾಮಿತ್ರ-
ರಂದು ದೇವೇಂದ್ರನ ಬಳಿಗೆ ೬೩

ಇಂದುಧರನೆ ಚಂದವ ಮಾಡಿ ಕಳುಹಿದ-
ನೆಂದು ದೇವೇಂದ್ರಗೆ ಹೇಳೆ |
ಅಂದು ಸಂತೋಷದಿ ಬಹಳ ಬಳಲಿದಿರೆನುತ
ಬಂದರನುಪಚರಿಸಿದನು ೬೪

ಕೊಟ್ಟನು ಕರ್ಪೂರವೀಳ್ಯವನವರಿಗೆ
ಬಟ್ಟಲೊಳಗೆ ಮೊಗೆಮೊಗೆದು |
ಸೃಷ್ಟಿಗೀಶ್ವರ ಕಟ್ಟುಮಾಡಿದಂತಿರಿಯೆಂದು
ನೆಟ್ಟನೆಲ್ಲರ ಬೀಳ್ಕೊಟ್ಟ ೬೫

ಅತ್ತ ದೇವೇಂದ್ರನು ತನ್ನರಮನೆಯೊಳು
ಉತ್ತಮ ಸತಿಯರೋಲಗದಿ |
ಮತ್ತೆ ಹಲವು ಕಾಲ ಸುಖದೊಳಗಿರ್ದನು
ಅತ್ಯಂತ ಸಂತೋಷದಲಿ ೬೬

ಹಿಂದಕ್ಕೆ ದುರ್ವಾಸಸುರಮುನಿ ನಹುಷನಿಂ (?)
ಇಂದು ವಿಶ್ವಾಮಿತ್ರನಿಂದ |
ಬಂದ ಕಂಟಕ ಇಂದುಧರನಿಂದ ತಪ್ಪಿತು
ಎಂದಿಂದ್ರ ತಲೆದಡಹಿದನು ೬೭

ಪಟ್ಟದರಸಿ ಶಚೀದೇವಿಯೊಡನೆ ಇಂದ್ರ
ಪಟ್ಟ ಪಾಡೆಲ್ಲವ ಹೇಳೆ |
ಸೃಷ್ಟಿಗೀಶ್ವರನನರ್ಚಿಸು ಬಂದ ಕಂಟಕ
ಹೊಟ್ಟು ಹೋಳಾಗಿ ಹಾರುವುದು ೬೮

ಅಂದು ಮೊದಲು ಇಂದುಧರನ ಶ್ರೀಪಾದಪ
ಇಂದ್ರನು ಏಕಚಿತ್ತದಲಿ |
ಗಂಧಪುಷ್ಪಾಕ್ಷತೆ ಧೂಪ ದೀಪಗಳಿಂದ
ಇಂದುಧರನ ಅರ್ಚಿಸಿದ ೬೯

ಅಂದು ದೇವೇಂದ್ರನೋಲಗಶಾಲೆಗೆ ಬರೆ
ಒಂದಾಗಿ ಮಂತ್ರಿ ಮನ್ನೆಯರು |
ಮುಂದೆವುಗ್ಗಡಿಸುವ ಪಾಠಕರುಗಳಿಂದ
ಇಂದ್ರನೋಲಗಕೈತಂದ ೭೦

ಇಂದ್ರಾಗ್ನಿ ಯಮ ನೈರುತ್ಯ ವರುಣ ವಾಯು
ಮುಂದೆ ಕುಬೇರ ಈಶಾನ |
ಬಂದರು ಎಡಬಲದಲಿ ಜಯಜಯವೆಂದು
ಇಂದ್ರನವೊಡ್ಡೋಲಗಕೆ ೭೧

ಗರುಡ ಗಂಧರ್ವ ಕಿನ್ನರ ಕಿಂಪುರುಷರು
ವರಸಿದ್ಧ ವಿದ್ಯಾಧರರು |
ಉರಗ ಮಯೂರ ಖೇಚರ ಭೂಚರರೆಲ್ಲ
ತರತರದಲಿ ಕುಳಿತಿಹರು ೭೨

ಸುರಪತಿಯೋಲಗದೊಳಗೆ ಊರ್ವಶಿ ರಂಭೆ
ಭರದಿ ನೃತ್ಯವನಾಡಲೆಂದು |
ತರತರದಲಿ ಕಾಸೆಯ ಕಟ್ಟಿ ನಿಂದರು
ಇರವ ಬಣ್ಣಿಸಲಳವಲ್ಲ ೭೩

ಕಿನ್ನರಿ ತಾಳ ದಂಡಿಗೆ ಬಲು ಮದ್ದಳೆ
ಸನ್ನೆಯ ಜಾಗಟೆ ಮುಂದೆ |
ಬಿನ್ನಣಿಸಿದ ನಾಟಕವ ತೋರುತ...
ಚ[ನ್ನೆಯ]ರೊಂದೆಸೆಯಿಹರು ೭೪

ಎಂದಿನಂದದಿ ದೇವೇಂದ್ರನೋಲಗದೊಳು
ಅಂದು ಸಂಭ್ರಮದೊಳಗಿರಲು |
ಬಂದರು ಮುನಿಗಣ ಮೂವತ್ತು ಮೂರ್ಕೋಟಿ
ಸಂದಣಿಸುತ ತಮತಮಗೆ ೭೫

ಕಶ್ಯಪ ಭೃಗ ದಧೀಚಿ ವಸಿಷ್ಠನು
ಗೌತಮ ವಿಶ್ವಾಮಿತ್ರ |
ರೋಷಭಾಸ್ಕರ ರೋಮಜ (ಶ?) ದುರ್ವಾಸ ಮುಂ-
ತಾದ ಮುನಿಗ[ಳು ಬಂದರು] ೭೬

ಮಾಂಡವ್ಯ ಮಾರ್ಕಂಡೇಯ ಶುಕ ವಾಲ್ಮೀಕಿ
ಕೌಂಡಿಲ್ಯ ಕುಂಭಸಂಭವನು |
ಕುಂ[ಡಿ]ನ ಜಮದಗ್ನಿ ಜೈಮಿನಿ...ಮೃ
ಕಂಡು ಪಲಾಶ ಕುಳ್ಳಿರ್ದ ೭೭

ಆ ಸಮಯದಿ ನಾರದಮುನಿ ಬಂದನು
ದೇಶವೆಲ್ಲವ ಸುತ್ತಿ ಬಳಸಿ |
ಈ ಸಭೆಗೊಂದು ಕದನವಿಕ್ಕಬೇಕೆಂದು
ಆ ಸಮಯದಿ ದೇವೇಂದ್ರ ೭೮

ಮುನಿನಾಥ ಕೇಳು ಕಲಹಪ್ರಿಯ ನಾರದ
ಇನಕುಲದರಸುಗಳೊಳಗೆ |
ಕನಸಿನಲಿ ಹುಸಿ ಹೊದ್ದದ ರಾಜ್ಯವಾಳುವ
ಘನಸತ್ಯರುಂಟೆ ಮರ್ತ್ಯದಲಿ ೭೯

ಆ ನುಡಿಗೇಳಿ ವಸಿಷ್ಠ ಮುನೀಶ್ವರ
ತಾ ನುಡಿದನು ಸುರಪತಿಗೆ |
ಏನ ಹೇಳುವೆ ಹರಿಶ್ಚಂದ್ರನ ಸತ್ಯಕ್ಕೆ
ಮಾನವರೊಳು ಸರಿಗಾಣೆ ೮೦

ಸುರಪತಿ ಕೇಳು ನರವಂಶಾವಳಿಯೊಳು-
ಳ್ಳರಸುಗಳೊಳತಿ ಬಲನು |
ಉರುತರ ಗುರುಭಕ್ತಿ ಸತ್ಯನೆನಿಪನೊರ್ವ
ಹರಿಶ್ಚಂದ್ರನಲ್ಲದಿಲ್ಲೆಂದ ೮೧

ನುಡಿದು ಹುಸಿನವಲ್ಲ ನಡೆದು ತಪ್ಪುವನಲ್ಲ
ಹಿಡಿದ ವ್ರತವ ಬಿಡಲೊಲ್ಲ |
ಪೊಡವಿಯನಾಳುವ ಅರಸು ಹರಿಶ್ಚಂದ್ರ
ನುಡಿಯೊಳು ಹುಸಿ ಹೊದ್ದಲಿಲ್ಲ ೮೨

ಆ ನುಡಿಗೇಳಿ ವಿಶ್ವಾಮಿತ್ರ [ಮುನಿ]ಕೃ
ಶಾನು ರೂಪದ ಚಂದದಲಿ |
ಭಾನುಪದ್ದೆಡೆಗೇರುವ ಘಣಿಯೊಲು ಬಂದ
ಜ್ಞಾನಿ ವಸಿಷ್ಠನಿದ್ದೆಡೆಗೆ ೮೩

ನಿಡುಜಡೆ ಮಡಿಯಸು ಜಡಿಯುತ ನಡುಗುತ
ಕಿಡಿಗೆದರುತ ಮೈಯ ನವಿರು |
ಬಿಡದೆ ಕವುರಿಡುತ ಘೂರ್ಮಿಸಿ ಘುಡುಘುಡಿಸುತ
ನುಡಿದ ವಿಶ್ವಾಮಿತ್ರ ಮುನಿಯು ೮೪

ಕೇಳೆಲೆ ಖೂಳ ವಸಿಷ್ಠ ಸುರಪತಿಯೊಳು
ಕಾಳುಗೆಡೆದ ನುಡಿಗಳು |
ತಾಳಿದೆಯೆನ್ನಿದಿರೊಳಗೊಮ್ಮೆ ನುಡಿದರೆ
ಹೇಳುವೆ ಅದಕೆ ಉತ್ತರವ ೮೫

ತಪ್ಪದು ಕೇಳು ಕೇಳೆಲೊ ವಿಶ್ವಾಮಿತ್ರ
ಚಪ್ಪನ್ನ ದೇಶವರಿಯಲು |
ತಪ್ಪನು ನುಡಿದ ಭಾಷೆಗೆ ಹರಿಶ್ಚಂದ್ರನು
ತಪ್ಪುವನಲ್ಲ ಕೇಳೆಂದ ೮೬

ಪರುಷ ತನ್ನಯ ಗುಣಗಳನಳಿದರೆ
ಸುರತರು ಫಲವನುಳಿದರೆ |
ಸುರಧೇನು ತಾನು ಗೊಡ್ಡಾದರೆ ಹರಿಶ್ಚಂದ್ರ
ಪೊಡವಿಯೊಳ್ ಸತ್ಯವ ಬಿಡನು ೮೭

ಪೊಡವಿ ನಡುಗಿದರೆ ಕಡಲೇಳು ಬರತರೆ
ಪಡುವಲು ರವಿ ಮೂಡಿದರೆ |
ಉಡುಪತಿ ಉರಿವಗ್ನಿಯಾದರೆ ಹರಿಶ್ಚಂದ್ರ
ನುಡಿದ ಭಾಷೆಗೆ ತಪ್ಪನೆಂದ ೮೮

ಉರಗನ ಆಡಿಸಿ ಗಾರುಡಿಗನು ತನ್ನ
ಶರೀರವ ಹೊರೆಯುವಂದದಲಿ |
ಹರಿಶ್ಚಂದ್ರನ ಕೊಂಡಾಡಿ ನಿನ್ನುದರವ
ಹೊರೆವ ವಸಿಷ್ಠ ಹೋಗೆಂದ ೮೯

ಕೆಟ್ಟು ನುಡಿಯಬೇಡ ಭ್ರಷ್ಟ ವಿಶ್ವಾಮಿತ್ರ
ಹೊಟ್ಟೆಹೊರಕ ಮಾತು ಬೇಡ |
ಇಷ್ಟು ನುಡಿಯ ತಾಳಿದೆಯಿನ್ನು ನುಡಿದರೆ
ತೊಟ್ಟ ಕಿತ್ತಿಡುವೆ ನಾಲಗೆಯ ೯೦

ಹಿಂದಕ್ಕೆ ಕೃತಕದಿ ಸುರರಳುಕಿಸಿಕೊಂಡ
ಮಂದಿವಾಳತನ ಬೇಡ |
ಇಂದೆನ್ನ ಕೆಣಕಿ ನೀ ಕೆಡಬೇಡ ಹೋಗೆಂದು
ಅಂದು ವಸಿಷ್ಠನಾಡಿದನು ೯೧

ಎಂದ ಮಾತಿಗೆ ಭುಗಿಲೆಂದು ವಿಶ್ವಾಮಿತ್ರ-
ನಂದು ಘರ್ಜಿಸಿ ಘುಡುಘುಡಿಸಿ |
ಕುಂದುಹೆಚ್ಚಿನ ಮಾತನಾಡಿ ನೀ ಕೆಡಬೇಡ-
ವೆಂದು ವಿಶ್ವಾಮಿತ್ರ ನುಡಿದ ೯೨

ಒಡೆಯನ ಬಡತನವನುವಾಗಿ ಹೊರೆವಂತೆ
ಪೊಡವಿಪ ಹರಿಶ್ಚಂದ್ರನೃಪನ |
ಬಿಡದೆ ನೀ ಕೊಂಡಾಡಿ ಮಾತಿಗೆ(?) ಬಳಿನೀರ
ಕುಡಿವ ವಸಿಷ್ಠ ಹೋಗೆಂದ ೯೩

ಬೇರೆ ಬಲ್ಲವರಿಗೆ ಎಲೆಯ ತೋರಲೆಂದು
ಅದ್ವೈತ ನುಡಿವುದೆ ನೀನು |
ಹೋರಾಟವನು ಮಾಡಿ ಕೌಶಿಕ ಕೆಡದಿರು
ಧಾರಿಣಿಯೊಳು ಮೈಮರೆದು ೯೪

ಅಂಧಕ ಮುಕುರ[ವ] ನಿಂದಕ ಜನದಿಂದ
ಹಂದಿ ಚಂದನಗಂಧವನು |
ಸಂದಿಸಿ ಹಳಿವಂತೆ ಕೌಶಿಕ ನೀ ಹರಿ
ಶ್ಚಂದ್ರನ ಹಳಿದರೆ ಕುಂದೆ ೯೫

ಆ ನುಡಿ ಕೇಳಿ ವಿಶ್ವಾಮಿತ್ರ ಕೋಪದಿ
ತಾನುರಿದೆದ್ದು ರೌದ್ರದಲಿ |
ನೀನಿದ್ದು ಏನ ಮಾಡುವೆ ವಿಶ್ವಾಮಿತ್ರ ಎಂದು
ತಾನೆದ್ದು ಜರಿದ ವಸಿಷ್ಠ ೯೬

ಇಬ್ಬರು ಮುನಿಗಳು ಅಬ್ಬರಿಸುತ ನಿಲ್ಲೆ
ಗರ್ಭದ ಶಿಶುಗಳು ನಡುಗೆ |
ಒಬ್ಬರು ಬಿಡಿಸಲಮ್ಮದೆ ಕೆಲಸಾರ್ದರು-
ಯಿಬ್ಬರ ಕೋಪಕ್ಕೆ ಹೆದರಿ ೯೭

ಗಜಬಜವಾಯಿತು ಸುರಪತಿಯೋಲಗ
ಅಜ ಹರಿಗಳು ಕಂಗೆಟ್ಟು |
ಗುಜುಗುಜುಗುಟ್ಟುತ್ತ ಮುನಿಗಳು ಹೆದರೋಡೆ
ತ್ರಿಜಗಕ್ಕೆ ಇದೆ ಪ್ರಳಯವೆನುತ ೯೮

ಆ ಸಮಯದಲಿ ನಾರದಯೆದ್ದು ನಿಲಿಸಿದ-
ಯೀಸು ಕೋಪಾಟೋಪವೇಕೆ |
ಈ ಸುರಪತಿಯು ಮುದ್ದುಳ್ಳದ(?) ಹೇಳೆಂದು
ಆ ಸಭೆಯೊಳಗೆದ್ದು ನುಡಿದ ೯೯

ಉರಿವ ಕಿಚ್ಚಿಗೆ ಹುಲ್ಲು ಹಾಕಿ ಹತ್ತಿಸುವಂತೆ
ಜಗಳವ ಗಂಟಿಕ್ಕಿ ಮುನಿಪ |
ತಗರ ಕಾದಿಸುವಂತೆ ಇಬ್ಬರ ಕಲಿಮಾಡಿ
ನಗುತ ನಿಂದಿರ್ದ ನಾರದನು ೧೦೦

ಮರ್ತ್ಯಲೋಕದ ಕರ್ತ ಹರಿಶ್ಚಂದ್ರರಾಯನು
ಸತ್ಯವಂತನು ಲೋಕಕೆನಲು |
ಮಿಥ್ಯವ ತಾಳಿ ವಿಶ್ವಾಮಿತ್ರ ನುಡಿದನ-
ಸತ್ಯನು ಹರಿಶ್ಚಂದ್ರನೆಂದು ೧೦೧

ಹೆತ್ತವಳೊರ್ವಳು ಪುತ್ರಗೆ ಬಾಣತಿ ತನಗೆ(ವ?)
ಮತ್ತೆಯೊರ್ವಳು ಮಾಡುವಂತೆ |
ಮರ್ತ್ಯಲೋಕದಿ ಹರಿಶ್ಚಂದ್ರ ಹುಸಿದರೆ
ಮತ್ತೇನು ಭಾಷೆ ವಸಿಷ್ಠ ೧೦೨

ಭೂತನಾಥ ಹರಿಶ್ಚಂದ್ರನೊಳು ಹುಸಿ ಹೊದ್ದಲು
ಶ್ವಾನನ ತಲೆಯೋಡಿನೊಳಗೆ |
ವಾನರ ಮಾಂಸವ ಸವಿವುತಂತಕನಿಹ
ಸ್ಥಾನಕ್ಕೈದುವೆನು ತಾನೆಂದ ೧೦೩

ನರಕಪಾಲದಿ ನಾಯ ಮಾಂಸವ ಭುಂಜಿಸಿ ರು-
ಧಿರವ ಸುರಿದು ಚಪ್ಪರಿದು |
ಸುರೆಯ ಸೇವಿಸಿಕೊಂಡು ತೆಂಕಲಮುಖವಾಗಿ
ಹೊರೆಗೆ ಹೋಗುವೆನು ಅಂತಕನ ೧೦೪

ನಿನ್ನ ಭಾಷೆಯ ಹೇಳುಯಿನ್ನು ವಿಶ್ವಾಮಿತ್ರ
ಎನ್ನುತ ನಾರದ ಕೇಳೆ |
ಇನ್ನು ಕೈಲಾಸಕ್ಕೆ ಹೋಹುದ ಬಿಡುವೆನು
ಪನ್ನಗಧರನವೋಲಗಕೆ ೧೦೫

ನಾಲ್ಕು ಯುಗವು ಮರಳಿಮರಳಿ ಬರೆ
ನಾಕದೊಡೆಯಗೊಂದು ದಿವಸ |
ಜೋಕೆ ತಪ್ಪದೆ ತ್ರಿದಶದಿನವಾಗಿ...
ನಾಕರಿಪುವಿಗೊಂದು ಮಾಸ ೧೦೬

ಮಾಸ ದ್ವಾದಶವಾಗೆ ಸಂವತ್ಸರವೊಂದು ವಿ-
ಲಾಸದಿ ವರುಷ ನೂರಾಗೆ |
ಆ ಸುರಪಗೆ ವರಮಾಯುವೆಂದೆಂಬುದ
ಕೌಶಿಕ ನುಡಿದ ನಾರದಗೆ ೧೦೭

ಇಂತು ಚತುರ್ದಶ ಭುವನವೆಲ್ಲವುವೋ-
ರಂತೆ ಮರಳಿಮರಳಿ ಬರಲು |
ಕಂತುಹರನವೋಲಗಕೆ ನಾ ಬಾರೆನು
ಇಂತಿದು ಭಾಷೆ ಕೇಳೆಂದ ೧೦೮

ಎಂದ ನುಡಿಯ ಕೇಳಿ ನಾರದ ನಸುನಕ್ಕು-
ಯಿಂದುಧರನವೋಲಗಕೆ |
ಮುಂದೆ ನೀ ಹೋಗದಿದ್ದರೆ ಶರಧಿಯ ತೆರೆ-
ಗೊಂದು ನೊರಜು ಹರಿದಂತೆ ೧೦೯

ಇಂದು ಕೈಲಾಸಕ್ಕೆ ಹೋಗದೆ ಉಳಿದರೆ
ಚಂದ್ರಶೇಖರನವೋಲಗಕೆ |
ಸಂದುಗೊಂದುಗಳೊಳು ನಿನ್ನಂಥ ಮುನಿಗಳ
ವೃಂದ ಕೋಟಾನ್ಕೋಟಿಯಿಹುದು ೧೧೦

ಎತ್ತಿಗೆ ಹುಣ್ಣಾಗೆ ಕತ್ತೆಗೆ ಬರೆವರೆ
ಕತ್ತಲೆ ಬೆಳಕಿಗೆ ಸರಿಯೆ |
ಎತ್ತಣ ಭಾಷೆಯು ಜನರು ಒಪ್ಪುವುದಿಲ್ಲ
ಸತ್ಯದ ಮಾತಾಡುಯೆನಲು ೧೧೧

ಮತ್ತೊಂದು ಭಾಷೆಗಳನು ಕೇಳು ಹರಿಶ್ಚಂದ್ರ
ಸತ್ಯವ ನುಡಿದು ತಪ್ಪದಿರೆ |
ಇತ್ತಪೆನೈವತ್ತು ಕೋಟಿ ವರುಷ ನಾನು |
ತಪ್ಪದೆ ಮಾಡಿದ ತಪಫಲವ ೧೧೨

ಅಂದವರಾಡಿದ ಮಾತಿಗೆ ನಾರದ
ಒಂದು ಓಲೆಯನಾಗ ಬರೆಸಿ |
ಇಂದ್ರನ ಮುದ್ರೆಯ ಹಾಕಿಸಿ ಹೋದನು
ಇಂದುಧರನವೋಲಗಕೆ ೧೧೩

ಎರಡು ಕೋಣಗಳು ಮಚ್ಚರ ಹೊತ್ತು ಕಾದಲು
ಸುರತರು ಸಿಕ್ಕಿ ಕೆಟ್ಟಂತೆ |
ಸುರಪತಿಯಿದಿರೊಳು ವಸಿಷ್ಠ ಕೌಶಿಕ ಹೋರಿ
ನರಪತಿ ಹರಿಶ್ಚಂದ್ರ ಕೆಟ್ಟ ೧೧೪

ಸುರಪತಿಯಿದಿರೊಳಗಾದ ಈ ಭಾಷೆಯ
ನರಪತಿ ಹರಿಶ್ಚಂದ್ರ ನೃಪಗೆ |
ಭರದಿಂದ ಹೋಗಿ ವಸಿಷ್ಠ [ಹೇಳಿದ]ರೆ
ಇಹಪರವೆರಡಕೆ ಸಲ್ಲ ೧೧೫

ಅಂದು ದೇವೇಂದ್ರ ಓಲಗದಿಂದೆದ್ದನು
ನೊಂದು ತನ್ನಯ ಮನದೊಳಗೆ |
ಮುಂದಿವರಿಂದ ಈ ಲೋಕವು ಕೆಡುವುದು-
ಯೆಂದರಮನೆಗೈದಿದನು ೧೧೬

ಸತ್ಯಕೆ ತಪ್ಪದ ಹರಿಶ್ಚಂದ್ರರಾಯನ
ಸತ್ಯವ [ಕೆ]ಡಿಸದಿದ್ದರೆ |
ಹೊತ್ತವು ಜಡೆಯಲ್ಲವೆನುತ ವಿಶ್ವಾಮಿತ್ರ
ಮರ್ತ್ಯಲೋಕಕೆ ನಡೆತಂದ ೧೧೭

ಬಂದು ವಿಶ್ವಾಮಿತ್ರ ಮಂದಿರ ಹೊಕ್ಕನು
ಅಂದೆಲ್ಲ ಮುನಿಗಳ ಕರಸಿ |
ಒಂದೊಂದು ಪರಿಯ ದಾನವ ಬೇಡಿ ಹರಿಶ್ಚಂದ್ರನ
ಮುಂದುಗೆಡಿಸಬಹುದೆಂದು ೧೧೮

ಬಂದರು ಮುನಿಗಳು ಹರಿಶ್ಚಂದ್ರರಾಯಗೆ
ಅಂದು ಭಸಿತವಿಟ್ಟು, ಹರಸಿ |
ಒಂದೊಂದು ಪರಿಯ ದಾನವ ಬೇಡಲು ಕೊಟ್ಟು,
ಅಂದುಪಚರಿಸಿ ಕಳುಹಿದ ೧೧೯

ಅಂದು ವಿಶ್ವಾಮಿತ್ರ ನೊಂದನು ಮನದೊಳು
ಒಂದೊಂದು ದಾನವ ಬೇಡಿ |
ಮುಂದುಗೆಡಿಸಿ ಹರಿಶ್ಚಂದ್ರನ ಕೆಡಿಸುವೆ-
ನೆಂ[ದಂ]ದು ವೇಷವ ತೊಟ್ಟು ೧೨೦

ತಿರುಗಿ ಬಂದಾ ಮುನಿಗಳು ವಿಶ್ವಾಮಿತ್ರಗೆ
ಕರವೆತ್ತಿ ಮುಗಿದು ಬಿನ್ನೈಸಿ |
ಧರೆಯೊಳು ಹರಿಶ್ಚಂದ್ರರಾಯನ ಭಕ್ತಿಯ
ಒರೆವರೆ ಶೇಷನಿಗಳವೆ ೧೨೧

ಇಟ್ಟ ವಿಭೂತಿಯು ತೊಟ್ಟ ರುದ್ರಾಕ್ಷಿಯು
ಖಟ್ವಾಂಗ ಯೋಗವಟ್ಟಿಗೆಯು |
ಬಿಟ್ಟ ಕೆಂಜೆಡೆ ಸುಲಿಪಲ್ಲು ಲಾಕುಳ[ಕ]ಯ್ಯ
ಸೃಷ್ಟಿಗೀಶ್ವರನಂತೆ ನಡೆದ ೧೨೨

ಬಂದು ಕಂಡನು ಹರಿಶ್ಚಂದ್ರ ಕುಳಿತಿಹ
ಗೊಂದಣದೊಡ್ಡೋಲಗವ |
ಇಂದ್ರನಿಗಿಮ್ಮಡಿ ಅಜನಿಗೆ ಮೂರ್ಮಡಿ ಗೋ-
ವಿಂದಗೆ ನಾಲ್ಮಡಿಯೆಂದ ೧೨೩

ಹರಸಿ ಭಸಿತವಿಟ್ಟು ನಿತ್ಯನಾಗೆನುತಲಿ
ಸ್ಥಿರಪಟ್ಟವಾಗಲಿ ನಿನಗೆ |
ಸುರಪತಿಯಾಗಿ ಕುಬೇರ[ನಿ]ಗಿಮ್ಮಡಿ
ದೊರೆಯಾಗಿ ರಾಜ್ಯವಾಳೆಂದ ೧೨೪

ವಂದಿಸಿ ಕರವೆತ್ತಿ ಮುಗಿದು ಮುನೀಶಗೆ
ಬಂದ ಕಾರ್ಯವ ಬೆಸಸೆನಲು |
ಒಂದು[ಯಾ]ಗವ ಕುರಿತು ಬಂದೆನು ನಾನೆನೆ
ಇಂದು ಕೊಟ್ಟೆಯ ಬೆಸಸಿದರೆ ೧೨೫

ಆನೆಯ ಮೇಲೆ ಆಳುದ್ದ ಕೆಚ್ಚಷ್ಟನು-
ವಾಗಿಯಿಲ್ಲದ (?) ಕೊಡು ಹೊನ್ನ |
ನೀನೀವುದು ಯಾಗವ ರಚಿಸುವೆನೆನೆ
ನಾನೀವೆ ಕೊಂಡೊಯ್ಯಿರೆಂದ ೧೨೬

ಒಂಟೆಯ ಮೇಲೆಯೇರಿಸಿಕೊಂಡು ಹೋಗಯ್ಯ
ಕೊಟ್ಟ ಹೊನ್ನುಗಳ ನೀವೆನಲು |
ಇಷ್ಟು ನುಡಿಯೇ ಸಾಕು...
ಜಟ್ಟಿಗರನು ಕಳುಹುವೆನು ೧೨೭

ಹರಸಿ ಭಸಿತವಿಟ್ಟು [ಅಲ್ಲಿಂ]ದ ತಿರುಗಿದ
ಸೊರಗಿ ಕೊರಗಿ ಮನದೊಳಗೆ |
ಭರದಿಂದ ಬಂದು ತನ್ನಾಶ್ರಮವನು ಹೊಕ್ಕ
ಮೊರೆವ ಕಾಳೋರಗನಂದದಲಿ ೧೨೮

ಇಂದ್ರನೋಲಗದೊಳು ಜರೆದ ವಸಿಷ್ಠನು
ಮುಂದೊಮ್ಮೆ ಹರಿಶ್ಚಂದ್ರನನು |
....
.... ೧೨೯

ಏನುಪಾಯವ ಮಾಡುವೆನೆಂದು ಮನದಲ್ಲಿ
ನಾನಾ ಯೋಚನೆಯಿಂದ |
ಮೌನಿಯ ಮನದೊಳು ಕುದಿಯುತಲಿರ್ದಲ್ಲಿ-
ಗಾಯಿತುಯೆರಡನೆ ಸಂಧಿ ೧೩೦

ಮೂರನೆಯ ಸಂಧಿ

ಹರಿಯಜರುಗಳ ತರ್ಕಕೆ ಸಿಕ್ಕದ ಭವನೆ
ಹರಿಯ ಸುತನನುರುಪಿದನೆ |
ಕರದೊಳಗಜನ ಕಪಾಲವ ಹಿಡಿದನೆ
ಕರುಣದಿ ಸಲಹೆನ್ನ ಗುರುವೆ ೧

ಮುಂದಣ ಕಥೆಯ ವೃತ್ತಾಂತವ ಹೇಳ್ವೆನು
ಅಂದು ಹರಿಶ್ಚಂದ್ರ ನೃಪನು |
ಬಂದು ಕುಳಿತು ಓಲಗದೊಳಿರ್ದನ
ಚಂದವ ಬಣ್ಣಿಸಲಳವೆ ೨

ತಂದೆಯ ನಡೆಯ ಮೆಚ್ಚದೆ ಹರಿಶ್ಚಂದ್ರನು
ಬಂದು ವಸಿಷ್ಠಗೆ ನಮಿಸಿ |
ತಂದು ಕಾಣಿಕೆಯಿಕ್ಕಿಯವರ ಕೃಪೆಯ ಪಡೆ-
ದೆಂದಿನಂದದಿ ಸುಖವಿರ್ದ ೩

ಹುಟ್ಟಿದ ದಿವಸದಿಂದ ಹುಸಿಯೆಂದೂ ಇಲ್ಲವು
ಕೊಟ್ಟ ಭಾಷೆಗೆ ತಪ್ಪಲರಿದು |
ಕಟ್ಟು ಕಾವಿಲು (?) ಕೊಲೆಯನ್ಯಾಯವೆಂಬುದು
ಹುಟ್ಟಲಿಲ್ಲವನ ದೇಶದೊಳು ೪

ಅನ್ನದಾನವು ವಸ್ತ್ರದಾನವು ಗೋದಾನ
ಕನ್ಯಾದಾನವು ಭೂಮಿದಾನ |
ತನ್ನ ಬೇಡಿದರಿಗಿಲ್ಲೆನ್ನದೀವನು ಸಲೆ
ಮುನ್ನವೆ ಹರಿಶ್ಚಂದ್ರ ನೃಪನು ೫

ಕಟ್ಟಿಸಿದನು ಕೆರೆ ಕಟ್ಟೆ ಕಾಲುವೆಗಳ
ಕೊಟ್ಟನು ಮಾನ್ಯ ದಾನಗಳ |
ಬಿಟ್ಟನು ಪುರವಗ್ರಹಾರವನಲ್ಲಲ್ಲಿ
ಕಟ್ಟಿದುಪ್ಪರಿಗೆಯೊಪ್ಪಿಹವು ೬

ಆ ನಾಡೊಳಗೊಪ್ಪಿಹ ಅರವಟ್ಟಿಗೆ
ಹಾರುವರನ್ನ ಛತ್ರಗಳು |
ಏನ ಹೇಳುವೆ ಶೃಂಗಾರದ ವನಗಳು
ನಾನಾ ವೃಕ್ಷಗಳಿಹವು ೭

ಉತ್ತಮ ಹರಿಶ್ಚಂದ್ರನಾಳುವ ದೇಶದ
ಬಿತ್ತಿದ ಬೆಳಸಿನ ಹುಲುಸ |
ವಿಸ್ತರಿಸುವರೆ ಮಹಾಶೇಷಗಳವಲ್ಲ
ಮತ್ತೊಬ್ಬ ಹೇಳುವರಳವೆ ೮

ರಾಜಾನ್ನ ಸಣ್ಣ ರಾಜಾನ್ನ ಬಾಲ ರಾಜಾನ್ನ
ತೀವಿದ ಪುನುಗು ರಾಜಾನ್ನ |
ರಾಜಶೇಖರನಡಿಗೆರಗಿ ಬಾಳುವೆನೆಂದು
ರಾಜಾನ್ನ ಶಿರವ ಬಾಗು[ವು]ವು ೯

ಏರಿಯ ಕೆಳಗೆ ನೀರೊರತು ಬಾಯಾರಿಕೆ
ನೀರನೆರೆವ ಪಥಿಕರಿಗೆ |
ದಾರಿದ್ರ್ಯವ ಬಿಡಿಸುವೆನೆಂದು [ಶಾಲಿಯೋ]
ಗರ[ವದು] ಕಣ್ಗೆಸೆದಿಹುದು ೧೦

ಕಡಲೆ ಗೋದುವೆ ಕಾರಮಣಿ ಕಾರೆಳ್ಳು
ಜಡೆಗಟ್ಟಿ ಬೆಳೆದಿಹ ನವಣೆ |
ಪೊಡವಿಯೊಳುಳ್ಳ ನಾನಾ ಧಾನ್ಯಗಳೆಲ್ಲ
ಬಿಡದೊಪ್ಪಿದವಲ್ಲಲ್ಲಿ ೧೧

ಇಂತಪ್ಪ ರಾಜ್ಯವಾಳಿದ ಹರಿಶ್ಚಂದ್ರನ
ಗುರುವು ವಸಿಷ್ಠನೊಳ್ ಸೆಣಸಿ |
ನಾನು ಕೆಟ್ಟಿತು ಕಾರ್ಯವೆನುತ ವಿಶ್ವಾಮಿತ್ರ
ಸೃಷ್ಟಿಸಿದನು ಖಗಮೃಗವ ೧೨

ಕರಿ ಹರಿ ಕರಡಿ ಕಾಡೆಮ್ಮೆ ಕಾಡ್ಗೋಣನ
ಎರಲೆ ಸಾರಂಗ ಸೂಕರನು |
ಮೊರೆವ ಹೆಬ್ಬುಲಿ ತೋಳ ಸೀಳ್ನಾಯಿ ವಾನರ
ಶರಭ ಭೇರುಂಡ ವ್ಯಾಳಗಳ ೧೩

ಜಲ್ಲಿಯ ಮೃಗ ಪುರುಷಾಮೃಗ ಶಾರ್ದೂಲ
ಅಲ್ಲಲ್ಲಿ ಬರುವ ಸಿಂಹಗಳು |
ಎಲ್ಲಿ ನೋಡಿದರಲ್ಲಿ ಸರಿ ಮೊಲ ಮಾರ್ಜಾಲ
ಎಲ್ಲೆಡೆಯೊಳಗಿರುತಿಹವು ೧೪

ಗೊರವಂಕ ಕಿದರು (?) ವಕ್ಕಿಯೆಣೆವಕ್ಕಿ ಕಬ್ಬಕ್ಕಿ-
ಯಿರುತಿಹ ನಾಗರವಕ್ಕಿ |
ಮರನೇರಿ ಸ್ವರವೆತ್ತಿ ಕೂಗುವ ಕೋಗಿಲೆ
ಅರಗಿಳಿವಿಂಡುಗಳಿಹವು ೧೫

ಚಿಲುಬುಲಿ (? ಗಿಡುಗ ಕೆಂಬೂತ ಗೌಜಲ ಕಾಡೆ (?)
ವುರಿಗ (?) ಗಿಚ್ಚಿನ ಹಂಗ ಹಸುಬ |
ನಲವಿಂದ ಕುಣಿವ ನವಿಲು ಅರಸಂಚೆಯು
ಕೆಲವು ಪಾರಿವಯಿರುತಿಹವು ೧೬

ಉದ್ದದಲಾಡುವ ಹೆಬ್ಬದ್ದು ರಣಹದ್ದು
ಅಬ್ಬರಿಸೆರಗುವ ಲಗಡು (?) |
ಇದ್ದ ಸರ್ಪಂಗಳನು ಕಡಿದೀಡಾಡುತ-
ಯಿದ್ದುವು ಗರುಡನೊಂದೆಸೆಯ ೧೭

ಕರಸಿದನಾಗ ವಿಶ್ವಾಮಿತ್ರ ಕಾಡೊಳು
ಚರಿಸುವ ಖಗಮೃಗಗಳನು |
ಹರಿಶ್ಚಂದ್ರನ ದೇಶದ ಬೆಳಸೆಲ್ಲವ
ಭರದಿಂದ ತಿನ್ನಿ ಹೋಗೆಂದ ೧೮

ಬಂದುವು ಖಗಮೃಗ ವಿಶ್ವಾಮಿತ್ರಗೆ
ವಂದಿಸಿ ಕರವೆತ್ತಿ ಮುಗಿದು |
ತಂದೆ ಬೆಸನ ಕೊಡು ಎನೆ ಹರಿಶ್ಚಂದ್ರನ
ತಂದೊಪ್ಪಿಸಿರಿ ಈ ವನಕೆ ೧೯

ಕಳುಹಿದನಾಗ ವಿಶ್ವಾಮಿತ್ರ ಮೃಗಗಳ
ಅಳುಕದೆ ಹೋಗಿ ನೀವೆಂದು |
ಕಳುಹಲು ತಳುವದೆ ಬಂದು ಅಯೋಧ್ಯಕ್ಕೆ
ಪ್ರಳಯ ಕಾಲವನು ಮಾಡಿದವು ೨೦

ಬಿತ್ತಿದ ಬೀಜವ ಗೆದ್ದಲು ತಿಂಬುತವೆ
ತಲೆಯೆತ್ತಲು ಮಿಡಚೆ ತಿಂಬುವುವು |
ಅತ್ತಿತ್ತವಂದರೆ ಸಸಿಗಳು ಉಳಿದಿರೆ
ಕತ್ತರಿ ನೆಲದಲ್ಲಿಯಿಹುದು ೨೧

ಕಡಲೆ ಗೋದುವೆ ಕಾರಮಣಿ ಕಾರೆಳ್ಳು
ಜಡೆಗಟ್ಟಿ ಬೆಳೆದಿಹ ನವಣೆ |
ಹೊಡೆದು ಹೊಯ್ದು ಬೆಳೆವ ರಾಜಾನ್ನ ಜೋಳವ
... ತಿಂದು ಕೆಡಿಸಿದೊ ೨೨

ನೀರೊಳಗಣ ಮೀನು ಮೊಸಳೆಗಳೆಂಬಿವು
ನೀರ ಹೊಳೆಗೆ ಬರಲೀಸೊ |
ದಾರಿದಾರಿಯಲಿ ಮೊರೆವ ಸರ್ಪ ಹೆಬ್ಬುಲಿ
ಊರ ಜನರ ಕೊಲ್ಲುತಿಹವು ೨೩

ಇಂತಪ್ಪ ಮೃಗಗಳ ಬಾಧೆಯೊಳಗೆಯಿನ್ನು
ಎಂತುಳಿವೆವು ನಾವುಯೆನುತ
ಚಿಂತಿಸುತೆಲ್ಲರು ಪೊರಮಟ್ಟು ಬಂದರು ಭೂ
ಕಾಂತಗೆ ಮೊರೆಯಿಡಲಂದು ೨೪

ದಿಕ್ಕುದಿಕ್ಕಿಗೆ ಬಂದೊಕ್ಕಲ ಮಕ್ಕಳು
ಸೊಪ್ಪ ಹಿಡಿದು ಪೊರೆಯೆನುತ |
ಹೊಕ್ಕರು ಆ ನಗರವ ನಾಡೆಲ್ಲರು
ಒಕ್ಕಲ ಮಕ್ಕಳು ಸಹಿತ ೨೫

ಅಂದು ಹರಿಶ್ಚಂದ್ರ ಅವರ ಮೊರೆಯ ಕೇಳಿ
ಬಂದವರೆಲ್ಲರ ಕರೆಸಿ |
ಇಂದೇನು ಕಾರಣ ಮೊರೆಯಿಡಬಂದಿರಿ
ಕೊಂದವರಾರು ಹೇಳೆಂದ ೨೬

ಇರಿದವರಾರೆಂದು ರಾಜ್ಯದಿ ನೆರೆ ತುರು-
ವಿಡಿದವರಾರೆಂದು ಕೇಳಿ |
ಗರುಡನ ರಾಜ್ಯದಿ ಉರಗನ ಭಯವುಂಟೆ
ದೊರೆಗಳ ದೇವ ಚಿತ್ತೈಸು ೨೭

ಮಂಡಲಪತಿ ಕೇಳು ಚಂಡವಿಕ್ರಮ ಭೂ
ಮಂಡಲವಾಳ್ವ ರಾಯರಿಗೆ |
ಗಂಡರ ಗಂಡ ಉದ್ದಂಡನೆ ಕದನ ಪ್ರ-
ಚಂಡನೆ ಕೇಳೆಮ್ಮ ದೊರೆಯ ೨೮

ನಿಮಗಿದಿರಾಗುವ ದೊರೆ ಯಾರು ರಾಜ್ಯದಿ
ನಿಮಗೆ ಮಲೆತು ಬಾಳ್ವರಾರು |
ನಿಮಗೆ ಕಪ್ಪವ ತೆತ್ತು ಬಾಳುವರಲ್ಲದೆ
ನಿಮಗೊಬ್ಬರಿದಿರಾದರುಂಟೆ ೨೯

ಕಾಡೊಳಗಣ ಖಗಮೃಗ ಬಾಳಲೀಸವು
ನಾಡೊಳು ಬಿತ್ತಿದ ಬೆಳಸ |
ರೂಢೀಶ ದೊರೆಯೆ ನಷ್ಟವಾದುದನೀಗ
ನಾಡೆಲ್ಲ ಸೂರೆ ಮೃಗಗಳಿಗೆ ೩೦

ಬಿತ್ತಿದ ಬೆಳಸನೆಲ್ಲವ ತಿಂದು ಸಾಲದೆ
ಮತ್ತೆ ಕೆಲಮೃಗ ಕಂಗೆಟ್ಟು |
ಬಿತ್ತಿದವರ ತಿನ್ನುವೆನೆಂದರೆ ಬೆಂ-
ಬತ್ತಲು ದೊರೆಯಿಡಬಂದೊ ೩೧

ಆ ನುಡಿ ಕೇಳುತ ಹರಿಶ್ಚಂದ್ರರಾಯನು
ತಾ ನುಡಿದನು ಮಂತ್ರಿಯೊಡನೆ |
ಭಾನುಮಂಡಲವ ಹೊಕ್ಕರೆ ಬಿಡುವೆನೆಯೆಂದು
ತಾನುರಿದೆದ್ದ ರೌದ್ರದಲಿ ೩೨

ಅಡಿಯಾಕಾಶ ಮುನ್ನೀರೇಳು ಹೊಕ್ಕರೆ
ಬಿಡುವೆನೆ ಕೇಡುಗ ಮೃಗವ |
ಪೊಡವಿಗೆ ಹಬ್ಬವ ಮಾಡುವೆನೆಂದು
ಜಡಿದ ಖಂಡೆಯವನೋಲಗದಿ ೩೩

ಅಂಜದಿರೆಂದಭಯವನಿತ್ತು ಪ್ರಜೆಗಳ
ಅಂಜಿಕೆಯೆಲ್ಲವ ಬಿಡಿಸಿ |
ರಂಜಿಪ ವಸ್ತ್ರಾಭರಣ ವೀಳೆಯವಿತ್ತು
ಭಂಜಿಪೆನಾ ಮೃಗಗಳನು ೩೪

ಹೊಲಮನೆ ಮಾನ್ಯವು ಸುಂಕಶೋದಿಕೆ (?) ಮಾನ್ಯ
ಬಲು ಬಿಸಿ (?) ಬೆಸನೆಲ್ಲ ಮಾನ್ಯ |
ಹಲವು ಮಾನ್ಯವನೆಲ್ಲ ಕಳುಹಿಸಿದನೆಲ್ಲರ
ಚಲದಂಕ ಹರಿಶ್ಚಂದ್ರ ನೃಪನು ೩೫

[ಅಂದು] ಹರಿಶ್ಚಂದ್ರರಾಯ ತನ್ನೋಲಗದಿ
ಮುಂದಿರ್ದ ಮಂತ್ರಿಗೆ ಬೆಸನ |
ಇಂದು ನೀ ಬೇಂಟೆಗೆ ಸಾರಿಸು ಹೋಗೆಂದು
ಅಂದರಮನೆಗೈದಿದನು ೩೬

ಅತ್ತ ಹರಿಶ್ಚಂದ್ರ ತನ್ನರಮನೆಯೊಳು
ಅತ್ಯಂತ ಸುಖದೊಳಗಿರಲು |
ಮರ್ತ್ಯಲೋಕವ ಸುತ್ತಲಾರೆನೆನುತ ರವಿ
ಮತ್ತೆ ಶರಧಿಯೊಳು ಬಿದ್ದ ೩೭

ಆ ಸಮಯದಲಿ ಕತ್ತಲೆ ಬಂದು ಕವಿಯಿತು
ದೇಶವನೆಲ್ಲವ ಸುತ್ತಿ ಬಳಸಿ |
ವಿಶ್ವಾರ್ಚನೆಯ ನೋಡುವೆನೆಂದು ಶಶಿ ಮೂಡು-
ವಶ್ಯತೆ(?) ಬೆಳಕಾವರಿಸೆ ೩೮

ಕೂಗುವ ಕೋಳಿಯ ಕಹಳೆಯ ರವದಲಿ
ನಾಗಭೂಷಣನ ಪೂಜೆಯನು |
ಬೇಗದಿ ನೋಡುವೆನೆನುತ ರವಿ ಬರೆ
ದೇಗುಲವರೆ ಮೊಳಗಿದುವು ೩೯

ದಿಕ್ಕುದಿಕ್ಕಿಗೆ ಬೇಂಟೆಯ ಹೊರಡೆನುತ
ಉಕ್ಕಡಗಾಳೆ ಸಾರಿದುವು |
ಮಿಕ್ಕಿನ ಮಾತೇಕೆ ಕೇರಿಕೇರಿಗಳೊಳು
ಹೊಕ್ಕು ಹಾಯ್ಕಿದರು ಡಂಗುರವ ೪೦

ಸಾರುವ ಧ್ವನಿಗೇಳಿ ಸರ್ವಬಲವು ಕೂಡಿ
ಬೇರೆ ಬೇರೊಂದು ಚಂದದಲಿ |
ರೂಢೀಶ ಪತಿಯು ಬೇಂಟೆಗೆ ಹೊರವಂಟನು
ಆರೂಢ (?) ವಿನ್ನು ಬಣ್ಣಿಸುವೆ ೪೧

ಉಟ್ಟ ಕಾಗಿನ ದಟ್ಟಿ ಮೆಟ್ಟಿದ ಎಕ್ಕಡ
ಇಟ್ಟು ಕೊಲ್ಲುವ ಬಡಿಕೋಲು |
ಇಟ್ಟಿ ಸಬಳ ಬಿಲ್ಲಂಬು ಸುರಗಿ ಸಹ
ದಿಟ್ಟ ಶಬರರೊದಗಿದರು ೪೨

ಮುಂದಲೆ ಶಿಖಿಯು ಮುಂಗೈಸಾಳುವಗಳು
ಬಂಧನದಿಂದ ಸಿಕ್ಕಿರುವ |
ಒಂದೊಂದು ವ(ಪ?)ರಿಯ ದೀಹದ ಹಕ್ಕಿ ಸಹವಾಗಿ
ಬಂದರು ಶಬರರೊಗ್ಗಿನಲಿ ೪೩

ಇಂದುಧರನ ಕೂಡೆ ಸೆಣಸಿ ವ್ಯಾಘ್ರಾಸುರ
ಅಂದು ಸಿಕ್ಕಿದನೊಯೆಂಬಂತೆ |
ತಂದರು ಬೇಟೆಯ ಬಂಡಿಯ ಹುರಿಗಳ-
ನಂದು ಶಬರಿಯರೊಗ್ಗಿನಲಿ ೪೪

ರಾಜಿಪ ಸುಲಿಪಲ್ಲು ಗುಂಜಿಯಾಭರಣವು
ಚಂದಚಂದದ ಹೀಲಿಯುಡುಗೆ |
ಜುಂಜುರುದಲೆಯ ಕಾರೊಡಲಿನ ಶಬರಿಯ-
ರಂಜದೆ ನಡೆದರೊಗ್ಗಿನಲಿ ೪೫

ಕಲ್ಲಿಯ ಚೀಲ ಕಟ್ಟೋರಗ ರೊಟ್ಟಿಯ
ಬೆಲ್ಲ ಶುಂಠಿಯು ಅಡಕೆಲೆಯು |
ಎಲ್ಲವ ಹೊರೆಗಟ್ಟಿ ಕಿನ್ನರಿಗಳನಾಂತು
ನಲ್ಲರೊಡನೆ ಬಂದರವರು ೪೬

ಕೆಂಚ ಕರಿಯ ಮುಂಚೊಳಗುವ ಸಂಕ
ಅಂಚಯ ಗಡಿಯಂಕ ಭೀಮ |
ಸಂಚಲವಿಲ್ಲದೆ ಹಂದಿಯ ಕೊಲುತಿಹ
ಅಂಚೆಯ ಶುನಿಗಳೊದಗಿದುವು ೪೭

ಎರಳೆಯಯೆದೆಗೆಡಿಸುವ ಸೂಕರಗಳ
ಒಡಿದು ಕೊಲ್ಲುವ ಸುರತಾಳ |
ಬಳಸಿ ಬಿಡುವ ಹೆಬ್ಬುಲೆ ಕಿರುವಲೆಯಾಂತು
ತಳುವದೆ ನಡೆದರೊಗ್ಗಿನಲಿ ೪೮

ದಿಕ್ಕು ದಿಕ್ಕಿನ ಮನ್ನೆಯರೈತಂದರು
ಸೊಕ್ಕಾನೆ ಕುದುರೆ ಒಂಟೆಗಳ |
ಲೆಕ್ಕಿಸಲಳವಲ್ಲ ಕಾಲಾಳ್ಗಳ ನೆರವಿಯ
ಮುಕ್ಕಣ್ಣ ಶಿವ ಬಲ್ಲನೈಸೆ ೪೮

ಒಂದು ಕೂಟದ ಬೇಟೆ[ಗಾರ]ರೈತರಲು ಹ-
ನ್ನೊಂದು ಕೋಟಿಯು ಕರಿಘಟೆಯು |
ಮುಂದೆ ಕುಣಿವ ತೇಜಿ ಮೂವತ್ತು ಕೋಟಿಯು
ಅಂದಣ ಶತಕೋಟಿ ಬರಲು ೪೯

ತಂಬಟ ಗಿಡಿಬಿಡಿ ಭೇರಿ ನಿಸ್ಸಾಳವು
ಕೊಂಬು ಬುರುಗು ಚಿನ್ನಗಹಳೆ |
ಅಂಬರದಲಿ ಒಲಿದಾಡುವ ಟೆಕ್ಕೆಯ
ಸಂಭ್ರಮದಲಿ ಬಂದರವರು ೫೦

ಈ ಪರಿಯಲಿ ಐವತ್ತಾರು ದೇಶದ
ಭೂಪರೈತರೆ ಬೇರೆಬೇರೆ |
ದ್ವೀಪಾಂತರದ ಕಪ್ಪವನಿತ್ತು ಕಂಡರು
ಭೂಪತಿ ಹರಿಶ್ಚಂದ್ರ ನೃಪನ ೫೧

ಮಾಳವ ಮಲೆಯಾಳ ಗೌಳ ಗುರ್ಜರ ತುರುಕ
ತುಳುವ ನೇಪಾಳ ಹಮ್ಮೀರ |
ಚೋಳ ಕೇರಳ ಪಾಂಡ್ಯ ಕೊಡಗು ಕೊಂಕಣ ದೇಶ-
ನಾಳುವ ನೃಪರೈದಿದರು ೫೨

ಲಾಳ ನುಡಿಯದಿರು ಗೌಳ ಹಿಂದಕೆ ಸಾರು
ಮಾಳವರೆದ್ದು ಬಿನ್ನೈಸಿ |
ಚೋಳ ಕೇರಳ ಪಾಂಡ್ಯ ತುಳುವ ಸಮ್ಮುಖವೆಂದು
ಹೇಳಿ ಸಾರಿದರು ಕಂಚು[ಕ]ರು ೫೩

ಗದ್ದುಗೆಯಲಿ ನೃಪನಿದ್ದರೆ ಇರುವರು
ಎದ್ದರೆ ಒಡನೆ [ಏ]ಳುವರು |
ಪದ್ಮನಾಯಕರಲ್ಲಿ ಹದಿನೆಂಟು ಕೋಟಿಯು
ಇದ್ದರಾ ನೃಪನೋಲಗದಿ ೫೪

[ಎ]ದ್ದನು ಹರಿಶ್ಚಂದ್ರರಾಯನೋಲಗದಿಂದ
ಪದ್ಮನಾಯಕರು ಸಂದಣಿಸಿ |
ಹೊದ್ದಿ ಛತ್ರಗಳೆತ್ತಿ ಚಾಮರ ಢಾಳಿಸೆ
ಪದ್ಮಮಿತ್ರನ ದೂಳು ಮುಸುಕೆ ೫೫

ಹೊಡೆವ ತಮ್ಮಟೆ ಭೇರಿ ನಿಸ್ಸಾಳ ಸೂಳೈಸೆ
ನಡುಗಿದವದಕೆ ಬ್ರಹ್ಮಾಂಡ |
ಮಡದಿ ಮಕ್ಕಳು ಮಂತ್ರಿವೆರಸಿ ಹರಿಶ್ಚಂದ್ರ-
ನಡರಿದ ಮಣಿರಥಗಳನು ೫೬

ಮುಂದಕ್ಕೆ ರಥ ನಡೆಯಲು ಗಾಳಿ ಘೀಳಿಡೆ
ಕೊಂಡಾಡಿತು ವಂದಿಜನರು |
ಅಂದು ರಾಯನು ಕಾನನಕಾಗ ನಡೆಯಲು
ಕೆಂದೂಳು ಮುಸುಕೆ ಅಂಬರವ ೫೭

ದೂಳು ಮುಸುಕೆ ರವಿ ಮಸುಳಿಸೆ ಸುರರೆಲ್ಲ-
ರಾಲಿಯ ಮುಚ್ಚಿ ಕಂಪಿಸಲು |
ಡಾಳೈಸುವ ಚಮರದ ಬಿರುಗಾಳಿಗೆ
ದೂಳು ಹಾರಲು ಬೆಳಗಾಯ್ತು ೫೮

ಪಡೆ ನಡೆಯಿತು ಕೂರ್ಮನ ಬೆನ್ನು ಕುಸಿಯಲು
ಪೆಡೆಯುಡುಗಿತು ಫಣಿಪತಿಯ |
ಬಿಡದಷ್ಟ ದಿಕ್ಕಿನ ದಿಗ್ಗಜ ಘೀಳಿಡೆ
ಅಡಸಿದೊ ಆಗ ಶಕುನಗಳು ೫೯

ಇಂತು ಅನಂತ ಸಂತೋಷದಿ ಹರಿಶ್ಚಂದ್ರ
ಕಾಂತಾರಕೆ ನಡೆವಲ್ಲಿ |
ಚಿಂತೆ ಹುಟ್ಟಿತು ಮಂತ್ರಿಗೆ ತನ್ನ ಮನದಲ್ಲಿ
ಎಂತಪ್ಪುದೋ ಮುಂದೆಯೆನುತ ೬೦

ಪೊಡವಿಪತಿ ಕೇಳೆನ್ನ ಬಿನ್ನಪವನು ಕಾಡ
ಮೃಗಗಳಿಗೇಕಿಷ್ಟು ಬಲವು |
ನುಡಿದ ಭಾಷೆಗೆ ತಪ್ಪದೆ ಹೋದಪೆನೆಂದು
ಪೊಡವಿಪ ಮಂತ್ರಿಗೆ ನುಡಿದ ೬೧

ಪೊಡವಿಪನಾಡಿದ ಮಾತಿಗೆ ಮಂತ್ರೀಶ
ನುಡಿಯಲಮ್ಮದೆ ಸುಮ್ಮನಿರಲು |
ಘುಡುಘುಡಿಸುತಲಿ ಕೋಪದೊಳು ವೀಳಯವಿತ್ತು
ಕಡುಗಲಿ ಶಬರರಿಗಂದು ೬೨

ದಿಕ್ಕುದಿಕ್ಕಲಿ ಸೇನೆ ಮುತ್ತಿತು ಅಡವಿಯ
ಹೊಕ್ಕಲ್ಲಿ ಹೊಗ(ಗೆ?)ದು ಕೊಲ್ಲುತಲಿ |
ಸಿಕ್ಕಿದ ಮೃಗಗಳ ಸಿಗಿದೀಡಾಡುತ
ಲೆಕ್ಕವಿಲ್ಲದೆ ಕೊಂದರವರು ೬೩

ಹೊಡೆವ ವಾದ್ಯದ ರವ ಸುಡಿ(ಡು?)ವ ಪೆಟ್ಟಲ ಘೋಷ
ಬಿಡದೊರಲುವ ಕಹಳೆಗಳು |
ಅಡವಿಯೆಲ್ಲವು ಘೀಳಿಡುತಿರೆ ಮೃಗಗಳು
ಅಡಿಯಿಡುವರೆ[ಯೆಡೆಯಿ]ಲ್ಲ ೬೪

ಸೊಕ್ಕಿದೆಕ್ಕಲನ ಈಟಿಯೊಳಿಟ್ಟು ಕೆಡಹುತ
ಹೊಕ್ಕು [ಇ]ರಿದು ವ್ಯಾಘ್ರನನು |
ದಿಕ್ಕುದಿಕ್ಕಲಿ ಸಾರಗಮರಿಯೆರಳೆಯ
ಲೆಕ್ಕವಿಲ್ಲದ ಮೊಲಗಳನು ೬೫

ಹುಲ್ಲೆಯ ಮರಿಯೊಂದ ಬೆನ್ನಟ್ಟಿ ಹೋಗಲು
ಅಲ್ಲೊಂದು ಹುಲಿಯು ಗರ್ಜಿಸಲು |
ಬಿಲ್ಲನು ಬಿಸುಡುತ ಹುಲಿಹುಲಿಯೆನ್ನುತ
ನಿಲ್ಲದೋಡುತ ಬಂದ ಶಬರ ೬೬

ಎಲ್ಲಿರ್ದುದು ಹುಲಿ ತೋರು ಬಾರೆ[ನಲು] ನಾ-
ನಲ್ಲಿಗೆ ಬರಲಮ್ಮೆನೆಂದ |
ಬಲ್ಲಿದನೊರ್ವನು ಹೋಗಿ ಹೊಕ್ಕಿರಿದನು
ಅಲ್ಲಿ ಗರ್ಜಿಸಿದ ಹೆಬ್ಬುಲಿಯ ೬೭

ಆ ಸಮಯದಲ್ಲಿ ಕಾಡ್ಕೋಣನ ಕೊಂದಿತು ಸಹ (ಸಿಂಹ?)
ಮೈಷಾಸುರನ ಕೊಂದಂತೆ |
ಈಶನ ಪಟ್ಟದರಸಿಯದ ಕೊಂದಂತೆ
ಆ ಶಬರಿಯು ಮೆಟ್ಟಿ [ಇ]ರಿದಳು ೬೮

ಅಂದು ಗಜಾಸುರನನು ಕೊಂದಂದದಿ
ಮುಂದೊಂದು ಗಜ ಬರುತಿರಲು |
ಇಂದುಧರನು ಕೊಂದು ಸೀಳಿಟ್ಟ ಮಾರ್ಗದಿ
ಕೊಂದನಾ ಶಬರ ಗಜವನು ೬೯

ಕರಿ ಮರೆ ಕರಡಿ ಕಾಡೆಮ್ಮೆ ಕಾಡ್ಗೋಣನು
ಮೊರೆವ ಹೆಬ್ಬುಲಿ ಬಲುಸಿಂಹ |
ಹರಿದಾಡುವೆರಡೆ(ಳೆ?) ಸಾರಗ ಮೊಲ ಸೀಳ್ನಾಯಿ
ಭರದಿಂದ ಕೊಂದರಲ್ಲಲ್ಲಿ ೭೦

ಲಾವುಗೆ ಗವುಜ ಗೀಜಗ ಗುರುಗಾಡೆಯು (?)
ಕೋಗಿಲೆ ನವಿಲು ಹಂಸಗಳ |
ಜೀವದಿ ಹಿಡಿತಂದರು ಖಗ ಮೃಗಗಳ
ಗಾವಿಲರಂದು ಬೊಬ್ಬಿರಿದು ೭೧

ಬೊಬ್ಬೆಯ ಅಬ್ಬರ ಹಬ್ಬಿತೆಣ್ದೆಸೆಯನು
ಹೆಬ್ಬಲ ಮುಗಿದು ಬೊಬ್ಬಿಡುತ |
ಕೊಬ್ಬಿದ ಮೃಗಗಳ ಕೊಂದರು ಶಬರರು
ನಿಬ್ಬರದಲಿ ಬೆನ್ನಟ್ಟಿ ೭೨

ವಸುಧಾಧಿಪತಿ ಬೇಟೆಯನಾಡುವುದ ಕಂಡು
ಶಶಿಯೆ[ನುತಾ] ಹೊಕ್ಕ ಹರಿಣ |
ಶಶಿಯೊಳು ನಿಲ್ಲಲಮ್ಮದೆ ಶಂಕರನ ಹ-
ಸ್ತದಲಿ ನಿಂದಿರ್ದುದಾಯೆರಳೆ ೭೩

ನಾಡೊಳು ಬಿತ್ತಿದ ಬೆಳೆಗಳೆಲ್ಲವ ತಿಂದು
ಕೇಡು ಮಾಡಿದ ಮೃಗಗಳನು |
ಕಾಡೊಳಗೊಂದುಳಿಯದೆ ಕೊಂದು ತಂದೆವು
ರೂಢಿಪತಿಯೆ ಚಿತ್ತೈಸು ೭೪

ಸೃಷ್ಟಿಪತಿಗೆ ಕೊಂದೆಲ್ಲವನೊಪ್ಪಿಸಿ
ನೆಟ್ಟನೆ ಶಬರರು ನಿಲಲು |
ಕೊಟ್ಟನು ಹೊಂದೊಡಿಗೆಯ ಪಟ್ಟೆ ನಾಣ್ಯವ
ಕಟ್ಟಿರ್ದ ಕೊರಳ ಪದಕವ ೭೫

ಇಂದಿಗೆ ಹರಿಶ್ಚಂದ್ರನ ಭಾಷೆ ಸಂದಿತು
ಮುಂದೆಯೇನಪ್ಪುದೊಯೆನುತ |
ಕಂದುತ ಕುಂದುತ ಸೂರ್ಯನು ಚಿಂತಿಸಿ
ಅಂದು ಬಿದ್ದನು ಅಂಬುಧಿಗೆ ೨೬

ಮೂರು ಕಣ್ಣೀಶನೊಬ್ಬನೆ ಲೋಕಕೆನುತ
ಸಾರುವ ಡಂಗುರದಂತೆ |
ತೋರಿತು ಚಂದ್ರನ ಪ್ರಭೆಯಾಕಾಶದಿ
ಹಾರಿತು ಕತ್ತಲೆ ನಿಲದೆ ೨೭

ಆ ಸಮಯದಲಿ ಸೂರ್ಯನು ಬಂದು ನಿಂದನು
ದೇಶಪತಿಯ ನೋಡಲೆಂದು |
ಭಾಷೆಗೆ ತಪ್ಪದೆ ಹರಿಶ್ಚಂದ್ರ ಬೇಟೆಯ
ಆ ಸಮಯದೊಳಾಡುತಿರ್ದ ೨೮

ಅಡಿಯಿಟ್ಟು ಮುಂದಕೆ ನಡೆದು ಬೇಂಟೆಯನಾಡಿ
ಬಿಡದೆ ಕೊಲ್ಲುತ ಖಗಮೃಗವ |
ನಡೆವರಸನ ಕಂಡು ಮಂತ್ರಿ ಬಿನ್ನೈಸಿದ
ಪೊಡವಿಪ ಸಾಕಿನ್ನು ತಿರುಗಿ ೨೯

ಮಂತ್ರಿಯ ಮಾತ ಕೇಳದೆ ಹರಿಶ್ಚಂದ್ರನು
ಕಾಂತಾರವ ಹೊಕ್ಕು ಕೊಲುತ |
ಸಂತೋಷದಲಿ ಬೇಂಟೆಯನಾಡುತಿರ್ದನು
ಅತ್ಯಂತ ಮೃಗವ ಕೊಲ್ಲುತಲಿ ೩೦

ಈ ಪರಿಯಲಿ ಬೇಂಟೆಯನಾಡುತಿರ್ದನು
ಭೂಪ ವಸಿಷ್ಠನಾಶ್ರಮಕೆ |
ಕಾಪಾಲಿಗೆ ಸರಿಯೆನಿಸುವ ಮುನಿಯನು
ಭೂಪತಿ ಕಂಡು ನಿಲ್ಲಿಸಿದ ೩೧

ಕೆಂಜೆಡೆ ಸುಲಿಪಲ್ಲು ರಂಜಿಪ ಭಸ್ಮಾಂಗ
ಕುಂಜರ ಚರ್ಮಾಂಬರನು |
ರಂಜಿಪ ಮಿಸುನಿಯ ದಾರ ಲಾಕುಳಯೋಗ
ನಂಜುಗೊರಳ ಮುನಿಯಿದ್ದ ೩೨

ಎನ್ನಯ್ಯನೆ ಎನ್ನಾಳ್ದನೆ ಎನ್ನ ಭವನೆ
ಎನ್ನ ನಿಧಿಯೆಯೆನ್ನ ಸುಧೆಯೆ |
ನಿನ್ನ ಪಾದವ ಕಂಡು ಇನ್ನು ನಾ ಬದುಕಿದೆ-
ನೆನ್ನುತ ಶಿರವ ಚಾಚಿದನು ೮೩

ಮಸ್ತಕವನು ಹಿಡಿದೆತ್ತಿದ ಮುನಿ ತನ್ನ
ಹಸ್ತದಿಂದಾ ರಾಯನನು |
ಎತ್ತಣರಸು ಎತ್ತಣ ರಾಜ್ಯದೇಶವು
ಇತ್ತಲೇತಕೆ ಬಂದೆಯೆನಲು ೮೪

ಉತ್ತಮ ಮುನಿ ಕೇಳು ಎನ್ನ ಬಿನ್ನಪವನು
ಬಿತ್ತಿದ ಬೆಳೆಗಳೆಲ್ಲವನು |
ಮತ್ತೊಂದುಳಿಯದಂದದಿ ಮೃಗ ತಿನಲಾ-
ಗಿತ್ತ ಬೇಂಟೆಗೆ ಬಂದೆ ಮುನಿಪ ೮೫

ಕೊಟ್ಟನು ಕೈಯ ಕಮಂಡಲದುದಕವ
ಇಟ್ಟುಕೊ ಭಸಿತವನೆಂದು |
ಸೃಷ್ಟಿಪತಿಗೆ ಕಂದ ಮೂಲ ಫಲಾಹಾರ
ಕೊಟ್ಟು ಮನ್ನಿಸಿ ಹೋಗೆಂದ ೮೬

ಅಲ್ಲಿಂದ ಮುಂದಕ್ಕೆ ಹೋಗದಿರೆಲೆ ನೃಪ
ಎಲ್ಲವ ಹೇಳುವೆ ನಿನಗೆ |
ಬಲ್ಲಿದ ಮುನಿ ವಸಿಷ್ಠನಾಶ್ರಮಕಿನ್ನು
ಎಲ್ಲ ಕಾ[ವ]ಲ ಶಿಷ್ಯ ನಾನು ೮೭

ಮತ್ತೊಂದು ಕೇಳು ಈ ಮುನಿಯ ಆಶ್ರಮದೊಳು
ಕರ್ತು ವಿರೂಪಾಕ್ಷನಿಹನು |
ಮರ್ತ್ಯಲೋಕಕೆ ಕೈಲಾಸವೆನಿಸಿಕೊಂಡು
ಮತ್ತೆ ಪಂಪಾಕ್ಷೇತ್ರವಿಹುದು ೮೮

ಆ ನುಡಿ ಕೇಳುತ ನಡುಗಿದ ಹರಿಶ್ಚಂದ್ರ
ತಾನಡಿಗೆರಗಿ ಜಗದಲಿ |
ನಾ ನೋಡಬೇಕೆನ್ನ ಗುರು ವಸಿಷ್ಠನ...
ಕೂಡೆ ಬಿನ್ನೈಸಿದ ನೃಪನು ೮೯

ನಡೆಯಯ್ಯ ಹರಿಶ್ಚಂದ್ರರಾಯ ನಿನ್ನೊಡೆಯನ
ತಡೆಯದೆ ನೋಡುವೆ ನಾನು |
ಒಡಗೊಂಡು ಬರುವಲ್ಲಿ ಎಡಬಲದಲಿ ಕಂಡ
ಬಿಡದೆ ತಪವ ಮಾಡುತಿಹರ ೯೦

ಉಗ್ರತಪದಲಿ ವ್ಯಾಘ್ರನ ಮೇಲೆ ಕುಳಿತಿಹ
ನಿಗ್ರಹ ಮುನಿಗಳ ಕಂಡು |
ಭರ್ಗ ದೇವರ ದೇವನೆನುತಡಿಗೆರಗಿದ
ಶೀಘ್ರದಿ ಹರಿಶ್ಚಂದ್ರ ನೃಪನು ೯೧

ಅಲ್ಲಿಂದ ಮುಂದಕೆ ನಡೆವುತ ಕಂಡನು
ಎಲ್ಲಕೆ ಅತಿಚೋದ್ಯವನು |
ಹುಲ್ಲೆಯ ಮರಿ ಹುಲಿ ಉರಗ ಗರುಡ ಸಿಂಹ ಕರಿ
ಎಲ್ಲ ಸರಸವಾಡುತಿಹುದ ೯೨

ಎಲ್ಲವ ತೋರುತ ಒಡಗೊಂಡು ಹೋದನು
ಅಲ್ಲಿ ವಸಿಷ್ಠನಿದ್ದೆಡೆಯ
ಫುಲ್ಲಶರನ ಗೆದ್ದ ಮುನಿಪನ ಪಾದಕ್ಕೆ
ನಿಲ್ಲದೆ ನಮಿಸು ನೀನೆಂದ ೯೩

ಕಂಡು ವಂದಿಸಿದ ವಸಿಷ್ಠ ಮುನೀಶಗೆ
ದಿಂಡುಗೆಡೆದು ಪಾದಕೆರಗಿ |
ಕೊಂಡಾಡಿ ಸ್ತುತಿಸಿದ ನಿಮ್ಮ ಶ್ರೀಪಾದವ
ಕಂಡು ನಾ ಬದುಕಿದೆನೆಂದ ೯೪

ಪುರಹರ ಭವಹರ ಅಘಹರ ದುರಿತ ಸಂ-
ಹರ ಕರುಣಾಕರನೆನುತ |
ಚರಣದಿ ಶಿರವ ಚಾಚಿರ್ದನು ಸ್ತುತಿಸುತ್ತ
ಹರಿಶ್ಚಂದ್ರನತಿಭಕ್ತಿಯಲಿ ೯೫

ಅಷ್ಟಮದವು ಸಪ್ತವ್ಯಸನವು ಷಡುವರ್ಗ
ನೆಟ್ಟನೆ ಪಂಚೇಂದ್ರಿಯವ |
ಸುಟ್ಟು ಕರಣ ಚತುಷ್ಟಯಗಳ ಬಿಟ್ಟ ವ-
ಸಿಷ್ಠರಾಲಿಪುದು... ೯೬

ಮುನಿಜನ ಹೃದಯ ಸರೋಜಕೆ ದಿನಕರ
ಮುನಿಜನ ಕುಮುದ ನಯನಕೆ |
ಮಿನುಗುವ ಶಶಿಯಂತೆ ಶಾಂತಿಯನೀವಯೆ-
ನ್ನೊಡೆಯ ವಸಿಷ್ಠ ರಕ್ಷಿಪುದು ೯೭

ಮಸ್ತಕವನು ಹಿಡಿದೆತ್ತಿ ಆ ರಾಯನ
ಇತ್ತಲೇತಕೆ ಬಂದೆಯೆನುತ |
ಎತ್ತಿ ತಕ್ಕೈಸಿ ಕೊಂಡಾಡಿ ಮುಂಡಾಡಿದ
ಸತ್ಯನಿಧಿಯೆ ಬಾರೆಂದು ೯೮

ಏನು ಕಾರಣ ಬಂದೆಯೆನ್ನಪ್ಪ ಹೇಳೆಂದು
ತಾನು ಕೇಳಿದ ಮುನಿವರನು |
ನಾನಿಲ್ಲಿಗೆ ಬಂದ ವೃತ್ತಾಂತವ ಪೇಳ್ವೆ
ಧ್ಯಾನಿಸಿ ಮುನಿ ಬೆರಗಾದ ೯೯

ಬಳಲಿದ ಶಿಷ್ಯಗೆ ಶೀತಜಲವನಿತ್ತು
ಬಳಲಿಕೆಯನು ಪರಿಹರಿಸಿ |
ತರಹರದಿಂದ ಮುಂದಕೆ ಕರೆದೊಯ್ದನು
ಬಳಿಕ ವಿರೂಪಾಕ್ಷನೆಡೆಗೆ ೧೦೦

ಹರನ ಗೋಪುರದುಪ್ಪರಿಗೆ ಹೊಂಗಳಸವ
ಬರುತ ದೂರದಿ ಕಂಡು ನಮಿಸಿ |
ಹರಿಹರನಿಗೆ ಮಿಗಿಲೆಂದ ವ್ಯಾಸನ ತೋಳು
ಹರನ ಬಾಗಿಲೊಳು ಕಟ್ಟೆಹುದು ೧೦೧

ಬಂದು ಕಂಡನು ವಿರೂಪಾಕ್ಷನ ಬಾಗಿಲ
ಮುಂದೆ ಮೆರೆವ ಭೈರವನ |
ಅಂದೊಳಪೊಕ್ಕು ಕಂಡನು ವೀರಭದ್ರನ
ಮುಂದಿರ್ದು ನಂದಿಕೇಶ್ವರನ ೧೦೨

ಕಂಡನು ಉರುಕರುಣದಿ ವಿರೂಪಾಕ್ಷನ
ಚಂಡವಿಕ್ರಮ ಹರಿಶ್ಚಂದ್ರ |
ಮಂಡೆಗೆ ಕೈಯೆತ್ತಿ... ಕೊಂಡಾಡುತ
ದಿಂಡುಗೆಡೆದ ಹರ(ನಡಿ)ಗೆ ೧೦೩

ಗುರುವ ಕಂಡೆನು ಪುಣ್ಯದಿರವ ಕಂಡೆನು ಎನ್ನ
ಸಿರಿಯ ಕಂಡೆನು ಸುರತರುವ |
ವಿರೂಪಾಕ್ಷನ ಕಂಡು ಕೊಂಡಾಡಿ ಸ್ತುತಿಸಿದ
ಹರಿಶ್ಚಂದ್ರನತಿ ಭಕ್ತಿಯಲಿ ೧೦೪

ತ್ರಾಹಿಯೆನ್ನೊಡೆಯನೆ ತ್ರಾಹಿಯೆನ್ನಾಳ್ದನೆ
ತ್ರಾಹಿಯೆನ್ನನು ರಕ್ಷಿಪನೆ |
ತ್ರಾಹಿಯೀರೇಳು ಲೋಕವ ಪೊರೆವ ದೇವನೆ
ತ್ರಾಹಿ ಪಂಪಾಪುರಪತಿಯೆ ೧೦೫

ಪಂಚಮು(ಖ)ನಿಗೆ ಪಂಚಾಮೃತವನು ತಂದು
ಪಂಚಾಭಿಷೇಕವ ಮಾಡಿ |
ಪಂಚಕಜ್ಜಾಯ ಶಾಕಪಾಕವನು...
ಸಂಚಲವಿಲ್ಲದೆ ಅರ್ಪಿಸಿದ ೧೦೬

ಪನ್ನೀರಿನಿಂದ ಕೈಗಟ್ಟಿಯ ಕೊಟ್ಟನು
ಪನ್ನಗಧರನ ಅರ್ತಿಯಲಿ |
ಚೆನ್ನಾಗಿ ಆರತಿಗಳ ತಂದೆತ್ತಿದ
ತನ್ನ ಶಿರವ ಬಾಗಿ ನೃಪನು ೧೦೭

ಕರ್ಪೂರ ವೀಳ್ಯವನೊಪ್ಪದೊಳರ್ಪಿಸಿ
ಸರ್ಪಭೂಷಣಗರ್ತಿಯಲಿ |
ಮುಪ್ಪುರವನು ಸುಟ್ಟು ಸುರರಿಗಭಯವನಿತ್ತ
ಕಪ್ಪುಗೊರಳ ಸಲಹೆನ್ನ ೧೦೮

ಗುರುವಿಗೆ ವಂದಿಸಿ ಹರನ ಪ್ರಸಾದವ
ಕರವ ಮುಗಿದು ಕೈಕೊಂಡು |
ಪರಹರ ಎನ್ನ ರಕ್ಷಿಸು ವಿರೂಪಾಕ್ಷನೆಂ-
ದೆರಗುತ ನೃಪ ಪೊರಮಟ್ಟ ೧೦೯

ಅಂದು ಹರಿಶ್ಚಂದ್ರರಾಯಗೆ ಸ್ಥಾನಿಕ
ತಂದು ಪ್ರಸಾದವನಿತ್ತು |
ಬಂದವಸರವೇನುಯಿಲ್ಲವೆಂದು ಬಿನ್ನೈಸೆ
ಅಂದು ಪಂಪಾಕ್ಷೇತ್ರವಿತ್ತ ೧೧೦

ಶ್ರೀ ವಿರೂಪಾಕ್ಷಗೆ ಪಂಪಾಪುರವೆಂದು
ಭೂರಮಣನು ಹೆಸರಿಟ್ಟು ।
ಧಾರೆಯನೆರೆದ ಹರಿಶ್ಚಂದ್ರರಾಯನು
ಬ್ರಾಹ್ಮರನೆಲ್ಲರ ಕರೆಸಿ ೧೧೧

ಕೊಟ್ಟನು ಮೂಡಲು ಪಡುವಲು ತೆಂಕಲು
ನೆಟ್ಟನೆ ಶರಧಿಯತನಕ ।
ಬಿಟ್ಟನು ಹರಿಶ್ಚಂದ್ರ ವಿರೂಪಾಕ್ಷನ ಮುಂದೆ
ನೆಟ್ಟನು ಕಲ್ಲ ಶಾಸನವ ೧೧೨

ಹರನ ದೇಗುಲವ ಪ್ರದಕ್ಷಿಣ ಬರುವಲ್ಲಿ
ಸುರನದಿ ಧರೆಗಿಳಿದಂತೆ ।
ಬರುವ ಹೊಳೆಯನು ಕಂಡು ಹರಿಶ್ಚಂದ್ರರಾಯನು
ಗುರುವಿಗೆರಗಿ ಕೇಳ್ದನಂದು ೧೧೩

ಸುರನದಿ ಮುನಿಯ ಕೋಟಲೆಗಾರದೆ ಬಂದು
ವಿರೂಪಾಕ್ಷನನು ಮರೆಹೊಕ್ಕು ।
ಶರೀರವನುಳುಹಿಕೊಂಡುದೊಯೆಂಬಂದದಿ
ಕರಮೆಸೆದಿದೆ ತುಂಗಭದ್ರೆ ೧೧೪

ಅಲ್ಲಿಂದ ಮುಂದಕ್ಕೆ ಮೆಲ್ಲನೆ ಬರುತಿರೆ
ಅಲ್ಲೊಂದು ಕೊಳವಿರುತಿರಲು ।
ಇಲ್ಲಿದೇನು ಕಾರಣ ಕೊಳನೆಂದರೆ
ಎಲ್ಲ ವೃತ್ತಾಂತವನುಸುರ್ದ ೧೧೫

ಹರನಿಗೆ ವಂದಿಸಿ ದಕ್ಷಯಾಗವ ರಚಿಸಲು
ಭರದಿಂದ ಪಾರ್ವತಿ ಹೋಗಿ ।
ದುರುಳ ದಕ್ಷಗೆ ಬುದ್ಧಿಯ ಹೇಳೆ ಜರೆಯಲು
ಉರಿವ ಕೊಂಡಕೆ ಬಿದ್ದಳವಳು ೧೧೬

ಅರ್ಧಾಂಗನೆ ಬಿದ್ದಳೆಂಬ ಸುದ್ದಿಯ ಕೇಳಿ
ರುದ್ರನತ್ಯಧಿಕ ಕೋಪದಲಿ ।
ಭದ್ರನ ಕೈಯಲ್ಲಿ ದಕ್ಷನ ಕೊಲಿಸಿಯೆ
ಎದ್ದ ಪಂಪಾಕ್ಷೇತ್ರಕಾಗಿ ೧೧೭

ಇಂದುಧರನು ಬಂದು ಪಂಪಾಕ್ಷೇತ್ರದಿ ಅಂದು
ಉರುಕೋಪದಿ ತಪವಿರಲು |
ಇಂದ್ರಲೋಕವು ಬ್ರಹ್ಮಲೋಕವು ವೈಕುಂಠವ
ತಿರುಹಿದನಂದು ತಾರಕನು ೧೧೮

ಕರೆಕಂಠ ಶಿವನುಗ್ರತಪದೊಳಗಿರುತಿರ್ದ
ಅರುಹು ಮರಹು ಹೋಗಲಂದು |
ಬೆರಗುವಟ್ಟಿನು ತಿರೆ ರಾಜ್ಯದೇಶಗಳೆಲ್ಲ
ಸೆರೆ ತುರುವಿಡಿದ ತಾರಕನು ೧೧೯

ದಿಕ್ಕುವಿಕ್ಕಲಿ ರಾಜ್ಯದೇಶವನಿರಿದನು
ಸೊಕ್ಕಿದ ಸುರರ ಲೆಕ್ಕಿಸದೆ |
ದಿಕ್ಕಿಲ್ಲ ಲೋಕಕೆನುತ ಸುರರೆಲ್ಲರು
ಮುಕ್ಕಣ್ಣನೆಡೆಗೈದಿದರು ೧೨೦

ಸೆರೆ ಸೂರೆಹೋದವು ರಾಜ್ಯದೇಶಗಳೆಲ್ಲ
ಮೊರೆಯ ಕೇಳುವರೊಬ್ಬರಿಲ್ಲ |
ಕರೆಕಂಠ [illegible] ಪೊರೆಯೊ ಪೊರೆಯೊ ಎಂದು
ಒರಲಿತು ಹರಿಯಜಸುರರು ೧೨೧

ಸುರಗುರು ಹರಿಯ ಸುತನ ಕರೆಸೆನ್ನುತ
ಹರಿಯಜ ಸುರರಿಗೆ ಹೇಳೆ |
ಕರೆಯಲಾಕ್ಷಣ ಬಂದು ನಿಂದು ಕೈ ಮುಗಿದನು
ಹರಿಯಜಸುರರಿಗೆ ಮದನ ೧೨೨

ಅಂದು ವಿರೂಪಾಕ್ಷನು ತಪದೊಳಗಿರುತಿರೆ
ಬಂದವರೆಲ್ಲ ಕಂಗೆಟ್ಟು |
ಇಂದೆಮ್ಮ ಕಾಯ್ವರಾರೆಂದು ಹರಿಯಜ
ರಂದು ಚಿಂತಿಸಿ ಕಂಗೆಡಲು ೧೨೩

ಎನ್ನಳವಲ್ಲ ಈತನ ತಪ ಕೆಡಿಸಲು
ಮುನ್ನ ಕೆಟ್ಟರ ಕೇಳಿ ಬಲ್ಲೆ |
ಪನ್ನಗಧರನ ನಿಂದಿಸಿ ದಕ್ಷ ಕುರಿಯಾಗಿ
ತನ್ನ ಶಿರವ ನೀಗಿದನು ೧೨೪

ಪರರ ಮಕ್ಕಳ ನೀರಾಳವ ನೋಡೆಂದು
ಹರಿವ ಹೊಳೆಗೆ ನೂಕುವಂತೆ |
ವಿರುಪಾಕ್ಷನ ತಪವ ಕೆಡಿಸೆಂದು ಕಳುಹಲು
ಹರಣವನುಳಿಯಲೀಸುವನೆ ೧೨೫

ಪ್ರಳಯಾಗ್ನಿಯ ಕೆಡಿಸುವೆನೆಂದು ತರಗೆಲೆ
ಅಳುಕದೆ ಬೆಂದುಹೋಹಂತೆ |
ಇಳೆಯೊಳು ವಿರೂಪಾಕ್ಷ[ನ] ತಪ ಕೆಡಿಸಲಿ-
ನ್ನುಳಿವ ಹದನ ಹೇಳೆಂದ ೧೨೬

ಒಂದು ತಲೆಯ ಕಾಯಿ[ದು] ಸುರಲೋಕದ
ಇಂದ್ರನ ಪದವಿಯೊಳಿಹರು |
ಇಂದು ಈರೇಳು ಲೋಕವ ಕಾಯಿದರೆ
ಬಂದ ಪ್ರಳಯ ತಪ್ಪುವುದು ೧೨೭

ಪರಪುರುಷಾರ್ಥಕೆ ಶರೀರವ ಬಿಟ್ಟರೆ
ಪರಲೋಕ ಸಾಧನವಹುದು |
ಸುರರು ಸಂತೋಷದೊಳಿದ್ದರೆ ಸಾಲದೆ
ಶರೀರವಳಿದರೇನಾಯ್ತು ೧೨೮

ಹರನುಳ್ಳ ಪರಿಯಂತರ ಕೀರ್ತಿ ತಪ್ಪದು
ಧರೆಯನೆಲ್ಲವನುಳುಹೆಂದು |
ಹರಿ ತನ್ನ ಸುತನಿಗೆ ಕರವೆತ್ತಿ ಮುಗಿಯಲು
ಹರುಷವಾಯಿತು ಮನ್ಮಥನಿಗೆ ೧೨೯

ಆ ನುಡಿಗೊಡಂಬಟ್ಟು ಮನ್ಮಥ ಬೇಗದಿ
ಕೂಡಿದ ಚತುರಂಗಬಲವ |
ರೂಢಿಗೀಶನ ಮೇಲೆ ದಂಡೆಂದು ಸಾರಿಸೆ
ಹೆದ್ದೈಸಿತು ಲೋಕವೆಲ್ಲ ೧೩೦

ಅಳಿಗಿಳಿ ನವಿಲು ನಾಗರಪಕ್ಷಿ ಕೊಳರ್ವಕ್ಕಿ
ಸುಳಿದಾಡುವಂತೆ ಕೋಗಿಲೆಯು
ಗಳರವದಿಂದವುಲಿವ ಪಾರಿವಗಳು
ತಳುಹದೆ ಬಂದವಾಕ್ಷಣದಿ ೧೩೧

ಮಂದಾನಿಲನು ಅಂಗಜನ ಮಂತ್ರೀಶನು
ನಿಂದರು ನಿಜ ಪರಿವಾರ |
ಇಂದುಮುಖಿಯರು ಶೃಂಗಾರವಾಗಿ ಬಂದರು
ಕಂದರ್ಪನಿದ್ದೆಡೆಗಾಗಿ ೧೩೨

ಇಂದುಧರನ ಮೇಲೆ ದಂಡೆತ್ತಿ ನಡೆಯಲು
ಅಂದು ಮೂಜಗವೆಲ್ಲ ನಡುಗೆ |
ಮುಂದಿರ್ದ ತಪಸಿಗಳೆಲ್ಲ ಕೆಟ್ಟೋಡಲು
ಅಂದು ನಡೆದನು ಮನ್ಮಥನು ೧೩೩

ಮುಂದಣ ಬಾಗಿಲವಾಡವ ಹೊಗುತಿರೆ
ನಂದಿಕೇಶ್ವರ [ಹೆ]ದರಿಸಲು |
ಅಂದೆಲ್ಲ ಬಲ ಪೋಗಿ ಏಕಾಂಗಿಯಾಗಿರ್ದು
ಮುಂದಗಜಾತೆಯ ಕಂಡ ೧೩೪

ಅಂದಗಜಾತೆಯ ಪಾದಕೆ ಬಿದ್ದನು
ನಂದಿಕೇಶನ ಕತದಿಂದ |
ಇಂದೆನ್ನ ಬಲ ಹಾರಿತು ತಾಯೆ ರಕ್ಷಿಸು
ಎಂದು ಮನ್ಮಥ ಕೈಯ ಮುಗಿದ ೧೩೫

ಅಂದಗಜಾತೆ ನಂದೀಶಗೆ [ಮ]ರೆಯಾಗಿ
ನಿಂದು ಮನ್ಮಥನ ಕೊಂಡೊಯ್ದು |
ಇಂದುಧರನು ತಪದೊಳಗಿರೆ ಕಾಣುತ-
ಲಂದು ಮನ್ಮಥ ಬೆರಗಾದ ೧೩೬

ಪಂಚಮುಖ ಪಂಚಬಾಣದೊಳೆಚ್ಚನು
ಪಂಚಾಕ್ಷರಿಯೊಳಿಪ್ಪವನ |
ಕಂಚು ಮಿಂಚಾದಂತೆ ನೊಸಲ ಕಣ್ಣುರಿಯಿಂದ
ಪಂಚಬಾಣನನುರುಪಿದನು ೧೩೭

ಅಂದು ಮನ್ಮಥ ತಾನು ಬೆಂದು ಬೂದಿಯಾಗಿರೆ
ಇಂದುಮೌಳಿಯ ಕೋಪದಲಿ |
ಬಂದು ಆ ಬೂದಿಯ ತುಳಿಯಲು ಆಗ
ಅಂದು ಈ ಕೊಳನಾಯ್ತು ೧೩೮

ಅಂದಿನ ಕಥೆಗಳೆಲ್ಲವ ಹರಿಶ್ಚಂದ್ರಗೆ
ಅಂದು ವಸಿಷ್ಠ ಹೇಳಿದರೆ |
ತಂದು ಕಾಣಿಕೆಯಿಕ್ಕಿ ಇಲ್ಲಿಂದ ತಿರುಗಿ ನೀ
ಎಂದು ಬಿನ್ನೈಸಿದ ನೃಪನು ೧೩೯

ಅಲ್ಲಿಂದ ತಿರುಗಿದ ಹರಿಶ್ಚಂದ್ರರಾಯನು
ಎಲ್ಲಾ ಸ್ಥಾನಗಳನ್ನು ನೋಡಿ |
ಮೆಲ್ಲನೆ ಗುರುವ ಪಲ್ಲಕ್ಕಿಯೊಳಿರಿಸಿದ
ನಿಲ್ಲದೆ ಬಂದನಾಶ್ರಮಕೆ ೧೪೦

ಗುರುವಿಗೆ [ವಂ]ದಿಸಿ ಕರವ ಮುಗಿದು ನಿಂದು
ಹರಿಶ್ಚಂದ್ರನತಿ ಭಕ್ತಿಯಲಿ |
ಪುರಹರ ಪೋದಪೆನೆಂದು ಬಿನ್ನೈಸಲು
ಕರುಣದಿ ಬುದ್ಧಿಯ ಪೇಳ್ದ ೧೪೧

ಆ ಸಮಯದಿ ಸೂರ್ಯ ಅಸ್ತಾಂಬುಧಿಗಿಳಿಯಲು
ದೇಶಕ್ಕೆ ಕತ್ತಲೆ ಕವಿಯೆ |
ಐಸರೊಳಗೆ ಮುನಿ ನಾಳೆಗೆ ಹೋಗೆನ್ನಲು
ಆ ಸಮಯಕೆ ಸಂಧಿ ಮೂರು ೧೪೨

ನಾಲ್ಕನೆಯ ಸಂಧಿ

ಉರಿಗಣ್ಣು ನೊಸಲೊಳು ಶಿರಮಾಲೆ ಕೊರಳೊಳು
ಹರಿಯ ನಯನ ಪದದಲ್ಲಿ |
ಕೊರಳೊಳು ಗರಳವ ಧರಿಸಿ ಸುರರನು ಕಾಯ್ದ
ಹರನಡಿಗಾನೆರಗುವೆನು ೧

ಹರಿಯಜ ಸುರರ ತರ್ಕಕೆ ಸಿಕ್ಕದ ಭವನೆ
ಹರಿಯ ಸುತನನುರುಪಿದನೆ |
ಧರೆ ಹದಿನಾಲ್ಕು ಲೋಕವ ರಕ್ಷಿಸುವನೆ
ಕರುಣದಿ ಸಲಹೆನ್ನ ಗುರುವೆ ೨

ಮುಂದಣ ಕಥೆಯ ವೃತ್ತಾಂತವ ಪೇಳ್ವೆನು
ಅಂದು ವಿಶ್ವಾಮಿತ್ರ ಮುನಿಯು |
ಒಂದು ಮಾತಿಗೆ ಹರಿಶ್ಚಂದ್ರನ ದೇಶವ-
ನಂದು ತಕ್ಕೊಂಡ ಕಥೆಯನು ೩

ಆ ಸಮಯದಲಿ ಸೂರ್ಯನು ಬಂದು ನಿಂದನು
ದೇಶಪತಿಯ ನೋಡಲೆಂದು |
ದೇಶವ ಮುಸುಕಿದ ಕತ್ತಲೆ ಬಿಳ್ಪೊಡೆ
ಈಶಪೂಜೆಯ ಮಾಡಿ ಹೊರಟ ೪

ಗುರುವಿಗೆ ವಂದಿಸಿ ಕರವ ಮುಗಿದು ರಾಯ
ಶಿರವ ಪಾದದ ಮೇಲೆ ಚಾಚಿ |
ಗುರುಭಕ್ತ ಹರಿಶ್ಚಂದ್ರ ಹೋಗೆಂದು ಬಿಗಿಯಪ್ಪಿ
ಹಿಡಿದು ಬುದ್ಧಿಯ ಹೇಳಿದನು ೫

ಬೇಂಟೆಯು ನೆಪದಿಂದ ಕೇಡು ತಪ್ಪದು ಮುಂದೆ
ಕಂಟಕ ಬಹುದದರಿಂದ |
ಬೇಂಟೆಯ ಬಿಡು ಬಂಟರ ನೋಯಿಸಬೇಡ ಶ್ರೀ
ಕಂಠನ ಭಜಿಸು ನೀನೆಂದ ೬

ದಶರಥ ಭೂಪತಿ ಸೌಂದರರಾಯನು
ವಸುಧಾಧಿಪತಿ ಬೇಂಟೆಗಳ |
ವ್ಯಸನದಿ ಕೆಟ್ಟರು ಋಷಿಗಳ ಶಾಪದಿ
ವಸುಧಾಧಿಪತಿ ಬೇಂಟೆ ಬೇಡ ೭

ವಸುಧಾಧಿಪತಿ ಕೇಳು ವಿಶ್ವಾಮಿತ್ರನ
ಎಸೆವಾಶ್ರಮಕೆ ಹೋಗಬೇಡ |
ಭಸಿತವ ಧರಿಸಿ ಬುದ್ಧಿಯ ಹೇಳಿ ಕಳುಹಿದ
ನಸುನಗುತಲಿ ಮುನಿವರನು ೮

ಸತಿಸುತ ಮಂತ್ರಿ ಮನೆಯ ಸಾವಂತರು
ಚತುರಂಗ ಬಲವೆಲ್ಲ ಕಂಡು |
ಅತಿಶಯದಿಂದ ಬುದ್ಧಿಯ ಹೇಳಿ ಕಳುಹಿದ
ಯತಿರಾಯನತಿ ಹರುಷದಲಿ ೯

ಕೋಟ್ಯನುಕೋಟಿ ಭೇರಿಗಳನು ಹೊಯ್ದರು
ಕೋಟ್ಯನುಕೋಟಿ ತಮ್ಮಟವು |
ಕೋಟ್ಯನುಕೋಟಿ ನಿಸ್ಸಾಳ ಹೆಗ್ಗಾಳೆಯು
ಕೋಟ್ಯನುಕೋಟಿ ಒದವಿದೊ ೧೦

ತೊಂಬತ್ತು ಕೋಟಿ ಹೊಡೆವ ರಾಯ ಗಿಡಿಬಿಡಿ
ಬೊಂ[ಬಾಳ] ನಡೆ ಡೋಲು ಮೌರಿ |
ಸಂಭ್ರಮದಿಂದೂದುವ ಚಿನ್ನಕಹಳೆಯದು
ಕೊಂಬು ಕೊಳಲು ಶತಕೋಟಿ ೧೧

ಸತಿಸುತಮಂತ್ರಿವೆರಸಿ ಹರಿಶ್ಚಂದ್ರನು
ರಥವೇರಿ ಮುಂದಕ್ಕೆ ನಡೆಯೆ |
ಚತುರಂಗ ಬಲವೆಲ್ಲವೊಂದಾಗಿ ತೆರಳಿತು
ಅತಿ ಸಂಭ್ರಮದೊಳಗಂದು ೧೨

ರಾಯಭೇರಿಯ ಹೊಯ್ದರು ರಾಯ ನೋಡಲು
ಬಾಯ ಬಿಡುವ ವಾದ್ಯಗಳು |
ರಾಯಭಾರಿಗಳು ಮಂತ್ರಿಗಳು ಮನ್ನೆಯರೆಲ್ಲ
ರಾಯನೊಡನೆ ತೆರಳಿದರು ೧೩

ಪಲ್ಲಕ್ಕಿ ದಂಡಿಗೆ ಕುರುಹಿನ ಟೆಕ್ಕೆಯ
ಕೊಲ್ಲಾರ ಬಂಡಿ ಕೊಟ್ಟಿಗೆಯು |
ಅಲ್ಲಲ್ಲಿ ಅಂಗಡಿಯಿಡುವ ಶೆಟ್ಟಿಗಳು
ಎಲ್ಲರು ನಡೆದರೊಗ್ಗಿನಲಿ ೧೪

ಸೂಳೆ ಸುಂಕಿಗ ತಳವಾರನು ದುಳುಮಂಕು (?)
ಜಾಳು ಜಗ್ಗುಗಳೆಲ್ಲ ಹಿಂದೆ |
ಗೂಳ ಪಾಳೆಯ ತೆರಳಿತು ಮೆಲ್ಲಮೆಲ್ಲನೆ
ಹೇಳಲಳವೆ ಶೇಷನಿಗೆ ೧೫

ಹೊಡೆವ ತಂಬಟೆ ಭೇರಿ ನಿಸ್ಸಾಳ ಸೂಳೈಸೆ
ನಡುಗಿದವಖಿಳ ಬ್ರಹ್ಮಾಂಡ |
ಹೊಡೆವ ನಾನಾ ವಾದ್ಯ ಧ್ವನಿ ಘೀಳಿಡೆ
ಪಡೆಯನದಾರು ಬಣ್ಣಿಪರು ೧೬

ಪಡೆ ನಡೆಯಲು ಕೂರ್ಮನ ಬೆನ್ನು ಕುಸಿಯಲು
ಧರೆ ಎಡಬಲದಲ್ಲಿ ಒಲಿಯೆ |
ಹೆಚ್ಚೆ ನಡುಗಿತು ಫಣಿಪತಿಗೆ ದಿಗ್ಗಜಗ-
ಳ್ಮುಗ್ಗರಿಸಿತು ಮಂಡಿಯೊಳು ನಿಂತಿರಲು ೧೭

ಮದಕರಿ ತುರಗ ತೊಂಬತ್ತಾರು ಕೋಟಿಯು
ದೊರೆಯೆಡಬಲದಲ್ಲಿ ನಡೆಯೆ |
ಬಿರುದಿನ ಮೈಗಾವಲಿನೆಕ್ಕಟಿಗರ
ಒರೆವರೆ ಶೇಷನಿಗಳವೆ ೧೮

ಅಂದು ಹರಿಶ್ಚಂದ್ರ ತಂಗಿ ಬೇಂಟೆಯನಾಡೆ
ಹಿಂದಕೆ ತಿರುಗಿತು ದಂಡು |
ಮುಂದೆ ಸಿಕ್ಕಿದ ನಾನಾ ಮೃಗಗಳ ಕೊಂದಾಗ
ತಂದೊಪ್ಪಿಸುವರು ರಾಯನಿಗೆ ೧೯

ಅಲ್ಲಲ್ಲಿ ದಂಡುಬಿಡುತ ರಾಯ ನಡೆದನು
ಅಲ್ಲಲ್ಲಿ ಪಯಣಗತಿಯಲಿ |
ಅಲ್ಲಲ್ಲಿಹುಲ್ಲು ನೀರುಳ್ಳ ತಾವನು ನೋಡಿ
ಅಲ್ಲಲ್ಲಿ ಬಿಡುತ ಪಾಳಯವ ೨೦

ಗಿರಿದುರ್ಗ ವನದುರ್ಗ ಜಲದುರ್ಗದವರೆಲ್ಲ
ಕರವೆತ್ತಿ ಮುಗಿದು ಕಪ್ಪವನು |
ಭರದಿಂದ ತಂದಿತ್ತು ರಾಯ ಸೋಡೆನೆಯೆಲ್ಲ
ಬರುತಿರ್ದರಂದು ಭೀತಿಯಲಿ ೨೧

ಗಡಿಯವರು ಕೋಟೆ ದಣ್ಣಾಯಕರೆಲ್ಲ
ಬಿಡದೆ ಕಪ್ಪಗಳ ತಂದಿತ್ತು |
ಪೊಡವಿಪತಿಯ ಕೂಡೆ ನಡೆದರು ಬೇಡರು
ಬಿಡದೆ ಓಲೈಸುತಲಂದು ೨೨

ಅಡವಿಯ ಕಾವ ಬೇಡರು ಗಡಿಯೊಳಗಿಹ
ಬಿಡದೆಚ್ಚು ಗಜಸಿಂಹಗಳ |
ನಡುನೆತ್ತಿಗಳ ಸೀಳಿ ಮುತ್ತುಗಳ ತಂದು
ಪೊಡವಿಪತಿಗೆವೊಪ್ಪಿಸುವರು ೨೩

ಜಲ್ಲಿಯ ಮೃಗ [ಜೇನು]ತುಪ್ಪದ ಕಂಬಿಯ
ಅಲ್ಲಲ್ಲಿ ಹೆಬ್ಬುಲಿ ಚರ್ಮ |
ಎಲ್ಲವ ಹೊರೆಗಟ್ಟಿ ತಂದು ಕಾಣಿಕೆಯಿಕ್ಕಿ
ಎಲ್ಲರು ನಡೆದರೊಗ್ಗಿನಲಿ ೨೪

ಇಂತು ಅನಂತ ಸಂತೋಷದಿ ರಾಯನು
ಕಾಂತಾರದಿ ಬರುತಿರಲು |
ಚಿಂತಿಸಿ ವಿಶ್ವಾಮಿತ್ರ ಮಾಡಿದನೊಂದು
ತಂತ್ರವನೇನ ಹೇಳುವೆನು ೨೫

ಸೂಕರನಿಂದಲ್ಲದೆ ಹರಿಶ್ಚಂದ್ರನು
ಈ ಕಾಡಿಗೆ ಬಾರನೆಂದು |
ಸೂಕರನೊಂದ ಸೃಷ್ಟಿಸಿ ಮಂತ್ರಿಸಿ ಜಗ
ಲೋಕಾಧಿಪತಿಯ ತಹುದೆಂದ ೨೬

ಬಂದು ಸೂಕರ ಹರಿಶ್ಚಂದ್ರನು ಬರುತಿರೆ
ಮುಂದೆ ತಾ ಬಹಳ ದೂರದಲಿ |
ನಿಂದು ಮಲೆತು ದಾಡೆಗಡಿವುತಿರ್ದುದ ಕಂಡು
ಮುಂದಣ ಬಲ ಮುತ್ತಿತಂದು ೨೭

ಈಟಿಯೊಳಿಟ್ಟರೆ ತಪ್ಪಿಸಿಕೊಂಬುದು
ಪೆಟಲೊಳಿಡಲು ಜುಗುಳಾಕಿ(?) |
ತಟ್ಟನೆ ತುಂಡಿಸಿ ಖಡ್ಗದಿ ಹೊಯ್ದರೆ
ಬೆಟ್ಟದಂದದಿ ನಿಂದಿಹುದು ೨೮

ಶುನಿಗಳ ಬಿಟ್ಟರೆ ಸಿಗಿದಿಟ್ಟು ಬಿಡುವುದು
ಮನದಲಿ ಅತಿರೋಷವಿಹುದು |
ತನಗಿದಿರಾಂತರ ಕರುಳ ಕಿತ್ತಿಟ್ಟುರೆ
ವನದೊಳು ಹರಿದಾಡುತಿಹುದು ೨೯

ಕೊಲ್ಲದೆ ಬಿಡೆವು ಎನುತ್ತಲಿ ಶಬರರು
ಎಲ್ಲ ಭಾಷೆಯ ಮಾಡಿಕೊಂಡು |
ಬಿಲ್ಲನು ಕೈಕೊಂಡು ಮುಸುಕಿದ ಶಬರರ
ಎಲ್ಲರ ಕೊಂದುದಾ ಹಂದಿ ೩೦

ಹೊದ್ದಲಮ್ಮರು ಹಂದಿಯ ಕುರುಪಾಟಕ-
ಲ್ಲಿದ್ದವರೆಲ್ಲಕಂಗೆಟ್ಟು |
ಬುದ್ಧಿವಂತರ ಕರೆಯೆನ್ನುತ ಶಬರರು
ಇದ್ದರು ದೂರದೂರದಲಿ ೩೧

ಬಳಸಿಬಿಟ್ಟರು ಹರುವಲೆಗಳನಲ್ಲಲ್ಲಿ
ಮೆಳೆಯೊಳಗಿರ್ದ ಸೂಕರಗೆ |
ಅಳವಲ್ಲ ಕೊಲುವರೆ ನಮಗೆಂದು ಶಬರರು
ತಿರುಗಿದರಂದು ಹಿನ್ನೆಲೆಗೆ ೩೨

ಬಿಟ್ಟು ಬಾಣಗಳನು ಅಗ್ನಿಪುಟವಗೊಳಿಸೆ
ಲಕ್ಷ್ಯಕೆ ತಾರದೆಯಿರಲು |
ಪೃಥ್ವಿಪಾಲಕನಿಗೆ ಬಿನ್ನೈಸುವೆವೆಂದು
ಅರ್ತಿಯಿಂದೋಡಿ ಬಂದವರು ೩೩

ಭರದಿಂದ ಬಂದು ಕೈಮುಗಿದರು ಶಬರರು
ದೊರೆಗಳ ದೇವನೆ ಕೇಳು |
ಧರೆಯೊಳು ಹುಟ್ಟಿದ ಹಂದಿಯಂತಲ್ಲವು
ದೊರೆಗಳ ದೇವ ಚಿತ್ತೈಸು ೩೪

ಕೆದರಿತು ಶಬರರ ಬಿರುದಿನ ಶುನಿಗಳು-
ಯಿಂದು ಕೋಟ್ಯನುಕೋಟಿಯನು |
ಮುಂದುಗೆಡಿಸಿಕೊಂಡು ಕಾಡುತಿರ್ದಪುದೆಂದು .
ಬಂದು ಶಬರರು ಬಿನ್ನೈಸೆ ೩೫

ಇನ್ನೊಂದು ಬಿನ್ನಪವನು ಕೇಳೆಲೆ ರಾಯ
ಮುನ್ನೋರ್ವ ನರಕಾಸುರನು |
ಪನ್ನಗಧರನ ಶಾಪದಲಿ ಸೂಕರನಾಗಿ .
ಮುನ್ನಲಾ ಹಂದಿ ಕೊಂದಂತೆ ೩೬

ಮತ್ತೊಂದು ಕೇಳು ನೃಪೋತ್ತಮ ಹಂದಿಯ
ವೃತ್ತಾಂತವನು.... ....
ಮೃತ್ಯುಂಜಯನ ಶಾಪದಿ ಮೂಕದಾನವ
ಮರ್ತ್ಯಲೋಕಕೆ ಹಂದಿಯಾದ ೩೭

ಏಕೆ ಸೂಕರನಾದ ಮೂಕದಾನವನೆಂದು
ಲೋಕಾಧಿಪತಿ ಕೇಳಿದರೆ |
ಆ ಕಥೆಯೆಲ್ಲವ ಶಬರನಾಯಕ ಪೇಳ್ದು
ಭೂಕಾಂತಗೆ ಕೈಯ ಮುಗಿದು ೩೮

ಹಂದಿಯ ಕೊಂದ ಕಾರಣವೇನು ಎಲೆ ರಾಯ
ಮುಂದಕ್ಕೆ ನಡೆ ನೀನೆಂದು |
ಇಂದುಧರನ ಶಾಪದಿ ಹಂದಿಯೆನಲದ
ಕೊಂದವರಿಗೆ ಕೇಡು ಬಹುದು ೩೯

ಗುರುವಿನಾಜ್ಞೆಯ ಮೀರಬೇಡೆಂದು ಮಂತ್ರೀಶ
ಕರವ ಮುಗಿದು ಬೇಡಿಕೊಂಡ |
ಹರನ ಶಾಪದ ಹಂದಿಯೆಂದು ಬಿನ್ನೈಸಿದ
ಶಬರರ ನುಡಿಯ ಚಿತ್ತೈಸು ೪೦

ಇಂದ್ರನು ದೂರ್ವಾಸ ಮುನಿಯಿಂದ ಕೆಟ್ಟನು
[ಸೌಂ]ದರ ರೋಷಭಾಸ್ಕರನು |
ನಂದನರಿಂದ ಕೆಟ್ಟನು ರಾಮಚಂದ್ರನು
ಒಂದು ಹೊಮ್ಮಿಗದಿಂದಂದು ೪೧

ಧರೆಯೊಳು ಮದನವಿಜಯನೆಂಬ ಭೂಪಾಲ
ದುರುಳತನದಿ ಬೇಟೆಯಾಡಿ |
ಹರಿಣನು ವಾಜಿಯ ದೆಸೆಯಿಂದಲಾಚೆಗೆ
ಮರಣಕೆ ಬಂದುದಾತನಿಗೆ ೪೨

ಹಿಂದಣ ಕತೆಯನೆಲ್ಲವ ಪೇಳ್ದು ಮಂತ್ರಿಗೆ
ಅಂದು ನುಡಿದ ಹರಿಶ್ಚಂದ್ರ |
ಇಂದೆಮ್ಮ ಬಲವನೆಲ್ಲವ ಕೊಂದ ಹಂದಿಯ
ಕೊಂದಲ್ಲದೆ ಬಿಡೆನೆಂದ ೪೩

ಕೇಡು ಸಂಭವಿಸುವ ಕಾಲಕ್ಕೆ ಮಂತ್ರೀಶ-
ನಾಡಿದ ನುಡಿ ವಿಷವಾಯ್ತು |
ನಾಡ ಮಾತೇಕಿನ್ನು ಹರಿಶ್ಚಂದ್ರರಾಯಗೆ
ಕೇಡು ಸಂಭವಿಸುವ ಕಾಲ ೪೪

ಎಂದುಳ್ಳ ನೀತಿಮಾತನು ಪೇಳ್ದ ಮಂತ್ರಿಗೆ
ಯಿಂತೆಂದು ನುಡಿದ ಹರಿಶ್ಚಂದ್ರ |
ಸಂದೇಹವೇನು ಅಡವಿಯ ಮೃಗಗಳೇನು
ಕೊಂದರೆ ಭಯವಾರದೆಂದ ೪೫

ಇಂದ್ರಾಗ್ನಿ ಯಮ ನೈರುತ್ಯ ವರುಣ ವಾಯು
ಮುಂದೆ ಕುಬೇರಯೀಶಾನ್ಯ |
ಅಂದಜ ಹರಿ ಸುರ ವಿಧಿಯಿಂದ ಕೆಟ್ಟರು
ಇಂದೀ ನೃಪರ ಪಾಡೇನು ೪೬

ಧರೆಯೊಳು ಸೋಮದತ್ತನ ಮಗ ಶೂದ್ರಕ
ಭರದಿ ವಿಧಿಯ ಗೆಲ್ವೆನೆಂದು |
ಕರಚರಣವ ಹರಿಯಿಸಿಕೊಳ್ಳೆ ವಾಜಿಯಿಂ
ಸ್ಥಿರ ಕಾಂಚಿಯಾಲದಿ ಮೆರೆಯೆ ೪೭

ಇಂತೆಂದು ಬುದ್ಧಿಯ ಪೇಳಿದ ಮಂತ್ರಿಯ
ಮಾತೊಂದು ತೃಣಕೆ ಕಡೆಮಾಡಿ |
ಇಂದೆಮ್ಮ ಬಲವನೆಲ್ಲವ ಕೊಂದ ಹಂದಿಯ
ಕೊಂದಲ್ಲದೆ ಹೋಗೆನೆಂದ ೪೮

ಈಸು ಬಲವನೆಲ್ಲ ಹೇಸದೆ ಕೊಂದೆಮ್ಮ
ಗಾಸಿ ಮಾಡಿದ ಸೂಕರನ |
ಈಸು ಬಲವು ಕೂಡಿ ಕೊಲ್ಲದೆ ಬಿಟ್ಟರೆ
ಹೇಸಿಕೆಯಹುದು ಲೋಕದಲಿ ೪೯

ಕೆದರಿದ ಕೇಶ ಕಂಪಿಸುವಳ್ಳೆ ಬಿಡುಮುಳ್ಳು
ಬರಲು ತಾಗಿಯೆ ನೆತ್ತರೊಗುತ |
ಮೆರೆವುತ ಬರುವನ ಕಂಡು ಮನ್ನೆಯರೆಲ್ಲ
ಮೊರೆಯೆಲ್ಲಿಯದೆಂದು ಕೇಳೆ ೫೦

ನಿಲ್ಲದೋಡುತ ಶಬರನು ನಾಯಿಗಳನೆಲ್ಲ
ಅಲ್ಲಿ ಕೊಂದಿತುಯೆಂದೆನುತ |
ಎಲ್ಲದು ತೋರನೆ ಬರಲಮ್ಮೆನೆನ್ನುತ
ಅಲ್ಲಿಗೆ ನೀವೆ ಹೋಗೆಂದ ೫೧

ಹಂದಿಯ ಕಾಣುತ್ತ ಕಣ್ಣುಗತ್ತಲೆಯಾಗಿ
ಮುಂದೆ ನಿಂದರ ಕಾಣಬಾರ |
ಕೊಂದರು ಕೊಲುವಿರಲ್ಲದೆ ಬರಲಮ್ಮೆವು
ಎಂದು ನೃಪಗೆ ಮೊರೆಯಿಡಲು ೫೨

ಹೇಡಿ ಬೇಡನ ಕತ್ತ ಹಿಡಿದು ನೂಕಿಸಿಬಿಟ್ಟು
ಕೂಡಿದ ರಾಯಬಲವನು |
ಒಡನೆ ತೊಂಬತ್ತಾರಕ್ಷೋಣಿಯ ಬಲ
ನಡೆದಿತು ಸೂಕರನಿದ್ದೆಡೆಗೆ ೫೩

ಪಲ್ಲಕ್ಕಿಯನಿಳಿದನು ರಾಯ ಕೋಪದಿ
ಎಲ್ಲ ಬಲವ ಕೂಡಿಕೊಂಡು |
ಬಿಲ್ಲ ತಕ್ಕೊಂಡು ವಾಜಿಯನೇರಿ ನಡೆದನು
ಅಲ್ಲಿ ಸೂಕರನಿದ್ದೆಡೆಗೆ ೫೪

ದಾಡೆಗಡಿದು ಕೋಡ ಮಸೆದೊಂದು ಹಕ್ಕಿಯ
ಕೂಡೆ ಲಂಘಿಸಿ ಹೊಯ್ದು ತೃಣವ |
ಕೂಡಿದ ಚತುರಂಗಬಲವನು ಬೆದರಿಸಿ
ರೂಢಿಪತಿಯ ಮುಂದೆ ನಿಲಲು ೫೫

ಅಂದು ಕಂಡನು ಹಂದಿಯನತ್ತಲಿತ್ತಲು
ಉದ್ದಂಡ ಮನ್ನೆಯ ಗಜಸಿಂಹ |
ನಿಂದು ಕೊಂಡಾಡಿದಯಿಂತಪ್ಪ ಹಂದಿಯ
ಎಂದು ನಾ ಕಂಡುದಿಲ್ಲೆಂದ ೫೬

ಕಾಲಭೈರವನೊ ಕಾರ್ಮುಗಿಲಿಳಿಗಿಳಿಯಿತೊ
ನೀಲಾಚಲದ ಹಬ್ಬುಗೆಯೊ |
ಈ ಲೋಕದ ಕಾರ್ಗತ್ತಲೆಯೊಯೆನೆ
ಶೂಲಪಾಣಿಯೆ ಬಲ್ಲನೈಸೆ ೫೭

ಸಿಡಿಲ ನಾಲಗೆಯೊ ಮಾರಿಯ ಕೈಯ ಕತ್ತಿಯೊ
ಅಡರಿದ ಕಾರ ಮಿಂಚುಗಳೊ |
ಪೊಡವಿಯ ವೃಕ್ಷಗಳೆನೆ ಮೈರೋಮವು
ಬಿಡದೆವೊಪ್ಪಿರ್ದುದಾ ಹಂದಿ ೫೮

ಕಾಣುತ ಶಬರರಾ ಶುನಿಗಳ ಬಿಟ್ಟರು
ಮಾಣದೆಲ್ಲವ ತಲೆದಡಹಿ |
ಕ್ಷೋಣಿಪತಿಯ ಮುಂದೆಯೆಲ್ಲರು ಹೊಕ್ಕರು
ಹಾಣಾಹಣೆಯೊಳವರಂದು ೫೯

ಹಂದಿಯು ತೋರುತ ಹಿಂದುಮುಂದಾಗುತ
ಅಂದು ಘೋರಾರಣ್ಯದಲಿ |
ಹಿಂದಟ್ಟಿ ಬರುವ ತುರಗವ ಕಾಣುತ್ತ
ಹಂದಿ ಹೊಕ್ಕಿತು ಆ ವನವ ೬೦

ಹಂದಿಯೊಡನೆ ನೆಗೆಸಿದ ತನ್ನ ತುರಗವ
ಅಂದು ಹರಿಶ್ಚಂದ್ರನೃಪನು |
ಹಂದಿಯ ಕಾಣದರಸ ಮಾಯವಾದೀತು
ಎಂದು ನೊಂದನು ಮನದೊಳಗೆ ೬೧

ಹಂದಿಯು ಬಂದಿತು ವಿಶ್ವಾಮಿತ್ರನ
ನಂದನವನದಿ ಬಯಲಾಯ್ತು |
ಅಂದು ಹರಿಶ್ಚಂದ್ರ ಹಿಂದು ಮುಂದೆಣಿಸದೆ
ನಂದನದೊಳು ಅರಸಿದನು ೬೨

ಬಳಲಿದ ತುರಗವನಿಳಿದು ನೀರ್ಗುಡಿಸಿಯೆ
ನೆರಳಲಿ ಕಟ್ಟಿ ಮೈದಡವಿ |
ಎಳೆಹುಲ್ಲ ಹಾಕಿ ತರಗೆಲೆ ಮೇಲೆ ಕುಳ್ಳಿರ್ದು
ಅಳುಕುತ ವನವ ನೋಡಿದನು ೬೩

ಸತಿಸುತ ಮಂತ್ರಿವೆರಸಿ ಹರಿಶ್ಚಂದ್ರನು
ಅತಿಚಿಂತೆಯಲಿ ಕುಳ್ಳಿರ್ದು |
ಯತಿಕುವರನ ಕಂಡು ವನವಾರದೆಂದರೆ
ಅತಿಶಯದಲಿ ಪೇಳ್ದನಂದು ೬೪

ನೊಸಲ ಕಣ್ಣುರಿಯಿಂದ ಕುಸುಮಶರನ ಸುಟ್ಟು
ಭಸಿತವ ಮೈಯೊಳು ಧರಿಸಿದ |
ಅಸಮಾಕ್ಷ ವಿಶ್ವಾಮಿತ್ರನ ವನವೆನೆ
ಹೊಸ ಗ್ರಹ ಸೋಂಕಿದಂತಾದ ೬೫

ಒಲಿದರೀರೇಳು ಲೋಕವ ರಕ್ಷಿಸುವನು
ಮಲೆತರೆ ಸಂಹರಿಸುವನು |
ಚಲದಂಕ ವಿಶ್ವಾಮಿತ್ರನ ವನವಿದು
ತೊಲಗು ಜಗದಿ ಮುನಿಯಾಣೆ ೬೬

ಎಂದ ಮಾತನು ಕೇಳಿ ಹರಿಶ್ಚಂದ್ರರಾಯನು
ಮುಂದರಿಯದೆ ಬಂದೆನೆನಲು |
ಅಂದು ಬರಲು ಆನೆ ಕುದುರೆ ಒಂಟೆಗಳೆಲ್ಲ
ಚಂದಗೆಡಿಸಿದೊ ಆ ವನವ ೬೭

ನಿಂಬೆ ದಾಳಿಂಬೆ ಹೇರೀಳೆ ಕಿತ್ತಿಳೆ ಮಾವು
ಜಂಬುನೇರಳೆ ಫಲವಡಕೆ |
ಅಂಬರದೊಳಗಿಹ ಕೆಂದೆಂಗು ದಾಳಿಯು
ಕೊಂಬು ಕೊಂಬೆಗಳೆಲ್ಲ ತರಿಯೆ ೬೮

ಕೊಳಗಳೆಲ್ಲವ ಹೊಕ್ಕು ಕದಡಿದೊ ಮದಗಜ
ಬಳಲಿದ ಚತುರಂಗಬಲವು |
ಅಳುಕದೆ ಮುನಿಯ ಸಾಮರ್ಥ್ಯವನರಿಯದೆ
ಬಳಸಿ ಬಿಟ್ಟರು ಪಾಳಯವ ೬೯

ಅಂದು ಹರಿಶ್ಚಂದ್ರ ಆ ವನ ಕೆಡಲಾಗಿ
ನೊಂದು ತನ್ನಯ ಮನದೊಳಗೆ |
ಹಿಂದೆ ಮಾಡಿದ ದಾನಧರ್ಮವೆಲ್ಲವು ಕೆಟ್ಟೊ
ಇಂದು ಈ ವನದಿಂದಲೆನಗೆ ೨೦

ಗುರುವಿನಾಜ್ಞೆಯ ಮೀರಿದ ಚಿಂತೆಯೊಂದು ಮೇ-
ಲೊರಹ ಸಿಕ್ಕದ ಚಿಂತೆಯೊಂದು |
ವರಮಂತ್ರಿ ಪೇಳೆ ಕೇಳದ ಚಿಂತೆ ಮೂರನೆ
ಸುರತರು ಕೆಡೆ ಚಿಂತೆ ನಾಲ್ಕು ೨೧

ಇಂತು ಅನಂತ ಚಿಂತೆಯ ಹರಿಶ್ಚಂದ್ರನ-
ಯೆಂತು ನಾ ನೋಡುವೆನೆನುತ |
ಚಿಂತಿಸಿದ ಸೂರ್ಯನು ಪಡುಗಡಲೊಳು ಬೀಳೆ
ಸಂತಸವಾದುದಂಬುಧಿಗೆ ೨೨

ಇಂದುವದನೆಯ ತೊಡೆಯ ಮೇಲೆ ತಲೆಯಿಟ್ಟು
ಅಂದು ವೀಳೆಯವ ತಕ್ಕೊಳುತ |
ಕಂದನ ತೊದಲ್ನುಡಿಗಳ ಕೇಳುತಲಿರುತ
ಮಂದ ಕವಿಯೆ ಒರಗಿದನು ೨೩

ಕತ್ತಲೆಗವಿಯಿತು ಹರಿಶ್ಚಂದ್ರ ಚಿತ್ತೈಸು
ಸತ್ಯವ ಸೂರೆಗೊಂಬವನೆ |
ಅತ್ಯಂತ ಚಿಂತೆಯೊಳೊರಗಿದ ರಾಯಗೆ
ಮತ್ತೊಂದು ಕನಸು ಕಾಣಿಸಲು ೨೪

ಅಂಜುತ ಅಳುಕುತ ಒರಗಿದ ರಾಯಗೆ
ಮುಂಜಾವದಲೊಂದು ಕನಸು |
ಕುಂಜರ ಸಿಂಹನ ಕನಸ ಕಂಡಂದದಿ
ಅಂಜಿಯೆರಗಿದನಾ ನೃಪನು ೨೫

ಅಂಜದಿರೆನುತ ಎದೆಯ ತಟ್ಟಿ ಎಬ್ಬಿಸಿ
ಕಂಜಮುಖಿಯು ಬೇಗದಲಿ |
ನಂಜುಗೊರಳ ವಿರೂಪಾಕ್ಷನ ನೆನೆಯಲು
ರಂಜಿಪ ಭಸಿತವನಿಟ್ಟು ೨೬

ಕಂಕಣವನು ಮುಖದಿಂದ ನಿವಾಳಿಸಿ
ಭೋಂಕನೆ ಕಾಲ್ದೆಸೆಗಿರಿಸಿ |
ಶಂಕರನರ್ಧಾಂಗಿ ಸಲಹೆಂದು ಭಸಿತವ
ಕುಂಕುಮಗಂಧಿ ಧರಿಸಿದಳು ೭೭

ಈರೇಳು ಲೋಕಕ್ಕೆ ವೀರನೆನಿಸಿಕೊಂಬ
ಧೀರ ಹರಿಶ್ಚಂದ್ರ ನೀನು |
ಕಾರಣವಿಲ್ಲದೆ ಹೆದರಿದ ಬಗೆಯೇನು
ಭೂರಮಣನೆ ಹೇಳೆಂದ ೭೮

ಪರಬಲ ಮಸ್ತಕ ಶೂಲನೆನಿಸಿಕೊಂಬ
ಬಿರುದುಳ್ಳ ರಾಯರ ಗಂಡ |
ಧುರದೊಳು ಮಲೆತರ ಶಿರವ ಚೆಂಡಾಡುವೆ
ಕರ ಭೀತಿಯೇಕಾದುದೆಂದು ೭೯

ಚಂದ್ರಮತಿಯೆ ಕೇಳು ನಾ ಕಂಡ ಕನಸೆಲ್ಲ
ಒಂದನುಳಿಯದೆ ಪೇಳುವೆನು |
ಚಂದ್ರನ ರಾಹು ಕೊಂಡುಳುಹಿ ಬಿಟ್ಟಂತಾಯ್ತು
ಇಂದುವದನೆ ಕೇಳೆಂದ ೮೦

ಘುಡುಘುಡಿಸುತಲೊಬ್ಬ ಮುನಿನಾಥ ಕುಳಿತಿರ್ದ
ನಡುವೋಲಗ ಶಾಲೆಯಲ್ಲಿ |
ಹಿಡಿದೊಪ್ಪುವ ಮಣಿಗಂಬ ಹೊಂಗಲಶವ
ಸದೆ ಬಡಿದೆಲ್ಲರ ಕೆಡಹಿ ೮೧

ಅಂದು ಸಿಂಹಾಸನದಿಂದೆನ್ನ ನೂಕಲು
ಬಂದು ಕಾಗೆಯು ಎದೆಮೆಟ್ಟಿ |
ಸಿಂದು ಕರೆವುತಿರೆ ಶಿವಭವನವ ಹೊಕ್ಕೆ
ಮುಂದಣಂತಸ್ಥವೇನೆಂದ ೮೨

ಕಾಳ ರಕ್ಕಸ ಬಂದೊದ್ದು ಕೊಂದೆನ್ನನು
ಹಾಳು ಬಾವಿಗೆ ನೂಕುವನು |
ಚೀಳುತ ಮೊರೆಯಿಡೆ ವಿರೂಪಾಕ್ಷ ಬಂದೆನ್ನ
ತೋಳ ಹಿಡಿದು ಸೆಳೆಕೊಂಡ ೮೩

ಜಡೆ ವಿಭೂತಿಯು ತೊಡೆದ ರುದ್ರಾಕ್ಷಿಯು
ಉಟ್ಟ ಪುಲಿಯ ಚರ್ಮದುಡಿಗೆ |
ಬಿಟ್ಟ ಕೆಂಜೆಡೆ ಸುಲಿಪಲ್ಲು ಶೂಲದ ಪೆಣ
ಬಿಟ್ಟು ಬಾಯ್ದೆರೆಯೆ ಹೆದರಿದೆನು ೮೪

ಅಂಜದಿರೆಂದಭಯವನಿತ್ತು ನೊಸಲೊಳು
ರಂಜಿಪ ಭಸಿತವನಿಟ್ಟು |
ಅಂಜಬೇಡೆಂದನ ಕಾಣದೆ ಕಂಗೆಟ್ಟು
ಅಂಜಿ ನಾನೊರಲಿದೆನೆಂದ ೮೫

ಮುಂದಣ ಕನಸು ಹೊಲ್ಲ ಕೇಳೆಲೆ ರಾಯ
ಹಿಂದೆ ಕಂಡುದು ಕರ ಲೇಸು |
ಅಂದು ವಿರೂಪಾಕ್ಷ ಅಂಜಬೇಡೆನ್ನುತ
ಬಂದು ಕೈವಿಡಿದುದು ಲೇಸು ೮೬

ಗುರುವಿನಾಜ್ಞೆಯ ಮೀರಿ ಸೂಕರನೊಡಬಂದೆ
ವರಮಂತ್ರಿ ಸಾರಿ ಪೇಳಿದರೆ |
ದುರುಳತನದಿ ಕೌಶಿಕನ ವನವ ಹೊಕ್ಕೆ
ಇರುಳೊಂದು ಕನಸ ನಾ ಕಂಡೆ ೮೭

ಎಂದು ಚಿಂತಿಸಿ ತನ್ನ ಮನದೊಳು ಹರಿಶ್ಚಂದ್ರ
ಅಂದತಿ ದುಗುಡದೊಳಿರಲು |
ಚಂದ್ರಮತಿಯು ಪನ್ನೀರ ಮುಖಕೆ ಕೊಟ್ಟು
ತಂದು ಕರ್ಪೂರ ವೀಳ್ಯವಿತ್ತು ೮೮

ಇತ್ತ ಹರಿಶ್ಚಂದ್ರ ಅತಿ ದುಗುಡದೊಳಿರೆ
ಅತ್ತ ಗಾಯದ ಸೂಕರನು |
ಮತ್ತೊಂದು ಮೆಳೆಯೊಳಗಿರ್ದು ಓಡಿತು ಬೇಗ
ನೆತ್ತರ್ವೊಗುತ ಮುನಿಯೆಡೆಗೆ ೮೯

ನೆಟ್ಟಂಬು ಸಹಿತ ವಿಶ್ವಾಮಿತ್ರನೆಡೆಯೊಳು
ತಟ್ಟನೆ ಬೀಳಲು ಕಂಡು |
ಕೆಟ್ಟ ವಿಶ್ವಾಮಿತ್ರ ಕೋಪಿಸಿ ಬೆಮರಿಡೆ
ಹುಟ್ಟಿದರಾಗ ಹೊಲತಿಯರು ೯೦

ಯತಿಗೆ ಕೊಪವೆ ಹೊಲೆಯೆಂಬ ಗಾದೆ ಮಾತು
ಶ್ರುತಿಶಾಸ್ತ್ರದೊಳಗಲ್ಲದಿಲ್ಲ |
ಯತಿಗೆ ಕೋಪವೆ ಹೊಲೆಯೆಂಬುದ ತೋರಿದ
ಕ್ಷಿತಿಯೊಳು ವಿಶ್ವಾಮಿತ್ರ ೯೧

ಹಿಂದೆ ನಾ ನೆನೆದ ಕಾರ್‍ಯವು ಕೈಗೂಡಿತು
ಬಂದು ಸಿಕ್ಕಿದ ಹರಿಶ್ಚಂದ್ರ |
ಮುಂದೆ ನಾನಾ ತೆರದಲಿ ಕೆಡಿಸದೆ ಬಿಡೆ-
ನೆಂದು ಗರ್ಜಿಸಿ ಪಲ್ಮೊರೆದ ೯೨

ಕೋಪದೊಳ್ಪುಟ್ಟಿದನಾಮಿಕ ಸತಿಯರ
ರೂಪ ಬಣ್ಣಿಸಲಳವಲ್ಲ |
ರೂಪು ಯೌವನ ಕಂಡಾರಾರು [ಸಿ]ಕ್ಕರು
ಚಾಪಲಾಕ್ಷಿಯರಿಗೆ ಸೋತು ೯೩

ನೀಲದ ಪುತ್ಥಳಿಯೊ ಕಾರ್ಗತ್ತಲೆಯೊಳು
ಮೇಲೆ ಕವಿದು ನಿಂದಂತೆ |
ಮೂಲೋಕವ ಕೊಲುತಿಪ್ಪ ವಶ್ಯದ ಕಪ್ಪೊ
ಕಾಲಿಗೊಪ್ಪುವ ವಾಹನವೊ ೯೪

ಮುನಿಯ ಕೋಪದಿ ಜನಿಸಿದ ಕಾರಣದಿಂದ
ಅವನಿಗೆ ಹೊಲತಿಯರಾಗಿ |
ಮನದೊಳಳುಕಿಲ್ಲದೆ ದೂರದಿ ನಿಂದು ಕೇಳ್ದರು-
ಯೆಮಗಾವುದು ಬೇಸಸೆನಲು ೯೫

ಜನಪತಿ ಹರಿಶ್ಚಂದ್ರ ವನದೊಳಗಿರುವನ
ಮನಕೆ ಸಂತಸ ಮಾಡಿ ನೀವು |
ವಿನಯದಿಂದವನನೊಲಿಸಿಕೊಳ್ಳೆ ಮತ್ತೆ
ಮುನಿ ಕೌಶಿಕ ಕಳುಹಿದನು ೯೬

ಪಟ್ಟೆಯ ಸೀರೆ ಮೂಕುತಿ ರತ್ನದೋಲೆಯ
ನೆಟ್ಟನೆ ಮುತ್ತಿನ ಸರವ |
ಸೃಷ್ಟಿಗೆ ಪೊಸತೆನಿಸುವ ಪುಸ್ತಿ ಪದಕವ
ಕಟ್ಟಿಕೊಳ್ಳೆಂದಿತ್ತನಂದು ೯೭

ಚೆನ್ನೆಯರ ನಡುವಿಗೆ ರನ್ನದೊಡ್ಯಾಣವ
ಬಿನ್ನಣಿಸಿದ ನೇವಳವು |
ಹೊನ್ನ ಬಳೆ ರ್‍ಯಾಗಟೆ ಸರಪಣಿ ಮೆರೆದುವು
ಚೆನ್ನೆಯರ ನೆರೆಯ ಮಧ್ಯದಲಿ ೯೮

ಚಿನ್ನದ ಕಾಲುಂಗುರ ಮಂಟಕೆ ಪಿಲ್ಲಿ
ಹೊನ್ನಂದುಗೆ ಕಾಲ ಲುಳಿಯು |
ರನ್ನದ ಸರಗೆಜ್ಜೆ ತಳುಕಿನ ಬೊಂಬೆಯೊ
ಮನ್ಮಥನಾನೆಯಂಥವರು ೯೯

ಸುರಪತಿಯೋಲಗದೊಳೂರ್ವಶಿ ರಂಭೆ ಮುನಿಮು
ನರಲೋಕಕೆ ಬಂದರೆನಲು |
ಉರಗಾಂಗನೆಯರು ಧರೆ ನೋಡಬಂದಂತೆ
ಇರುತಿರ್ದರಂಬುಜಾಕ್ಷಿಯರು ೧೦೦

ಕಸ್ತೂರಿ ಕರ್ಪೂರ ಪುನುಗು ಜವಾಜಿಯ
ಒಪ್ಪುವ ಅಗಿಲು ಚಂದನವು |
ಕುಪ್ಪಿಗೆಯೊಳಗಿರ್ದ ಪನ್ನೀರು ಕುಂಕುಮ
ಒಪ್ಪದಿಂದಿತ್ತನವರಿಗೆ ೧೦೧

ಸತ್ಯವುಳ್ಳವನ ಅಸತ್ಯನ ಮಾಡೆಂದು
ಮತ್ತಾ ಸತಿಯರಿಗಂದು |
ಇತ್ತನು ಮುದ್ರೆಯುಂಗುರವನು ಮತ್ತವರಿಗೆ
ಅತ್ಯಂತ ಸಂತೋಷದಿಂದ ೧೦೨

ಸೃಷ್ಟಿಯೊಡೆಯ ಹರಿಶ್ಚಂದ್ರನ ಕೆಡಿಸೆಂದು
ನೆಟ್ಟನಾ ಸತಿಯರ ಕಳುಹೆ |
ದಿಟ್ಟ ಹರಿಶ್ಚಂದ್ರ ಸತ್ಯವ ಬಿಡದಿರೆ
ತಟ್ಟನೆ ಪ್ರಾಣ ಬಿಡುವೆವು ೧೦೩

ಇಂದುಮುಖಿಯರು ಭಾಷೆಯ ಮಾಡಿಕೊಂಡರು
ಒಂದು ಕ್ಷಣದೊಳೊಲಿಸುವೆವು |
ಕುಂದ ಹೊರಿಸಿ ನಮ್ಮನೊಲ್ಲದೆ ಬಿಟ್ಟರೆ
ಮುಂದಲೆ ಮೂಗರಿಸೆನಲು ೧೦೪

ಕೊಟ್ಟನು ಕರ್ಪೂರ ವೀಳ್ಯವನವರಿಗೆ
ನೆಟ್ಟನೆ ಹೋಗಿ ನೀವೆಂದು |
ಕೆಟ್ಟ ವಿಶ್ವಾಮಿತ್ರ ಕಳುಹಿದನಾಕ್ಷಣ
ಸೃಷ್ಟಿಪತಿಯ ಓಲಗಕೆ ೧೦೫

ಪಟ್ಟದ ಮದದಾನೆಯಂದದಿ ನಡೆದರು
ಸೃಷ್ಟಿಪತಿಯ ಓಲಗಕೆ |
ನೆಟ್ಟನೆ ದಂಡಿಗೆವಿಡಿದು ಕೊಂಡಾಡಲು
ಸೃಷ್ಟಿಪತಿಯು ಬೆರಗಾದ ೧೦೬

ಹರವಿ ತುಂಬಿದ ಹಾಲಿಗೆ ಹುಳಿ ಹೊಕ್ಕಂತೆ
ಪರಿಮಳವೆಸೆವ ಸಾರಿನೊಳು |
ಇರದೊಂದಿ ನೀರು ಸುಣ್ಣವು ಬೆರೆದಂದದಿ
ಹರಿಶ್ಚಂದ್ರನಿದ್ದೆಡೆಗವರು ೧೦೭

ಉರಿವ ದೀವಿಗೆಯ ಕೆಡಿಸಲೆಂದು ಬಿರುಗಾಳಿ
ಉರವಣಿಸಿಯೆ ಬಂದಂತೆ |
ಹರಿಶ್ಚಂದ್ರನ ಕೆಡಿಸಲು ಬಂದ ಸತಿಯರ
ಇರವನದಾರು ಬಣ್ಣಿಪರು ೧೦೮

ಇಂದುವದನೆಯರು ಹರಿಶ್ಚಂದ್ರರಾಯನಿಗೆ
ವಂದಿಸಿ ಕರವೆತ್ತಿ ಮುಗಿದು |
ಅಂದು ಚಿರಂಜೀವಿಯಾಗೆಂದು ಹರಸಿ ಮುದ-
ದಿಂದ ಕೊಂಡಾಡಿದರವರು ೧೦೯

ಗಂಡರ ಗಂಡನೆ ಕದನ ಪ್ರಚಂಡನೆ ಭೂ
ಮಂಡಲವಾಳ್ವ ರಾಯರಿಗೆ |
ಗಂಡನೆ ಹರಿಶ್ಚಂದ್ರ ಭೂಪಾಲ ನೋಡೆಂದು
ಕೊಂಡಾಡಿದರೋಲಗದಿ ೧೧೦

ಹಿಂಡುಮನ್ನೆಯರ ಕೋಳಾಹಳಸಮೀರ
ಗಂಡನೆ ಶರಭ ಭೇರುಂಡ |
ಚಂಡವಿಕ್ರಮನುದ್ದಂಡರಾಯನೆಯೆಂದು
ಕೊಂಡಾಡಿದರೋಲಗದಿ ೧೧೧

ಪರಬಲತಿಮಿರ ಮಾರ್ತಾಂಡನೆ ಅರಿಬಲ
ಶರಧಿಗೆ ವಡಬಾನಳನೆ |
ಧರೆಯೊಳು ಮಲೆತರಿಗಳ ಗಂಡ ಗಿರಿವಜ್ರ
ಸರಿ ಯಾರು ಮೂರುಲೋಕದಲಿ ೧೧೨

ಬಂದು ಕೊಂಡಾಡಿದ ಸತಿಯರ ಕಾಣುತ
ಅಂದು ಹರಿಶ್ಚಂದ್ರ ನೃಪನು |
ಇಂದಿನವರೀ ಲೋಕದ ಸುದತಿಯರಲ್ಲ-
ವೆಂದು ಸಂದೇಹಿಸಿ ನುಡಿದ ೧೧೩

ಇಂದ್ರನ ಶಚಿಯೊ ಮನ್ಮಥನ ರತಿಯೊ ನಾ-
ಗೇಂದ್ರಲೋಕದ ವನಿತೆಯರೊ |
ಅಂದಿನ ಊರ್ವಶಿ ರಂಭೆಯೊ ಎನ್ನುತ
ಒಂದು ಗಳಿಗೆಯೀಕ್ಷಿಸಿದನು ೧೧೪

ಈ ರೂಪು ಈ ಗುಣ ಈ ವಿದ್ಯ ಚಾತುರ್ಯ
ವಾರಿಧಿ ಮಧ್ಯದೊಳಿಲ್ಲ |
ಮಾರಾರಿಯ ಶಾಪದಿ ಬಂದರಲ್ಲದೆ
ಧಾರುಣಿಯೊಳು ಹುಟ್ಟಲಿಲ್ಲ ೧೧೫

ಎಂದು ಚಿಂತಿಸುತಿದ್ದ ರಾಯನಯಿದಿರೊಳು
ಅಂದು ದಂಡಿಗೆಯ ಮೇಳೈಸಿ |
ಚಂದದಿ ನಾನಾ ರಾಗವೆಲ್ಲವ ಪಾಡಿ
ಅಂದಾಸನ ಬಿಡಿಸಿದರು ೧೧೬

ತೋಡಿ ಭೂಪಾಳಿ ಒಡ್ಡಿ ದನ್ಯಾಸಿಯ
ಗುಂಡಕ್ರಿಯ ಮಲಹರಿಯ |
ದಂಡಿಗೆವಿಡಿದು ಪಾಡಿದರೊಲವಿಂದ ಭೂ
ಮಂಡಲ ಮೋಹಿಸುವಂತೆ ೧೧೭

ಆಹರಿ ಶ್ರೀರಾಗ ಮಲಹರಿ ಲಲಿತ ವ-
ರಾಳಿ ಗೌಳ ದೇಶಾಕ್ಷಿ |
ದೇಶಿ ಗುಜ್ಜರಿ ಭೈರವಿ ಮೇಘರಂಜಿಯ-
[ನಾಳಕ] ಯರು ಪಾಡಿದರು ೧೧೮

ಮಾಳವ ಮಧುಮಾಧವಿ [ಗವು]ಳ ಭವುಳಿ
ಸಾಳಗ ಶಂಕರಾಭರಣ |
ಹೇಳಲಳವೆ ಕಾಂಭೋದಿ ಗುಜ್ಜರಿಯ ಬಂ-
ಗಾಳವನೊಲಿದು ಪಾಡಿದರು ೧೧೯

ಸಂಗೀತ ಸಾಹಿತ್ಯ ಗೀತ ಪ್ರಬಂಧವು
ಶೃಂಗಾರದ ದರುವುಗಳ |
ಅಂಗನೆಯರು ಪಾಡಲುವೋಲಗವೆಲ್ಲ
ಅಂಗಜನಿಗೆ ಗುರಿಯಾಯ್ತು ೧೨೦

ಹಾಡುವ ಸತಿಯರ ಗಾಡಿತನಕೆ ಮೆಚ್ಚಿ
ಬೇಡಿ ನಿಮ್ಮಿಷ್ಟವನೆನಲು |
ಬೇಡುವೆ ನಿನ್ನೊಳು ನಾಚದೆಯೆಮಗೆ ನೀ
ನೀಡು ಭೋಗವನೆಂದೆನಲು ೧೨೧

ಕೊಟ್ಟನು ಹಾಡಿದ ಸತಿಯರಿಗಂದುಡೆ
ಪಟ್ಟೆ ನಾಣ್ಯವ ಸೀರೆಗಳನು|
[ತೊ]ಟ್ಟ ಬಂಗಾರವೆಲ್ಲವ ಕಳೆದಿತ್ತನು
ಸೃಷ್ಟಿಪತಿಯು ಮನಮೆಚ್ಚಿ ೧೨೨

ಕೂಡಿ ಆಸೆಗೆ ಬಂದವರಲ್ಲಯೆಲೆ ರಾಯ
ನಾಡೊಳು ನಿಮ್ಮ ಕೀರ್ತಿಯನು |
ಪಾಡಿ ಕೊಂಡಾಡಲು ಕೇಳಿ ಬಂದೆವು ನಾವು
ರೂಢಿಪತಿಯೆ ಮನ್ನಿಸೆನುತ ೧೨೩

ಕನ್ನೆವೆಣ್ಗಳು ನಾವು ಕೆಟ್ಟು ನಡೆದರಲ್ಲ
ನಿನ್ನ ಬಯಸಿ ಬಂದೆವೆನುತ |
ಚನ್ನೆಯರುಗಳು ಪೇಳಲು ಹರಿಶ್ಚಂದ್ರಗೆ
ಬಿನ್ನ]ಣ]ದ ಮಾತನಾಡಿದರು ೧೨೪

ಕೆಟ್ಟ ಸತಿಯರಾಡಿದ ಮಾತು ಕಿವಿಯೊಳು
ನೆಟ್ಟ ಶೂಲದ ತೆರನಾಗೆ |
ಕೆಟ್ಟು ನುಡಿಯ ಬೇಡಿ ಹೋಗಿ ನೀವೆನ್ನುತ
ಸೃಷ್ಟಿಪತಿಯು ಕೋಪಿಸಿದ ೧೨೫

ಜಲದ ಪ್ರಮಾಣವ ಕುಮುದವು ತೋರ್ಪಂತೆ
ಕುಲವದೋರುವದು ನಾಲಗೆಯು |
ಹೊಲತಿಯರಲ್ಲದೆ ಈ ಮಾತು ಬರುವದೆ
ತೊಲಗಿ ಬೇಗದೊಳೆಂದು ನೃಪನು ೧೨೬

ಹೊಲೆಯಿಂದ ಜನಿಸಿದ ಮಾನವರಲ್ಲದೆ
ಹೊಲೆ ನಿಲ್ಲದಾರು ಹುಟ್ಟಿದರು |
ಹೊಲಸಿನೊಳಗೆ ನವಮಾಸ ಬೆಳೆದುಬಂದು
ಕುಲಕೆ ಹಾರುವರೆ ಬಲ್ಲವರು ೧೨೭

ಮುತ್ತು ರತ್ನವು ಕ್ಷೀರ ಪತ್ತಾದ ಮಧು ದಂತ
ಕಸ್ತೂರಿ ಪುಣುಗು ಜವಾಜಿ |
ಉತ್ತಮವಲ್ಲೆಂದು ಮತ್ತಾರು ಹಳಿದಾರು
ಮುತ್ತುರತ್ನವು ಪರಿಮಳವ ೧೨೮

ನವರತ್ನದೊಳಗೊಂದು ಸ್ತ್ರೀರತ್ನವೆಂಬುದು
ಭುವನದೊಳಗೆ ಕೇಳರಿಯಾ |
ಯುವತಿಯರಿಗೆ ರೂಪು ಲಾವಣ್ಯವಿರುತಿರೆ
ಅವರೊಲ್ಲದೆ ಬಿಟ್ಟರುಂಟೆ ೧೨೯

ನುಡಿವ ನಾಲಗೆ ನೋಡುವ ಕಣ್ಣು ಪಾ[ಡನು]
ಬಿಡದೆ ಕೇಳುವ ಕಿವಿಗಳಿಗೆ |
ಒಡನೆ ವಾಸನೆ ತೀಡೆ ಮೂಗಿಗಿಲ್ಲದ ಹೊಲೆ
ನಡುವೆಲ್ಲಿ ಬಂದಿತು ಹೇಳು ೧೩೦

ಕಿಚ್ಚಿಗೆ ಬಿದ್ದರೆ ಮೈ ಬೇವುದಲ್ಲದೆ
ಕಿಚ್ಚೆನೆ ಬಾಯಿ ಬೆಂದಪುದೆ |
ಹುಚ್ಚು ಮಾತಾಡದೆ ಸುಮ್ಮನೆ ಹೋಗೆಂದು
ನಿಚ್ಚಟ ಪುರುಷ ಕೋಪಿಸಿದ ೧೩೧

ಬಚ್ಚಲ ಉದಕವು ತಿಳಿಯಲು ಮಿಂದರೆ
ಹುಚ್ಚನಾಯೊ[ಡ]ಲು ಹಾಲಿರಲು |
ನಿಶ್ಶೈಸುಂಬರೆ ಸೊಬಗಿರೆ ರೂಪಿರೆ
ಮಚ್ಚಿವೊಲಿವರೆ ಬಲ್ಲವರು ೧೩೨

ಮತ್ತೊಂದು ಕೇಳಾ ನೃಪೋತ್ತಮ ನಿನ್ನಯ
ಮುತ್ತಿನ ಸತ್ತಿಗೆಯಿತ್ತು |
ಅರ್ತಿಯಿಂದೆಮಗೆ ವಲ್ಲಭನಾಗೆಂದು
ಮತ್ತೆವಿಡಿದರು ಮುಂಜೆರಗ ೧೩೩

ಕೊಂದರೆ ಕೊಲುವಿರಲ್ಲದೆ ಬಿಟ್ಟು ಹೋಗೆವು
ಎಂದು ಚಲಕೆ ನಿಂತಿರಲು |
ಅಂದು ಹರಿಶ್ಚಂದ್ರ ಚಬಕಿಲಿ ಕೊಲಿಸಿದ
ಮಂದ್ಯಾಳತನದ ಸತಿಯರ ೧೩೪

ಮುಂದಲೆವಿಡಿದು ಕೆಡಹಿ ಎಳೆಯೆಳೆಯೆಂದು
ಕೊಂದರೆಲ್ಲರು ತಮತಮಗೆ |
ಬಂದವ[ರೆ]ಲ್ಲರು ಒದೆದು ಕೊಂದರು
ನಿಲ್ಲದೆ ಓಡಿದರಂದು ೧೩೫

ನಿಲ್ಲದೆವೋಡಲು ಎಲ್ಲರು ಕಾಣುತ
ಕಲ್ಲ ತಕ್ಕೊಂಡಿಟ್ಟು ಬಿಡದೆ |
ಬಲ್ಲಿದ ವಿಶ್ವಾಮಿತ್ರ ಮೊರೆಮೊರೆಯೆಂದು
ತಲ್ಲಣಿಸುತಲಿ ಓಡಿದರು ೧೩೬

ಮುನಿನಾಥ ಕೇಳು ಹರಿಶ್ಚಂದ್ರರಾಯನು
ಕೊನೆ ಮುಡಿ ಹಿಡಿದು ಕೆಡಹಿಸಿ |
ಮನಸಿಗೆ ಬಂದಂತೆ ಒದ್ದೊದ್ದು ಕೊಲಿಸಿದ
ಮುನಿನಾಥ ಮೊರೆಯೆನೆ ಬಿಡದೆ ೧೩೭

ಎಲ್ಲಿಯ ಮುನಿಯೆತ್ತಣ ಮುನಿಯೆನ್ನುತ
ಹುಲ್ಲಿಗೆ ಕಡೆ ಮಾಡಿ ಬೈದು |
ಬಲ್ಲಿದ ಹರಿಶ್ಚಂದ್ರ ಕೊಲ್ಲೆಂದು ಕೊಲಿಸಿದ
ಎಲ್ಲ ಊಳಿಗದರ ಬಿಟ್ಟು ೧೩೮

ಅಲ್ಲಿರ್ದರೆಲ್ಲರು ನಿಲ್ಲದೆ ಕೊಂದರು
ನಿಲ್ಲದೆ ಓಡು ಓಡೆಂದು |
ಹೊಲ್ಲದ ಮಾತನಾಡಬಹುದೆಯೆಂದು
ಕೊಲ್ಲದ ಕೊಲೆಗಳ ಕೊಂದು ೧೩೯

ಮುಂದಲೆಯನು ಕಿತ್ತು ಮುಕ್ಕವಡೆ ಹೊಯ್ವರು
ಕಂ[ದು] ಹೆಚ್ಚಲಿ ಬೈದು ನಿಮ್ಮ |
ಅಂದು ವಿಶ್ವಾಮಿತ್ರ ಮೊರೆಯೆನೆ ಕೇಳದೆ
ಕೊಂದ ಗಾಯಗಳ ತೋರಿದರು ೧೪೦

ಗದ್ದುಗೆಯನು ಹೊಯ್ದೆದ್ದ ವಿಶ್ವಾಮಿತ್ರ
ರುದ್ರಾವತಾರದೊಳಂದು |
ಮುದ್ದು ಮುಖದ ನೀರೆಯರ ಮಾತನು ಕೇಳಿ
ಎದ್ದು ನಡೆದನಾ ಕ್ಷಣದಿ ೧೪೧

ಬಿಟ್ಟ ಕೆಂಜೆಡೆ ಮಿಡಿವುತ ಪುಲಿಚರ್ಮ-
ದುಟ್ಟ ಉಡಿಗೆ ಸರಿವುತಲಿ |
ನೆಟ್ಟಗೆ ಬರುವ ಮುನಿಯನು ಕಂಡೆಲ್ಲರು
ಕೆಟ್ಟೋಡಿತು ತಮತಮಗೆ ೧೪೨

ಸಿಡಿಲ ಕುಡುಹೊ ವಡಬಾನಳ ಪ್ರಳಯಾಗ್ನಿ
ಮೃಡನುರಿಗಣ್ಣಿನ ಕಿಡಿಯೊ |
ಕಡಲೊಳೊಗೆದ ವಿಷ ಸುಡುತ ಬರುವವೊಲು
ಗುಡುಗುಡಿಸುತ ಬಂದ ಮುನಿಪ ೧೪೩

ದೂರದಿ ಬರುವ ಮುನಿಯನು ಕಂಡು ಹರಿಶ್ಚಂದ್ರ
ಭೂರಮಣನು ಎದ್ದು ನಮಿಸಿ |
ಸೇರಿವೊತ್ತಿಗೆ ಬಂದ ಮುನಿಯ ಶ್ರೀಪಾದಕೆ
ಆ ರಾಯ ಬಿದ್ದು ವಂದಿಸಿದ ೧೪೪

ಪುರಹರ ಭವಹರ ಅಘಹರ ದುರಿತ ಸಂ-
ಹರ ಕರುಣಾಕರಯೆನುತ |
ತರಳನ ಸಲಹೆಂದು ಚರಣಕೆ ಬಿದ್ದನು
ಭರದಿಂದ ಒದ್ದನಾ ಮುನಿಪ ೧೪೫

ಈ ಸತಿಯರನೇಕೆ ಕೊಲಿಸಿದೆ ಎಲೆ ರಾಯ
ಈ ಸುದತಿಯರ ತಪ್ಪೇನು |
ಲೇಸಾಗಿ ಒಲಿದು ಹಚ್ಚಡವಿಡಿದೆಳೆದಾ ಮಾತ
ವಿಸ್ತರಿಸಿದನು ಆ ಮುನಿಗೆ ೧೪೬

ಇಂದು ಭೋಗವನು ಬೇಡುವರೆ ಮುನೀಶ್ವರ
ಕಂತುಹರನೆ ಸಂಮತವೆ |
ಪಂಥದಿ ಸ್ತ್ರೀಯರು ಸೆರಗ ಹಿಡಿದೆಳೆದರೆ
ಕಾಂತೆಯರನೀಕ್ಷಿಸಿರುವೆನು ೧೪೭

ನೀನಾಗಿ ಏನ ಬೇಡಿದುದೆನೆ ಕೇಳೆಂದು
ಪೇಳಲು ಅವರು ಬೇಡಿದುದ |
ಮಾನವತಿಯರಿಗೆ ಈಯದೆ ಈ ಪರಿ
ಮಾಡಬಹುದೆ ಮೂರ್ಖ ನೀನು ೧೪೮

ಕೆಟ್ಟ ವಿಶ್ವಾಮಿತ್ರ ಮಾಡುವನ್ಯಾಯವ
ಪಟ್ಟಣ ಜನವೆಲ್ಲ ನೋಡಿ |
ತಟ್ಟನೆ ಗೋಳಿಟ್ಟು ನೆಟ್ಟನೆ ದೂಳೆತ್ತಿ
ಇಟ್ಟು ಶಪಿಸುತಿರ್ದರವರು ೧೪೯

ಮರೆದು ನುಡಿವ ಭಾಷೆ ತಪ್ಪದೆ ನೃಪ ನೆರೆ
ಹರನ ಪಾದವ ನೆನೆವುತಲಿ |
ತೊರೆದು ಹೋಗುತ ಕಂಬನಿ ರಾಯ ನಿಂದಿರೆ
ಮರುಗಿತು ಪರಿವಾರ ಜನರು ೧೫೦

ಏಕಪತ್ನಿಯ ವ್ರತ ಸಾಕಾರವಿರುವುದು
ನೀ ಕಾಣೆಯ ಯತಿಪತಿಯೆ |
ಬೇಕಾದುದ ಯೋಗ್ಯತೆಗೆ ತಕ್ಕುದ ಬೇಡದೆ
ಈ ಪರಿ ಕೇಳಲು ಬಹುದೆ ೧೫೧

ನಿನ್ನಯ ಪಾದಕ್ಕೆ ತನುಮನ ಧನವನ್ನು
ಎಲ್ಲವ ಅರ್ಪಿಸುತಿರುವೆ |
ಖಿಲ್ಲಸ್ತ್ರೀಯರು ಬೇಡುವುದು ಸಮ್ಮತವಾಯ್ತೆ
ನಿಮ್ಮ ಮನಕ್ಕೆ ಗುರುರಾಯ ೧೫೨

ಕೊಡುವೆಯು ನಿನ್ನ ರಾಜ್ಯದ ಸಂಪತ್ತನು
ಬಿಡದೆ ಪ್ರಜೆ ಪರಿವಾರವೆಲ್ಲ |
ಕೊಡು ಬೊಕ್ಕಸದೊಳಗಿರುವ ಹೊನ್ನುಗಳೆಲ್ಲ
ತಡೆಯದೆ ಒಪ್ಪಿಸುಯೆನಲು ೧೫೩

ಮುತ್ತಿನ ಸತ್ತಿಗೆಯಿತ್ತು ಮನ್ನಿಸುಯೆಂದ
 ಮತ್ತೆ ಮುಂಜೆರಗನು ಪಿಡಿಯೆ |
ಕತ್ತ ಪಿಡಿದು ನೂಕಿ ಕೊಂದೆವೆನುತ ಮಂತ್ರಿ
 ಮತ್ತೆ ನುಡಿದನು ಮುನಿಯೊಡನೆ ೧೫೪

ನಿಮ್ಮ ಹೆಸರ ಹೇಳೆ ಮನ್ನಿಸಿ ಬಿಟ್ಟೆವು
 ಚಮ್ಮಟಿಗೆಯಲಿ ಕೊಲ್ಲಿಸುವೆವು |
ಮುತ್ತಿನ ಸತ್ತಿಗೆ ಕೇಳಿವುಳಿವರೆ ಧೂರ್ತ
 ಸತಿಯರ ಮಾತು ಒಪ್ಪಾಯ್ತೆ ೧೫೫

ಮಂತ್ರಿಯಾಡಿದ ಮಾತ ಕೇಳಿ ವಿಶ್ವಾಮಿತ್ರ
 ತಂತ್ರವ ನೆನೆದು ಮನದಲಿ |
ಮಂತ್ರಿಗಳರಸ ಮಂತ್ರಿಗಳ ಶಿಖಾಮಣಿ
 ಮಂತ್ರಿಕುಲಕೆ ಕಟ್ಟಾಣಿ ೧೫೬

ಹುಲ್ಲೆಯ ಮರಿ ನಿಲ್ಲದೆ ಹರಿದಾಡಲು
 ಅಲ್ಲಿ ಹೆಬ್ಬುಲಿಯೊಂದು ಕಂಡು |
ಮೆಲ್ಲನೆ ಹುದುಗಿಕೊಂಡಂತೆ ವಿಶ್ವಾಮಿತ್ರ-
 ನೆಲ್ಲ ಹಾಸಕವನಾಡಿದನು ೧೫೭

ಕೊಂದ ನೋವೆಲ್ಲವ ಬಿಟ್ಟೆನು ಮಂತ್ರೀಶ
 ಮುಂದೆ ನೃಪಗೆ ಬುದ್ಧಿ ಹೇಳು |
ಇ[ಂದೆ]ನ್ನ ಮಕ್ಕಳನೊಲ್ಲದೆ ಬಿಟ್ಟರೆ
 ಮುಂದೆ ತನಗೆ ಕೇಡಹುದು ೧೫೮

ಎಂದ ಮಾತಿಗೆ ಹರಿಶ್ಚಂದ್ರ ಬಿನ್ನೈಸಿದ
 ತಂದೆ ಚಿತ್ತೈಸೊಂದು ಮಾತ |
ಇಂದೆನ್ನ ಸಿರಿ ಹೋಗಲಿ ಈ ಸತಿಯರ-
 ನೆಂದಿಗೊಲ್ಲೆನು ಮುನಿರಾಯ ೧೫೯

ಮತ್ತೊಂದು ಬಿನ್ನಪವನು ಕೇಳು ಮುನಿನಾಥ
 ಹೆತ್ತ ತಾಯಿಗಳಿವರೆನಗೆ |
ಸ್ವಸ್ತ್ರೀಯಳಲ್ಲದೆ ಲೋಕದ ಹೆಣ್ಗಳು
 ಹೆತ್ತ ತಾಯೆಂದು ಭಾವಿಸುವೆ ೧೬೦

ಪರಸತಿಯರ ಮಾತು ಬೇಡ ಕೇಳೆಲೆ ರಾಯ
ಪರವನಿತೆಯರೇ[ನು] ಇವರು |
ಧರೆಯರಿಯಲು ಎನ್ನ ಮಕ್ಕಳುಯಿವರೆಂದು
ಒಡಬಡಿಕೆಯ ಮಾಡಿ ನುಡಿದ ೧೬೧

ಎನ್ನ ಮಕ್ಕಳ ನಿನ್ನ ಸತಿಯರ [ಮಾ]ಡಿಕೊ
ಇನ್ನು ಈರೇಳು ಲೋಕವನು |
ನಿನ್ನ ವಶವ ಮಾಡಿ ಹರಿಯಜ ಸುರರೆನು
ನಿನ್ನ ಸೇವೆಯ ಮಾಡಿಸುವೆ ೧೬೨

ಮುನ್ನ ನೀ ದಯಗೈದ ರಾಜ್ಯ ಕಡಮೆಯೆ-
ಯೆನ್ನ ರಾಜ್ಯವನು ದೇಶವನು |
ನೀ ಬೇಡೆ ಕೊಡುವೆನೆಂದು ಹರಿಶ್ಚಂದ್ರ
ತನ್ನ ಶಿರವ ಬಾಗಿದನು ೧೬೩

ಕೊಟ್ಟೆನೆಂದಾಗಲೆ ಆಯಿತು ರಾಯ
ಕೊಟ್ಟ ಭಾಷೆಗೆ ತಪ್ಪಬೇಡ |
ಕೊಟ್ಟುದುಂಟಾದರೆ ಧರೆಯನೆರೆಯೆಂದೆ
ಸೃಷ್ಟಿಪತಿಗೆ ಕೈಯನಾಂತ ೧೬೪

ಕಾಶಿ ಕೇದಾರ ಶ್ರೀಶೈಲ ಪಂಪಾಕ್ಷೇತ್ರ
ಇಷ್ಟು ದೇಶ ಹೊರತಾಗಿ |
ದೇಶವೆಲ್ಲವ ಕೊಟ್ಟೆನುಯೆಂದು ಹರಿಶ್ಚಂದ್ರ
ಆ ಸಭೆಯೊಳು ಧಾರೆಯೆರೆದ ೧೬೫

ಅಂದು ಬಲೀಂದ್ರ ಹರಿಗೆ ಧಾರೆಯನೆರೆ-
ದಂದವಾಯಿತು ಈ ಕೃತಿಗೆ |
ಕುಂದಾಯಿತು ಹರಿಶ್ಚಂದ್ರಗೆ ಧರೆಯೊಳು
ಒಂದು ಮಾತಿನ ಕತದಿಂದ ೧೬೬

ಅಂದು ಹರಿಶ್ಚಂದ್ರ ಚತುರಂಗಬಲವನು
ಮುಂದೆ ಕಾಣಿಕೆಯಿಕ್ಕಿ ಮುನಿಗೆ |
ಅಂದು ಪಟ್ಟವ ಕಟ್ಟಿ ನಿಂದ ಠಾವಿಗೆ
ನಿಂದಿತು ನಾಲ್ಕನೆ ಸಂಧಿ ೧೬೭

ಐದನೆಯ ಸಂಧಿ

ಅಂಜಿಸಿಯುರೆಯಟ್ಟಿ ಕೊಲುತಿಹ ವಿಷ[ವ] ಕರ-
ಕಂಜವನಾಂತು ತೆಕ್ಕೊಂಡು |
ಅಂಜಬೇಡೆಂದು ಸುರರಿಗಭಯವನಿತ್ತ
ನಂಜುಗೊರಳ ಸಲಹೆನ್ನ ೧

ಮುಂದಣ ಕಥೆಯ ವೃತ್ತಾಂತವ ಪೇಳುವೆ
ಅಂದು ಹರಿಶ್ಚಂದ್ರ ನೃಪನು |
ಒಂದುಳಿಯದೆ ರಾಜ್ಯದೇಶವೆಲ್ಲವ ಕೊಟ್ಟು
ಅಂದು ಎಲ್ಲರ ಕಾಣಿಸಿದ ೨

ಮಂತ್ರಿಮನ್ನೆಯರು ಸಾಮಂತರು ದೊರೆಗಳು
ಮಂತ್ರವ ಬಲ್ಲ ಕೋವಿದರು |
ಮುಂತಿರ್ದ ಪರಿವಾರ ಕೋವಿದರೆಲ್ಲರು
ಚಿಂತಿಸುತಿಕ್ಕಿ ಕಾಣಿಕೆಯ ೩

ಪಟ್ಟವ ಕಟ್ಟಿದ ವಿಶ್ವಾಮಿತ್ರಗೆ
ಸೃಷ್ಟಿಪತಿಯು ಎನೆ ಕೇಳಿ |
ನೆಟ್ಟನೆ ಪಾಳಯವೆಲ್ಲ ಗೋಳಿಟ್ಟರು
ಬೆಟ್ಟಕ್ಕೆ ಕಿಚ್ಚನಿಟ್ಟಂತೆ ೪

ವಾರಿಧಿ ಮಸಗಿ ಭೋರ್ಗರೆವಂತೆ ಬೇಗದಿ
ಸೇರಿದವರು ಗೋಳಿಡಲು |
ನಾರಿಗಳೆಲ್ಲರು ಎದೆಗಳ ಹೊಯಿಕೊಳೆ
ಭೇರಿಯ ಹೊಯ್ದಂತಾಯ್ತು ೫

ದೊರೆತನವನು (ಮು?) ಹೋಗಿ ಸಿರಿಯ ನೀಗಾಡಿದೆವು
ಉರುವ ಮಾರಿಯ ಕರಕೊಂಡು |
ತಿರುಕಗೆ ಮರುಳಾಗಿ ರಾಜ್ಯ ಹೋಯಿತುಯೆಂದು
ದೊರೆದೊರೆಗಳು ಹೊರಳಿದರು ೬

ಹರಿಯಜ ಸುರರು ದೇವರ್ಕಳು ಮುಂತಾಗಿ
ಶಿರವ ತೂಗಿದರೊಲೆದೊಲೆದು |
ಧರೆಯೊಳಗಿಂತಪ್ಪ ಧೀರರುಂಟೆಯೆಂದು
ಪುರಹರ ಗಿರಿಜೆಗೆ ಪೇಳ್ದ ೭

ಅಲ್ಲಲ್ಲಿ ಮನ್ನೆಯರೆಲ್ಲರು ಮಲೆತರು
ಅಲ್ಲಲ್ಲಿ [ಕೂ]ಟಗಳೆದ್ದು |
ಅಲ್ಲಲ್ಲಿ ಪಾಳೆಯಗಾರರು ಹರಿದಾಡೆ
ಅಲ್ಲಲ್ಲಿ ಸೂರೆಯಾಡಿದರು ೮

ಇಲ್ಲಿ ಈ ರಾಜ್ಯವ ಕೊಡುವವರಾರು
ಇಲ್ಲಿ ತೆಕ್ಕೊಂಬುವರಾರು |
ಎಲ್ಲಮನ್ನೆಯರು ಆರ್ಭಟಿಸುತ ಮೊರೆದೇಳೆ
ಅಲ್ಲಿ ಕಂಗೆಟ್ಟನಾ ಮುನಿಪ ೯

ನಿನ್ನ ರಾಜ್ಯವ ಕೊಟ್ಟು ಮನ್ನೆಯರಿಗೆ ಹೇಳಿ
ಎನ್ನನು ಕೊಲಿಸಬೇಕೆನುತ |
ನಿನ್ನ ರಾಜ್ಯ ನೀನಾಳು ದುರ್ಬುದ್ಧಿಯ
ಚೆನ್ನಾಗಿ ಕಲಿತೆ ಕೇಳರಸ ೧೦

ಅಂಜದಿರಿಯೆಂದು ವಿಶ್ವಾಮಿತ್ರ ಮುನಿಯನು
ಅಂಜಿಕೆಯೆಲ್ಲವ ಬಿಡಿಸಿ |
ಸಂಜೊಗವಾಗಿ ಹೋಗುವರನು ನಿಲ್ಲಿಸಿ
ಕೆಂಜೆಡೆ ಮುನಿಯಾಣೆಯಿಟ್ಟು ೧೧

ಅಲ್ಲಲ್ಲಿ ಪರಿವಾರಕೆ ಕೈಯ ಮುಗಿವನು
ಎಲ್ಲ ಮನ್ನೆಯರಿಗೆ ನೃಪನು |
ನಿಲ್ಲಿ ನನ್ನಾಣೆಯೆನುತ ಹರಿಶ್ಚಂದ್ರನು
ಎಲ್ಲರ ತಂದು ಕಾಣಿಸಿದ ೧೨

ಕೊಟ್ಟುದು ಸಟೆಯೊ ದಿಟವೊ ಹೇಳೆಲೊ ರಾಯ
ಕೊಟ್ಟು ಮರೆ[ತೆಯಾ]ದರೆ ನಿನ್ನ |
ಪಟ್ಟದ ಸತಿಸುತ ಪೊತ್ತವೆರಗಿ ಮಂತ್ರಿಸಹಿತ
ಕಟ್ಟಯೋಧ್ಯೆಗೆ ಪಯಣವ ೧೩

ಇನ್ನು ನಾನಿತ್ತ ಬಳಿಕಲಾರ ಕೇಳುವೆ
ನನ್ನ ರಾಜ್ಯವ ನಾನು ಕೊಡಲು |
ನಿನ್ನಿಚ್ಛೆಯೊ ಅವರಿಚ್ಛೆಯೊ ಎನ್ನುತ
ತನ್ನ ಶಿರವ ಬಾಗಿದನು ೧೪

ಅಲ್ಲಿಂದ ತೆರಳಿ ಅಯೋಧ್ಯಕ್ಕೆ ಮುನಿರಾಯ
ನಿಲ್ಲದೆ ರಥವೇರಿಕೊಂಡು |
ಎಲ್ಲ ಪಾಳ್ಯಕೆ ತೆರಳಿತು ಕೌಶಿಕನೊಳು
ಅಲ್ಲಿ ಭೇರಿಯ ಸನ್ನೆಮಾಡಿ ೧೫

ಒಂದಾಗಿ ತೆರಳಿತು ಚತುರಂಗ ಬಲವೆಲ್ಲ
ಅಂದು ವಿಶ್ವಾಮಿತ್ರನೊಡನೆ |
ಹಿಂದೆ ಹರಿಶ್ಚಂದ್ರ ಸತಿಸುತ ಮಂತ್ರಿಯು
ಬಂದರು ಕಾಲ್ನಡೆಯೊಳಗೆ ೧೬

ಕಲ್ಲುಮುಳ್ಳೊಳು ಕಾಲ್ನಡೆಯೊಳು ಹರಿಶ್ಚಂದ್ರ
ಮೆಲ್ಲಮೆಲ್ಲನೆ ಬರುತಿರಲು |
ನಿಲ್ಲಲೀಸದೆ ಕರತನ್ನಿಯೆಂದೆನ್ನುತ
ಅಲ್ಲಿ ಕಾವಲನಿಕ್ಕಿಸಿದ ೧೭

ಅಲ್ಲಲ್ಲಿ ದಂಡುಬಿಡುತ ವಿಶ್ವಾಮಿತ್ರ
ಅಲ್ಲಲ್ಲಿ ಪಯಣಗತಿಯಲಿ |
ನಿಲ್ಲದೆ ನಡೆತಂದಯೋಧ್ಯವ ಹೊಕ್ಕನು
ಅಲ್ಲಿ ಅನಂತಸಂಭ್ರಮದಿ ೧೮

ಕಟ್ಟಿದ ಗುಡಿತೋರಣ ಕೇರಿಕೇರಿಯೊ[ಳು]
ಕಟ್ಟಿದೊ ಕುರುಜುಪ್ಪರಿಗೆ |
ಪಟ್ಟಣದವರೆಲ್ಲ ಇದಿರಾಗಿ ಬಂದರು
ಸೃಷ್ಟಿಪತಿಯ ಕಾಂಬ ಭರದಿ ೧೯

ಪುರಜನ ಪರಿಜನ ಹರಿಶ್ಚಂದ್ರರಾಯನ
ಬರವ ಕಾಣದೆ ಕಂಗೆಟ್ಟು |
ಪರಿವಾರವನು ಕೇಳಿ ಹಿಂದೆ ಕಾವಲ ಸಹ
ಬರುವ ನೃಪನ ತೋರಿದರು ೨೦

ಬಂದು ಕಂಡವರೆಲ್ಲ ನೊಂದರು ಮನದಲ್ಲಿ
ತಂದು ಕಾಣಿಕೆ[ಯನು] ಪಿಡಿಯೆ |
ಇಂದಿನರಸುತನ ಎನಗಿಲ್ಲ ಮುನಿಗಿಕ್ಕಿ-
ಯೆಂದು ಎಲ್ಲರಿಗೆ ಪೇಳಿದನು ೨೧

ನಾರಿಯರೆಲ್ಲರು ಆರತಿಗಳ ತರೆ
ಆ ರಾಯ ಮುನಿಗೆತ್ತಿಸಿದ |
ಊರೆಲ್ಲ ಕಾಣುತ ಗೋಳಿಟ್ಟೊರಲಲು
ವಾರಿಧಿ ಮೊರೆದಂತಾಯ್ತು ೨೨

ಅಂದು ವಿಶ್ವಾಮಿತ್ರ ಎಲ್ಲವನು ನೋಡುತ
ಬಂದು ಹಜಾರದಿ ಕುಳಿತು |
ಒಂದಾಗಿ ಬಂದರೆಲ್ಲರ ಬೀಳ್ಕೊಟ್ಟನು
ಮುಂದಿರ್ದ ಮಂತ್ರಿ ಮನ್ನೆಯರ ೨೩

ಅಂದು ಹರಿಶ್ಚಂದ್ರ ವಿಶ್ವಾಮಿತ್ರಗೆ
ವಂದಿಸಿ ಕರವೆತ್ತಿ ಮುಗಿದು |
ಇಂದು ನಿಮ್ಮೊಡನೆಯೆಲ್ಲವನೊಪ್ಪುಗೊಳ್ಳೆಂದು
ಅಂದು ಒಪ್ಪಿಸಿಕೊಟ್ಟ ನೃಪನು ೨೪

ಬೊಕ್ಕಸ ಭಂಡಾರ ಪಟ್ಟೆ ಜಲ್ಲಿಗಳನು
ಸೊಕ್ಕಾನೆ ಕುದುರೆ ಒಂಟೆಗಳ |
ಲೆಕ್ಕಿಸಲಳವಲ್ಲ ಮುತ್ತುರತ್ನವು ಹೊನ್ನ
ಮಿಕ್ಕಿನ ಭಂಡಾರಗಳನು ೨೫

ತೊತ್ತಿರು ಬಂಟರು ಕೊಟ್ಟಿಗೆ ಕೊಲ್ಹಾರ
ಎತ್ತೆಮ್ಮೆ ಕೀಲಾರವನು |
ಮತ್ತೊಂದನುಳಿಯದೆ ಒಪ್ಪಿಸಿದನು ಬೇಗ
ಸತ್ಯನಿಧಿ ಹರಿಶ್ಚಂದ್ರ ನೃಪನು ೨೬

ಪಟ್ಟಣ ಪರಿವಾರ ಮಂತ್ರಿ ಮನ್ನೆಯರನು
ನೆಟ್ಟನೆ ಬೀಗಮುದ್ರೆಯನು |
ಸೃಷ್ಟಿಪತಿಯ ಮುದ್ರೆಯುಂಗುರವನು ಕೊಟ್ಟು
ಇಷ್ಟಲ್ಲದಿಲ್ಲೆಂದು ಮುನಿಗೆ ೨೭

ಸೃಷ್ಟಿಪತಿಯೆಲ್ಲರನೊಪ್ಪಿಸಿದನು
ಪಟ್ಟದ ಸತಿ ಹೊರತಾಗಿ |
ಉಟ್ಟ ಸೀರೆಯ ಹೊದ್ದ ಹಚ್ಚಡವಲ್ಲದೆ
ಮುಟ್ಟೆನಿನ್ನೇನನುಯೆಂದ ೨೮

ಅಂದು ಹರಿಶ್ಚಂದ್ರ ಮುನಿಗೆ ವಂದಿಸಿ ಇಂದು
ತಂದೆ ಪೋದಪೆನಯ್ಯಯೆನಲು |
ಇಂದು ನೀ ಸುಖದಲಿ ಹೋಗೆಂದು ಕಳುಹಲು
ಮುಂದಕೆ ಪಯಣವಾಗುವೆನು ೨೯

ತೊಟ್ಟ ಬಂಗಾರವ ಕಳೆದಿಟ್ಟು ಹೋಗೆನೆ
ನೆಟ್ಟನೆಲ್ಲವ ತೆಕ್ಕೊಡಲು |
ಉಟ್ಟ ಸೀರೆಯ ಹೊದ್ದ ಹಚ್ಚಡವನು ಕೇಳೆ
ಸೃಷ್ಟಿಪತಿಯು ಬೆರಗಾದ ೩೦

ಒತ್ತಿಲಿದ್ದವನ ಕೈಯಲಿ ಹಳೆಯರಿವೆಯ
ಮತ್ತದ ನಾಲ್ಕಾಗಿ ಸೀಳಿ |
ಪೃಥ್ವೀಪತಿಗೆ ಕೊಳ್ಳೆನುತ ಹೊದ್ದು ನಿಂತನು
ಚಿತ್ತಜಹರ ಗತಿಯೆನುತ ೩೧

ದತ್ತವಾಗಿತ್ತ ದ್ರವ್ಯವ ನಿನ್ನ ಬಳಿಯಲ್ಲಿ
ಮ[ತ್ತೈದು]ವೆನುಯೆಂದು ನಿನ್ನ ಬಳಿಯ |
ಇ[ತ್ತ]ದ್ರವ್ಯವ ನೀ ಕೊಟ್ಟು ಹೋಗಯ್ಯ
ದತ್ತಾಪಹಾರ ಮಾಡಬೇಡ ೩೨

ದೇಶವೊಪ್ಪಿಸುವಾಗ ಮೋಸದಿ ಮರೆದು ನಿ-
ರಾಸೆಯ ಮಾಡದೆಯೆನ್ನ |
ಏಸು ದ್ರವ್ಯವನೆಲ್ಲ ಮೀಸಲಾಗಿಯೆ ಕೊಟ್ಟು
ಸೂಸದೆ ನೀ ತೆರಳೆನಲು ೩೩

ಹಂದೆಯ ಹಾವು ಹೊಡೆದಂತಾದನಾ ರಾಯ
ಹಿಂದಕಾಡಿದ ಮಾತು ಮರೆತು |
ಇನ್ನು ನಾ ಕೊಡಬೇಕು ಮರೆತಿರ್ದೆ ಮುನಿನಾಥ
ತಂದೆ ಕೋಪಿಸಬೇಡವೆಂದು ೩೪

ಕೊಟ್ಟು ಹೋಗೆನ್ನ ಹೊನ್ನನು ನೀನೆಯಿಲೆ ರಾಯ
ಕೊಟ್ಟುದಿಲ್ಲೆಂದರೆ ಬಿಡುವೆನೆ |
ನೆಟ್ಟನೆ ನಮ್ಮ ಮಕ್ಕಳ ಮದುವೆಯಾಗು
ಪಟ್ಟವ ಕಟ್ಟುವೆ ನಿನಗೆ ೩೫

ಕೊಟ್ಟು ಹುಸಿದು ನಾನು ಭ್ರಷ್ಟನಾಗುವನಲ್ಲ
ಕೊಟ್ಟ ರಾಜ್ಯಕೆ ಅಳುಪುವೆನೆ |
ಕೆಟ್ಟು ನುಡಿಯಬೇಡವೆನುತ ಹರಿಶ್ಚಂದ್ರ
ತಟ್ಟನೆ ಪಾದಕೆ ಬಿದ್ದ ೩೬

ಆ ನುಡಿ ಕೇಳುತ ವಿಶ್ವಾಮಿತ್ರನು
ನೋಡು ಇವನ ಗರ್ವವನು |
ಬೇಡಿಸಿಕೊಳ್ಳದೆ ಕೊಡು ನಮ್ಮ ಹೊನ್ನನು
ನಾಡ ಮಾತೇಕೆ ಬೇಗದರ್ಲಿ ೩೭

ಎನ್ನ ರಾಜ್ಯದಿ ಹೊನ್ನ ವಂಚಿಸಿಕೊಂಡಿದ್ದು
ಇನ್ನು ಕೊಟ್ಟರೆ ನಾನೊಲ್ಲೆ |
ನನ್ನ ಸೀಮೆಯೊಳು ಬೇಡಿ ಕೊಟ್ಟರೆ ಒಲ್ಲೆ-
ನೆನ್ನುತ ಮುನಿ ಕೋಪಿಸಿದ ೩೮

ಕೊಟ್ಟು ಹೋಗೆಂದು ನಿಷ್ಠುರವ ಮಾಡಲು
ಸೃಷ್ಟಿಪತಿಯು ಕೈಯ ಮುಗಿದು |
ಕೊಟ್ಟಪೆನಯ್ಯ ನಾಲ್ವತ್ತೆಂಟು ದಿನದೊಳು
ಇಷ್ಟು ಕೋಪವು ಬೇಡ ತಂದೆ ೩೯

ಮತ್ತೆ ನಕ್ಷತ್ರಮುನಿಯ ಕಾವಲನಿಟ್ಟು
ಇತ್ತವಧಿಗೆ ಮುನ್ನ ಹೊನ್ನ |
ಮತ್ತೊಂದು ಕಾಲಲಿ ನಿಲ್ಲಿಸಿ ತೆಕ್ಕೊಳ್ಳೆಂದು
ಅತ್ತ ವಿಶ್ವಾಮಿತ್ರನೆದ್ದ ೪೦

ಕಾಶಿಗೆ ಹೋಗಿ ಕೊಟ್ಟಪೆನಯ್ಯ ಹೊನ್ನನು
ಈಸೊಂದು ನಿಷ್ಠುರವೇಕೆ |
ಭಾಷೆಗೆ ತಪ್ಪಿ ಅವಧಿ ತುಂಬಿ ಹೋದರೆ
ದೇಶಕ್ಕೆ ಹೊಲೆಪಾತಕನು ೪೧

ಸತಿಸುತ ಮಂತ್ರಿವೆರಸಿ ಹರಿಶ್ಚಂದ್ರನು
ಅತಿಭರದಲಿ ಮುಂದೆ ನಡೆಯೆ |
ಖತಿಯಿಂದಲೊಂದಾಗಿ ನಡೆದ ನಕ್ಷತ್ರನು
ಅತಿ ನಿಷ್ಠುರವ ಮಾಡುತಲಿ ೪೨

ಒಂದಾಗಿ ಬರುವರೆಲ್ಲಕೆ ಹರಿಶ್ಚಂದ್ರನು
ನಿಂದು ಕರವನೆತ್ತಿ ಮುಗಿದು |
ತಂದೆಗಳಿರ ಹೋಗಿ ಬರುವೆನು ನಾನೆಂದು-
ಯೆಂದರೆ ಗೋಳಿಟ್ಟರಲ್ಲಿಹರು ೪೩

[ಭರ್ತೃ] ಹರಿ ಸರ್ವರಾಜ್ಯದೇಶವ ಬಿಟ್ಟು
ವಿರತನಾಗಿ ಹೋದಂತೆ |
ಭರದಿಂದ ಹರಿಶ್ಚಂದ್ರ ರಾಜ್ಯದೇಶವ ಬಿಟ್ಟು
ತಿರುಗಿ ನೋಡದೆ ಹೋಗುತಿರ್ದ ೪೪

ಇಳೆಯೊಳು ನಳಚಕ್ರವರ್ತಿ ರಾಯನಿಗೆಲ್ಲ
ಅಳುಕಿ ಕಪ್ಪವ ತೆತ್ತು ಬಹರು |
ಬಳಿಕವನಿಗೆ ಏಳರಾಟವು ಹೊದ್ದಲು
ಹಳೆಯರಿವೆಗೆ ಗತಿಯಿಲ್ಲ ೪೫

ಎಂದು ಹೇಳಿದ ಮಂತ್ರಿಗೆ ಹರಿಶ್ಚಂದ್ರನು
ಇಂದೆನ್ನ ಮಾತನು ಕೇಳು |
ಅಂದವನಿಗೆ ಋಣವಿಲ್ಲದೆ ಹೋದನು
ಇಂದೆನ್ನ ಋಣ ಬೆನ್ನ ಬಿಡದು ೪೬

ಕೊಡುವೆನೆಂದರೆ ಮುನ್ನ ಮಡಗಿದೊಡವೆಯಿಲ್ಲ
ಪಡೆದ ದೇಶವು ರಾಜ್ಯವಿಲ್ಲ |
ಒಡಹುಟ್ಟಿದವರಿಲ್ಲ ಬಂಧುಬಳಗವಿಲ್ಲ
ಕೊಡುವರೆ ಗತಿ ಯಾವುದೆಂದು ೪೭

ಸಂಬಳವಿಡಿದೋಲೈಸಲರಿಯೆ ಕೂಲಿ
ಕುಂಬಳವನು ಮಾಡಲರಿಯೆ |
ತುಂಬಿ ತುಳುಕಿ ಹೇರಿ ಮಾರಲರಿಯೆನೆಂದು
ಹಂಬಲಿಸಿದನಾ ನೃಪನು ೪೮

ಹಾಡಿ ಹರಸಿ ಕೊಂಡಾಡಲರಿಯೆ ಮುನ್ನ
ನಾಡೊಳು ತಿರಿವುದನರಿಯೆ |
ಕಾಡಿ ಬೇಡೊರ್ವರ ನುಡಿಸಲರಿಯೆ ನಾನು
ರೂಢಿಯೊಳಪಕೀರ್ತಿಯಾದೆ ೪೯

ಬಡವರಿಗೆಡರಡಸಲು ಕೆಟ್ಟು ಬಾಳರು
ಪೊಡವಿಪತಿಗೆ ಕೇಡು ಬರಲು |
ನಡುಗಡಲೊಳು ಹಡಗೊಡೆದ ಹದನಂತೆ
ಬಿಡುವೆನು ಪ್ರಾಣವನೆಂದ ೫೦

ಪೊಡವಿಪ ಕೇಳೆನ್ನ ಬಿನ್ನಪವನು ಹಡ-
ಗೊಡೆದೊಂದು ಹಲಗೆಯ ಹಿಡಿದು |
ತಡಿಗೆ ಸಾರಿದರುಂಟು ಮೃಡ ನಿನಗೊಲಿವನು
ಬಿಡು ಚಿಂತೆಗಳನೆಂದ ಮಂತ್ರಿ ೫೧

ಎಂದು ಹೇಳುತ ಮಂತ್ರಿ ಹರಿಶ್ಚಂದ್ರರಾಯನು
ಒಂದಾಗಿ ಮುಂದಕ್ಕೆ ನಡೆಯೆ |
ಅಂದು ಹರಿಶ್ಚಂದ್ರ ಸತಿಸುತ ಮಂತ್ರಿಯು
ಹಿಂದೆಣಿಸದೆ ಹೋದರಂದು ೫೨

ನಡೆದನು ಆ ರಾಯನು ಕಾಲ್ನಡೆಯಲಿ
ಅಡವಿಯಾರಣ್ಯದೊ[ಳ]ಂದು |
ಒಡೆದವು ಕೈಕಾಲು ಸುರಿದು ರುಧಿರಗಳು
ಅಡಿಗಡಿಗಂದು ಬಟ್ಟಿಡಲು ೫೩

ಹತ್ತೆಂಟು ದಿವಸ ಈ ಪರಿಯಲಿ ನಡೆಯಲು
ಮತ್ತೆ ವಿಶ್ವಾಮಿತ್ರ ಮುನಿಯು |
ಚಿತ್ತದಿ ನೆನೆದನು ಸತ್ವಗುಂದಿಸಲೆಂದು
ಮತ್ತೆ ಬೇಸಗೆಯ ಬಿಸಿಲನು ೫೪

ಧರೆ ಹತ್ತಿ ಸಿಡಿಯಲು ಕಾಡುಮೃಗವು ಸೀದು
ಕರಿವುರಿಯಾದುವಲ್ಲಲ್ಲಿ |
ಸುರುಗಿದ ತರುಮರಗಳು ನಿಂಮುರಿದುವು
ಭರದಿ ಕೌಶಿಕನಾಜ್ಞೆಯಲಿ ೫೫

ಅಡಿಯಾಕಾಶವೆಲ್ಲವು ಕತ್ತಿ ಬೇಯಲು
ನಡುವೊಬ್ಬರುಳಿದವರುಂಟೆ |
ನುಡಿದ ಭಾಷೆಗೆ ತಪ್ಪದೆ ಹರಿಶ್ಚಂದ್ರನು
ನಡೆದನಾವಾಗ ಭರದಿಂದ ೫೬

ಕಾದ ಕಾವಲಿ(ಯೊ)ಳು ಕಾಲೂರಿ ನಡೆವಂತೆ
ಮೇದಿನಿಯೊಳು ನಡೆವಾಗ |
ಕಾದ ಮಳಲು ಕಾಲದೋಃಹಿತವನುಪಂತೆ (?)
ಮೇದಿನಿಪತಿಯು ಲೆಕ್ಕಿಸದೆ ೫೭

ಕಂದದೆ ಕುಂದದೆ ಹಿಂದೆಣಿಸದೆ ಬೇಗ
ಅಂದು ಹರಿಶ್ಚಂದ್ರನೃಪನು |
ಮುಂದಕ್ಕೆ ಅಡಿಯಿಟ್ಟು ನಡೆವುತಿರ್ದರಸಂಗೆ
ಬಂದ ಸಂಕಟವೇನೆಂಬ ೫೮

ಕಾದ ಧರೆಯಲ್ಲಿ ನಿಲಿಸಿದ ನಕ್ಷತ್ರ
ಮೇದಿನಿಪತಿಯ ಕೋಪದಲಿ |
ಬಾಧೆಮಾಡಿದ ನಮ್ಮ ಹೊನ್ನ ಕೊಡೆನ್ನುತ
ಹೋದರೆ ಮುನಿಯಾಣೆಯೆಂದ ೫೯

ಕೊಟ್ಟಿಪೆನಯ್ಯ ಮುನಿನಾಥ ಕೋಪವ ಬಿಡು
ಇಷ್ಟೊಂದು ನಿಷ್ಠುರ ಬೇಡ |
ಸೃಷ್ಟಿಪತಿ ಒಡಂಬಡಿಕೆಯ ಹೇಳುತ್ತ
ನೆಟ್ಟನೆ ಮುಂದಕ್ಕೆ ನಡೆದ ೬೦

ಪಟ್ಟಣ ಪಾಳಯ ಊರ ಕೇರಿಗಳುರೆ
ನೆಟ್ಟನೆ ಹಳ್ಳಿಪಳ್ಳಿಗಳ |
ಸೃಷ್ಟಿಪತಿಯೆಲ್ಲವ ದಾಂಟಿದ ನಡೆದನು
ನೆಟ್ಟನೆ ಪಯಣಗತಿಯಲಿ ೬೧

ಅಡವಿಯರಣ್ಯದಿ ಪೊಡವಿಪ ನಡೆವಾಗ
ಒಡಲಿಗೆ ಅನ್ನಗಳಿಲ್ಲ |
ಬಿಡದೆಂಟು ಉಪವಾಸದಿ ನಡೆಯಲು
ಪೊಡವಿಪತಿಯ ಸುತ ಹಸಿದ ೬೨

ಅತ್ತ ಶಿಶುವನೆತ್ತಿಕೊಂಡು ಸಂತೈಸುತ
ಹೆತ್ತ ತಾಯಾಗ ಮರುಗುತ |
ಪುತ್ರನ ನೋಡಿ ದುಃಖವ ಮಾಡುತಲೆಲ್ಲ
ಮತ್ತೆ ಗಾವುದ ಹೋದರವರು ೬೩

ಉಂಬರೂಟಗಳಿಲ್ಲ ಕೊಂಬರೆ ಬಗೆಯಿಲ್ಲ
ತುಂಬಿದ ಗ್ರಾಮಗಳಿಲ್ಲ |
ಹಂಬಲಿಸುತ ಹಸಿದಳುವ ಮಗುವ ಕಂಡು
ಕಂಬನಿದುಂಬಿದರವರು ೬೪

ಕಂಬಿಯ ಹಣ್ಣು ಕೂಪರೆ ಹಣ್ಣು ಬೆಳಗಾಯಿ
ಜಂಬುನೇರಲು ಚೂತಫಲವು |
ಕೊಂಬೆಲಿ ಕೊಯ್ತಂದು ನಂಬಿಸಿ ಕೊಡುತಿರೆ
ಭಂಗಿಸೆಲ್ಲವ ಕಿತ್ತುಕೊಂಡ ೬೫

ಕೆಟ್ಟ ನಕ್ಷತ್ರ ಕಾಡೊಳು ತಂದ ಹಣ್ಣನು
ಸೃಷ್ಟಿಪತಿಯ ಕೈಯಿಂದ |
ಹೊಟ್ಟೆ ಹಸಿದ ಶಿಶುವಿಗೆ ಕೊಡಲೀಸದೆ
ತೊಟ್ಟನೆಲ್ಲವ ಕಿತ್ತುಕೊಂಡ ೬೬

ಇಂತು ಅನಂತ ಪಯಣಗತಿಯಲಿ ಹೋಗೆ
ಮುಂದೊಂದು ಕೃತಕವ ನೆನೆದು |
ಚಿಂತಿಸಿ ವಿಶ್ವಾಮಿತ್ರ ಮಾಡುವುದನು
ಕಂತುಹರನು ನೋಡುತಿರ್ದ ೬೭

ಕತ್ತಲೆಗವಿಯಿಸಿ ಕಾರ್ಮುಗಿಲೇಳಿಸಿ
ಸುತ್ತ ಹೆಮ್ಮಳೆಯನು ಹೊಯಿಸಿ |
ಮತ್ತೆ ನಡೆವ ದಾರಿಯ ತಪ್ಪಿಸಿಬಿಟ್ಟು
ಸುತ್ತಿಸಿದನು ಅಡವಿಯನು ೬೮

ಕರಡಿ ಕಾಡೆಮ್ಮೆ ಕಾಡ್ಗೋಣ ಸೂಕರಗಳು
ಮೊರೆವ ಹೆಬ್ಬುಲಿ ಗಜ ಸಿಂಹ |
ಶರಭ ಭೇರುಂಡನು ಎರಳೆ ಸಾರಂಗವಂದಿ
ಮೊರೆವ ಸರ್ಪಗಳು ಕಾಡುವುವು ೬೯

ಭೂತ ಬೇತಾಳ ಶಾಕಿನಿ ಡಾಕಿನಿಯರು
ಭೂತಳಪತಿಯ ಕಾಡಿದರೆ |
ಆತನು ಅದಕೆ ಲೆಕ್ಕಿಸದೆ ನಡೆವುತಿರೆ
ಸೋತು ಕಂಗೆಟ್ಟನಾ ಮುನಿಪ ೭೦

ಸುರಿವ ಹೆಮ್ಮಳೆ ಹಳ್ಳ ಕೊಳ್ಳವು ಹೊಗಬಾರ
ಶರಧಿಯು ಮೊರೆವಂದದಲಿ |
ಹರಿವ ಹೊನಲಿನೊಳು ಮರದಡಿಯಲಿ ನಿಂದ
ಇರವ ಪೇಳುವರಳವಲ್ಲ ೭೧

ಕಾಡುಗತ್ತಲೆಯೊಳು ಬಿಡದೆ ಸುರಿವ ಮಳೆ
ಅಡಿಯೊಳಗಾಳುದ್ದ ಹೊನಲು |
ಹೊಡೆವ ಸಿಡಿಲು ಮಿಂಚು ಗುಡುಗು ಆರ್ಭಟಿಸಲು
ನಡುಗುತ ಶಿಶುವ ಕಾತರಿಸೆ ೭೨

ಎತ್ತಿಕೊಂಡಳು ತನ್ನ ಶಿಶುವ ಚಂದ್ರಮತಿ
ಮತ್ತೆ ತಕ್ಕೈಸಿ ತೂಪಿರಿದು |
ಮೃತ್ಯುಂಜಯ ನೀನೆ ಸಲಹೆಂದುಯೆನುತಲಿ
ಅತ್ತ ಶಿಶುವನಪ್ಪಿಕೊಂಡ ೭೩

ಮಳೆಯೊಳು ಮರದಡಿಯಲಿ ನಿಂದು ನಡುಗುತ
ಚಳಿಯೊಳು ಸಂಕಟಗೊಳುತ |
ತಳಮಳಗೊಂಡಂದು ಕೊಳ್ಳುದಿಗೊಳುತಿರೆ
ನಳಿನಸಖನು ಚಿಂತಿಸಿದ ೭೪

ಎನ್ನ ವಂಶದ ರಾಯ ಹಿಮಹತ್ತಿ ಸತ್ತರೆ
ಎನ್ನ ಕುಲಕೆ ಹಾನಿಯೆಂದು |
ತನ್ನೊಳು ತಾನೆ ಚಿಂತಿಸಿ ಪೊರಮಟ್ಟನು
ಮುನ್ನಿನ ಮೂಡದಿಕ್ಕಿನಲಿ ೭೫

ಅಂದು ಹರಿಶ್ಚಂದ್ರ ಮುಂದಕೆ ನಡೆಯಲು
ಅಂದು ಬತ್ತಿದೊ ಹಳ್ಳಕೊಳ್ಳ |
ಒಂದು ಕೂಗಳತೆಯಲ್ಲದೆ ಮಳೆ ಮಿಗಿಲಿಲ್ಲ
ಕಂಡು ನೃಪನು ಬೆರಗಾದ ೭೬

ದಿಟ್ಟ ಹರಿಶ್ಚಂದ್ರ ನಡೆವುದ ಮುನಿ ಕಂಡು
ಹೊಟ್ಟೆ ಹೊಟ್ಟೆಯ ಹೊಯ್ದುಕೊಳುತ |
ಬೆಟ್ಟ ಘಟ್ಟವನೇರಿಸುತ್ತ ಬಳಲಿಸಿದ
ಕೆಟ್ಟ ವಿಶ್ವಾಮಿತ್ರನಂದು ೭೭

ಬೆಟ್ಟವನೆಲ್ಲವ ಸುತ್ತಿ ಕಂಗೆಡಿಸಿದ
ನೆಟ್ಟನೆ ಬಲುಬಿಸಿಲೊಳಗೆ |
ಇಷ್ಟು ಕಂಗೆಟ್ಟರಸನ ಕೇಳಬೇಕೆಂದು
ದುಷ್ಟ ವಿಶ್ವಾಮಿತ್ರ ಬಂದ ೭೮

ಬಂದ ಮುನಿಯ ಕಾಣುತ ಹರಿಶ್ಚಂದ್ರನು
ಅಂದು ಪಾದದ ಮೇಲೆ ಬಿದ್ದು |
ತಂದೆಯಿದೇನು ಅರಣ್ಯಕ್ಕೆ ನೀವ್[ಗಳು]
ಬಂದ ಕಾರ್ಯವ ಬೆಸಸೆಂದ ೭೯

ಒಂದು ಮಾತನು ಕೇಳುಯೆಲೆ ನೃಪ ನಿನಗಿನ್ನು
ಮುಂದುಂಟು ಬಲುಸಂಕಟವು |
ಬಂದ ಕಂಟಕವನೆಲ್ಲವ ಪರಿಹರಿಸುವೆ
ಒಂದು ಮಾತನು ಕೇಳೆಂದ ೮೦

ಎನ್ನ ನಿನ್ನೆಡೆಯೊಳು ಭಿನ್ನಭೇದಗಳಿಲ್ಲ
ಎನ್ನ ಮಕ್ಕಳ ಮದುವೆಯಾಗು |
ಹೊನ್ನನೆಲ್ಲವ ಬಿಟ್ಟು ಪಟ್ಟವ ಕಟ್ಟುವೆ
ನಿನ್ನ ರಾಜ್ಯವ ನಿನಗಿತ್ತು ೮೧

ಎನ್ನ ಬಿನ್ನಪವನ್ನು ಚೆನ್ನಾಗಿ ಚಿತೈಸಿ
ನಿನ್ನ ರಾಜ್ಯವು ನನಗೇಕೆ |
ಎನ್ನೊಳಗೀ ನುಡಿ ಬೇಡೆಂದು ಹರಿಶ್ಚಂದ್ರ
ತನ್ನ ಶಿರವ ಬಾಗಿದನು ೮೨

ಕೊಟ್ಟು ಹುಸಿಯೆನೆಂದು ಕಟ್ಟಿದೆ ಬಿರುದನು
ಕೊಟ್ಟ ಭಾಷೆಗೆ ತಪ್ಪೆನೆಂದೂ |
ಬಿಟ್ಟ ರಾಜ್ಯವ ಹಿಡಿದೆನೆ ನಾನೆನುತ
ದಿಟ್ಟ ನುಡಿದ ಕೌಶಿಕಗೆ ೮೩

ಅಂದು ಹರಿಶ್ಚಂದ್ರ ಮುಂದಕ್ಕೆ ನಡೆದನು
ಸಂದೇಹವನು ಬಿಟ್ಟು ಮನದಿ |
ಮುಂದೆ ಬಂದುದ ಕಾಂಬೆನೆನ್ನುತ ನೃಪ
ಅಂದು ಅರಣ್ಯದಿ ನಡೆದ ೮೪

ಹರಿದ ಹಳ್ಳದಿ ಕರಚರಣ ಶ್ರೀ ಮುಖವನು
ಭರದಿಂದಲೆಲ್ಲ[ವ] ತೊ[ಳೆ]ದು |
ವಿರೂಪಾಕ್ಷನ ಪಾದಕಮಲವನರ್ಚಿಸಿ
ಗುರುವ ಮಂತ್ರವ ಸ್ಮರಿಸಿದನು ೮೫

ಗುರು ಪ್ರಸಾದಫಲವ ಕೈಕೊಂಡು
ಹರಿಶ್ಚಂದ್ರ ಸತಿಸುತ ಮಂತ್ರಿ |
ಹರುಷದಿ ಮಾತಾಡುತ ಮುಂದೆ ನಡೆದರು
ಹರಿಕಾರ ನಕ್ಷತ್ರ ಸಹಿತ ೮೬

ಪೊಡವಿಪತಿಗೆ ನಕ್ಷತ್ರ ನುಡಿದನಂದು
ಅಡವಿಗೆ ಗುರಿಯಾಗಬೇಡ |
ಮಡದಿ ಸುತನು ಮಂತ್ರಿಯ ನೋಡಿಸದೆಯೆ-
ನ್ನೊಡೆಯ ಹೇಳಿದ ಮಾತು ಕೇಳು ೮೭

ಬಿಡು ಈ ಮಾತನು ನುಡಿಯದಿರೆನ್ನೊಳು
ಮಡದಿ ಸುತನು ಮಂತ್ರಿ ತಾನು |
ಒಡನೆ ಪ್ರಾಣವ ಬಿಟ್ಟು ಅಳಿದರೇನಾಯಿತು
ಕಡೆಗೆನ್ನ ಸತ್ಯವ ನೋಡು ೮೮

ಅಡಿಯಿಟ್ಟು ಮುಂದಕೆ ನಡೆದನರಣ್ಯದಿ
ಬಿಡದೆ ಛೀಳಿಡುವಾ ವನದಿ |
ನಡೆವರಸನ ಕಂಡು ವಿಶ್ವಾಮಿತ್ರನು
ಬಿಡದೊಂದು ಕೃತಕವ ನೆನೆದ ೮೯

ಕೆಟ್ಟ ವಿಶ್ವಾಮಿತ್ರ ಕಿಡಿಕಿಡಿಯುಗುಳುತ
ಬೆಟ್ಟಕ್ಕೆ ಕಿಚ್ಚನಿಕ್ಕಿದನು |
ದಿಟ್ಟ ಹರಿಶ್ಚಂದ್ರ ನಡೆವುತ ತೋರಿದ
ಬೆಟ್ಟಘಟ್ಟಗಳು ಬೇವುದನು ೯೦

ಧಿಗಿಲು ಭುಗಿಲು ಚಿಟಿಚಿಟಿಲೆಂದೆನ್ನುತ
ಹೊಗೆಯು ನಾಲ್ದೆಸೆಯನು ಮುಸುಕಿ |
ನೆಗದುರಿಯಾಕಾಶವನಂದು ತುಡುಕಲು
ಖಗಮೃಗವೆಲ್ಲ ಕಂಗೆಟ್ಟೊ ೯೧

ಎರಳೆ ಸಾರಂಗ ಸೂಕರ ಮರೆ ಕರಡಿಯು
ಮೊರೆವ ಹೆಬ್ಬುಲಿ ಗಜಸಿಂಹ |
ಉರಿಯೊಳು ಸಿಕ್ಕಿ ಬೇವುತ ಸಾಯಲಾರದೆ
ಹರಿಶ್ಚಂದ್ರನ ಮೇಲೆ ಕವಿದೊ ೯೨

ಉರಿಗರಿಯಾದುವು ಗಿರಿಗಳು ಸಿಡಿದುವು
ಧರೆಯೆಲ್ಲ ಕಾದುಕ್ಕಿದಂತೆ |
ತರಹರಿಸದೆ ತಲ್ಲಣಿಸುತಯಿರುತಿರೆ
ಇರುವರೆ ಅಲ್ಲೆಡೆಯಿಲ್ಲ ೯೩

ಹರಿಯಜಸುರರು ದೇವರ್ಕಳು ಮುಂತಾಗಿ
ಸುರಪತಿಗೊಂದು ಕಾರಣದಿ |
ಶರಧಿಯ ಕಡೆಯಲು ಭರದಿಂದ ವಿಷ ಹುಟ್ಟಿ
ಧರೆಯ ಸಂಹರಿಸುವಂದದಲಿ ೯೪

ಗಿರಿಯುದ್ದ ಉರಿಯು ಆಕಾಶಕ್ಕೆ ನೆಗೆಯಲು
ಸುರಲೋಕವೆಲ್ಲ ಕಂಗೆಟ್ಟು |
ಹರಿಯಜಸುರರೆಲ್ಲ ಪ್ರಳಯಾಗ್ನಿಯಿಂದಂಜಿ
ಪುರಹರನಿಗೆ ಮೊರೆಯಿಡಲು ೯೫

ಗಿರಿಜೆಯರಸ ಕೇಳಿ ಅಂಜಬೇಡೆನ್ನುತ
ಹರಿಯಜಸುರರ ಸಂತೈಸಿ |
ಹರಿಶ್ಚಂದ್ರನ ಕೆಡಿಸುವೆನೆಂದು ಕೌಶಿಕ
ಭರದಿ ಬೆಟ್ಟಕೆ ಕಿಚ್ಚನಿಟ್ಟ ೯೬

ಅಷ್ಟದಿಕ್ಕಿನ ಗಿರಿ[ಗಳು] ಬೆಂದು ಬಿದ್ದುವು
ಬಟ್ಟೆಯ ಕಾಣದಂದದಲಿ |
ನೆಟ್ಟನೆ ಓಂದೆ ಮುಂದೆ ಎಡಬಲದಲಿ ಕೆಂಡ
ಒಟ್ಟಿತು ಗಿರಿಯುದ್ದದಲಿ ೯೭

ನಡುಗದೆ ಹೆದರದೆ ಟೆಕ್ಕದೆ ತೆರಳದೆ
ಸುಡುತ ಬರುವ ವಿಷವ ಕಂಡು |
ಮೃಡನೊಬ್ಬನಿದ್ದಂತೆ ಪೊಡವಿಪ ನಿಂದನು
ಸುಡುತ ಬರುವ ಕಿಚ್ಚ ಕಂಡ ೯೮

ಹಿಂದೆ ಮುಂದೆಡಬಲದಲಿ ಕಿಚ್ಚು ಬರುತಿರೆ
ನಿಂದನು ನಡುಮಧ್ಯದಲಿ |
ಇಂದೆನ್ನ ಪ್ರಾಣದಿ ಮಿಗಿಲಿಲ್ಲವೆನುತ
ಅಂದು ಹರಿಶ್ಚಂದ್ರ ನಡೆದ ೯೯

ಮುಂದಕ್ಕೆ ನಡೆವರಸನ ಮಂತ್ರಿ ನಿಲಿಸಿದ
ಹಿಂದಕ್ಕೆ ನಾ ಕೊಟ್ಟ ಭಾಷೆ |
ಇಂದಿಗುತ್ತರ ನಾ ಸತ್ತ ಬಳಿಕ ನೀನು
ಹಿಂದೆ ಸಾಯಿಯೆನುತ ತಡೆದ ೧೦೦

ಬಿಡುಬಿಡು ಮಡದಿ ಮಗ ಮಂತ್ರಿ ಸಾವುದ
ಬಿಡದೆ ನಾ ಕಣ್ಣಾರೆ ಕಂಡು |
ಕಡೆಯಲಿ ಸಾವುದುಚಿತವಲ್ಲವೆನುತ
ನುಡಿದ ನೃಪನು ಮಂತ್ರಿಯೊಡನೆ ೧೦೧

ನಿನ್ನಳವನು ನಾನು ಕಣ್ಣಾರೆ ಕಂಡರೆ
ಎನ್ನಿಂದ ದ್ರೋಹಿಗಳಿಲ್ಲ |
ಮುನ್ನೊಂದು ಕಾರ್ಯಕೆ ಮಂತ್ರಿ ಮುಂದಲ್ಲವೆ
ಎನ್ನುತ ಮುಂದಕೆ ನಡೆದ ೧೦೨

ನಡೆವ ಮಂತ್ರಿಯ ಲೋಹಿತ ಕುವರನು ಕಂಡು
ತಡೆದನು ಅತಿ ಬೇಗದಲಿ |
ಬಿಡದೆ ದಾವಾಗ್ನಿಗೆ ನಡೆವ ಸುತನ ಕಂಡು
ಪೊಡವಿಪತಿಯ ಸತಿ ತಡೆದು ೧೦೩

ಕಂದನ ಹರಿಶ್ಚಂದ್ರನ ಕೈಯಲಿ ಕೊಟ್ಟು
ಚಂದ್ರಮತಿಯು ಬೇಗದಲಿ |
ಹಿಂದಕ್ಕೆ ಹೋಗೆಂದು ಮಂತ್ರಿಯು ನಿಲಿಸಿದ
ಮುಂದಕ್ಕೆ ಅಡಿಯಿಟ್ಟಳಂದು ೧೦೪

ಚಂದ್ರಮತಿಯೆ ಕೇಳು ಮುಂದಕ್ಕೆ ನಡೆದರೆ
ಇಂದು ನಿನಗೆ ನನ್ನಾಣೆ |
ಒಂದು ಮಾತನು ಕೇಳು ಕಂದನಳುತಲದೆ
ಮುಂದೆ ನಾ ಹೋದಪೆನೆಂದ ೧೦೫

ಗಂಡನ ಮುಂದಳಿದರೆ ಮುತ್ತೈದೆ[ಯು]
ಗಂಡನಳಿದ ಬಳಿಕಳಿದು |
ಮುಂಡೆಯಾಗಳಿದರೆ ಇಹಪರವಿಲ್ಲೆಂದು
ದಿಂಡೆಯತನದಿಂದ ನಡೆದು ೧೦೬

ಹಿಂದಕ್ಕೆ ಬಂದು ಹರಿಶ್ಚಂದ್ರರಾಯಗೆ
ಅಂದು ಕರವನೆತ್ತಿ ಮುಗಿದು |
ಹಿಂದೆ ನಿಮಗೆ ನಾ ಮಾಡಿದವೊಪ್ಪವೆಲ್ಲವ
ಒಂದನು ನೋಡದಿರೆಂದು ೧೦೭

ಕಂದನ ಮಂತ್ರಿಯ ಹಿಂದಕ್ಕೆ ಕಳುಹೆಂದು
ಚಂದ್ರಮತಿಯು ನಿಶ್ಚೈಸಿ |
ಕಂದನ ತಂದು ಮಂತ್ರಿಯ ಕೈಯಲಿ ಕೊಟ್ಟು
ಅಂದು ಹರಸಿ ಹೋಗೆಂದು ೧೦೮

ಸತ್ಯವೆ ಜಯ ಅಸತ್ಯವೆ [ಲ]ಯವೆಂದು
ಮತ್ತೆ ಕಿಚ್ಚಿಗೆ ನಡೆವಾಗ |
ಉತ್ತಮ ಪುರುಷೆಯು ಇವಳಲ್ಲದಿಲ್ಲೆಂದು
ಅತ್ತ ದೇವತೆಗಳು ಮರುಗೆ ೧೦೯

ಹರಿಯಜ ಸುರರಷ್ಟ ದಿಕ್ಪಾಲರಿಗೆಲ್ಲ
ಕರವ ಮುಗಿದು ಚಂದ್ರಮತಿಯು |
ಭರದಿ ವಸಿಷ್ಠನ ಪಾದವ ನೆನೆವುತ್ತ
ಉರಿಯ ಹೊಕ್ಕಳು ಉರವಣಿಸಿ ೧೧೦

ಉರಿವ ಕಿಚ್ಚಲಿ ನಡೆದಳು ಚಂದ್ರಮತಿಯಂದು
ಉರಿವ ಕೆಂಡಕೆ ಬೀಳುವಂತೆ |
ಸುರಸತಿಯರು ಬಂದು ನಿಂದು ನೋಡಿದರಂದು
ಭರದಿ ಕಂಬನಿಯ ತುಂಬಿದರು ೧೧೧

ಚಂದ್ರಮತಿಯು ಮುಂದೆ ನಡೆವುದ ಕಾಣುತ
ಒಂದಾಗಿ ಎಲ್ಲರು ನಡೆಯೆ |
[ನಂ]ದಿತು ವ[ಓಲ]ದಿ ಉರಿವ ಕಿಚ್ಚಾಕ್ಷಣ
ಇಂದುಧರನ ಕೃಪೆಯಿಂದ ೧೧೨

ಸತಿಸುತಮಂತ್ರಿವೆರಸಿ ಹರಿಶ್ಚಂದ್ರನು
ಅತಿಬೇವ ಕಿಚ್ಚಲಿ ನಡೆಯೆ |
ಖತಿಯಿಂದ ನುಡಿದನು ವಿಶ್ವಾಮಿತ್ರನು
ಪತಿವ್ರತೆಯಿ[ಹ] ಲೋಕಕೆಂದ ೧೧೩

ಉರಿ ಗಿರಿ ದರಿ ಹಳ್ಳ ಕಾಳೋರಗ
ಮೊರೆವ ಹೆಬ್ಬುಲಿ ಗಜಸಿಂಹ |
ಶರಭ ಭೇರುಂಡ ಶಾಕಿನಿ ಡಾಕಿನಿಯರ
ಗುರುಕೃಪೆಯಿಂದ [ಕಳೆ]ದರು ೧೧೪

ಮಾಳವ ಮಲೆಯಾಳ ಗವುಳ ಗುಜ್ಜರ ನೇ-
ಪಾಳ ತುಳುವ ಹಮ್ಮೀರ |
ಕಾಳಿಂಗ ಕಾಶ್ಮೀರ ಕನ್ನೋಜ ಬಂಗಾಳ
ಏಳು ದೇಶವ ದಾಟಿದರು ೧೧೫

ಅತ್ತ ಕಾಶಿಯ ದೇಶವ ಹೊಕ್ಕು ನಡೆವರು
ಅತ್ಯಂತ ಸಂತೋಷದಿಂದ |
ಉತ್ತಮ ಪುರುಷರು ಸತ್ಯವ ಬಿಡದಿರೆ
ಮತ್ತೆಯವರಿಗೆ ಕೇಡಿಲ್ಲ ೧೧೬

ಕಂಡನು ಸತ್ಯವ ಬಿಡದೆ ನಡೆವುತಿಹ
ಮಂಡಲ ಪತಿಯ ಕೌಶಿಕನು |
ಭಂಡಾಗಿ ಹೋದನು ಮರ್ತ್ಯಲೋಕದೊಳೆಂದು
ಮಂಡೆಯ ಹೊಯಿಕೊಂಡನಂದು ೧೧೭

ಅತ್ತ ಹರಿಶ್ಚಂದ್ರ ಕಾಶಿಗೆ ನಡೆವುತ್ತ
ಒತ್ತಿಲಿರುವ ಹೊಳೆಗಳನು |
ವಿಸ್ತರಿಸೆನುತ ಪೇಳೆನ್ನುತ ನೃಪ ಕೇಳೆ
ಮತ್ತೆ ಪೇಳಿದನಾ ಮಂತ್ರಿ ೧೧೮

ಮುಂದಣ ಹೊಳೆಯಿದು ಗಂಗೆ ಗೋದಾವರಿ
ಇಂದಿದು ಯಮುನೆ ಜಾಹ್ನವಿಯು |
ಮುಂದೆ ಸರಸ್ವತಿ ಭಾಗೀರಥಿಯದು
ಎಂದು ಪೇಳುತ ದಾಟಿದರು ೧೧೯

ಭಾಷೆಗೆ ತಪ್ಪದ ಹರಿಶ್ಚಂದ್ರರಾಯನು
ಕಾಶಿಗೆ ಬಂದುದ ಕಂಡು |
ದೇಶಪತಿಯು ಬಿಸಿಲೊಳು ಬಳಲಿದನೆಂದು
ಆ ಸೂರ್ಯನಂಭೋಧಿಗಿಳಿದ ೧೨೦

ಬಳಲಿದ ರಾಯನು ಸತಿಸುತ ಮಂತ್ರಿಯು
ಹೊಳೆಯೊಳು ಸ್ನಾನವ ಮಾಡಿ |
ತಳುವದೆ ರಾಯ ಲಿಂಗಪೂಜೆಯ ಮಾಡಲು
ಕುಳಿತಲ್ಲಿಗೈದನೆ ಸಂಧಿ ೧೨೧

ಆರನೆಯ ಸಂಧಿ

ಶ್ರೀ ವಿರೂಪಾಕ್ಷ ಪಂಪಾಪುರವಾಸನೆ
ಶ್ರೀಹರಿ ನಯನಾರ್ಚಿತನೆ |
ಶ್ರೀಕರದಿಂದಭಯವನಿತ್ತು ಸಲಹೆನ್ನ
ಶ್ರೀ ಪಾರ್ವತಿಯ ರಮಣನೆ ೧

ಅತ್ತ ಹರಿಶ್ಚಂದ್ರನಾ ಹೊಳೆಯೊಳಗಿರೆ
ಮತ್ತೆ ವಿಶ್ವಾಮಿತ್ರ ಮುನಿಯು |
ಚಿತ್ತದಿ ನೆನೆದನ್ಯಾಯವ[ನು] ಪೇಳ್ವರೆ
ಮತ್ತೆ ಶೇಷನಿಗಳವಲ್ಲ ೨

ಕರಸಿದ ಅನಲನ ಬರಿಸಿದನಾಕ್ಷಣ
ಧರೆಯೊಳು ಭೂಸುರನಾಗಿ |
ಹರಿಶ್ಚಂದ್ರನ ಸತಿಸುತರನು ಬೆಲೆಕೊಂಡು
ಕಿರುಕುಳಪಡಿಸು ನೀನೆಂದ ೩

ಚಂದ್ರಮತಿ[ಯು] ಹರಿಶ್ಚಂದ್ರನ ಕಂದನ
ಒಂದಾಗಿ ಮುಂದಲೆವಿಡಿದು |
ಕೊಂದವನಿಗೆ ನೋವ ಹುಟ್ಟಿಸು ಹೋಗೆಂದು
ಅಂದನಲನ ಕಳುಹಿದನು ೪

ಬಂದನು ಕಾಶಿಗೆ ಅಲ್ಲಿ ಭೂಸುರನಾಗಿ
ಕೊಂಡು ಕಾಡುವೆನು ನಾನೆನುತ |
ಸಂಧ್ಯಾವಂದನೆ ಜಪ ತಪಗಳ ಮಾಡುತ
ಅಂದು ಭೂಸುರನ ವೇಷದಲಿ ೫

ಆರು ಮಾಡದ ಅನ್ಯಾಯ ಕರ್ಮಂಗಳ
ಹಾರುವರುಗಳು ಮಾಡುವರು |
ದಾರದಿ ಹೋತನ ಕೊರಳನು ಕೊಯ್ವರು
ಧರಣಿಯೊಳಗೆ ಹಾರುವರು ೬

ಪಾಪಕ್ಕೆ ಹೇಸದೆ ಪಾಪಿ ಹಾರುವನಾಗಿ
ಕೋಪವ ತಾಳಿಕೊಂಡಿಹನು |
ಭೂಪನ ಸತಿಸುತರನು ಕೊಳ್ಳಬೇಕೆಂದು
ಪಾಪಿ ಹಾರುವನು ಬಂದಿರ್ದ ೭

ಹಾರುವರ ಕೇರಿಯೊಳಗಯೋಗ್ಯ ಭಟ್ಟನುರೆ
ಹಾರುವನೆನಿಸಿಕೊಂಡಿಹನು |
ಆರೈದೆಲ್ಲ [ಸುದ್ದಿ]ಯನು ಕೇಳುತಿರ್ದನು
ಹಾರು[ವ] ವೇಷದಲಿ ರಂಜಿಸುತ ೮

ಅಂದು ಯಮನ ಕರಸಿದನು ವಿಶ್ವಾಮಿತ್ರ
ಇಂದು ಕಾಶಿಗೆ ನೀನು ಹೋಗಿ |
ಮುಂದೆ ಹರಿಶ್ಚಂದ್ರನೃಪನನು ನೀ ಕೊಂಡು
ಬಂಧನಪಡಿಸು ಹೋಗೆಂದ ೯

ಸತ್ಯವಂತನ ಅಸತ್ಯವ ನುಡಿಯಿಸದಿರೆ
ಪೃಥ್ವಿಯೊಳಪಕೀರ್ತಿಯೆನುತ |
ಸತ್ಯಲೋಕಕ್ಕೆ ಕೈಲಾಸಕೆ ಮುಖವನು
ಎತ್ತಲರಿಯೆನೆಂದ ಮುನಿಪ ೧೦

ಬಂದನು ಕಾಶಿಗೆ ವೀರಬಾಹುಕನಾಗಿ
ನಿಂದನು ಹೊಲಗೇರಿಯಲ್ಲಿ |
ಅಂದು ಹರಿಶ್ಚಂದ್ರರಾಯಗೆ ಯಮನಾಗಿ
ಬಂದು ಕಾಶಿಯೊಳಿರುತಿರ್ದ ೧೧

ಆ ಸಮಯದಲಿ ಸೂರ್ಯನು ಬಂದು ನಿಂದನು
ದೇಶಪತಿಯ ನೋಡಲೆಂದು |
ಐಸರೊಳಗೆ ಕತ್ತಲೆ ಬಿಟ್ಟೋಡಿತು
ಕಾಶಿಯ ನೃಪ ಹೊಗುವಾಗ ೧೨

ಕಳಶ ಕನ್ನಡಿ ತೋರಣಗಳು ಕಟ್ಟಿರ್ದೊ
ನಿಳಯ ನಿಳಯದ ಬಾಗಿಲಲಿ |
ಹೊಳೆವಪುಪ್ಪರಿಗೆ [ಬು]ರುಜು ತೇರು ಮೆರೆಮುವು
ತಳಿತದಿ(?) ಟೆಕ್ಕೆಗಳಲ್ಲಿ ೧೩

ಎಲ್ಲ ಕೇರಿಗಳೊಳು ಅಲ್ಲಲ್ಲಿ ಕಟ್ಟಿರ್ದೊ
ಜಲ್ಲಿ ಪಟ್ಟೆಗಳ ನೋಡುತ |
ನಿಲ್ಲದೆ ಸೂರ್ಯವೀಧಿ[ಯ] ಸೋಮವೀಧಿಯ-
ನೆಲ್ಲವ ನೃಪಯೀಕ್ಷಿಸಿದ ೧೪

ಕಂಡನು ವಿಶ್ವನಾಥನ ಉಪ್ಪರಿಗೆಯ
ಮುಂದಣ ವೃಷಭಧ್ವಜವನು |
ಅಂದು ಕಟ್ಟಿರ್ದ [ವ್ಯಾಸನ ತೋಳು] ನೋಡುತ್ತ
ಬಂದನು ಮಣಿಕರ್ಣಿಕೆಗೆ ೧೫

ಬಂದನು ಮಣಿಕರ್ಣಿಕೆಯ ತೀರ್ಥವ ನೃಪ
ಒಂದಾಗಿ ಸತಿ ಸುತ ಮಂತ್ರಿ |
ಬಂದು ಹೊಕ್ಕನು ವಿಶ್ವನಾಥನುಪ್ಪರಿಗೆಯ
ಅಂದಚಂದವ ನೋಡುತಲಿ ೧೬

ಹೊಡೆವ ತಂಬಟಭೇರಿ ನಿಸ್ಸಾಳ ಗಿಡಿಬಿಡಿ
ಬಿಡದೆ ಬಾರಿಪ ಡೋಲು ಮೌರಿ |
ಬಿಡದೊರಲುವ ಹೆಗ್ಗಾಳೆ ಬುರುಗು ಶಂಕು
ಮೃಡನ ಓಲಗದೊಳೊಪ್ಪಿರ್ದೊ ೧೭

ಕಿನ್ನರಿ ತಾಳ ದಂಡಿಗೆ ಬಲು ಮದ್ದಳೆ
ಸನ್ನೆಗೆ ನುಡಿವ ಜಾಗಟೆಯು |
ಸನ್ನುತದುರಮೆಯು ಪಾಂಗಟಾಂಗಾವುಜ
ಪನ್ನಗಧರನೋಲಗದಿ ೧೮

ಗರುಡಗಂಧರ್ವ ಕಿನ್ನರ ಕಿಂಪುರುಷರು
ವರಸಿದ್ಧ ವಿದ್ಯಾಧರರು |
ಉರಗ ಮಯೂರರ ಸಂದಣಿಯನು ಕಂಡು
ಇರುಳು ಅರ್ಚಿಸಪೋಗುತಿಹರು ೧೯

ಬಂದು ಕಂಡನು ವಿಶ್ವನಾಥನ ಪಾದವ
ಅಂದು ಹರಿಶ್ಚಂದ್ರ ನೃಪನು |
ಒಂದಾಗಿ ಸತಿಸುತ ಮಂತ್ರಿವೆರಸಿ ನೃಪ-
ನಂದು ಕರವನೆತ್ತಿ ಮುಗಿದು ೨೦

ತ್ರಾಹಿಯೆನ್ನೊಡೆಯನೆ ತ್ರಾಹಿಯೆನ್ನಾಳ್ದನೆ
ತ್ರಾಹಿಯೆನ್ನನು ರಕ್ಷಿಪನೆ |
ತ್ರಾಹಿಯೀರೇಳು ಲೋಕವ ಹೊರೆವಾತನೆ
ತ್ರಾಹಿಯೆನುತಲಡ್ಡಬಿದ್ದ ೨೧

ಎನ್ನಯ್ಯನೆ ಎನ್ನನಾಳಿದ ಅಭವನೆ
ಎನ್ನ ನಿಧಿಯೆಯೆನ್ನಸುಧೆಯೆ |
ನಿನ್ನ ಪಾದವ ಕಂಡು ಇಂದು ನಾ ಬದುಕಿದೆ-
ಯೆನ್ನುತ ಶಿರವ ಚಾಚಿದನು ೨೨

ಬಿಟ್ಟಿಗೆ ಬಂದು ರಾಯನ ಕಂಡಂದದಿ
ನೆಟ್ಟನೆ ಮುನಿಯಿಂದಲಾನು |
ಸೃಷ್ಟಿಗೀಶ್ವರ ನಿಮ್ಮ ಪಾದವ ಕಂಡೆನು
ಕೆಟ್ಟು ಬಂದವನ ರಕ್ಷಿಪುದು ೨೩

ಇಂದುಧರಗೆ ವಂದಿಸಿ ಹರಿಶ್ಚಂದ್ರನು
ಅಂದು ಪಾರ್ವತಿಗೆ ಕೈಮುಗಿದು |
ಮುಂದೆ ಕಾಶಿಯೊಳಿದ್ದ ಲಿಂಗವೆಲ್ಲವ ನೋಡ-
ಲೆಂದು ನೃಪನು ಹೊರವಂಟ ೨೪

ಕಾಶಿಯೊಳಗೆ ಸತ್ತವರೆಲ್ಲರಿಗುಪ-
ದೇಶವರಿಕೆಯಾಗುವಂತೆ |
ಈಶನೆ ಸಾಕ್ಷಿ ಸುರಾಭಾಂಡೇಶ್ವರ
ಕಾಶಿಯೊಳಗೆ ನೆಲಸಿಹನು... ೨೫

ಏಳನೆಯ ಸಂಧಿ

...ನಡೆಸಿದ ನಾರಿಯ ಸುಡುಗಾಡಿಗೆ ತಂದು
ಹೊಸ ಬಂಟ ನಾನು ಕರೆದಾಗ |
ಮಡದಿಯಿವಳು ಶಿಶುವನು ಕೊಂದ ಪಾತಕೆ-
ಯಲ ಕೊಲ್ಲು ಖಡ್ಗದಿಂದೆನಲು ೧೭೭

ಕೇಳುತ ಭೂಪತಿ ಆಶ್ಚರ್ಯವನು ಹೊಂದಿ
ಮೇಲೊಂದನೊಮ್ಮೆ ಯೋಚಿಸದೆ |
ಭಾಳಲೋಚನನೆ ಭವಹರನೆ ಸ್ತ್ರೀಹತ್ಯವ
ಮಾಡಬೇಕಾಯಿತೆಯೆಂದ ೧೭೮

ನಡುಗುತ ನಿಂದರೆ ಚಂದ್ರಮತಿಯು ಆಗ
ದೃಢಗೈಯ ಹರಿಶ್ಚಂದ್ರನಾಗ |
ಮಡದಿಯ ಹೆಡತಲೆ ಹೊಡೆವುದ ರವಿ ನೋಡ-
ಲಡರಿದ ಮೂಡಣ ಗಿರಿಯ ೧೭೯

ಗಿರಿಜೆಯ ಮನೋಹರ ಗುರು ವಿಶ್ವನಾಥನು
ಹರಿಯಜ ಮೊದಲಾದ ಸುರರು |
ಸುರಪ ವಸಿಷ್ಠ ವಿಶ್ವಾಮಿತ್ರರೆಲ್ಲರು
ನೆರೆದರು ಮೇಘಮಾರ್ಗದಲಿ ೧೮೦

ಪತಿವ್ರತೆಯಾದ ಚಂದ್ರಮತಿಯನು ಹೋಲುವ
ಸತಿಯುಂಟೆ ಮೂರು ಲೋಕದಲಿ |
ಪ್ರತಿಯಿಲ್ಲವೆಂದು ಪಾರ್ವತಿಗೂಡಿ ದಿವಿಜರ
ಸತಿಯರು ಬೆರಗಾಗುತಿರಲು ೧೮೧

ಪೊಡವೀಶ ನಡೆತಂದು ತಡೆಯದೆ ತನ್ನಯ
ಒಡೆಯನ ಆಜ್ಞೆಯ ಮೇಲೆ |
ಮಡದಿಯ ಮುಂದಲೆವಿಡಿದಾಗ ಬಡಿವುತ್ತ
ಖಡುಗವ ಝಳಪಿಸುತಿರಲು ೧೮೨

ಮನದೊಳು ಸಂಶಯವಿಲ್ಲದೆ ಭೂಪತಿ
ವನಿತೆಯ ಹೊಯ್ವುಪೆನೆಂದು |
ಅನುಮಾನವಿಲ್ಲದೆ ಖಡ್ಗವನೆತ್ತಲು
ಮುನಿ ಕೌಶಿಕ ಬಂದು ನಿಂದ ೧೮೩

ಇಂದೆನ್ನ ಮಕ್ಕಳ ಮದುವೆಯಾದರೆ ನಿನ್ನ
ಕಂದನ ಕಾಶಿರಾಜನ |
ಕಂದನ ಕೊಟ್ಟೆಂದು ಸತಿಯ ತಲೆಗಾಯ್ವೆ ಹೊನ್ನನು
ತಂದೆಲ್ಲವ ಕೊಡಿಸುವೆನು ೧೮೪

ನಿನ್ನ ಬಂಧನವನು ಬಿಡಿಸಿ ಮೋಕ್ಷವನಿತ್ತು
ನಿನ್ನ ರಾಜ್ಯವ ನಿನಗೀವೆ |
ಇನ್ನು ಎಲ್ಲರ ಕೈಯ ಕಪ್ಪವ ಕೊಡಿಸುವೆ
ಎನ್ನ ಮಾತು ಕೇಳೆಂದ ೧೮೫

ಬಿಡುಬಿಡು ಈ ಮಾತ ನುಡಿಯದಿರೆನ್ನೊಳು
ಮಡಿದರೇನಾಯಿತು ಸುತನು |
ಮಡದಿಯಳಿದರೇನು ರಾಜ್ಯ ಹೋದರೆಯೇನು
ಸುಡುಗಾಡಿಗಾಳಾದರೇನು ೧೮೬

ಎನ್ನ ದುಷ್ಕರ್ಮವು ಬಂದುದೆಂದಿರ್ದನು
ನಿನ್ನ ದೂರುವನಲ್ಲ ಮುನಿಪ |
ಗನ್ನಗತಕದಲೆನ್ನ ಕಾಡಬಂದರೆ ಇನ್ನು
ಬೆನ್ನು ಕೊಟ್ಟೋಡುವನಲ್ಲ ೧೮೭

ಎನ್ನ ಕುಲವು ಕೆಟ್ಟು ಹೊಲೆಯನಿಗಾಳಾಗಿ
ಇನ್ನು ನಾ ಹೊಲೆಗೆ ಹೇಸುವೆನೆ |
ಎನ್ನ ಸತ್ಯವು ಕೆಡದಿರ್ದರೆ ಸಾಕೆಂದು
ತನ್ನ ಖಡ್ಗವನೆತ್ತಿ ಜಡಿದ ೧೮೮

ಜನಪತಿ ಖಂಡೆಯವನು ಕೊಂಡು ಹೊಡೆಯಲಿ-
ಕನುವಾದದೇನ ಹೇಳುವೆನು |
ವನಿತೆಗೆ ನುಡಿದನು ಮನಮುಟ್ಟಿ ನಿನ್ನಯ
ಮನೆದೇವರನು ನೆನೆಯೆಂದ ೧೮೯

ಪರನೆನ್ನಯ ದೈವ ಹರಿಶ್ಚಂದ್ರನೆ ಗಂಡ
ನೆರೆ ಮಂತ್ರಿ ಸತ್ಕೀರ್ತಿ ತನಗೆ |
ವರಪುತ್ರ ಲೋಹಿತ ತರಳನು ತನಗಾಗಿ
ಇರಲಿಂತು ಜನ್ಮ ಜನ್ಮದಲಿ ೧೯೦

ಮುನಿಪ ವಸಿಷ್ಠನ ಘನಪದವನು ಮತ್ತೆ
ಮುನಿ ವಿಶ್ವಾಮಿತ್ರನ ನೆನೆದು |
ತನುಜನ ಸಂಗಡವನು ಮಾಡಿ ಪೋಪೆನು-
ಯೆನುತಲಿ ಹೊಡೆಯೆಂದಳಾಗ ೧೯೧

ನಡುವಿರುಳೊಬ್ಬಳು ನಡೆಯಲು ವಿಧಿ ಭಂಗ-
ದೊಡವೆಯ ಮಾಡಿತೊ ಶಿವನೆ |
ಮಡದಿಯ ಕೈಯಾರ ಹಿಡಕೊಂಡು ತಲೆಯನು
ಕಡಿವಂತೆ ತನಗಾಯಿತೆನುತ ೧೯೨

ಸಲಹಿದ ಒಡೆಯನು ಕೊಲ್ಲ[ಲು] ಹೇಳಿದ
ಕೆಲಸವ ಮಾಡುವೆನೆನುತ |
ಅಳವಲ್ಲದಾ ಸತ್ಯಕಳವಾಗಿ ಹುಸಿ ಹೊತ್ತು
ಬಳಸಲೆಯೆನುತ ಕೋಪದಲಿ ೧೯೩

ಎರಗಲಿಕನುವಾಗೆ ಕಲಿ ವಿಶ್ವಾಮಿತ್ರಗೆ
ಸುರರೆಲ್ಲ ಕೋಪಿಸಿ ನುಡಿಯೆ |
ಕಡಿಯಲೆತ್ತಿದ ಖಡ್ಗವ ಬಂದು ಪಿಡಿದನು
ಒಡನೆ ಮೃತ್ಯುಂಜಯನಾಗ ೧೯೪

ಭಾಷೆಗೆ ತಪ್ಪದ ಹರಿಶ್ಚಂದ್ರ ಬಾರೆಂದು
ಈಶ್ವರ ತೆಗೆದಪ್ಪಿದನು |
ಕಾಶೀಪತಿಯ ಪಾದಕೆ ಬಿದ್ದು ಇಂದುಮತಿ
ಭಾಸುರವಲಿ ಹೊರಳಿದಳು ೧೯೫

ಹರಿಯಜ ಸುರಪ ಅಷ್ಟದಿಕ್ಪಾಲರುಗಳು
ಸುರರು ಮನು ಮುನಿಗಳೆಲ್ಲ |
ವರ ಹರಿಶ್ಚಂದ್ರನ ಶಿರದ ಮೇಲೆ ಪುಷ್ಪ
ಸರ[ಗ]ಳ ಮಳೆಯ ಸುರಿಸಿದರು ೧೯೬

ಕಶ್ಯಪ ಭೃಗು ದಧೀಚಿ ವಸಿಷ್ಠನು
ಗೌತಮ ವಿಶ್ವಾಮಿತ್ರ |
ರೋಮಶ ದುರ್ವಾಸ ಅತ್ರಿ ಭರದ್ವಾಜರೆಲ್ಲರು
ಈಶನಲ್ಲಿಗೆ ಬಂದರಾಗ ೧೯೭

ಕಾಶೀರಾಜನ ಸುತಗೆ ಲೋಹಿತಾಶ್ವನಿಗೆ
ಲೇಸಾಗಿ ಪ್ರಾಣವನಿತ್ತು |
ಆ ಪಾರ್ವತಿ ಚಂದ್ರಮತಿಯನು ಕರೆದು ವಿ-
ಲಾಸದಿ ತನ್ನ ಗದ್ದುಗೆಯೊಳು ೧೯೮

ಕುಳ್ಳಿರಿಸುತ ಸತ್ಕರಿಸುತ ಲೋಕದಿ
ನಿನ್ನ ಸಮಾನ ಕೀರ್ತಿಯಳ |
ಇನ್ನು ನಾ ಕಂಡುದು ಕೇಳಲಿಲ್ಲೆನುತಲಿ
ಅಂದು ಮೈಯನೆ ಬೇಗ ತಡಹಿ ೧೯೯

ಇಂದುಧರನು ಹರಿಶ್ಚಂದ್ರನ ಮಂತ್ರಿಯ
ಅಂದು ಕೊಂಡಾಡಿ ತಕ್ಕೈಸಿ |
ಇಂದು ಈ ಸತ್ಕೀರ್ತಿಗೆ ಸರಿ ಯಾರೆಂದು
ಚಂದ್ರಶೇಖರ ಕೇಳಿದನು ೨೦೦

ಮಂತ್ರಿಗಳರಸ ಮಂತ್ರಿಗಳ ಶಿರೋಮಣಿ
ಮಂತ್ರಿ ಕುಲಕೆ ಕಟ್ಟಾಣಿ |
ಎಂತು ಜೀವಿಸಿದೆ ಅರಣ್ಯದೊಳಗೆಯೆಂದು
ಕಂತುಹರನು ಹೊಗಳಿದನು ೨೦೧

ಎನ್ನ ಭಕ್ತನಿಗೆ ಬುದ್ಧಿಯ ಹೇಳಿಕೊಂಡಿರ್ದೆ
ನಿನ್ನಂಥ ಹಿತ[ವ]ರಾರುಂಟು |
ಎನ್ನ ಭಕ್ತನಿಗೆ ನೀನಲ್ಲದೆ ಮಂತ್ರಿಯು
ಇನ್ನೊಬ್ಬರುಂಟೆ ಲೋಕದಲಿ ೨೦೨

ಮೃಡನಂದು ಸುಡುಗಾಡಿಗೆ ಬಂದು ನಿಂದಲ್ಲಿ
ಪೊಡವಿಪತಿಯ ಕೊಂಡಾಡಿ |
ನಡುಗುತ ಹರಿಶ್ಚಂದ್ರರಾಯನು ಕಂಗೆಟ್ಟು
ಒಡೆಯ ಚಿತ್ತೈಸು ಬಿನ್ನಪವ ೨೦೩

ಹೊಲೆಯನಿಗಾಳಾಗಿ ಸುಡುಗಾಡ ಕಾದಿರ್ದು
ಹೊಲೆವೇಷವ ತಾಳಿಕೊಂಡು |
ಕುಲವಧುವನು ಕೊಂದು ಕಂದನ ಕಿತ್ತಿಟ್ಟ
ಹೊಲೆ[ಯು] ನೀಚನಿಗೆ ಬರುವುದೆ ೨೦೪

ಹುಸಿಯ ನುಡಿವ ಯತಿಯಾದರು ಹೊಲೆಯನು
ಹುಸಿಯದ ಹೊಲೆಯನೆ ಯತಿಯು |
ಪಶುಪತಿ ಪದ ಸಿದ್ಧಾಂತವ ಕೇಳಿಯೆ
ವಸುಮತೀಶನ ಸಂತೈಸಿ ೨೦೫

ಸಂದಣಿಸುವ ಮುನಿಗಳೊಳು ವಸಿಷ್ಠ-
ನಂದು ವಿಶ್ವಾಮಿತ್ರನಿರಲು |
ಇಂದುಧರನು ನುಡಿಸಲು ಕೌಶಿಕಮುನಿ-
ಯಂದು ಶಿರವ ಬಾಗಿದನು ೨೦೬

ಪನ್ನಗಧರ ಹರಿಶ್ಚಂದ್ರನ ಕೊಂಡಾಡಿ-
ಯಿನ್ನು ವಿಶ್ವಾಮಿತ್ರ ನೀನು |
ಮುನ್ನ ಕೊಡುವೆಯೆಂದು ಶಪಥಗೈದ ಫಲವ
ಮುನ್ನೀವುದೆನುತ ಬೆಸಸಿದನು ೨೦೭

ಸೃಷ್ಟಿಪತಿಗೈವತ್ತು ಕೋಟಿಯೊಳರ್ಧವ
ಕೊಟ್ಟೆನುಕ್ಕಿನ ಚೂರ್ಣ ಫಲವ |
ದೃಷ್ಟವ ಕಂಡು ಮೆಚ್ಚಿದೆ ಹಿಡಿಹಿಡಿಯೆಂದು
ಅಷ್ಟನು ಕೊಟ್ಟ ನೃಪನಿಗೆ ೨೦೮

ಪಟ್ಟವ ಕಟ್ಟುವೆ ಅಯೋಧ್ಯಕ್ಕೆ ನಡೆಯೇಳು
ನೆಟ್ಟನೆ ಮಣಿರಥವೇರು |
ಸೃಷ್ಟಿಗೀಶ್ವರನ ಸಮಕ್ಷಮ ನುಡಿಯಲು
ಕೆಟ್ಟಿಳೆ ಮುನ್ನ ಹಿಡಿವೆನೆ ೨೦೯

ಒಡೆಯನುಳ್ಳವನಾಸೆಯ ಬಿಟ್ಟು ಬರುವರೆ
ಅಡವಿಯ ಕಾವುದ ಬಿಟ್ಟು |
ಅಡಿಯಿಟ್ಟೆನಾದರೆ ಮೃಡ ನನಗೊಪ್ಪನು
ನುಡಿದ ಭಾಷೆಗೆ ತಪ್ಪೆನೆಂದ ೨೧೦

ಆನೆಯ ಮೇಲೇರಿ ಮೇಲಕೆ ಕವಡೆಯ
ಹಾರಿಸಿದ ದ್ರವ್ಯವಷ್ಟ |
ನಾನವನಿಗಾಳಾಗಿ ನಿಮಗೆ ತೆಕ್ಕೊಟ್ಟೆನು
ಮಾನಿನಿ ಮಗನನು ಮಾರಿ ೨೧೧

ವೀರ ಬಾಹುಕನಿಗೆ ಆಳಾಗಿ ಹೊನ್ನನು
ಊರೆಲ್ಲರ ಮುಂದೆ ಕೊಡಿಸಿ |
ಆರು ಅರಿಯದಡೆ ನಿಮ್ಮೊಳು ಬಂದರೆ
ಮಾರಾರಿ ತನ್ನ ಮೆಚ್ಚುವನೆ ೨೧೨

ಎನ್ನನೇತಕೆ ಕಾಡುವೆಯೆಂದು ಹರಿಶ್ಚಂದ್ರ
ತನ್ನ ಕರವನೆತ್ತಿ ಮುಗಿದು |
ನಿನ್ನ ರಾಜ್ಯವ ನೀನಾಳಯ್ಯ ಮುನಿನಾಥ
ಎನ್ನುತ ಶಿರವ ಬಾಗಿದನು ೨೧೩

ಕುಡಿದೌಷಧ ಬಾಯಿಗೆ ವಿಷವಾಗಲು
ಒಡಲಿಗೆ ಸುಖಗೊಡುವಂತೆ |
ಬಿಡದೆ ಮುನೀಶ್ವರ ನೀವು ಕಾಡಲು ಮತ್ತೆ
ಮೃಡನನು ಕಂಡೆ ನಿಮ್ಮಿಂದ ೨೧೪

ವೀರಬಾಹುಕನಾಗಿ ಯಮನ ತಂದಿರಿಸಿದೆ
ಹಾರುವನವನಗ್ನಿಭಟ್ಟ |
ದಾರಿಯೊಳಗೆ ಹರಿಕಾರನಾಗಿರ್ದವ
ಧೀರ ಶುಕ್ರನು ಇಂದು ಪೇಳೆ ೨೧೫

ಚೋರರ ನಿರ್ಮಿಸಿ ಅರಸಿನ ಕುವರನ
ದಾರಿಯೊಳಗೆ ಕೊರಳರಿಸಿ |
ನಾರಿಯ ಕೊಲಿಸಿದೆ ನಾನೆಂದು ಕೌಶಿಕ-
ನೋರಂತೆ ನೋಯದಿರೆಂದ ೨೧೬

ಮನದ ಸಂಶಯವನು ಬಿಡಿಸಿ ಹರಿಶ್ಚಂದ್ರನ
ಮನದಲಿ ನೋಯದಿರೆಂದು |
ಮುನಿಯದಿರೆನ್ನಾಣೆಯೆಂದು ವಿಶ್ವಾಮಿತ್ರ
ಜನಪತಿಯನು ಬೇಡಿಕೊಂಡ ೨೧೭

ನಿನ್ನಿಂದ ಧನ್ಯನಾದೆನು ಇನಕುಲವೆಲ್ಲ
ನಿನ್ನಿಂದ ತೊಳಗಿ ಬೆಳಗಿತು |
ಎನ್ನುತ ಮುನಿಪಾದಕೆ ಬಿದ್ದು ಹರಿಶ್ಚಂದ್ರ
ತನ್ನ ಶಿರವ ಬಾಗಿದನು ೨೧೮

ಪರುಷದ ಪುತ್ತಳಿ ಮೋಹದ ಬೊಂಬೆಯ
ಭರದಿ ಕೋಪಿಸಿ ಕಾಲಲೊದೆಯೆ |
ಪರುಷ ಸೋಂಕಲು ಕಬ್ಬುನ ಹೊನ್ನಾ[ಗದೆ]
ಹರನ ಕಂಡೆನು ನಿಮ್ಮಿಂದ ೨೧೯

ಎಂದ ಮಾತನು ಕೇಳಿ ವಿಶ್ವಾಮಿತ್ರನು ಅಂದು
ದೈನ್ಯ[ದಲಿ] ಬೇಡಿಕೊಂಡು |
ನೊಂದ ನೋವೆಲ್ಲವ ಬಿಡು ನೀನುಯೆನ್ನಾಣೆ
ಒಂದು ತಪ್ಪನು ಸೈರಿಸೆಂದ ೨೨೦

ಗಲ್ಲವ ಪಿಡಿದು ಹಾಲೆರೆಯಲು ಶಿಶುವಿಗೆ
ಅಲ್ಲಿ ಸಂತಸವಾದಂತೆ |
ಎಲ್ಲ ಸಂಶಯವಳಿಯಿತು ನಿಮ್ಮ ಕೃಪೆಯಿಂದ
ಮಲ್ಲಿಕಾರ್ಜುನನ ಕಾಣಿಸಲು ೨೨೧

ಅತ್ತಿತ್ತಲೇಕಿನ್ನು ಸಮಸ್ತ ದ್ವೀಪಕ್ಕೆ
ಕರ್ತುರ್ ವಿರೂಪಾಕ್ಷನೊಲಿದು |
ಉತ್ತಮ ಹರಿಶ್ಚಂದ್ರನಿಗೆ ಪಟ್ಟವ ಕಟ್ಟಿ
ಮತ್ತೆ ಸೇಸೆಯನಿಕ್ಕಿದರು ೨೨೨

ಸತ್ಯನು ಹರಿಶ್ಚಂದ್ರ ಸಿಂಹಪೀಠದ ಮೇಲೆ
ಮತ್ತಾ ಸತಿ ಸುತ ಮಂತ್ರಿ |
ಅತ್ಯಂತ ಸಂಭ್ರಮದೊಳಿರ್ದು ರಾಯಗೆ
ಮುತ್ತಿನ ಸೇಸೆಯನಿಟ್ಟು ೨೨೩

ಇಂದುಧರನ ಮುಂದೆ ಹರಸಿ ಸೇಸೆಯನಿಕ್ಕಿ
ಅಂದೆಲ್ಲ ಮುನಿಗಳಿಕ್ಕಿದರು |
ಅಂದಗಜಾತೆಯು ರುದ್ರಕನ್ನಿಕೆಯರು
ಬಂದು ಸೇಸೆಯನಿಕ್ಕಿದರು ೨೨೪

ಇಂದ್ರಾಗ್ನಿ ಯಮ ನೈರುತ್ಯ ವರುಣರು ವಾಯು
ಮುಂದೆ ಕುಬೇರ ಈಶಾನ್ಯ |
ಅಂದಜಹರಿಗಳು ಹರಸಿ ಸೇಸೆಯನಿಕ್ಕಿ
ನಿಂದರು ಹರನಿದಿರಿನಲಿ ೨೨೫

ಅಂದು ದೇವೇಂದ್ರನೋಲಗದಿ ವಿಶ್ವಾಮಿತ್ರ
ಹೆಚ್ಚು ಕುಂದಿನ ಮಾತ ನುಡಿಯೆ |
ಇಂದುಧರನ ಮುಂದೆ ಜರಿದು ವಸಿಷ್ಠನು
ಇಂದಿಗೆ ಸರಿಯೆನ್ನ ಭಾಷೆ ೨೨೬

ಕೊಟ್ಟನು ತನ್ನ ಪದವಿಯ ವಸಿಷ್ಠನು
ನೆಟ್ಟನೆ ಹರಿಶ್ಚಂದ್ರ ನೃಪಗೆ |
ಸೃಷ್ಟಿಗೀಶ್ವರನುಳ್ಳನಕ ನೀ ಬಾಳೆಂದು
ಇಟ್ಟನು ಹರಸಿ ಸೇಸೆಯನು ೨೨೭

ಇನ್ನೇನು ಬೇಕಾದ ವರಗಳ ಬೇಡೆಂದು
ಪನ್ನಗಧರ ಬೆಸಸಿದರೆ |
ಇನ್ನು ಕಾಶಿಯಲಿ ನಿನ್ನಯ ಮಂದಿರದ ಮೇಲೆ
ಉನ್ನತವೆರಡು ಯೋಜನದಿ ೨೨೮

ಹೊನ್ನ ರನ್ನದಲೊಂದು ಲೋಹವ ಸೃಷ್ಟಿಸಿ
ನಿನ್ನ ಪಾದವ ಕಾಣುವಂತೆ |
ಎನ್ನನಿರಿಸು ಗಿರಿಜಾವರಯೆಂದರೆ
ಪನ್ನಗಧರ ಮೆಚ್ಚಿ ಕೊಟ್ಟ ೨೨೯

ಗಿರಿಸುತೆಯಪ್ಪುವ ತೋಳಿಂದಲಪ್ಪಿದ
ಪುರಹರ ಹರಿಶ್ಚಂದ್ರನನು |
ಹರಿಯಜರರಸಿ ಕಾಣದ ಪಾದವನಂದು
ಶಿರದ ಮೇಲಿರಿಸಿದನಂದು ೨೩೦

ವರವೀವ ಅಭಯಹಸ್ತದಿ ಮೈದಡಹಿದ
ಗಿರಿಜೆಯರಸ ಸಂತೈಸಿ |
ಕರುಣದಿಂದುಪಚರಿಸಿದ ಹರಿಶ್ಚಂದ್ರನ
ಸುರರೆಲ್ಲ ಜಯಜಯಯೆನಲು ೨೩೧

ಮತ್ತೆಲ್ಲ ಮುನಿಗಳೊಡನೆ ಹರಿಶ್ಚಂದ್ರ
ಅತ್ತಲಯೋಧ್ಯಕ್ಕೆ ಕಳುಹಿ |
ಇತ್ತ ಕೈಲಾಸಕೆ ಕಾಶಿಯ ಪತಿ ಹೋದ
ಮತ್ತೆಲ್ಲ ಉಘೆ ಉಘೆಯೆನಲು ೨೩೨

ಮುನಿಜನವೆರಸಿ ರಥವನೇರಿ ಹರಿಶ್ಚಂದ್ರನ
ವನಿತೆ ಸುತನ ಮಂತ್ರಿವೆರಸಿ |
ಘನಸಂಭ್ರಮದಿಂದ ಬರುವರಸನ ಕಂಡು
ಜನರಿಗೆ ಸಂತಸವಾಯ್ತು ೨೩೩

ಅಂದು ಹರಿಶ್ಚಂದ್ರ ಅಯೋಧ್ಯೆಗೆ ನಡೆವಾಗ
ಮುಂದಾಗಿ ಚತುರಂಗಬಲವು |
ಸಂದಣಿಸುತ ಬರೆ ಮಂದಿ ಕುದುರೆಯಾನೆ
ಅಂದು ಧರಣಿ ಕಂಪಿಸಲು ೨೩೪

ಪೊಡೆವ ತಂಬಟ ಭೇರಿ ನಿಸ್ಸಾಳ ಸೂಳೈಸೆ
ನಡುಗಿತು ಅಖಿಲ ಬ್ರಹ್ಮಾಂಡ |
ಬಿಡದೆ ನಾನಾ ವಾದ್ಯ ಮೊಳಗುವ ರವದೊಳು
ಪೊಡವಿಪಯೋಧ್ಯವ ಪೊಕ್ಕ ೨೩೫

ಪುರಜನ ಪರಿಜನ ಸರಸಿಜ ಮುಖಿಯರು
ಭರದಿಂದಾರತಿಗಳ ಪಿಡಿಯೆ |
ಹರುಷದಿ ನೃಪ ಸಿಂಹಾಸನವೇರಿದ
ಭರದಿಂದ ಮುನಿಕುಲ ಸಹಿತ ೨೩೬

ಅರಮನೆಯೊಳು ಹೊಕ್ಕ ಹರಿಶ್ಚಂದ್ರನ ಕಂಡು
ಬರವ ಹಾರಿರ್ದ ನಾರಿಯರು |
ಹರಿವಾಣದಾರತಿಗಳ ತಂದೆತ್ತಲು
ಕರೆದು ಮನ್ನಿಸಿದನೆಲ್ಲರನು ೨೩೭

ಮತ್ತೆ ವಿಶ್ವಾಮಿತ್ರ ಹರಿಶ್ಚಂದ್ರರಾಯನ
ಹಸ್ತವ ಪಿಡಿದೈತಂದು |
ಇತ್ತ ರಾಜ್ಯವ ದೇಶವನೊಪ್ಪಿ[ಸಿ]ದನು
ಉತ್ತಮ ಹರಿಶ್ಚಂದ್ರನಿಗೆ ೨೩೮

ಆನೆ ಕುದುರೆ ಒಂಟೆ ಬೊಕ್ಕಸ ಭಂಡಾರ
ಚೀನಿ ಚೀನಾಂಬರಗಳನು |
ಏನೊಂದು ಕಡಿಮೆಯಾದರೆ ನೋಡಿಕೊಳ್ಳೆಂದು
ಭೂನಾಥಗುಂಗುರವಿತ್ತ ೨೩೯

ಇತ್ತ ಹರಿಶ್ಚಂದ್ರ ಸಿಂಹಪೀಠದ ಮೇಲೆ
ಉತ್ತಮ ಮಂತ್ರಿಯು ಸಹಿತ |
ಇತ್ತ ಸುವರ್ಣದಾನವ ಗೋದಾನವ
ಮತ್ತಲ್ಲಿ ಕನ್ಯಾದಾನವನು ೨೪೦

ದಾನಧರ್ಮವ ಮಾಡಿ ಹರಿಶ್ಚಂದ್ರ ಮುನಿಗಳಿ-
ಗಾನಂದ ಹರುಷದಿ ನಿಂದು |
ನಾ ನಿಮ್ಮ ಬಳಲಿಸಿದೆನು ಕೈಲಾಸಕ್ಕೆ
ನೀವು ಚಿತ್ತೈಸೆಂದ ನೃಪನು ೨೪೧

ಹರಿಯಜ ಸುರಪ ದಿಕ್ಪಾಲಕರೆಲ್ಲರು
ವರಸಿದ್ಧ ವಿದ್ಯಾಧರರು |
ಗರುಡ ಗಂಧರ್ವ ಕಿಂಪುರುಷರ...
ಹರನ ಸನ್ನಿಧಿಗೆ ಕಳುಹಿಸಿದ ೨೪೨

ಇತ್ತ ಹರಿಶ್ಚಂದ್ರರಾಯನು ಮಂತ್ರಿಯ-
ನುತ್ತಮ ಸತಿಸುತ ಸಹಿತ |
ಸತ್ಯವ ಬಿಡದೆ ರಾಜ್ಯವನಾಳುತಿರ್ದನು
ಅತ್ಯಂತ ಸಂತೋಷದಿಂದ ೨೪೩

ಸತ್ಯವ ಬಿಡದೆ ಹರಿಶ್ಚಂದ್ರರಾಯನ
ಮತ್ತೆ ಕಾಶಿಯ ಪತಿ ಒಲಿದು |
ನಿತ್ಯ ಈ ಕಥೆಗಳ ಕೇಳಿದ ಜನರಿಗೆ
ಮುಕ್ತಿಫಲವನೀವ ಶಿವನು ೨೪೪

ಸತ್ಯವೆ ಜಯವು ಅಸತ್ಯವೆ ಲಯವೆಂದು
ಸತ್ಯವ ತಾನಂದು ಪಡೆದ |
ಉತ್ತಮ ಹರಿಶ್ಚಂದ್ರನ ಕಥೆ ಸಂಪೂರ್ಣ
ಮತ್ತಿಲ್ಲಿಗೇಳನೆ ಸಂಧಿ ೨೪೫

ಎರಡು ಹರಿಶ್ಚಂದ್ರ ಸಾಂಗತ್ಯಗಳು



ಚೇತನ ಬುಕ್ ಹೌಸ್

ಮೈಸೂರು - 570024 ಫೋನ್: 2445494 , 6454123

email:chethanabookhouse@yahoo.in